ಸಂಪುಟ ೪
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ
೧೯೭೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ **ನಿರ್ದೇಶಕರು, ನ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೪ ಸಂಚಿಕೆ : ೪

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯುದ ತ್ರೈಮಾಸಿಕ ಪತ್ರಿಕೆ

ಸಂಪುಟ : ೪, ಸಂಚಿಕೆ : ೪
ಮೇ ೧೯೭೨

ಅಕ್ಷಯತೃತೀಯಾ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪರಿವಿಡಿ

ಬಸವೇಶ್ವರ

ನೀನು ಬದುಕಿದ್ದಾಗಲೇ
ಒಂದು ದೊಡ್ಡ ಕತೆಯಾಗಿ,
ಗಾಳಿ ಹೊಕ್ಕ ಕಡೆಯೆಲ್ಲ ಹೊಕ್ಕು
ಬಿಸಿಲ ಧಗೆಯಲ್ಲಿ ತಂಗಾಳಿಯಾದೆ.
ರವಿಯಿಂದ ಬಂದ ಬೆಳಕಾಗಿ ಛಳಿಯಲ್ಲಿ
ಬಿಸಿಲಾದೆ.
ಮೃಗಗಳು ತುಂಬಿದ ದಟ್ಟಡವಿಯಲ್ಲಿ
ಹೊಸದಾರಿ ಕಡಿದು ತೆರೆದು
ಬೆಳಕ ಹಿಡಿದು, ಮುಂದೆ ನಡೆದು
ದಾರಿ ತೋರಿದೆ.

ಇಂದು,
ಆಗಾಗ್ಗೆ ನಿನ್ನ ನೆನಪು ಕೆಲವರಿಗೆ ಬಂದು
ಗಾಳಿಯಲ್ಲಿ ಅಲೆಯಲೆಯಾಗಿ ಹಾರಿ
ಕಾಣೆಯಾಗುತ್ತಲೇ
ಬಿಸಿಲ ಧಗೆಯಲ್ಲಿ ಸುಟ್ಟು
ಬೂದಿಯಾಗುತ್ತಿದೆ.
ನಿನ್ನ ಮಾತುಗಳೆಲ್ಲ ಅಕ್ಷರಗಳಾಗಿ
ಕೆಲವು ಕಡೆ ಹಾಳೆಗಳಲಿ ಮುದುರಿ ಕೂತಿವೆ.
ನಿನ್ನ ದಾರಿಯಲ್ಲಿ ಹತ್ತಾರು
ಪದರಗಳು
ಬೆಳೆದು,
ನಿನ್ನ ನೆನಪೊಂದನ್ನು ಬಿಟ್ಟು
ಉಳಿದದ್ದೆಲ್ಲ ದೊಡ್ಡ ಸೊನ್ನೆಯಾಗಿ ಬೆಳೆಯುತ್ತಿದೆ.

★ ಎಂ. ಎಲ್. ಮಂಜುನಾಥ

ಮಂತ್ರಾಲಯದ

ಶ್ರೀ ಗುರುಸಾರ್ವಭೌಮರು

ಅಧ್ಯಾತ್ಮ ಪ್ರಪಂಚದಲ್ಲಿ ಕೆಲವರದು ಮಿಂಚಿನ ಬಾಳು. ಹಲವರದು ಬಿಸಿಲಿನ ಬದುಕು. ತಾವರೆ ಎಲೆಯ ತೋಯದ ತುಂತುರು ಜೀವನ ಅನೇಕರದು. ಆದರೆ ಎಂದೂ ಕಂದದ ಕಾಂತಿ, ಕುಂದದ ಕೀರ್ತಿ, ನಂದದ ಜ್ಯೋತಿಯಿಂದ ನಾಡಿನ ನಿರಂತರ ನಂದಾ ದೀಪವಾಗಿ ತೊಳಗಿ ಬೆಳಗಿದ ಪುಣ್ಯ ಜೀವಗಳು ಕೆಲವೇ ಕೆಲವು, ವಿರಳಾತಿವಿರಳ.

ಇಂಥ ಬೆರಳ ವಿರಳ ವಿಭೂತಿಗಳಲ್ಲಿ ಶ್ರೀ ರಾಘವೇಂದ್ರತೀರ್ಥರು ಅಗ್ರಣ್ಯರು, ಅಗ್ರಗಣ್ಯರು. ಅವರು ವೃಂದಾವನಸ್ಥರಾಗಿ ಮುನ್ನೂರು ವರ್ಷಗಳಾದರೂ ಅವರ ಕೀರ್ತಿಕಾಯಕ್ಕೆ ಇನ್ನೂ ನವಪ್ರಾಯ. ದಿನಗಳೆದಂತೆ ಅದರ ದೀಪ್ತಿ ಹೆಚ್ಚುತ್ತಲಿದೆ.

ಅಂದಿನಿಂದ ಇಂದಿಗೂ ಶ್ರೀರಾಯರು ಭಜಿಸುವವರಿಗೆ ಕಲ್ಪವೃಕ್ಷ, ನಮಿಸುವವರಿಗೆ ಕಾಮಧೇನು. ಅವರ ಮಹಿಮೆ ಪವಾಡವಲ್ಲ, ಪ್ರತ್ಯಕ್ಷ; ಅನುಭವ ಸಿದ್ಧ. ಇನ್ನೂ ಅಚ್ಚರಿಯ ಮಾತೆಂದರೆ ಅವರ ವೃಂದಾವನದ ಪ್ರತಿಮೆ, ಪ್ರತಿಕೃತಿಗಳಿಗೆ ಹತ್ತಿದ ಗಂಧ, ಮೆತ್ತಿದ ಮಣ್ಣು (ಮೃತ್ತಿಕೆ) ಕೂಡ ದುಸ್ಸಾಧ್ಯವಾದ ರೋಗಗಳನ್ನು ದೂರ ಮಾಡಿವೆ. ಅವನ್ನು ತೊಳೆದ ನೀರು ತೀರ್ಥದಂತೆ ಮಂತ್ರಪೂತ ಜಲದಂತೆ ಬೇನೆ ಬೇಸರಿಕೆ, ಭೂತ ಬಾಧೆಗಳನ್ನು ಪರಿಹರಿಸಿದ ಮಾತು ಜನಜನಿತವಾಗಿದೆ. ಅಂತೆಯೇ ಇಂದು ಮಂತ್ರಾಲಯದಲ್ಲಿ ನಾಸ್ತಿಕರು, ಆಸ್ತಿಕರು, ಅಜ್ಞರು–ಪ್ರಾಜ್ಞರು, ಸ್ವಧರ್ಮೀಯರು–ವಿಧರ್ಮೀಯರು ಗುರುಚರಣಕ್ಕೆ ಶರಣು ಬಂದು ಸೇವೆ ಸಲ್ಲಿಸುವದನ್ನು ನಾವು ಕಾಣುತ್ತೇವೆ.

ವಿಜ್ಞಾನಕ್ಕೆ ಮೀರಿದ ಒಗಟುಗಳಿಗೆಲ್ಲ ಇಲ್ಲಿ ಅನುಭಾವದ ಉತ್ತರವಿದೆ. ಮದ್ದು ಸೂಜಿಗಳಿಗೆ ಗುಣವಾಗದ ಅಸಾಧ್ಯ ರೋಗಗಳಿಗೆ ಇಲ್ಲಿ ಅಧ್ಯಾತ್ಮಿಕ ಔಷಧಿಯಿದೆ. ಬಾಳಿನ ಸಮಸ್ಯೆಗಳಿಗೆಲ್ಲ ಇಲ್ಲಿ ಶಾಂತಿ ಸಮಾಧಾನದ ಪರಿಹಾರವಿದೆ. ಇದು ಎಂತು ? ಹೇಗೆ ? ಎಂಬ ವಿಷಯದಲ್ಲಿ ವಿಜ್ಞಾನಕ್ಕೆ ಪೂರ್ಣ ಅಜ್ಞಾನ. ಉತ್ತರದ ಮಾತೆಲ್ಲಿ !

ಪರಂಧಾಮವನ್ನೈದಿ ಮುನ್ನೂರು ವರ್ಷಗಳ ಮೇಲೆಯೂ ಮಾನವರ ಬಾಳಿನ ಗೋಳನ್ನು ದೂರ ಮಾಡಿ, ಮೋಕ್ಷದ ಮಾರ್ಗ ತೋರಿಸುವ ಗುರುಗಳ ಕೃಪಾಕಾರುಣ್ಯಗಳು, ಗರಿಮೆ ಹಿರಿಮೆಗಳು ನಿಜವಾಗಿಯೂ ನಮ್ಯವಾಗಿವೆ, ರಸರಮ್ಯವಾಗಿವೆ. ಅದರಂತೆ ಅಗಮ್ಯವೂ ಆಗಿವೆ.

ಈ ಎಲ್ಲ ಪವಾಡ ಪ್ರಭಾವಗಳು ಮಾತ್ರವಲ್ಲದೆ, ಅವರ ಪಾವನವಾದ ಜ್ಞಾನ ಜೀವನವೂ ಅಷ್ಟೇ ಬೃಹತ್ತರ ಮಹತ್ತರವಾದದ್ದಾಗಿದೆ. ಆ ಮಹಾ ಚೇತನದ ಬದುಕು ಬರೆಹಗಳ ಕಿಂಚಿತ್ ದಿಗ್ದರ್ಶನ ಮಾಡಿಕೊಡುವ ಪ್ರಯತ್ನವಿದಾಗಿದೆ.

ಬದುಕು

ತಿಮ್ಮಣ್ಣಭಟ್ಟರ ಮಡದಿ ಗೋಪಿಕಾಂಬೆ ಸಾಧ್ವೀಮಣಿ. ತಿರುಪತಿ ವೆಂಕಟೇಶನ ಸೇವೆ ಮಾಡಿ ದಂಪತಿಗಳು ಮೂವರು ಮಕ್ಕಳನ್ನು ಪಡೆದರು. ವೆಂಕಟಾಂಬೆ, ಗುರುರಾಜ ಹಾಗೂ ವೆಂಕಟನಾಥರೇ ಆ ಮೂವರು.

ಬಾಲಕ ವೆಂಕಣ್ಣ ಬಾಲ್ಯದಿಂದಲೂ ಹರಿಭಕ್ತ. ಮುಖದಲ್ಲಿ ದೈವೀ ತೇಜಸ್ಸು. ದೇವ ಸ್ವಭಾವ. ನಡೆನುಡಿಗಳಲ್ಲಿ ಸಾತ್ತ್ವಿಕತೆ.

ಎಳವೆಯಲ್ಲಿ ಅಕ್ಕನ ಗಂಡ ಲಕ್ಷ್ಮೀನರಸಿಂಹಾಚಾರ್ಯರಲ್ಲಿ ಕಾವ್ಯಾಭ್ಯಾಸ. ವಯಸ್ಸಿಗೆ ಬರುವದರೊಳಗಾಗಿ ನ್ಯಾಯ ವ್ಯಾಕರಣಗಳು ಕರತಲಾಮಲಕ. ನಾಟಕ ಅಲಂಕಾರಗಳಂತೂ ನೀರು ಕುಡಿದಂತೆ. ಮೀಮಾಂಸಾ ಶಾಸ್ತ್ರದಲ್ಲಿಯೂ ಪರಿಣತನಾದ ವೆಂಕಣ್ಣ. ಇಪ್ಪತ್ತರ ಹರೆಯದಲ್ಲಿ ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣಗಳಲ್ಲಿ ಅದ್ವಿತೀಯ ಪಂಡಿತನೆನಿಸಿದ. ಗಾಯನ ವಾದನ ಪಾಂಡಿತ್ಯ ಮನೆತನದ ಬಳುವಳಿ. ವೀಣಾ ವೆಂಕಣ್ಣ ಭಟ್ಟರೆಂದೇ ಖ್ಯಾತಿ.

ವೆಂಕಣ್ಣನ ಸೌಭಾಗ್ಯಕ್ಕೆ ಸರಸ್ವತಿಯೆಂಬ ಪತಿವ್ರತೆ ಮಡದಿಯಾಗಿ ಬಂದಳು. ರೂಪದಲ್ಲಿ ಸತಿ, ಬುದ್ಧಿಯಲ್ಲಿ ಸರಸ್ವತಿ, ಗುಣದಲ್ಲಿ ಅರುಂಧತಿ.

ಈ ಆದರ್ಶ ಸಂಸಾರದಲ್ಲಿ ಮೂಡಿ ಬಂದ ಮಗು ಲಕ್ಷ್ಮೀನಾರಾಯಣ. ಭಟ್ಟರ ಶಿಷ್ಯ ಪರಿವಾರ ದೊಡ್ಡದು. ಆದರೆ ಆದಾಯದ ದಾರಿಯಿಲ್ಲ. ಸರಸ್ವತಿಯಿದ್ದಲ್ಲಿ ಲಕ್ಷ್ಮಿಯ ಆಗಮನವಿಲ್ಲ. ಭಟ್ಟರಲ್ಲಿ ಇಬ್ಬರು ಸರಸ್ವತಿಯರು. ಬಡತನ ಭೂತಾಕಾರ ವಾಯಿತು. ಹೊಟ್ಟೆಗೆ ಹಿಟ್ಟಿಲ್ಲ, ಉಡಲು ಬಟ್ಟೆಯಿಲ್ಲ. ಮಗುವನ್ನು ಎರೆಯಲು ಎಣ್ಣೆಯಿಲ್ಲದ ಸ್ಥಿತಿ. ಇಂತಹದರಲ್ಲಿ ಮನೆಗೆ ಕನ್ನ. ಇದ್ದುಬಿದ್ದ ಪಾತ್ರೆ ಪರಡೆಗಳೂ ಮಾಯವಾದವು. ಇಷ್ಟಾದರೂ ಭಟ್ಟರು ಅಯಾಚಿತ ವೃತ್ತಿಯನ್ನು ಬಿಡಲಿಲ್ಲ. ದೇಹಿಯೆಂದು ಪರರ ಬಾಗಿಲಿಗೆ ಹೋಗಲಿಲ್ಲ. ಹಸಿವನ್ನೇ ಉಂಡು ಬಯಲನ್ನೇ ಹೊದೆದರು. ಬಡತನದ ಬುತ್ತಿಯೇ ಭಗವಂತನ ಕೃಪೆಯೆಂದರು.

ಕೊನೆಗೆ ಗುರುಚರಣಕ್ಕೆ ಶರಣು ಬಂದರು. ಸರ್ವಜ್ಞ ಪೀಠಾಧಿಪತಿಗಳಾದ ಶ್ರೀ ಸುಧೀಂದ್ರತೀರ್ಥರು ಭಟ್ಟರ ಕುಟುಂಬಕ್ಕೆ ಆಶ್ರಯವಿತ್ತರು.

ಚತುಃಶಾಸ್ತ್ರ ಪಂಡಿತರಾದ ವೆಂಕಣ್ಣಭಟ್ಟರು ಶ್ರೀ ಸುಧೀಂದ್ರರ ಬಳಿ ಪುಸ್ತಕ ಹಿಡಿದಾಗ ಜ್ಞಾನದ ಹೊಸ ಕ್ಷಿತಿಜವೇ ಗೋಚರಿಸಿತು. ಪೀಠಪರಂಪರಾ ಪ್ರಾಪ್ತವಾದ ತಿಳಿವಿನ ತಡಸಲು ವೆಂಕಣ್ಣಭಟ್ಟರ ಮಿದುಳಿನ ಕಡಲಿಗೆ ಇಳಿಯಿತು.

ಜಿಜ್ಞಾಸು ಶಿಷ್ಯ
ಜ್ಞಾನನಿಧಿ ಗುರು

ಕೇಳುವದೇನು ? ಪಾಠಕ್ಕೆ ಪೂರ್ಣವಿರಾಮವೆಂಬುದೇ ಇಲ್ಲ. ಬೆಳಗಿನಲ್ಲಿ ವೇದಾಂತ. ಮಧ್ಯಾಹ್ನ ವ್ಯಾಕರಣ, ಅಪರಾಹ್ನ ನ್ಯಾಯಶಾಸ್ತ್ರ ಮೀಮಾಂಸಾ. ಹೀಗೆ ಎಡೆ ಬಿಡದೆ

ಪಾಠ. ಅಡಿಗಡಿಗೆ ವಾಕ್ಯಾರ್ಥ. ನಿತ್ಯ ಜ್ಞಾನಸತ್ರ ನಡೆಯಿತು. ಶ್ರೀಗಳವರ ಸಂಚಾರ ದಲ್ಲಿಯೂ ವೆಂಕಣ್ಣಭಟ್ಟರು ಸಹಚಾರಿ. ಊರೂರಿಗೆ ಪಂಡಿತರು. ಕಂಡಲ್ಲೆಲ್ಲ ವಾಕ್ಯಾರ್ಥ. ಕೇಳಿದಲ್ಲೆಲ್ಲ ಶ್ರುತ್ಯರ್ಥ ವಿಚಾರ.

ರಾಜಮನ್ನಾರ ಗುಡಿಯಲ್ಲಿ ಓರ್ವ ಅದ್ವೈತಯತಿಗಳೊಡನೆ ವಾಕ್ಯಾರ್ಥ. ವೆಂಕಣ್ಣ ಭಟ್ಟರೇ ಮುಂದಾಳು. ಭಟ್ಟರಿಗೆ ವ್ಯಾಕರಣದಲ್ಲಿ ಅಸೀಮ ಪಾಂಡಿತ್ಯ. ಮುತ್ತು ಸುರಿದಂತೆ ಮಾತನಾಡಿದರು. ಭಟ್ಟರ ಪ್ರತಿಭಾ ಪಾಂಡಿತ್ಯಕ್ಕೆ ವ್ಯಾಕರಣ ವೈದುಷ್ಯಕ್ಕೆ ಪ್ರತಿವಾದಿ ಪಂಡಿತರು ತಬ್ಬಿಬ್ಬಾದರು.

ಗೆಲುವಿನ ಗೋಪುರದಲ್ಲಿ ಶ್ರೀಮಠದ ವಿಜಯ ದುಂದುಭಿಯನ್ನು ಮೊಳಗಿಸಿದ ಭಟ್ಟರ ವ್ಯಾಕರಣ ಪಾಂಡಿತ್ಯವನ್ನು ಕಂಡು, ಶ್ರೀಗಳು ಸಂತೋಷದಿಂದ 'ಮಹಾ ಭಾಷ್ಯಾಚಾರ್ಯ' ಎಂಬ ಬಿರುದಿತ್ತು ಅನುಗ್ರಹಿಸಿದರು.

ತಂಜಾವೂರ ನಾಯಕರ ಆಸ್ಥಾನದಲ್ಲಿ ಯಜ್ಞನಾರಾಯಣ ದೀಕ್ಷಿತರೆಂಬ ಪಂಡಿತ ರೊಡನೆ ವಾಕ್ಯಾರ್ಥ. ತಪ್ತ ಮುದ್ರಾಧಾರಣೆಯ ಮೇಲೆ ಚರ್ಚೆ. ಗೆಲುವಿನ ಮಾಲೆ ಭಟ್ಟರ ಕೊರಳಿಗೆ. ದೇಶದ ತುಂಬ ವೆಂಕಣ್ಣಭಟ್ಟರ ಗೆಲುವಿನ ಕಂಬಗಳು. ಈ ವಿಜಯ ಪರಂಪರೆ, ವೈದುಷ್ಯ, ವಕ್ತೃತ್ವ, ವೈರಾಗ್ಯ ಮುಂತಾದ ಗುಣಗಳನ್ನು ಕಂಡು ಶ್ರೀ ಸುಧೀಂದ್ರತೀರ್ಥರಿಗೆ ವೆಂಕಣ್ಣ ಭಟ್ಟರೇ ತಮ್ಮ ಪರಮಹಂಸ ಪೀಠಕ್ಕೆ ಯೋಗ್ಯ ರೆಂಬ ವಿಚಾರಬಂದಿತು. ಏಕಾಂತದಲ್ಲಿ ಕರೆದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಸರ್ವಜ್ಞ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಬೇಕೆಂದು ಹೇಳಿದರು.

ವೆಂಕಣ್ಣಭಟ್ಟರಿಗೆ ಆಕಸ್ಮಿಕವಾದ ಈ ಸನ್ಯಾಸದ ಕರೆ ಕೇಳಿ ಸೋಜಿಗ, ಸಂದೇಹ, ಭಯ ಒಮ್ಮೆಲೆ ಉಂಟಾದವು. 'ಬಾಲಾ ಭಾರ್ಯಾನ, ಬಾಲಕೋನೋಪನೀತಃ' ಹರೆಯದ ಹೆಂಡತಿ ಭೋಗದ ಬೇಸರಿಕೆಯಾಗಿಲ್ಲ; ಮಗು ಹಸುಳೆ ಇನ್ನೂ ಮುಂಜಿವೆ ಯಾಗಿಲ್ಲವೆಂದು ತೊದಲಿದರು.

ಅಂದೇ ರಾತ್ರಿ ಕನಸು. ವಿದ್ಯಾದೇವಿ ಬಂದು "ವೆಂಕಣ್ಣ! ನಿನ್ನ ಅವತಾರ ಮಡದಿ ಮಕ್ಕಳಿಗಾಗಿ ಅಲ್ಲ; ಲೋಕೋದ್ಧಾರಕ್ಕಾಗಿ, ನಿನ್ನ ಗುರಿ ಭೋಗವಲ್ಲ; ತ್ಯಾಗ ಯೋಗ, ವಿರಾಗ." ದೇವಿ ಅದೃಶ್ಯಳಾದಳು.

ಸಂದೇಹದ ತೆರೆ ಸರಿಯಿತು. ಬೆಳಕು ಹರಿಯಿತು. ವೆಂಕಣ್ಣ ಭಟ್ಟರು ಗುರುಗಳ ಬಳಿಗೆ ಬಂದು, ತಮ್ಮಿಚ್ಛೆಯಂತಾಗಲಿ ಎಂದು ನಮಿಸಿ ನಿಂದರು.

ತಂಜಾವೂರಿನಲ್ಲಿ ಮಹಾಸಂಭ್ರಮ. ಮಹಾಭಾಷ್ಯಂ ವೆಂಕಣ್ಣ ಭಟ್ಟರಿಗೆ ಆಶ್ರಮ. ಶ್ರೀ ಸುಧೀಂದ್ರತೀರ್ಥರು ರಘುನಾಥ ಭೂಪಾಲ ಹಾಗು ಇತರ ಪಂಡಿತ ಪ್ರತಿಷ್ಠಿತರೆದುರು ಕಾಯಿಕೊಟ್ಟು ಸರ್ವಜ್ಞ ಸಿಂಹಾಸನದಲ್ಲಿ ಕೂಡಿಸಿ ಪಟ್ಟಾಭಿಷೇಕ ಗೈದರು. 'ರಾಘವೇಂದ್ರತೀರ್ಥ' ಎಂದು ನಾಮಕರಣ ಮಾಡಿದರು. (ಕ್ರಿ.ಶ. ೧೬೨೧).

ಶ್ರೀ ರಾಘವೇಂದ್ರ ತೀರ್ಥರಿಗೆ ಎಡಬಿಡದ ಕಾರ್ಯಕ್ರಮ. ರಾಮದೇವರ ಪೂಜೆ, ನಿರಂತರ ಸುಧಾ ವ್ಯಾಸತ್ರಯ ಪಾಠ, ಹೋದಲ್ಲೆಲ್ಲ ವಾಕ್ಯಾರ್ಥ, ವಾದಿಗಳ

ಪರಾಜಯ, ಶಿಷ್ಯಕೋಟಿಗೆ ಸದುಪದೇಶ, ಗ್ರಂಥ ರಚನೆ, ಪಾಮರರ ಉದ್ಧಾರ, ದುಃಖಿತರ ಸಂಕಟ ಪರಿಹಾರ . ಒಂದಲ್ಲ ನೂರಾರು ಕಾರ್ಯಗಳು ಪ್ರತಿನಿತ್ಯ. ರಾಯರು ಹೋದಲ್ಲೆಲ್ಲ ಹಬ್ಬ, ಬಂದಲ್ಲೆಲ್ಲ ಜಾತ್ರೆ. ಸಂಚಾರ ಕಾಲದಲ್ಲಿ ನಡೆದ ಪವಾಡ, ಪ್ರಭಾವ, ಲೋಕೋಪಕಾರಗಳಿಗೆ ಲೆಕ್ಕವೇ ಇಲ್ಲ.

ಶ್ರೀಗಳು ಸಂಚರಿಸುತ್ತ ರಾಮೇಶ್ವರ ಯಾತ್ರೆ ಮಾಡಿಕೊಂಡು ಮಧುರೆಗೆ ದಿಗ್ವಿಜಯ ಮಾಡಿದರು. ಅಲ್ಲಿ ಅಪ್ಪಯ್ಯ ದೀಕ್ಷಿತರ ಮೊಮ್ಮಕ್ಕಳಾದ ನೀಲಕಂಠ ದೀಕ್ಷಿತರೊಡನೆ ವಾಕ್ಯಾರ್ಥ ನಡೆಯಿತು. ದೀಕ್ಷಿತರು ಶ್ರೀಗಳವರ ಮೀಮಾಂಸಾ ಪಾಂಡಿತ್ಯಕ್ಕೆ ಅಪ್ರತಿಭರಾದರು. ರಾಯರ 'ಭಾಟ್ಟಸಂಗ್ರಹ' ಎಂಬ ಮೀಮಾಂಸಾ ಗ್ರಂಥವನ್ನು ನೋಡಿ ಹರ್ಷಗೊಂಡು ಅದನ್ನು ಆನೆಯ ಮೇಲಿಟ್ಟು ಮೆರೆಸಿದರು.

ಉಡುಪಿಯ ಶ್ರೀಕೃಷ್ಣನ ದರ್ಶನ ಪಡೆದು ಶ್ರೀಗಳು ಮೈಸೂರಿಗೆ ಬಂದರು. ಅಲ್ಲಿ ಮೈಸೂರೊಡೆಯರು ಬಹುಭಕ್ತಿಯಿಂದ ನಮಿಸಿದರು. ದೇವತಾರಾಧನೆಗಾಗಿ ಗ್ರಾಮಗಳನ್ನು ದತ್ತಿಯಿತ್ತು ಧನ್ಯರಾದರು. ಮುಂದೆ ಸಂಚಾರ ಮಾಡುತ್ತ ಉತ್ತರ ಕರ್ನಾಟಕ ಪ್ರವೇಶಿಸಿ, ಗದುಗಿನ ವೀರನಾರಾಯಣನ ದರ್ಶನ ಪಡೆದರು.

ಕಿರೀಟಗಿರಿ ಗ್ರಾಮದ ದೇಸಾಯರಲ್ಲಿ ಭಿಕ್ಷೆ ಸ್ವೀಕರಿಸುವಾಗ ಆಕಸ್ಮಿಕವಾಗಿ ಸಾವಿಗೀಡಾದ ಬಾಲಕನನ್ನು ಬದುಕಿಸಿ ಪವಾಡ ಮೆರೆದರು. ದೇಸಾಯರು ಆನಂದ ನಿರ್ಭರರಾಗಿ ಆ ಗ್ರಾಮವನ್ನೇ ಶ್ರೀಗಳವರ ಅಡಿಗೆ ಅರ್ಪಿಸಿದರು.

ಮುಂದೆ ಪಂಢರಪುರದಲ್ಲಿ ವಿಠ್ಠಲನನ್ನು, ಕೊಲ್ಹಾಪುರದಲ್ಲಿ ಮಹಾಲಕ್ಷ್ಮಿಯನ್ನು ಸಂದರ್ಶಿಸಿ, ನಾಸಿಕಕ್ಕೆ ಹೋಗಿ ಗೋದಾವರಿಯಲ್ಲಿ ಮಿಂದು ಬಿಜಾಪುರಕ್ಕೆ ಬಂದರು.

ವಿಜಾಪುರದ ಆದಿಲಶಹ ಇಮ್ಮಡಿ ಇಬ್ರಾಹಿಮನು ರಾಯರ ಮಹಿಮೆ ಕೇಳಿ ಎದುರುಗೊಂಡು, ಸಕಲ ಮರ್ಯಾದೆಯೊಂದಿಗೆ ಮನ್ನಿಸಿ ಬಾಗಿದನು. ಅಲ್ಲಿಂದ ಗುರುಗಳು ಕೃಷ್ಣಾತೀರದ ಆಲೂರಿಗೆ ಬಂದರು. ಅಲ್ಲಿಯೇ 'ಭಾವದೀಪ' ಎಂಬ ತತ್ತ್ವಪ್ರಕಾಶಿಕಾ ವ್ಯಾಖ್ಯಾನವನ್ನು ಬರೆದರು. ಅಣುಭಾಷ್ಯ ವ್ಯಾಖ್ಯಾನವಾದ 'ತತ್ತ್ವಮಂಜರಿ'ಯನ್ನೂ ಇಲ್ಲಿಯೇ ಬರೆದರೆಂದು 'ರಾಘವೇಂದ್ರ ವಿಜಯ'ದಲ್ಲಿ ಹೇಳಲಾಗಿದೆ.

ಶ್ರೀಗಳವರು ಅದವಾನಿಗೆ ಆಗಮಿಸಿದರು. ಶ್ರೀಗಳವರ ಕೃಪಾಕಟಾಕ್ಷಕ್ಕೆ ಗುರಿಯಾಗಿದ್ದ ಕವನಾತಿಯ ದನಗಾಹಿ ವೆಂಕಣ್ಣ ಈಗ ಅದವಾನಿಯ ನವಾಬನ ದಿವಾನನಾಗಿದ್ದ. ದಿವಾನ ವೆಂಕಣ್ಣ ಆನಂದ ತುಂದಿಲನಾಗಿ ನವಾಬರ ಮುಂದೆ ಶ್ರೀಗಳ ಮಹಿಮೆಯನ್ನು ಬಹುವಾಗಿ ಕೊಂಡಾಡಿದನು. ನವಾಬನು ಶ್ರೀಗಳನ್ನು ಪರೀಕ್ಷಿಸಲೆಂದು ಒಂದು ತಟ್ಟೆಯಲ್ಲಿ ಮಾಂಸದ ಖಾದ್ಯಗಳನ್ನಿರಿಸಿ ಬಟ್ಟೆ ಹೊದಿಸಿ ಎದುರು ತಂದಿಟ್ಟನು. ಶ್ರೀಗಳು ಶಂಖೋದಕದಿಂದ ಪ್ರೋಕ್ಷಿಸಿ, ಮೇಲಿನ ವಸ್ತ್ರವನ್ನು ತೆಗೆಯಲು ಹೇಳಿದರು. ತಟ್ಟೆಯಲೆಲ್ಲ ಹಣ್ಣು ಹೂ-ಕಾಯಿ ! ಭಯಭೀತನಾದ ಖಾನನು ಕ್ಷಮೆಯಾಚನೆಗೈದು

ತಿಮ್ಮಾಪುರ, ಮೊಗರೂರು, ಮಂತ್ರಾಲಯಗಳನ್ನು ದಾನವಾಗಿತ್ತು ಕೃತಾರ್ಥನಾದನು. ಮುಂದೆ ರಾಯರು ಮಂಚಾಲಿಯಲ್ಲಿಯೇ ವಾಸವಾದರು.

ತಮ್ಮ ನಿರ್ಯಾಣಕಾಲ ಸಮೀಪಿಸಿತೆಂಬುದನ್ನು ತಿಳಿದು ತಮ್ಮ ಪೂರ್ವಾಶ್ರಮದ ಅಣ್ಣನ ಮೊಮ್ಮಕ್ಕಳಿಗೆ ಆಶ್ರಮವಿತ್ತು 'ಯೋಗೀಂದ್ರ ತೀರ್ಥ'ರೆಂದು ನಾಮಕರಣ ಮಾಡಿದರು. ಶಿಷ್ಯ ವೆಂಕಣ್ಣನಿಗೆ ವೃಂದಾವನವನ್ನು ನಿರ್ಮಿಸಲು ಆಜ್ಞಾಪಿಸಿದರು.

ರಾಯರ ಆದೇಶದಂತೆ ರಾಮಪಾದ ಪುನೀತ ಶಿಲೆ ಬಂದಿತು. ವೃಂದಾವನ ಸಿದ್ಧವಾಯಿತು. ಶ್ರಾವಣ ವದ್ಯ ಬಿದಿಗೆಯ ದಿನವೇ ತಮ್ಮ ವೃಂದಾವನ ಪ್ರವೇಶವೆಂದು ಗುರುಗಳು ಮೊದಲೇ ಸಾರಿದ್ದರು. ದಿಗ್ದೇಶಗಳಿಂದ ಅಸಂಖ್ಯಾತ ಭಕ್ತರು ಕೊನೆಯ ದರ್ಶನಕ್ಕಾಗಿ ಆಗಮಿಸಿದ್ದರು.

ಮಧ್ಯಾಹ್ನ ಯೋಗಾಸನ ರೂಢರಾಗಿ, ಶ್ವಾಸನಿರೋಧಮಾಡಿ ಲಯಚಿಂತನಗೈದು ವೇಣುಗೋಪಾಲಕೃಷ್ಣನನ್ನು ಧ್ಯಾನಿಸುತ್ತ ಅಸಂಪ್ರಜ್ಞಾತ ಸಮಾಧಿಯಲ್ಲಿ ಕುಳಿತರು. ಅವರ ಆದೇಶದಂತೆ ಸುತ್ತಲೂ ಒಂದೊಂದಾಗಿ ಶಿಲೆಯನ್ನು ಬಂಧಿಸಿ ವೃಂದಾವನ ರಚಿಸಲಾಯಿತು. ಶಿಲಾರಚನೆ ಕಂಠದ ವರೆಗೆ ಬರಲು ಹನ್ನೆರಡುನೂರು ಸಾಲಿಗ್ರಾಮಗಳಿಂದ ಕೂಡಿದ ಸಂಪುಟವನ್ನು ಇರಿಸಿ ವೃಂದಾವನ ಪೂರ್ಣಗೊಳಿಸಿದರು. ಇಂತು ಶ್ರೀರಾಘವೇಂದ್ರ ತೀರ್ಥರು ಸಶರೀರರಾಗಿ ವೃಂದಾವನವನ್ನು ಪ್ರವೇಶಿಸಿದರು. (ಕ್ರಿ.ಶ. ೧೬೭೧)

ಬರಹ

ಗುರು ಸಾರ್ವಭೌಮರು ಒಂದು ಜಂಗಮ ಜ್ಞಾನಕೋಶವಿದ್ದಂತೆ. ರಾಯರು ವ್ಯಾಖ್ಯಾನಿಸದ ಶಾಸ್ತ್ರವಿಲ್ಲ. ಒಂದೊಂದು ಶಾಸ್ತ್ರೀಯ ಟಿಪ್ಪಣಿ ಗ್ರಂಥದಲ್ಲಿ ಸರ್ವಶಾಸ್ತ್ರಗಳ ಸತ್ವಸಾರಗಳನ್ನು ಎರಕ ಹಾಕುವ ವಿಲಕ್ಷಣ ವೈದುಷ್ಯವು ರಾಯರೊಬ್ಬರದೇ ಸೊತ್ತು. ಅವರ ಯಾವ ಗ್ರಂಥವನ್ನು ತೆರೆದು ನೋಡಿದರೂ ಚತುಃಶಾಸ್ತ್ರಗಳ ಚತುರಸ್ರ ಪಾಂಡಿತ್ಯದ ಚಾತುರಿ, ವೈಖರಿ, ಮಾಧುರಿಗಳು ಮುಪ್ಪುರಿಗೊಂಡು ಮೆರೆಯುತ್ತವೆ.

ಮಾಧ್ವ ವಾಙ್ಮಯದ ಅಧ್ವರ್ಯುಗಳಾದ ಶ್ರೀರಾಘವೇಂದ್ರ ತೀರ್ಥರು ರಚಿಸಿದ ಗ್ರಂಥ ಸಂಸಾರ ಅಪಾರ. ನಮಗೆ ಈಗ ದೊರೆತ ಗ್ರಂಥಗಳ ಸಂಖ್ಯೆಯೇ ಅರ್ಧಶತಮಾನದ ಹತ್ತಿರ. ಉಪಲಬ್ಧವಿರುವ ೪೭ ಗ್ರಂಥಗಳೂ ಗುರುರಾಜರ ಸರ್ವಂಕಷ ಪ್ರಗಾಢ ಪಾಂಡಿತ್ಯದ ಸ್ವಂತಿಕೆ, ಧೀಮಂತಿಕೆಗಳ ಮುದ್ರೆಯನ್ನಾಂತು ನಿಂತಿವೆ. ಎಲ್ಲ ಗ್ರಂಥಗಳಲ್ಲಿಯೂ ಅವರ ಸರ್ವ ಶಾಸ್ತ್ರಗಳ ತಲಸ್ಪರ್ಶಿಯಾದ ಜ್ಞಾನ, ತೌಲನಿಕದೃಷ್ಟಿ, ಅಗಾಧ ವಿದ್ವತ್ತೆ, ಸುಸೂಕ್ಷ್ಮ ವಿಚಾರ ವೈಚಕ್ಷಣ್ಯಗಳು ಎದ್ದು ಕಾಣುತ್ತವೆ.

ಅಧ್ಯಾತ್ಮ ಪ್ರಪಂಚದಲ್ಲಿ ರಾಯರು ಶಕಪುರುಷರೆನಿಸಿದರೆ ಜ್ಞಾನಪ್ರಪಂಚದಲ್ಲಿಯಂತೂ ಅವರು ಸೀಮಾ ಪುರುಷರೇ ಎನಿಸಿದ್ದಾರೆ. ಅವರ ಶೈಲಿ ಪಂಡಿತರಂಜಕವಾಗಿದೆ, ಪಾಮರ ಬೋಧಕವಾಗಿದೆ. ಆದುದರಿಂದಲೇ ಅವರ ಅನೇಕ ಗ್ರಂಥಗಳು

ಮಂದನಂದಿನಿಯಾಗಿಯೂ, ಪ್ರಾಜ್ಞಬೋಧಿನಿಯಾಗಿವೆ. ಆ ಗ್ರಂಥಗಳನ್ನು ಪರಿಶೀಲಿಸಿದರೆ ರಾಯರ ವ್ಯಾಕರಣ ಪಾಂಡಿತ್ಯವನ್ನು ಹೊಗಳಬೇಕೊ, ಮೀಮಾಂಸಾ ಶಾಸ್ತ್ರದ ಪ್ರೌಢಿಮೆಯನ್ನು ಪ್ರಶಂಸಿಸಬೇಕೋ, ನ್ಯಾಯ ನೈಪುಣ್ಯವನ್ನು ಬಣ್ಣಿಸಬೇಕೋ, ವೇದ ವೈದುಷ್ಯವನ್ನು ಸ್ತುತಿಸಬೇಕೋ, ಧರ್ಮಶಾಸ್ತ್ರ ಪಾಂಡಿತ್ಯವನ್ನು ಕೊಂಡಾಡಬೇಕೋ ಎಂಬುದು ತಿಳಿಯದಾಗುತ್ತದೆ.

ಶ್ರೀ ರಾಘವೇಂದ್ರತೀರ್ಥರ ಒಂದೊಂದು ಗ್ರಂಥದ ಪರಿಚಯ ಪರಾಮರ್ಶೆಯನ್ನು ವಿವರವಾಗಿ ಮಾಡಲು ಹೊರಟರೆ ಒಂದೊಂದು ಹೆಬ್ಬೊತ್ತಿಗೆಯೇ ಬೇಕಾದೀತು. ಕಾರಣ ಇಲ್ಲಿ ಅತಿ ಸಂಕ್ಷಿಪ್ತವಾಗಿ, ಸ್ಥೂಲವಾಗಿ ಅವರ ಗ್ರಂಥಗಳ ಅಲ್ಪಾಲ್ಪ ಪರಿಚಯ ಮಾಡಿಕೊಡಲಾಗಿದೆ.

ಶ್ರೀ ನ್ಯಾಯ ಸುಧಾ-ಪರಿಮಳ

'ನ್ಯಾಯ ಸುಧಾ ಪರಿಮಳ'ವು ದ್ವೈತದ ವೇದಾಂತದ ಕಲಶಕೃತಿ. ರಾಯರ ಅರಸು ಕೃತಿ. ಇದರಿಂದಲೇ ಅವರಿಗೆ ಪರಿಮಳಾಚಾರ್ಯರೆಂಬ ಹೆಸರು.

ವೇದಾಂತ ವಿಧಿಯಲ್ಲಿ ಶ್ರೀ ಜಯತೀರ್ಥರ ಸುಧಾ ಗ್ರಂಥವು ಒಂದು ಮೈಲುಗಲ್ಲು. ಈ ಪ್ರೌಢ ಗ್ರಂಥಕ್ಕೆ ಹೊರಟ ಟೀಕೆ ಟಿಪ್ಪಣಿಗಳು ಅಪಾರ. ಅವುಗಳಲ್ಲಿ 'ಪರಿಮಳ'ವು ಒಂದು ಅನರ್ಘ್ಯ ರತ್ನ.

ಈ ಪರಿಮಳದಲ್ಲಿ ಗುರುರಾಜರು ಪ್ರತಿಪದಕ್ಕೂ ಅರ್ಥ ಬರೆಯುವುದಿಲ್ಲ. ಪಂಡಿತರಿಗೆ ಸಂದೇಹ ಬರಬಹುದಾದ ಸಂದು ಸಂದರ್ಭಗಳ ಮೇಲೆ ಬೆಳಕಿನ ಕೋಲನ್ನು ಹಾಯಿಸುತ್ತಾರೆ. ಹೀಗೆ ನ್ಯಾಯ ಸುಧೆಯ ಮರ್ಮಸ್ಥಳದ ಮೇಲೆಯೇ ಬೆರಳಿಟ್ಟಂತೆ ಸಂಕ್ಷಿಪ್ತವಾಗಿ ಬರೆಯುತ್ತ ಹೋದರೂ ಪರಿಮಳವು ಒಂದು ಹೆಬ್ಬೊತ್ತಿಗೆಯಾಗಿದೆ.

ಮಹಾಭಾಷ್ಯಂ ವೆಂಕಣ್ಣಭಟ್ಟರಿಗೆ ವೈಯಾಕರಣರ ಸಂಸ್ಕಾರ ಬಲವತ್ತರವಾಗಿರಬೇಕು. ಪರಿಮಳ ಬರೆಯುವ ಕಾಲದಲ್ಲಿ 'ಅರ್ಧಮಾತ್ರಾ ಲಾಘವೇನ ಪುತ್ರೋತ್ಸವಂ ಮನ್ಯಂತೇ ವೈಯಾಕರಣಾಃ' ಎಂದು ಹೇಳಿದ್ದಾರೆ. ಒಂದು ಶಬ್ದ, ಅರ್ಧಮಾತ್ರೆ ಕಡಿಮೆಯಾದರೆ ಗಂಡುಮಗು ಹುಟ್ಟಿದಷ್ಟು ಹಿಗ್ಗು ವ್ಯಾಕರಣ ಪಂಡಿತರಿಗೆ. ಹತ್ತು ಮಾತುಗಳಲ್ಲಿ ಇತರರು ಸುತ್ತಿ ಹೇಳುವ ಭಾವವನ್ನು ರಾಯರು ಮುತ್ತಿನಂತಹ ಒಂದೇ ಮಾತಿನಲ್ಲಿ ಹೇಳಿ ಅವರಿಗಿಂತ ಹೆಚ್ಚಿನ ಬೆಳಕನ್ನು ಬೀರುತ್ತಾರೆ. ಶಾಸ್ತ್ರ ಪ್ರಪಂಚದಲ್ಲಿ ಮಾತುಗಳ ಇಂತಹ ತೂಕ, ಪಾಕಗಳು ವಿರಳವಾಗಿಯೇ ಕಾಣಸಿಗುತ್ತವೆ. ಆ ದೃಷ್ಟಿಯಿಂದ 'ಪರಿಮಳ'ವು ಪಾರಿಜಾತ ಕುಸುಮದಂತೆ. ತನ್ನ ಸೌಗಂಧದಿಂದ ವೇದಾಂತ ವಿಶ್ವವನ್ನೇ ಸುರಭೀಕರಿಸಿದೆ.

ಚಂದ್ರಿಕಾಪ್ರಕಾಶ

'ಬ್ರಹ್ಮಸೂತ್ರ'ವು ವೇದವ್ಯಾಸರು ಬರೆದ ವೇದ ಶಾಸ್ತ್ರ ನಿರ್ಣಾಯಕವಾದ ಗ್ರಂಥ. ಪ್ರಸ್ಥಾನ ತ್ರಯಗಳಲ್ಲಿ ಬಹು ಮುಖ್ಯವಾದುದು. ಇದರ ಮೇಲೆ

ಇತರ ಮತೀಯರು ಬರೆದ ೨೧ ಭಾಷ್ಯಗಳನ್ನು ಖಂಡಿಸಿ ಶ್ರೀ ಮಧ್ವಾಚಾರ್ಯರು ತಮ್ಮ ಭಾಷ್ಯವನ್ನು ರಚಿಸಿದರು. ಈ ಮಧ್ವ ಭಾಷ್ಯವು ಬಹು ಕ್ಲಿಷ್ಟವಾದ ಗ್ರಂಥವು. ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರು, ಶ್ರೀ ಜಯತೀರ್ಥರು ಇದಕ್ಕೆ ವ್ಯಾಖ್ಯಾನ ಬರೆದಿದ್ದಾರೆ. ಶ್ರೀ ಜಯತೀರ್ಥರ ತತ್ತ್ವಪ್ರಕಾಶಿಕೆ ಸರ್ವ ಶ್ರೇಷ್ಠ ಗ್ರಂಥವು. ಇದಕ್ಕೆ ಶ್ರೀ ವ್ಯಾಸರಾಜರು ಬರೆದ ಅಮೋಘ ಟಿಪ್ಪಣಿಯೇ 'ಚಂದ್ರಿಕೆ'.

ಸ್ವತಂತ್ರ ಮೌಲಿಕ ಕೃತಿಯೆಂದೆನಿಸುವಷ್ಟು ಪ್ರೌಢವಾದ ಈ ಚಂದ್ರಿಕಾ ಗ್ರಂಥವು ಸರ್ವಾರ್ಥದರ್ಶಕ ಟಿಪ್ಪಣಿಯ ಸಹಾಯವಿಲ್ಲದೆ ತಿಳಿಯಲು ಸಾಧ್ಯವೆಂದು ಬಗೆದು ಶ್ರೀ ರಾಘವೇಂದ್ರತೀರ್ಥರು 'ಚಂದ್ರಿಕಾ ಪ್ರಕಾಶ' ವೆಂಬ ಗ್ರಂಥವನ್ನು ರಚಿಸಿದರು. ಇದರಲ್ಲಿ ರಾಯರ ವ್ಯಾಖ್ಯಾನ ಕೌಶಲ್ಯವು ಪದೇ ಪದೇ ವ್ಯಕ್ತವಾಗುತ್ತದೆ. ಕಠಿಣವಾದ ತಾತ್ತ್ವಿಕ ವಿಷಯಗಳನ್ನು ವಾದ ವಿವಾದಗಳ ಸಂದರ್ಭಗಳನ್ನೂ ತಿಳಿತಿಳಿಯಾಗಿ ಸರಳೀಕರಿಸಿ ಹೇಳುವ ಜಾಣ್ಮೆ ಅಸಾಧಾರಣವಾಗಿದೆ. ಇಲ್ಲಿ ವ್ಯಕ್ತವಾದ ರಾಯರ ನ್ಯಾಯ ವೇದಾಂತ ವ್ಯಾಕರಣ ಮಿಮಾಂಸಾ ಮೊದಲಾದ ಶಾಸ್ತ್ರೀಯ ಪ್ರಪಂಚದ ಅಗಾಧ ಜ್ಞಾನವು ಎಂತಹ ಬುದ್ಧಿವಂತ ಬೃಹಸ್ಪತಿಗಳನ್ನೂ ಬೆರಗುಗೊಳಿಸುತ್ತದೆ. ಇದರಲ್ಲಿ ತಂತ್ರ ಚೂಡಾಮಣಿ ಶ್ರೀಕಂಠಭಾಷ್ಯನಯವಿವೇಕ ನಿಬಂಧನ ಮುಂತಾದ ಶೈವ ಮೀಮಾಂಸಕರ ಮತಗಳನ್ನು ಖಂಡಿಸಿದ್ದಾರೆ. ಅದರಲ್ಲಿಯೂ ಅಪ್ಪಯ್ಯ ದೀಕ್ಷಿತರ ಮಧ್ವಮತ ವಿಧ್ವಂಸ ಮತ್ತು ಶಿವಾರ್ಕಮಣಿ ದೀಪಿಕೆಗಳನ್ನಂತೂ ತಮ್ಮ ತೀವ್ರದಾಳಿಗೆ ತುತ್ತಾಗಿಸಿದ್ದಾರೆ.

ಭಾವದೀಪ

ಜಯತೀರ್ಥರ ತತ್ತ್ವಪ್ರಕಾಶಿಕೆಗೆ ರಾಯರ 'ಭಾವದೀಪ' ಬಿಟ್ಟರೆ ಗತ್ಯಂತರವಿಲ್ಲ. ಟೀಕಾಚಾರ್ಯರ ಅಂತರಂಗದ ಆಕೂತಗಳಿಗೆ ಹಿಡಿದ ರನ್ನಗನ್ನಡಿಯೇ 'ಭಾವದೀಪ'. ಇದರಲ್ಲಿ ಅಪ್ಪಯ್ಯ ದೀಕ್ಷಿತ ಹಾಗು ಭಟ್ಟೋಜಿ ದೀಕ್ಷಿತರ ವೇದಾಂತ ವ್ಯಾಕರಣಾಕ್ಷೇಪಗಳನ್ನು ಅಧಿಕೃತ ಪ್ರಮಾಣೋದಾಹರಣ ಪೂರ್ವಕವಾಗಿ ನಿರಾಕರಿಸಿ ಜಯತೀರ್ಥರ ಉಕ್ತಿಗಳಿಗೆ ಸರ್ವರೀತಿಯ ಸಾಧುತ್ವವನ್ನು ಸಮರ್ಥಿಸಿದ್ದಾರೆ.

ನ್ಯಾಯದೀಪ

ಭಾರತದ ಬೌದ್ಧಿಕ ಪ್ರಪಂಚದಲ್ಲಿ ತಾರ್ಕಿಕರ ಕೋಲಾಹಲ ವಿಪರೀತ. ಅವರ ಶಾಬ್ದ ಬೋಧ ಪರಿಷ್ಕಾರ, ಅನುಗಮಗಳ ಶಬ್ದಾಡಂಬರಗಳ ಮುಂದೆ ಎಂಥ ಪಂಡಿತ ಕೇಸರಿಗಳೂ ಮೂಕ ಮೌನಿಗಳಾಗಬೇಕಾಗುತ್ತದೆ. ಈ ನೈಯಾಯಿಕರ ತಪ್ಪು ತಡೆಗಳನ್ನು ತೋರಿದ ಮೊಟ್ಟಮೊದಲಿನ ಮೇಧಾವಿ ಮನೀಷಿಗಳೆಂದರೆ ಚಂದ್ರಿಕಾಚಾರ್ಯರು. ಶಾಬ್ದಿಕ ಸದ್ದು ಗದ್ದಲದಲ್ಲಿ ತಾರ್ಕಿಕರು ಮಾಡಿದ ಪ್ರಮೇಯಗಳ

ತಿರುಗು ಮುರುಗಾಟವನ್ನು ಅವರ ಕಣ್ಣ ಮುಂದೇ ಒಡಿದು ಅವರ ತಪ್ಪನ್ನು ಅವರಿಂದಲೇ ಒಪ್ಪಿಸಿದ ಮಹಾಗ್ರಂಥ 'ತರ್ಕತಾಂಡವ' ಮಾತ್ರ.

ಇಂಥ ಗೂಢ ಪ್ರೌಢ ಪ್ರಗಲ್ಭ ಪ್ರಬಂಧವಾದ ತರ್ಕತಾಂಡವಕ್ಕೆ ಟೀಕೆ ಬರೆದ ಪ್ರಜ್ಞಾಪುರುಷರು ಶ್ರೀ ರಾಘವೇಂದ್ರರು. ರಾಯರ 'ನ್ಯಾಯದೀಪ'ವು ವೈದುಷ್ಯದ ನಿಕಷವಾಗಿದೆ. ನವ್ಯ ನ್ಯಾಯದ ಹೆಬ್ಬುಲಿಗಳ ಅಬ್ಬರವನ್ನೂ ಅಡಗಿಸುವ ಆರ್ಭಟೆ 'ನ್ಯಾಯದೀಪ'ದಲ್ಲಿ ನಿನದಿಸುತ್ತದೆ. ನೈಯಾಯಿಕರ ಉಕ್ತಿ ಪ್ರಯುಕ್ತಿಗಳಿಂದಲೇ ಅವರ ಮತವನ್ನು ಖಂಡಿಸಿ ವೇದಾಂತ ಪ್ರಕ್ರಿಯೆಯ ನಿರ್ದುಷ್ಟತನವನ್ನು ಸಮರ್ಥಿಸಿದ್ದಾರೆ. ಮಾಧ್ವರಿಗೆ ತರ್ಕಶಾಸ್ತ್ರ ಪ್ರಾವೀಣ್ಯವಿರುವದಿಲ್ಲವೆಂಬ ಮಾತಿಗೆ ವ್ಯಾಸರಾಯರ ತರ್ಕತಾಂಡವ ಗ್ರಂಥವೂ ಗುರುರಾಜರ ನ್ಯಾಯದೀಪವೂ ಸಮರ್ಥ ಉತ್ತರವಾಗಿದೆ.

ತಾತ್ಪರ್ಯ ನಿರ್ಣಯ ಭಾವಸಂಗ್ರಹ

ಶ್ರೀ ಮಧ್ವಾಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯವು ಒಂದು ನಿರ್ಣಾಯಕ ಗ್ರಂಥವು. ವೇದಶಾಸ್ತ್ರ ಪುರಾಣಗಳಲ್ಲಿ ಹೇಳಿದ ಅನೇಕ ವಿಷಯಗಳ ಸಾರ ಸಂಗ್ರಹವು ಅದರಲ್ಲಿದೆ. ಭಾಗವತ. ಭಾರತ. ರಾಮಾಯಣ ಮುಂತಾದ ಪುರಾಣ ಉಪ ಪುರಾಣಗಳನ್ನೆಲ್ಲ ಕ್ರೋಢೀಕರಿಸಿ ಒಂದು ಜಾಡಿನಲ್ಲಿ ಆಚಾರ್ಯರು ನೇಯ್ದು ಇಟ್ಟಿದ್ದಾರೆ. ಈ ಗ್ರಂಥ ೩೨ ಅಧ್ಯಾಯಗಳ ಬೃಹದ್ಗ್ರಂಥವು. ಇದನ್ನು ಓದಿ ಪಾರಾಯಣ ಮಾಡಲು ಅವಕಾಶವಿಲ್ಲದವರಿಗೆ ರಾಯರು ಇದೊಂದು ಚಿಕ್ಕ ತಾತ್ಪರ್ಯ ನಿರ್ಣಯದ ಕೈಪಿಡಿಯನ್ನು ರಚಿಸಿದ್ದಾರೆ. ಮೂಲದ ಮುಖ್ಯ ಕಥಾಸೂತ್ರಗಳೆಲ್ಲವೂ ಇಲ್ಲಿ ಎಳೆ ಎಳೆಯಾಗಿ ಹೊಂದುಗೂಡಿ ಬಂದಿದೆ.

ಉಪನಿಷದ್ ಖಂಡಾರ್ಥಗಳು

ಶ್ರೀ ಮಧ್ವಾಚಾರ್ಯರು ಬರೆದ ಹತ್ತು ಉಪನಿಷತ್ತುಗಳಲ್ಲಿ ಐತರೇಯ ವೊಂದನ್ನುಳಿದು ಮಿಕ್ಕವುಗಳಿಗೆ ರಾಯರು ಖಂಡಾರ್ಥವನ್ನು ಬರೆದಿದ್ದಾರೆ. ಇವುಗಳಲ್ಲಿ ಮಧ್ವಭಾಷ್ಯಕ್ಕೆ ಅನುಸಾರವಾಗಿ ಉಪನಿಷತ್ತುಗಳ ಅರ್ಥವನ್ನು ಬಹು ಚಾತುರ್ಯದಿಂದ ವಿವರಿಸಿದ್ದಾರೆ. ಸಣ್ಣ ಸಣ್ಣ ವಾಕ್ಯಗಳು. ಸರಳ ಅರ್ಥ. ಅಡೆತಡೆಯಿಲ್ಲದ ಪ್ರಸನ್ನ ಶೈಲಿ, ಇವುಗಳಿಂದಾಗಿ ಈ 'ಉಪನಿಷತ್ ಖಂಡಾರ್ಥ'ಗಳು ಅಭ್ಯಾಸಿಗೆ ಅತ್ಯಂತ ಉಪಕಾರಕವಾಗಿವೆ. ಪಂಡಿತರಿಗೂ ಮಾರ್ಗದರ್ಶಕವಾಗಿವೆ. ರಂಗರಾಮಾನುಜ ಮೊದಲಾದವರ ಅಪವ್ಯಾಖ್ಯಾನಕ್ಕೆ ಉತ್ತರ ರೂಪವಾಗಿ ಮೂಡಿ ಬಂದಿವೆ ಈ ಖಂಡಾರ್ಥಗಳು.

ತಂತ್ರ ದೀಪಿಕಾ

'ತಂತ್ರ ದೀಪಿಕೆ'ಯು ಗುರು ರಾಘವೇಂದ್ರರ ಬ್ರಹ್ಮಸೂತ್ರಗಳ ಮೇಲಿನ ಸ್ವತಂತ್ರ ಗ್ರಂಥವಾಗಿದೆ. ಇದರಲ್ಲಿ ಪರಮತಗಳ ಖಂಡನೆಯ ಗೋಜಿಗೆ ಹೋಗದೆ

ಮೂಲನಿಷ್ಠವಾಗಿ ಸೂತ್ರಗಳ ಭಾವವನ್ನು ಮಧ್ವಭಾಷ್ಯಾನುಸಾರ ವಿವರಿಸುತ್ತಾರೆ. ಭಾವದೀಪ, ಚಂದ್ರಿಕಾ, ಪ್ರಕಾಶ, ಪರಿಮಳ ಮುಂತಾದ ಗ್ರಂಥಗಳಲ್ಲಿ ಸೂತ್ರ ಪ್ರಸ್ಥಾನದ ಆಳಕ್ಕೆ ಇಳಿದು ಅದರ ಘನತೆ ಗಾಂಭೀರ್ಯಗಳನ್ನು ಜನರಿಗೆ ಪರಿಚಯ ಮಾಡಿಕೊಟ್ಟ ರಾಯರು, ಸಕೃದ್ ದರ್ಶನದಲ್ಲಿ ಸೂತ್ರಗಳಿಂದ ಹೊರಟ ಸುಸಂಗತ ಅರ್ಥವನ್ನು ಇಲ್ಲಿ ವಿವರಿಸಿದ್ದಾರೆ. ಸುಧಾ ಚಂದ್ರಿಕಾದಿ ಪ್ರೌಢ ಗ್ರಂಥಗಳನ್ನು ಓದಿ ಮುಗಿಸಿದ ಮೇಲೆ ತಂತ್ರದೀಪಿಕೆಯನ್ನು ಓದಬೇಕು. ಸಂಕ್ಷಿಪ್ತವಾಗಿ ಸೂತ್ರಾರ್ಥಗಳನ್ನು ತಿಳಿಯಬಯಸುವವರಿಗೆ ಇದು ಅತ್ಯಂತ ಉಪಯುಕ್ತವಾಗಿದೆ.

ನ್ಯಾಯ ಮುಕ್ತಾವಲಿ

'ನ್ಯಾಯ ಮುಕ್ತಾವಲಿ'ಯು ಕೂಡ ಸೂತ್ರ ಪ್ರಸ್ಥಾನಕ್ಕೆ ಸಂಬಂಧಿಸಿದ ಗ್ರಂಥವು. ಇದರಲ್ಲಿ ಅನುವಾದಕ್ಕೆ ಅನುಕೂಲವಾಗುವಂತೆ ಅಧಿಕರಣ ರಚನೆಯನ್ನು ಮಾಡಿದ್ದಾರೆ. ಪ್ರತಿಯೊಂದು ಸೂತ್ರ ಮತ್ತು ಅಧಿಕರಣಗಳ ಪೂರ್ವಪಕ್ಷ ಸ್ಥಾಪಕ ಯುಕ್ತಿ, ಸಂಶಯ ಬೀಜ, ಆಕ್ಷೇಪ, ಅವತಾರಿಕೆಗಳನ್ನು ಹೇಳಿ ಕೊನೆಗೆ ಸಿದ್ಧಾಂತ ಸೂತ್ರವನ್ನು ಉಪನ್ಯಾಸ ಮಾಡಿ ಎಲ್ಲ ಪೂರ್ವ ಪಕ್ಷಗಳನ್ನು ನಿರಾಕರಿಸುವದು, ಸಂವಾದಸಮಾಖ್ಯೆಗಳಿಂದಲೂ ಉಕ್ತಿಯುಕ್ತಿಗಳಿಂದಲೂ ಸಿದ್ಧಾಂತ ಪ್ರಮೇಯಗಳನ್ನು ಸಮರ್ಥಿಸುವದು ಈ ಹೊಸ ಕ್ರಮವನ್ನು ಇಲ್ಲಿ ಗುರುರಾಜರು ಅನುಸರಿಸಿದ್ದಾರೆ.

ಇದರಿಂದ ಸೂತ್ರಾರ್ಥಗಳ ಚಿಂತನವು ಒಂದು ಬೌದ್ಧಿಕ ಆಟವೆಂದೆನಿಸಿ ಬೇಸರ ವಿಲ್ಲದೆ ಬ್ರಹ್ಮಸೂತ್ರಾಧಿಕರಣಗಳ ಅರ್ಥವನ್ನೆಲ್ಲ ಅನುಶೀಲನ ಮಾಡಲು ಉತ್ಸಾಹ ಬರುತ್ತದೆ. ಪ್ರತಿಯೊಂದು ಅಧಿಕರಣಕ್ಕೂ ಸಕಾರಣ ಸಂಶಯ, ಪೂರ್ವಪಕ್ಷ ಅದಕ್ಕೆ ಸಮಂಜಸವಾದ ಸೈದ್ಧಾಂತಿಕ ಉತ್ತರ ಅದು ಕೂಡ ಸೂತ್ರೋದಿತವೇ. ಇಂತು ಒಂದು ವ್ಯವಸ್ಥಿತ ಸುಂದರ ಕ್ರಮದ ಸುತ್ತಿನಲ್ಲಿ ಎಲ್ಲ ಅಧಿಕರಣಗಳನ್ನೂ ರಮ್ಯವಾಗಿ ರಚಿಸಿದ ರಾಯರ ವಿಚಿತ್ರ ಮೇಧಾಶಕ್ತಿ ಅದ್ಭುತವಾದುದು.

ಪ್ರಮೇಯ ದೀಪಿಕಾ ವ್ಯಾಖ್ಯಾ

ಶ್ರೀಪಾದೀಂದ್ರರು ನಡೆಸಿದ 'ಗುರುಗುಣಸ್ತವನ'ದಲ್ಲಿ ಈ ಗ್ರಂಥ ರಚನೆಯ ಉಲ್ಲೇಖ ಬಂದಿದೆ. ಮೈಸೂರ ಓರಿಯಂಟಲ್ ಗ್ರಂಥಾಲಯದಲ್ಲಿ ಇದರ ಒಂದು ಪ್ರತಿ ಇದೆಯೆಂದು ತಿಳಿದು ಬರುತ್ತದೆ. ನಮ್ಮ ಅವಲೋಕನೆ ಅಭ್ಯಾಸಕ್ಕೆ ಇನುವರೆಗೆ ಒದಗಿಲ್ಲ.

ಗೀತಾವಿವೃತ್ತಿ

ಗುರುಮಧ್ವರ ಗೀತಾಭಾಷ್ಯ, ಜಯತೀರ್ಥರ ಟೀಕೆ, ಪ್ರಮೇಯ ದೀಪಿಕೆಯ ವಿವರಣೆಗಳಿಗೆ ಅನುಗುಣವಾಗಿಯೇ ಗೀತಾರ್ಥ ದರ್ಶನವನ್ನು ಈ 'ಗೀತಾವಿವೃತ್ತಿ' ಗ್ರಂಥವು ಮಾಡಿಕೊಡುತ್ತದೆ. 'ಸಂಕ್ಷೇಪ ವಿಸ್ತರಾಭ್ಯಾಂ ಕಥಯಂತಿ ಮನೀಷಿಣಃ' ಎಂಬ ಮನೀಷಿಗಳ ಲಕ್ಷಣವನ್ನು ಅನುಸರಿಸಿ ರಾಯರು ಗೀತೆಗೆ 'ಪ್ರಮೇಯ ದೀಪಿಕೆ' ಯಲ್ಲಿ

ವಿಸ್ತಾರವಾಗಿಯೂ, 'ವಿವೃತ್ತಿ'ಯಲ್ಲಿ ಸಂಕ್ಷೇಪವಾಗಿಯೂ ವ್ಯಾಖ್ಯಾನವನ್ನು ಬರೆದು ಉಭಯವಿಧ ಉಪಕಾರ ಮಾಡಿದ್ದಾರೆ.

ದಶ ಪ್ರಕರಣ ವ್ಯಾಖ್ಯಾ

ಶ್ರೀ ಮಧ್ವಾಚಾರ್ಯರು ತಮ್ಮ ಸಿದ್ಧಾಂತವನ್ನು ಮಂಡನ ಮಾಡಲಿಕ್ಕಾಗಿ ಹತ್ತು ಪ್ರಕರಣ ಗ್ರಂಥಗಳನ್ನು ಬರೆದಿದ್ದಾರೆ. ಅವು 'ದಶ ಪ್ರಕರಣ' ಎಂದು ಪ್ರಸಿದ್ಧವಾಗಿವೆ. ಪ್ರಮಾಣಲಕ್ಷಣ, ಕಥಾಲಕ್ಷಣ, ಮಾಯಾವಾದ ಖಂಡನ, ಮಿಥ್ಯಾನು-ಮಾನಖಂಡನ, ಉಪಾಧಿಖಂಡನ, ತತ್ವ ಸಂಖ್ಯಾನ, ತತ್ತ್ವ ವಿವೇಕ, ತತ್ತ್ವೋದ್ಯೋತ, ಕರ್ಮನಿರ್ಣಯ, ವಿಷ್ಣುತತ್ತ್ವ ನಿರ್ಣಯ ಇವೇ ಆ ದಶಪ್ರಕರಣಗಳು. ಇವುಗಳಲ್ಲಿ ಮಧ್ವಮತ ಸಿದ್ಧಾಂತದ ಸಾರ ಸರ್ವಸ್ವವೂ ಸನ್ನಿಹಿತವಾಗಿದೆ.

ಇವುಗಳಿಗೆಲ್ಲ ಜಯತೀರ್ಥರು ಟೀಕೆ ಬರೆದಿದ್ದಾರೆ. ಅವುಗಳಿಗೆ ಮಂತ್ರಾಲಯ ಪ್ರಭುಗಳು ಒಳ್ಳೆಯ ಉದ್ಬೋಧಕವಾದ ಟಿಪ್ಪಣಿಗಳನ್ನು ಬರೆದಿದ್ದಾರೆ. ವ್ಯಾಸರಾಜರು ಬರೆದ ಖಂಡನತ್ರಯ ಹಾಗು ತತ್ತ್ವ ವಿವೇಕಗಳನ್ನು ಬಿಟ್ಟು ಮಿಕ್ಕ ಆರು ಪ್ರಕರಣಗಳಿಗೆ ರಾಯರು ವ್ಯಾಖ್ಯಾನ ಬರೆದಿದ್ದಾರೆ. ಇವು ಅತ್ಯಂತ ಲೋಕೋಪಕಾರಕವಾಗಿವೆ. ಇವುಗಳ ಸಹಾಯವಿಲ್ಲದೆ ಮೂಲದ ಅರ್ಥವಾಗಲಿ ಟೀಕೆಯ ಭಾವವಾಗಲಿ ತಿಳಿಯ ಲಾರದು. ಮೂಲಕಾರರ ಆಶಯ, ಟೀಕಾಪಂಕ್ತಿಗಳ ಮೂಲಕ ನೇರವಾಗಿ ಓದುಗರ ಮಿದುಳಿಗೆ ಇಳಿಯುವಂತೆ ಎಸಗಿದ್ದಾರೆ.

ಪ್ರಮಾಣ ಪದ್ಧತಿ ವ್ಯಾಖ್ಯಾ

ಪ್ರಮೇಯ ಜ್ಞಾನವಾಗಬೇಕಾದರೆ ಮೊದಲು ಪ್ರಮಾಣಗಳನ್ನು ತಿಳಿದು ಕೊಳ್ಳಬೇಕು. ಪ್ರಮಾಣ ಸ್ವರೂಪದ ತಿಳುವಳಿಕೆ ಮಾಡಿಕೊಡುವುದಕ್ಕಾಗಿಯೇ ಟೀಕಾಚಾರ್ಯರು 'ಪ್ರಮಾಣ ಪದ್ಧತಿ' ಯನ್ನು ರಚಿಸಿದರು. 'ಯಥಾರ್ಥಂ ಪ್ರಮಾಣಂ' ಎಂಬ ಮಧ್ವಾಚಾರ್ಯರ ಉಕ್ತಿಯನ್ನೇ ಇದರಲ್ಲಿ ವಿಶದೀಕರಿಸಿದ್ದಾರೆ. ಎಷ್ಟು ಸರಳ ಮಾಡಬೇಕೆಂದರೂ ಟೀಕಾಪಂಕ್ತಿಗಳು ಗಹನ ಗಂಭೀರವಾಗಿವೆ. ಟೀಕಾ ರಾಯರ ಉದ್ದೇಶವನ್ನು ಪೂರ್ತಿಗೊಳಿಸಲು ರಾಯರು ಈ ಪ್ರಮಾಣ ಪದ್ಧತಿಗೆ ಸರಳ ಸುಂದರ ಟಿಪ್ಪಣಿ ಬರೆದಿದ್ದಾರೆ. ಪ್ರತ್ಯಕ್ಷ, ಅನುಮಾನ, ಆಗಮ ಈ ಮೂರು ಮಾತ್ರ ಪ್ರಮಾಣ. ಉಳಿದ ನೈಯಾಯಿಕರ ಉಪಮಾನ, ಮೀಮಾಂಸಕರ ಅರ್ಥಾಪತ್ತಿ, ಭಾಟ್ಟರ ಅನುಪಲಬ್ಧಿ ಇವೆಲ್ಲ ಈ ಮೂರರಲ್ಲಿಯೇ ಅಂತರ್ಭಾವ ಹೊಂದುತ್ತವೆಂಬುದನ್ನು ರಾಯರು ಸ್ಪಷ್ಟವಾಗಿ ತೋರಿದ್ದಾರೆ. ಇದರಲ್ಲಿ ದ್ವೈತ ವೇದಾಂತದ ಪರಿಭಾಷೆಯನ್ನು, ಪ್ರಮೇಯಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಡಲಾಗಿದೆ.

ಪ್ರಾತಃ ಸಂಕಲ್ಪ ಗದ್ಯ

ಪರಮಾತ್ಮನ ಅದ್ಭುತ ಮಹಿಮೆ, ಅಗಾಧಶಕ್ತಿ, ಸರ್ವೋತ್ತಮತ್ವ, ಸರ್ವ ಕರ್ತೃತ್ವ, ಜಗನ್ನಿಯಾಮಕತ್ವ, ಸರ್ವಗುಣ ಪೂರ್ಣತ್ವಾದಿಗಳನ್ನು ಚೆನ್ನಾಗಿ ತಿಳಿದು,

ಅರ್ಥಾನುಸಂಧಾನಪೂರ್ವಕವಾಗಿ ಪ್ರಾತಃಕಾಲದಲ್ಲಿ ಭಗವಂತನ ಧ್ಯಾನ ಮಾಡುವದು, ಮಂಗಳ ಗೀತಗಳನ್ನು ಹಾಡುವದು ಮಹಾ ಪುಣ್ಯಕರವು. ಪ್ರತಿಯೊಂದು ಕಾರ್ಯ ದಲ್ಲಿಯೂ 'ನಾಹಂ ಕರ್ತಾ ಹರಿಃ ಕರ್ತಾ' ಎಂಬ ನಿರಂಹಕಾರ ಭಾವನೆ, ಸರ್ವಾರ್ಪಣ ಬುದ್ಧಿಯಿರಬೇಕು. 'ಪ್ರಾತಃ ಪ್ರಭೃತಿ ಸಾಯಾಂತಂ' ಮಾಡಿದ್ದೆಲ್ಲವೂ ಶ್ರೀ ಹರಿಯ ಪೂಜೆಯೆಂದು ಭಾವಿಸಬೇಕು. ಇಲ್ಲಿ ಮಧ್ವ ಸಿದ್ಧಾಂತದ ತಿರುಳೇ ಅಡಕವಾಗಿದೆ.

ಅಣುಮಧ್ವ ವಿಜಯ ವ್ಯಾಖ್ಯಾ

ಶ್ರೀನಾರಾಯಣ ಪಂಡಿತಾಚಾರ್ಯರು ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ತ್ರಿವಿಕ್ರಮ ಪಂಡಿತಾಚಾರ್ಯರ ಮಕ್ಕಳು. ಇವರು ವಿರಚಿಸಿದ 'ಸುಮಧ್ವ ವಿಜಯ'ವು ಹದಿನಾರು ಸರ್ಗಗಳ ಮನೋಹರ ಕಾವ್ಯವಾಗಿದ್ದು ಶ್ರೀ ಮಧ್ವಾಚಾರ್ಯರ ದಿವ್ಯ ಭವ್ಯ ಜೀವನವನ್ನು ರಮ್ಯವಾಗಿ ಚಿತ್ರಿಸುತ್ತದೆ. ಸಮಕಾಲೀನರಿಂದ ರಚಿತವಾದ ಐತಿಹಾಸಿಕ ಚರಿತ್ರೆ ಇದಾಗಿದೆಯೆಂದು ಹೇಳಬಹುದು. ನಾರಾಯಣ ಪಂಡಿತಾಚಾರ್ಯರೇ ಈ ಕೃತಿಯ ಸಂಕ್ಷಿಪ್ತ ಆವೃತ್ತಿಯನ್ನು 'ಅಣು ಮಧ್ವ ವಿಜಯ'ವೆಂದು ಹೆಸರಿಸಿ ರಚಿಸಿದ್ದಾರೆ. ಒಟ್ಟು ೩೨ ಪದ್ಯಗಳಿವೆ.

ಈ ಅಣುಮಧ್ವ ವಿಜಯಕ್ಕೆ ಶ್ರೀ ಮಂತ್ರಾಲಯ ಪ್ರಭುಗಳು ವ್ಯಾಖ್ಯಾನ ರೂಪದಿಂದ ತಾವೂ ಒಂದು ಪುಟ್ಟ ಮಧ್ವ ವಿಜಯವನ್ನೇ ಬರೆದಿದ್ದಾರೆ.

ಭಾಟ್ಟ ಸಂಗ್ರಹ

ಮೀಮಾಂಸಾ ಶಾಸ್ತ್ರವೆಂದರೆ ಪೂರ್ವಮೀಮಾಂಸಾ ಎಂದೇ ಅರ್ಥ. ವೇದೋಕ್ತ ಯಜ್ಞ ಯಾಗಾದಿಗಳ ವಿಧಿವಿಧಾನಗಳನ್ನು ಕುರಿತು ವಿಚಾರಿಸುವ ಶಾಸ್ತ್ರವಿದು. ಈ ಮೀಮಾಂಸಾ ಮತ್ತು ವೇದಾಂತಗಳು ಪರಸ್ಪರ ಪೂರಕವಾಗಿವೆ.

ಶ್ರೀ ರಾಘವೇಂದ್ರತೀರ್ಥರ 'ಭಾಟ್ಟ ಸಂಗ್ರಹ'ವು ಮೀಮಾಂಸಾ ಶಾಸ್ತ್ರ ಗ್ರಂಥ. ಮೀಮಾಂಸಾ ಶಾಸ್ತ್ರದ ಮಹಾ ಪಂಡಿತರನ್ನೂ ಬೆರಗುಗೊಳಿಸುವ ಮಹಾಕೃತಿ. ವೇದಾಂತ ಶಾಸ್ತ್ರದಲ್ಲಿ ಬರುವ ಮೀಮಾಂಸ ಪ್ರಕ್ರಿಯೆಯೆಲ್ಲವನ್ನು ಇಲ್ಲಿ ತಿಳಿಯಾಗಿ ವಿವರಿಸಿದ್ದಾರೆ. ಶಾಬರ ಭಾಷ್ಯ, ತಂತ್ರವಾರ್ತಿಕಗಳಿಗನುಸಾರವಾಗಿ ಬರೆದ ಈ ಅಪೂರ್ವ ಗ್ರಂಥವು ಮಾಧ್ವರು ಮೀಮಾಂಸಾ ಶಾಸ್ತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಯಾಗಿದೆ.

ವೇದತ್ರಯ ವಿವೃತಿ

ವೇದಗಳೆಂದರೆ 'ಅಪ್ರಬುದ್ಧ ಆರ್ಯರ ಅನಾಗರಿಕ ಅಸಂಸ್ಕೃತರ ಪ್ರಲಾಪ' ಎಂದು ಎಷ್ಟೋ ಪ್ರಾಜ್ಞಂಮನ್ಯರಾದ ಪಾಶ್ಚಾತ್ಯ ವಿದ್ವಾಂಸರೂ ಅವರ ಪಂಙ್ತಿಯಲ್ಲಿ ಬಿಗಿಳಾದ ಭಾರತೀಯ ವಿಮರ್ಶಕರೂ ಹೇಳಿರುವದುಂಟು. ಆದುದರಿಂದ ವೇದಗಳಿಗೆ ಆಪಾತತಃ ತೋರುವ ಬರೀ ಬೆಂಕಿ, ಬೆಳಕು, ನೀರು ಮುಂತಾದವುಗಳ ಸ್ತುತಿ ರೂಪತ್ವ

ಮಾತ್ರವಲ್ಲದೆ ಆಧ್ಯಾತ್ಮಿಕ ಅರ್ಥವು ಬೇರೆಯೇ ಉಂಟು ಎಂಬುದನ್ನು ಶ್ರೀ ಮಧ್ವಾಚಾರ್ಯರು —

'ತ್ರ್ಯರ್ಥತಾಂ ಶ್ರುತಿಷು ವಿತ್ತ'

ಎಂದು ಸ್ಪಷ್ಟವಾಗಿ ಸಾರಿದ್ದಾರೆ. ಶ್ರೀಮದಾಚಾರ್ಯರು ಅಭಿಪ್ರಾಯಾನುಸಾರವಾಗಿ ರಾಯರು ವೇದಗಳಿಗೆ ಮೂರು ವಿಧವಾದ ಅರ್ಥಗಳನ್ನು ವಿವರಿಸಿ 'ವೇದಾರ್ಥ ವಿವೃತ್ತಿ' ಎಂಬ ಮಹದ್ ಗ್ರಂಥವನ್ನು ಬರೆದಿದ್ದಾರೆಂದು ತಿಳಿದು ಬರುತ್ತದೆ. ಈ ಗ್ರಂಥ ಉಪಲಬ್ಧವಾಗಿಲ್ಲ. ಇತ್ತೀಚೆಗೆ ಜರ್ಮನಿಯಲ್ಲಿ ದೊರೆತಿದೆಯೆಂಬ ವಿಷಯ ಪ್ರಕಟವಾಗಿದೆ.

ಮಂತ್ರಾರ್ಥ ಮಂಜರಿ

ಈಗ ಉಪಲಬ್ಧವಿರುವ ರಾಯರ 'ಮಂತ್ರಾರ್ಥ ಮಂಜರಿ' ಎಂಬ ವೇದ ವ್ಯಾಖ್ಯಾನವು ಋಗ್ವೇದದ ೪೦ ಸೂಕ್ತಗಳಿಗೆ ಶ್ರೀ ಗುರುಮಧ್ವರು ಪ್ರದರ್ಶಿಸಿದ ರೀತಿಯಲ್ಲಿ ವಿಶಿಷ್ಟ ಪರಿಪಾಟಿಯಿಂದ ವೈಭರಿತವಾಗಿದೆ. ಇದಿಷ್ಟರಿಂದಲೇ ವೇದ ಪುರುಷನ ಅಂತರಂಗದ ಆಶಯ, ಗೂಢರಹಸ್ಯ, ಪದಸ್ವಾರಸ್ಯಗಳನ್ನು ತಿಳಿಯಬಹುದಾಗಿದೆ. ಶ್ರೀ ರಾಘವೇಂದ್ರತೀರ್ಥರ ವೇದಾರ್ಥ ವ್ಯಾಖ್ಯಾನದ ಜಾಡನ್ನೇ ಅನುಸರಿಸಿ ವೈದಿಕ ವೀಥಿಯಲ್ಲಿ ನವೀನ ವಿಕ್ರಮ ಸಾಧಿಸ ಹೊರಟ ಶ್ರೀ ಅರವಿಂದ ಪಂಥೀಯರಾದ ಶ್ರೀ ಕಪಾಲಿ ಶಾಸ್ತ್ರಿಗಳು ತಮ್ಮ ಅಭಿನವ ವೇದಭಾಷ್ಯ ಭೂಮಿಕೆಯಲ್ಲಿ ಶ್ರೀ ರಾಯರ ಉಪಕಾರವನ್ನು ನೆನೆದು, ಅವರ ಮಾರ್ಗದರ್ಶನದಲ್ಲಿಯೇ ತಾವು ಮುನ್ನಡೆದುದಾಗಿ ಹೇಳಿದ್ದಾರೆ.

ತತ್ತ್ವ ಮಂಜರಿ

ಗುರುಮಧ್ವರು 'ಅಣುಭಾಷ್ಯ'ದ ಮೂಲಕ ಮೂವತ್ತಾಲ್ಕು ಚಿಕ್ಕ ಚಿಕ್ಕ ಪದ್ಯಗಳಲ್ಲಿ ಬ್ರಹ್ಮ ಮೀಮಾಂಸಾ ಶಾಸ್ತ್ರದ ಸಮ್ಯಗ್ ದರ್ಶನವನ್ನು ಶಿಷ್ಯರಿಗೆ ಮಾಡಿಸಿದ್ದಾರೆ. ಈ ಕಿಂಡಿಯಲ್ಲಿಯ ಬ್ರಹ್ಮಾಂಡವನ್ನು ಕಾಣಬೇಕಾದರೆ ರಾಯರ 'ತತ್ತ್ವ ಮಂಜರಿ'ಯನ್ನು ಅವಶ್ಯವಾಗಿ ಅಭ್ಯಸಿಸಬೇಕು. ಅಣುಭಾಷ್ಯದಲ್ಲಿ ಅಡಗಿದ ಸಕಲ ವೇದಾಂತಾರ್ಥ, ಭಾಷ್ಯಾರ್ಥಗಳು ರಾಯರ ತತ್ತ್ವಮಂಜರಿಯಲ್ಲಿ ಇವೆ.

ವಾದಾವಲೀ ವ್ಯಾಖ್ಯಾನ

ಟೀಕಾರಾಯರ 'ವಾದಾವಲಿ'ಗೆ ಇದು ರಾಯರ ಟಿಪ್ಪಣಿ ಗ್ರಂಥವು. ವಿಶ್ವ ಮಿಥ್ಯಾತ್ವ ಸಾಧಕವಾದ ಪೂರ್ವಪಕ್ಷ ವಿಕಲ್ಪಗಳನ್ನು ತಾವೇ ಮಾಡಿಕೊಂಡು, ಮಾಯಾಮತ ಸಾಧಕವಾದ ಅನುಮಾನಗಳನ್ನೆಲ್ಲ ತೀವ್ರವಾಗಿ ಖಂಡಿಸಿದ್ದಾರೆ. ಈ ಗ್ರಂಥದಲ್ಲಿ ಮಾಯಾವಾದದ ಬೇರುಗಳನ್ನೇ ಸಡಿಲಿಸಿದ್ದಾರೆ.

ರಾಮಚಾರಿತ್ರ ಮಂಜರಿ

ವಾಲ್ಮೀಕಿ ರಾಮಾಯಣ, ತಾತ್ಪರ್ಯ ನಿರ್ಣಯಾದಿಗಳಲ್ಲಿ ವರ್ಣಿತವಾದ ಶ್ರೀರಾಮಕಥೆಯನ್ನು ಸಾರರೂಪವಾಗಿ ಸಂಗ್ರಹಿಸಿ ಲಘುಕಾವ್ಯ ರಚಿಸಿದ್ದಾರೆ. ಇದೊಂದು ರಾಮಾಯಣದ ಸಾರೋದ್ಧಾರವೆಂದು ಹೇಳಬಹುದು. ನಿತ್ಯಪಾರಾ–ಯಣಕ್ಕೆ ಉಪಯುಕ್ತವಾಗಿದೆ.

ಕೃಷ್ಣ ಚಾರಿತ್ರ ಮಂಜರಿ

ರಾಯರು 'ಅಪರೋಕ್ಷೀ ಕೃತಶ್ರೀಶಃ' ಎಂದರೆ ದೇವರನ್ನು ಕಣ್ಣಾರೆ ಕಂಡವರು. ತಾವು ಸಾಕ್ಷಾತ್ಕರಿಸಿಕೊಂಡು ಶ್ರೀಕೃಷ್ಣನ ಕಥೆಯನ್ನು ಭಾಗವತ, ನಿರ್ಣಯಾದಿ ಗ್ರಂಥಗಳಿಂದ ಸಾರೋದ್ಧಾರ ಮಾಡಿ ಈ 'ಕೃಷ್ಣಚಾರಿತ್ರ ಮಂಜರಿ' ಯಲ್ಲಿ ಹಾಡಿದ್ದಾರೆ.

ಕೀರ್ತನೆ

ಸಂಸ್ಕೃತ ಭಾಷೆಯಲ್ಲಿ ವೇದಾಂತ ಗ್ರಂಥಗಳ ರಾಶಿಯನ್ನೇ ರಚಿಸಿರುವ ರಾಯರು ದಾಸ ಸಾಹಿತ್ಯವನ್ನೂ ಪೋಷಿಸಿ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ದಾಸಕೂಟದ ಧುರೀಣರಾಗಿ, ಅದಕ್ಕೆ ಪ್ರೇರಕ ಶಕ್ತಿಯಾಗಿ ಹರಿದಾಸ ವಾಙ್ಮಯದ ಪ್ರಗತಿಗೆ ಕಾರಣರಾಗಿದ್ದಾರೆ.

ದೇವವಾಣಿಯಾದ ಸಂಸ್ಕೃತದಷ್ಟೇ ಕನ್ನಡಕ್ಕೂ ತಮ್ಮ ದೇವಮಂದಿರದಲ್ಲಿ ಸ್ಥಾನ ಕೊಟ್ಟು ಕನ್ನಡದ ಘನತೆಯನ್ನು ಹೆಚ್ಚಿಸಿದ್ದಾರೆ. ಶ್ರೀರಾಯರು ರಚಿಸಿದ ಒಂದೇ ಒಂದು ಕೀರ್ತನೆ 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದ ತೋರೊ ಮುಕುಂದ' ಎಂಬುದು ಸರ್ವಸುಂದರ ದೇವರ ನಾಮವಾಗಿದೆ. ನಾದ ಮಾಧುರ್ಯ, ಅರ್ಥ ಸೌಂದರ್ಯ, ಭಾವ ಗಾಂಭೀರ್ಯಗಳಿಂದ ದಾಸ ವಾಙ್ಮಯ ವನವನ್ನು ಸುರಭೀಕರಿಸಿದೆ. ಅವರು ಹಚ್ಚಿಟ್ಟ ಈ ಹಣತೆ ಮುಂದಿನ ಹರಿದಾಸರಿಗೆ ನಂದಾದೀಪವಾಗಿ ಬೆಳಗಿ ಭಕ್ತಿ ಸ್ಫೂರ್ತಿಗಳನ್ನಿತ್ತಿದೆ.

★ **ಪಂಡಿತ ಪಂಢರಿನಾಥಾಚಾರ್ಯ ಗಲಗಲಿ**

ಹೆಜ್ಜೆಗಳು

ಇಲ್ಲಿಗೆ ನೀವು ಬಂದಿರಿ
ಬಂದಂತೆ ಬಾದವರೂ ಹೋದಿರಿ
ನಿಮ್ಮ ಹೆಜ್ಜೆಗಳ ನಮಗೆ ಗಂಟನ್ನು ಕೊಟ್ಟು
ಇನ್ನು
ಇಲ್ಲೆ ಹೆಜ್ಜೆಗಳು ಒಂದೇ ಸಮನೆ ಅಳುತ್ತವೆ;
ಇಷ್ಟು ನಮಗೂ ಅಳುಬರಿಸುತ್ತವೆ; ಅಳುತ್ತೇವೆ;
ಅಳಿಸುತ್ತೇವೆ ನಿಮಗಾಗಿ ಜಾಡಿಗೆ ಜನವಿಟ್ಟು ;
ಮೈಕ್ ಹಾಕಿಸಿ ನೆನೆಸಿ ನೆನೆಸಿ ಕಂಬನಿಸಿ ಸೆಕೆಂಡು
ಮಳೆ ಹುಯ್ದಂತೆ ಈಗೀಗಿನ ನಿಮ್ಮ; ಕ್ಷಮಿಸಿ.
ಇನ್ನೊಂದು ಸೆಕೆಂಡಿಗೆ ಗೋಮಯವಿಕ್ಕುತ್ತೇವೆ
ಗುರುತೂ ಸಿಗದಂತೆ

ಬಂದಿರಿ, ಹೋದಿರಿ ; ನಿಜ–
ಹೋಗುವಾಗ ಈ ಗೆರೆ ಈ ಬರೆ ಇಂತು
ಪಟ್ಟೆ ಹಿಡಿದು ಅಳಿದು
ಎಳೆದು ಹೋಗಬಾರದಿತ್ತು, ಮಾತ್ರ
ಲಕ್ಷ್ಮಣನ ಅಪ್ಪನಂತೆ
ಲಕ್ಷಣವಾಗಿ !

ಕ್ಷಮಿಸಿ,
ನಿಮ್ಮ ಹೆಜ್ಜೆಗಳ ಸಾಕಷ್ಟು ಕ್ರಮಿಸಿದ್ದೇವೆ ;
ಕ್ರಮಿಸೀ ಕ್ರಮಿಸೀ ಇಷ್ಟಾಗಿ
ಕೊನೆಗೆ ನಮ್ಮವೇ ಹೆಜ್ಜೆಗಳ ಇಟ್ಟಿದ್ದೇವೆ ;
ಸುಟ್ಟಿದ್ದೇವೆ ನಿಮ್ಮ, ನಿಜ.
ಆದರೆ, ನಮಗೂ ನಮ್ಮದೇ ಆದ ಸ್ವಯಂಭೂ
ಇದೆಯೆಂದು ನೀವು ತಿಳಿದರೆ ಸಾಕು
ತೊನ್ನಾಗಿ ಕಾಡುವ ನಿಮ್ಮ ಹೆಜ್ಜೆಗಳ ಕಾಟ ತಪ್ಪುತ್ತೆ
ಹೊಳ್ಳೆ ಅಗಲಿಸಿ ನಾವೂ ಉಸಿರಾಡುತ್ತೇವೆ; ಬದುಕುತ್ತೇವೆ

ಬಿಟ್ಟುಬಿಡಿ ದಮ್ಮಯ್ಯ
ನಮ್ಮ ಪಾಡಿಗೆ ನಮ್ಮ
ನಮ್ಮ ಹೆಜ್ಜೆಗಳು ನಮಗೆ !

★ ದಿನಕರ ದಿಂಡಾವರ

ವಚನಸಾಹಿತ್ಯ

[೧]

ಈ ಲೇಖನದಲ್ಲಿ ವಚನ ಸಾಹಿತ್ಯದ ಸ್ವರೂಪ, ಲಕ್ಷಣ ಮತ್ತು ಅದರ ಉದ್ದೇಶಗಳನ್ನು ಕಂಡು ಹಿಡಿಯಲು ಪ್ರಯತ್ನಿಸಲಾಗಿದೆ. ವಚನ ಸಾಹಿತ್ಯವು ಶಾಸ್ತ್ರವೆ? ಸಾಹಿತ್ಯವೆ? ಗದ್ಯವೆ ಇಲ್ಲವೆ ಪದ್ಯವೆ? ವಚನಕಾರರು ಉದ್ದೇಶ ಪೂರಿತವಾಗಿ ಸಾಹಿತ್ಯ ರಚಿಸಿದರೇ ಅಥವಾ ಉದ್ದೇಶವಿಲ್ಲದೆ ಅವರು ಆಡಿದ ನುಡಿಗಳನ್ನು ನಾವು ಸಾಹಿತ್ಯವೆನ್ನುತ್ತೇವೆಯೆ?– ಇವೆ ಮೊದಲಾದ ಪ್ರಶ್ನೆಗಳನ್ನು ಚರ್ಚಿಸುವುದು ಪ್ರಸ್ತುತ ಲೇಖನದ ಉದ್ದೇಶವೂ ಆಗಿದೆ. ಈ ಪ್ರಶ್ನೆಗಳಿಗೆ ನಾವು ಉತ್ತರ ಹುಡುಕುವ ಮುನ್ನ ವಚನಕಾರರನ್ನೇ ಪ್ರಶ್ನಿಸಿದರೆ ಅವರ ನುಡಿಗಡಣದಲ್ಲಿಯೇ ಉತ್ತರಗಳನ್ನು ನಾವು ಕಾಣಬಹುದಾಗಿದೆ.

ಕನ್ನಡ ನಾಡಿನ ಶಿವಶರಣರು ಕನ್ನಡದಲ್ಲಿ ವಚನಗಳನ್ನು ಬರೆದು, ಹಾಡಿ, ಪ್ರಸಾರಗೊಳಿಸುವ ಮುನ್ನವೇ "ಆದ್ಯರ ವಚನ"ಗಳು ಉಪಲಬ್ಧವಿದ್ದವೆಂದು ತಿಳಿಯುತ್ತದೆ. ಆದ್ಯರ ವಚನಗಳು ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆಯೂ ಇತರ ನುಡಿಗಳು ಉಪ್ಪು ನೀರಿನ ಬಾವಿಯೆಂತಲೂ ಎಂದು ಬಸವಣ್ಣನವರು ತಿಳಿಸಿದ್ದಾರೆ.[1] ಶರಣರ "ಸೂಳ್ನುಡಿಗಳು" ಕರಿ, ಸಿರಿ, ರಾಜ್ಯಗಳ ಸುಖಕ್ಕಿಂತಲೂ ಹಿರಿದಾದ ಸುಖವನ್ನು ಎಂದರೆ ದೇವರನ್ನೇ ಒದಗಿಸುತ್ತವೆಯೆಂಬುದು ದೇವರ ದಾಸಿಮಯ್ಯನವರ ಅಭಿಪ್ರಾಯವಾಗಿದೆ.[2] ಈ 'ಆದ್ಯರ ವಚನ'ಗಳನ್ನು ಕನ್ನಡನಾಡಿನ ಶಿವಶರಣರ ವಚನಗಳಿಗೆ ಹೋಲಿಸುತ್ತ ಚೆನ್ನಬಸವಣ್ಣನವರು 'ಆದ್ಯರ ಅಱುವತ್ತು ವಚನಕ್ಕೆ' ದಣ್ಣಾಯಕರ ಇಪ್ಪತ್ತು ವಚನ, ಪ್ರಭುದೇವರ ಹತ್ತು ವಚನ, ಅಜಗಣ್ಣನ ಐದು ವಚನ, ಮಹಾದೇವಿಯಕ್ಕಗಳ ಒಂದೇ ವಚನ ಸಮಾನವೆಂದು ಹೇಳುವಲ್ಲಿ[3] ಶಿವಶರಣರ ವಚನಗಳ ಮಾತಿನ ಬೆಲೆಯನ್ನು ತೂಕಮಾಡಿ ಹೇಳಿದುದನ್ನು ಕಾಣುತ್ತೇವಲ್ಲವೆ 'ಆದ್ಯರನ್ನು' 'ನೂತನ'ರಿಂದ ಬೇರ್ಪಡಿಸಿ ಮಾತನಾಡುವ ಧ್ವನಿಯನ್ನು ನಾವು ಗಮನಿಸಬಹುದಾಗಿದೆ. 'ಆದ್ಯರ ವಚನ'ವು ಅವಿದ್ಯಾವಂತನ ಜಿಹ್ವೆಯಲ್ಲಿದ್ದಡೆ ಕಲ್ಕುಡಿಗನ ಕೈಯಲ್ಲಿದ್ದ ಕಲ್ಲು ಮತ್ತು ಉಳಿ ಇದ್ದಂತೆ; ಕಲ್ಲು ಉಳಿಯಿಂದ ರೂಪಕ್ಕೆ ಬಾರದಿದ್ದರೆ ಆ ಕಲ್ಲು, ಆ ಉಳಿ ಇದ್ದೂ ಪ್ರಯೋಜನಕ್ಕೆ ಬಾರದಂತೆ; ಅಂತೆಯೇ ಆದ್ಯರ ವಚನಗಳು

---

೧. ಬ. ವ. ೨೯೧

೨. ದೇ. ದಾ. ವ. ೧

೩. ಚ. ಬ. ವ. ೫೬೩

ಬಾಯಲ್ಲಿದ್ದ ಮಾತ್ರಕ್ಕೆ ಉಪಯುಕ್ತವಲ್ಲ; ಅವು ಮನುಷ್ಯನನ್ನು 'ರೂಪ'ಕ್ಕೆ ತರಬೇಕೆಂಬುದು ಸಿದ್ಧರಾಮನ ವಚನವಾಗಿದೆ;[೪] ಅಲ್ಲದೆ ಸಿದ್ಧರಾಮೇಶ್ವರನು "ಆದ್ಯರಾಜ್ಞೆಯೆಂಬುದು ಈಶ್ವರಗೆ ಜ್ಯೋತಿ'ಯೆಂದೂ, 'ಆದ್ಯರ ವಚನವೆಂಬುದು **ಬಹುವೇದ್ಯ**'ವೆಂದೂ ತಿಳಿಸಿದ್ದಾನೆ[೫] ಮುನ್ನಿನ 'ಆದ್ಯರ ವಚನ': ಲಿಂಗದ ನಡೆ, ಲಿಂಗದ ನುಡಿ, ಜಂಗಮದ ನಡೆ, ಜಂಗಮದ ನುಡಿ, ಪ್ರಸಾದದ ನಡೆ, ಪ್ರಸಾದದ ನುಡಿ; ಶ್ರುತಿಯ ತೋಱು ನುಡಿವರು; ಅಲ್ಲಾ ಎಂದಡೆ ದೃಷ್ಟವ ತೋಱಿ ನಡೆವರು! ಇಂತಪ್ಪ 'ಪುರಾತನರ ವಚನ'ಕ್ಕೆ ಅನುಸಾರಿಯಾಗಿ ಮಾಡಿದೆನೆಂಬ ಕರ್ಮಿಯನೇನೆಂಬೆ? ಲಿಂಗಾನುಭಾವಿಗಳು ಕೇಳಿದರೆ 'ಚೀಃ' ಎಂಬರು; 'ಆದ್ಯರ ವಚನವೆಂಬುದು ಬಟ್ಟೆಯ ಸಂಬಳವೆ ಮನೆಮನೆಯ ಹೊಕ್ಕು ಬೋಧಿಸುವಂತಾಗಿ? ಮನೆಮನೆಯ ಹೊಕ್ಕು ಮಚ್ಚಿಸುವಂತಾಗಿ?'[೬] ಎಂದು ಚೆನ್ನಬಸವಣ್ಣನವರು ನುಡಿದಿದ್ದಾರೆ. ಶಿವಶರಣರು ಕಟ್ಟುನಿಟ್ಟಾಗಿ ಕನ್ನಡ ನಾಡಿನವರನ್ನೇ 'ಆದ್ಯ'ರೆಂದು 'ಪುರಾತನ'ರೆಂದು ಕರೆದಂತಿಲ್ಲ. ಅವರು ತಮಗಿಂತ ಹಿಂದೆ ಇದ್ದ ಶಿವಶರಣರನ್ನು ನೆನೆದು ಆದ್ಯರೆಂದು ಕರೆದು, ಅವರು ರಚಿಸಿದ ಶಿವಭಕ್ತಿಯ ಅನುಭಾವದ ಸೂಕ್ತಿಗಳನ್ನು ಶಿವಶರಣರು 'ವಚನ'ಗಳೆಂದು 'ಗೀತ'ಗಳೆಂದು ಕರೆದಿರುವಂತೆ ಗೋಚರಿಸುತ್ತದೆ; ಅವರು ಕೇವಲ ಕನ್ನಡದಲ್ಲಿ ವಚನಗಳನ್ನು ಬರೆದು ವಚನಕಾರರೆಂದು ಪರಿಚಿತರಾದವರಲ್ಲ. ಅವರಲ್ಲಿ ಕೆಲವರು ಸಂಸ್ಕೃತದಲ್ಲಿ ಬರೆದಿದ್ದರೆ ಇನ್ನು ಕೆಲರು ತಮಿಳು ಮತ್ತೆ ಕೆಲರು ತೆಲುಗಿನಲ್ಲಿ ಬರೆದವರು ಇರುವಂತೆ ತಿಳಿದು ಬರುತ್ತದೆ. ಪುರಾತನ ಶಿವಭಕ್ತರ ಆಡಿದ 'ಸಂಸ್ಕೃತೋಕ್ತಿ'ಗಳಿಗೂ ಶಿವಶರಣರು '**ವಚನ**'ವೆಂದು ಕರೆದುದಕ್ಕೆ ಚೆನ್ನಬಸವಣ್ಣನವರ ಈ ಒಂದು ವಚನವನ್ನೇ ಉದಾಹರಿಸಬಹುದು:

> ದ್ವಿಜರು ಪ್ರತಿಸಾಂವತ್ಸರಿಕ ಶ್ರಾದ್ಧವ ಮಾಡುವಲ್ಲಿ
> 'ವಿಶ್ವೇದೇವಾನುಜ್ಞಯಾ ಪಿತೃಕಾರ್ಯೇ ಪ್ರವರ್ತಯೇತ್'–
> ಎಂಬ '**ವಚನವಿಡಿದು**'
> 'ಗಯಾಯಾಂ ಶ್ರೀ ರುದ್ರಪಾದೇ ದತ್ತಮಸ್ತು'-ಎಂದು ಪಿಂಡವನಿಕ್ಕಿ,
> 'ವಸ್ತುರುದ್ರಾರ್ಕರೂಪೇಣ ಮಧ್ಯ ಪಿಂಡಸ್ತು ಪುತ್ರತಃ
> ವೇದೋಕ್ತರುದ್ರ ನಿರ್ಮಾಲ್ಯಂ ಕಿಂ ಪುನರ್ಬಹುಭಾಷಣೇ'–
> ಎಂದು ರುದ್ರಪಿಂಡದಿಂದ ಜನಿಸಿ, 'ಜನ್ಮನಾ ಜಾಯತೇ ಶೂದ್ರಃ'-
> ಎನಿಸಿಹೆನೆಂಬ

---

೪. ಸಿ. ರಾ. ವ. ೧೦೨

೫. ಸಿ. ರಾ. ವ. ೮೬೦, ೮೬೧

೬. ಚ. ಬ. ವ. ೮೪೨, ೧೧೨೮.

ಶ್ರುತಿಯ ಪಡೆದು ಸಾವಿತ್ರಪ್ರದಾನ ಗಾಯತ್ರೀ ಉಪದೇಶವ ಮಾಡಿ,
' ಮಾನಸೋಕ್ತೇ ತನಯೇ' - ಎಂಬ ಶ್ರುತಿಮಂತ್ರದಿಂದ
ನಿರ್ಮಾಲ್ಯ ಪಾದೋದಕ ಪ್ರಸಾದವ ಧರಿಸಬಾರದೆಂಬ
ಶಾಪಹತರಾದ ಶ್ರುತಿಬಾಹ್ಯರನೇನೆಂಬೆನಯ್ಯಾ—
ಕೂಡಲಚೆನ್ನಸಂಗಮದೇವಾ?'[೭]

ಇಲ್ಲಿ ' ಸೂಕ್ತಿ ' ಎಂಬರ್ಥದಲ್ಲಿ ' **ವಚನ** 'ವೆಂಬ ಪದವನ್ನು ಬಳಸಲಾಗಿರುವುದನ್ನು ಕಾಣುತ್ತೇವೆ. ಆದ್ಯರಲ್ಲಿ ' ಕೆಲವರು ' ಸಂಸ್ಕೃತ ಗದ್ಯ ಪದ್ಯ ರಚಕರೂ, ಹಲವರು ಕನ್ನಡ ವಚನಕಾರರೂ ಆಗಿದ್ದರು. ಇವರ ದಿವ್ಯಸಾಹಿತ್ಯವನ್ನೇ ಬಸವಾದಿ ಪ್ರಮಥರು 'ಆದ್ಯರ ವಚನ'ವೆಂದು ಭಕ್ತಿಯಿಂದ ಕೊಂಡಾಡಿರುವುದು. ಆದ್ಯರ ವಚನ ಸಾಹಿತ್ಯವು ಕ್ರಿ.ಶ. ೯-೧೦ ಶತಮಾನದಷ್ಟು ಹಿಂದಿನದು'[೮] ಎಂದು ಡಾ. ಎಲ್. ಬಸವರಾಜು ಅವರು ಅಭಿಪ್ರಾಯ ಪಡುತ್ತಾರೆ.* ಅವರ ಈ ವಚನ ಸಾಹಿತ್ಯವು ಗದ್ಯಪದ್ಯಗಳಲ್ಲಿದ್ದುದರಿಂದ, ಕನ್ನಡದಲ್ಲಿಯೂ ಅದೇ ತೆರನಾದ ಸೂಕ್ತಿಗಳನ್ನು ರಚಿಸಿ ಶರಣರು ಅದನ್ನು 'ವಚನ ಸಾಹಿತ್ಯ'ವೆಂದು ಕರೆದಿದ್ದಾರೆ'

ಈ ಕನ್ನಡ ವಚನ ಸಾಹಿತ್ಯವು 'ಗದ್ಯ'ದಲ್ಲಿ 'ಪದ್ಯ'ದಲ್ಲಿ ಮತ್ತು 'ಹಾಡು.ಳಲ್ಲಿ ಹೊರಹೊಮ್ಮಿರುವುದನ್ನು ನಾವು ಕಾಣುತ್ತೇವೆ. ಬಸವಣ್ಣನವರು '**ಆನು ಒಲಿದಂತೆ ಹಾಡುವೆ**' ಎಂದರು;[೯] ಸಿದ್ಧರಾಮೇಶ್ವರರು ಒಂದು ವಚನದಲ್ಲಿ:

" ಅಱುವತ್ತೆಂಟುಸಾವಿರ ವಚನಂಗಳ '**ಹಾಡಿಹಾಡಿ**'
ಸೋತಿತೆನ್ನ ಮನ ನೋಡಯ್ಯಾ ;
' **ಹಾಡುವುದೊಂದೆ ವಚನ** ', ನೋಡುವುದೊಂದೆ **ವಚನ** ;
ವಿಷಯಂಬಿಟ್ಟು ನಿರ್ವಿಷಯನಾಗುವದೊಂದೆ **ವಚನ** "[೧೦]

-ಎಂದು ಹೇಳಿರುವುದನ್ನು ನಾವಿಲ್ಲಿ ಗಣನೆಗೆ ತೆಗೆದುಕೊಳ್ಳಬೇಕು; ಚನ್ನಬಸವಣ್ಣನವರು : ' ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು '**ಗೀತಮಾತು**' ಎಂಬ ಜ್ಯೋತಿಯ ಬೆಳಗಿಟ್ಟರು, ಕೂಡಲ ಚನ್ನಸಂಗಯ್ಯ ನಿಮ್ಮ ಶರಣರು'[೧೧] ಎಂದರೆ, ದೇವರ ದಾಸಿಮಯ್ಯನವರು ' **ಸೂಳ್ನುಡಿ** ' ಎಂದು ಕರೆದರು. 'ಜ್ಞಾನ

---

೭. . ಚ.ಬ ವ. ೪೪೯.

೮. ಅ. ವ. ಚಂ. ಪೀಠಿಕೆ, ಪುಟ ೧೦-೧೧.

* ಕನ್ನಡ ವಚನ ಸಾಹಿತ್ಯವೂ ಅಷ್ಟು ಪುರಾತನದ್ದೆಂದು ಹೇಳುವದು ದುಸ್ತರವಾದೀತು.

೯. ಬ. ವ. ೪೯೪.

೧೦. ಸಿ.ರಾ.ವ. ೧೦೬; "ಎರಡೆಂಬತ್ತುಕೋಟಿ ವಚನವ ಹಾಡಿ ಹಂಬಲಿಸಿ ತ್ರೆನ್ನಮನವು "; ಅ. ವ. ಚಂ. ವ. ೬೨೭.

೧೧. ಚೆ. ಬ. ವ. ೬೮೭

ದೀಪ್ತಿಯು ಬೆಳಗುವ ತೈಲವಾವುದೆಂದಡೆ 'ಶಿವಶರಣರ' ನುಡಿಗಡಣದ ಒಸರು; ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ'[೧೨] ಎಂಬ ಮಾತನ್ನು ಮನದಂದರೆ 'ವಚನ ಸಾಹಿತ್ಯಕ್ಕೆ 'ಶಿವಶರಣರ ನುಡಿಗಡಣದ ಒಸರು' ಎಂಬ ತಿಳುವಳಿಕೆಯೂ ಇದೆ. ಈ ಎಲ್ಲ ಮಾತುಗಳನ್ನು ಅವಲೋಕಿಸಿದರೆ 'ವಚನ ಸಾಹಿತ್ಯ' ಎಂಬ ಪದವು ಬಹು ವಿಶಾಲಾರ್ಥವನ್ನು ಪಡೆದ ಪದವಾಗಿದ್ದು ಅದು ಗದ್ಯ, ಪದ್ಯ, ಗೀತ, (ಹಾಡು)ಗಳೆಲ್ಲವನ್ನು ಒಳಗೊಂಡಿತ್ತೆಂದೂ ಅದೊಂದು ಕನ್ನಡ ಸಾಹಿತ್ಯದ ವಿಶೇಷರೂಪವೆಂದೂ ಹೇಳಬಹುದು. ಶ್ರೀ ನಿಜಗುಣ ಶಿವಯೋಗಿಗಳು ತಮ್ಮ ಹಾಡುಗಳನ್ನು'ಸ್ವರವಚನ'ಗಳೆಂದು ಕರೆದಿರುವುದನ್ನುಇಲ್ಲಿ ಸ್ಮರಿಸಿಕೊಳ್ಳಬೇಕು.

[೨]

ವಚನಕಾರರು ತಾವು ವಚನಗಳನ್ನು ರಚಿಸುವ ಮುನ್ನ ತಮಗಿಂತ ಪೂರ್ವದ ಹಲವು ಸಾಹಿತ್ಯದ ಮತ್ತು ಶಾಸ್ತ್ರ ಮೊದಲಾದವುಗಳನ್ನು ಉಲ್ಲೇಖಿಸುವುದು ಮಾತ್ರವಲ್ಲದೆ ಸಾಹಿತ್ಯದ ಇತರ ರೂಪಗಳಿಗೂ ಮತ್ತು ವಚನ ಸಾಹಿತ್ಯಕ್ಕೂ ಇರುವ ಭೇದಗಳನ್ನೂ ಸ್ಪಷ್ಟಪಡಿಸಿದ್ದಾರೆ. ಕೇವಲ ಒಬ್ಬಿಬ್ಬರು ಮಾತ್ರವಲ್ಲ ಹಲವಾರು ವಚನಕಾರರು ಇಂತಹ ಮಾತುಗಳನ್ನು ಆಡಿದ್ದಾರೆ. ಅಲ್ಲಮ ಪ್ರಭುಗಳು 'ವಸ್ತುಕ' 'ವರ್ಣಕ' 'ತ್ರಿಸ್ಥಾನ' (ಭಾಷ್ಯ?) ಇವುಗಳೊಡನೆ ವಚನ ಸಾಹಿತ್ಯವನ್ನು ಹೋಲಿಸುತ್ತ ಆಡಿದ ನುಡಿಗಳು :

> "ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳು
> ಇತ್ತಿತ್ತಲಲ್ಲದೆ ಅತ್ತತ್ತಲಾರು ಬಲ್ಲರು?
> ಇವರೆತ್ತಲೆಂದರಿಯರು; ಗಳಿವಿಂಡುಗೆಡೆವರು;
> ನಿಮ್ಮನೆತ್ತ ಬಲ್ಲರು ಗುಹೇಶ್ವರಾ ?"[೧೩]

ಈ ವಚನದಲ್ಲಿ 'ವಸ್ತುಕ' 'ವರ್ಣಕ' 'ತ್ರಿಸ್ಥಾನ'ದ ಸಾಹಿತ್ಯವು ಸ್ವಾನುಭಾವದಿಂದ ದೂರವಿದ್ದುದರಿಂದ ಅದು ಭಗವಂತನ ಸಾಕ್ಷಾತ್ಕಾರ ಬಯಸುವವರಿಗೆ ಬಹುದೂರ ನಿಲ್ಲುವಂತಹದೆಂದು ತಿಳಿಸಿ, ಗುಹೇಶ್ವರನನ್ನು ತಿಳಿಯಲು ವಚನ ಸಾಹಿತ್ಯವೇ ಸಾಧನವೆಂದಿದ್ದಾರೆ. ಇಂತಹ ವಚನ ಸಾಹಿತ್ಯವು ಪಂಡಿತರ ಪಾಂಡಿತ್ಯ ಪ್ರದರ್ಶನಕ್ಕೆಂದು ಹೊರಹೊಮ್ಮಿದುದಲ್ಲ. ವಚನಕಾರರು :

> "ಅಕ್ಷರದಭ್ಯಾಸವ ಮಾಡಿ, ಬರೆವ, ತೊಡೆವ ಪರಿ ಇನ್ನೆಂತೊ
> ಸ್ವರೂಪೆಂದಾವುದು ನಿರೂಪೆಂದಾವುದೆಂದರಿಯರಾಗಿ?
> ಆದಿಸಿರಾಳ, ಮಧ್ಯಸಿರಾಳ, ಊರ್ಧ್ವಸಿರಾಳ ಗುಹೇಶ್ವರಾ"[೧೪]

---

೧೨. ಚೆ. ಬ. ವ. ೧೧೨೭

೧೩. ಅ. ವ. ಚಂ. ವ. ೬೪೦

೧೪. ಅ. ವ. ಚಂ. ವ. ೬೪೨. "ಜಾಣ ಮಯೂರನಂತೆ ಬಣ್ಣಿಸ ಬಲ್ಲೆನೆ?"–ಬ.ವ. ೩೧೯

ಎಂದಿರುವುದನ್ನು ಗಣನೆಗೆ ತೆಗೆದುಕೊಂಡರೆ ಅವರು "ಕವಿತೆ ಬರೆಯಬೇಕು" "ಪಾಂಡಿತ್ಯ ಹೊರಹೊಮ್ಮಿಸಬೇಕು" ಎಂಬ ಭಾವನೆಯಿಂದ ಬರೆಯಲಿಲ್ಲ ವೆಂಬುದನ್ನು ಸ್ಪಷ್ಟಪಡಿಸಿರುವುದಲ್ಲದೆ ವಚನ ಸಾಹಿತ್ಯದ ಉದ್ದೇಶವು ಘನ ಮಹಿಮನಾದ ಭಗವಂತನ "ಸ್ವರೂಪ" "ನಿರೂಪ"ವನ್ನು ಅರಿತುಕೊಳ್ಳುವ ಉದ್ದೇಶದಿಂದ ವಿರಚಿಸಲಾಗಿದೆಯೆಂದು ತಿಳಿಸಿದ್ದಾರೆ. ಕವಿಗಳು ಕಾವ್ಯದ ಘನತೆಗೆ ಬರೆಯುವುದು, ಬರೆದುದು ಸರಿಯಾಗಿಲ್ಲದಿದ್ದರೆ ಅಳಿಸುವುದು, ಅಳಿಸಿ ಮತ್ತೆ ಮತ್ತೆ ಬರೆಯುವುದು ರೂಢವಾಗಿತ್ತೆಂಬುದು ಕುಮಾರ ವ್ಯಾಸನ "ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ...." ಎಂಬ ಪದ್ಯದಿಂದಲೂ ನಮಗೆ ಗೊತ್ತಾಗುತ್ತದೆ. ಆದಯ್ಯನು ಒಂದು ವಚನದಲ್ಲಿ ವಚನ ಸಾಹಿತ್ಯವನ್ನು ಕಾವ್ಯ, ನಾಟಕಗಳೊಡನೆ ಹೋಲಿಸುತ್ತ ವಚನ ಸಾಹಿತ್ಯದ ಬಗೆಗೆ ಇಂತು ನುಡಿದಿದ್ದಾನೆ:

ಹಿಂದಣ ಕಥೆಯ ಮುಂದೆ ಹೇಳುವ "**ಕಾವ್ಯ**"ವಲ್ಲ ;
ಮುಂದಣ ಕಥೆಯ ನಿಂದು ಹೇಳುವ "**ನಾಟಕ**"ವಲ್ಲ ;
ಬಂದ ಶಬ್ದವ ಸಂದಿಲ್ಲದುಸುರುವೆನೆಂಬ ಅಭ್ಯಾಸಿಯಲ್ಲ ;
"**ಛಂದ**" "**ನಿಚ್ಛಂದ**" ವೆಂಬ ಸಂದೇಹಿಯಲ್ಲ ;
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರ ಸ್ವಯ **ಅನುಭಾವದ ಪರಿ ಬೇರೆ**[೧೫]

'ಶರಣರ ಸ್ವಯ ಅನುಭಾವದ' ನುಡಿಗಳ ಪರಿಯೇ ಬೇರೆ; ಕಾವ್ಯ, ನಾಟಕ, ಶಾಸ್ತ್ರ ಮೊದಲಾದವುಗಳ ಪರಿಯೇ ಬೇರೆ. ಆ ಎರಡರ ಉದ್ದೇಶಗಳೇ ಭಿನ್ನಭಿನ್ನ ವಾಗಿರುವಾಗ ಅವುಗಳೊಡನೆ ಹೋಲಿಸುವುದಾದರೂ ಎಂತು ಎಂಬ ಭಾವನೆಯು ಈ ವಚನದಲ್ಲಿ ಸ್ಪಷ್ಟವಾಗಿದೆ. ಕಾವ್ಯ ನಾಟಕಗಳ ಪ್ರಥಮ ಉದ್ದೇಶವೇ ಮನರಂಜನೆ; ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವುದು; ಶಾಸ್ತ್ರದ ಉದ್ದೇಶವು ವಿಷಯವನ್ನು ಬುದ್ಧಿಗಮ್ಯವಾಗುವಂತೆ ತಿಳಿಸುವುದು; ಆದರೆ ಅನುಭಾವವು ಶಿವನೊಡನೆ ಬೆರೆವ ಉದ್ದೇಶವನ್ನು ಹೊಂದಿದುದು. ಲೌಕಿಕವನ್ನು ಅಲೌಕಿಕದೊಡನೆ ಹೋಲಿಸಲಾಗದು. ಕಾವ್ಯಾನಂದವು ಒಂದು ಸ್ತರಕ್ಕೆ ಸಂಬಂಧಿಸಿದುದಾದರೆ ಅನುಭಾವ ಸಾಹಿತ್ಯದ ಪರಿಣಾಮವು ಅವರ್ಣನೀಯವಾದುದು ಎಂಬುದೇ ಈ ಮಾತುಗಳ ಆಶಯವಾಗಿದೆ. ಈ ಕಾರಣದಿಂದ ಅವರಿಗೆ ಕಾವ್ಯದ ಅಲಂಕಾರಾದಿಗಳು ಅಷ್ಟೊಂದು ಆವಶ್ಯಕವೆನಿಸಲಿಲ್ಲ. ಹೀಗಾಗಿ ಸಿದ್ಧರಾಮನು:

"**ಕುತ್ಸಿತ ಕಾವ್ಯಾಲಂಕಾರ ನೋಡುವರ ನೋಡಿ ನೋಡಿ,**
ನುಡಿಮಣ್ಣ ಹೊಯ್ಯದೆ ಮಾಣ್ಬನೆ ಮಹಾದೇವ ಕಪಿಲ ಸಿದ್ಧಮಲ್ಲಿಕಾರ್ಜುನ?"[೧೬]

ಎಂದು ಕಟುವಾಗಿಯೇ ನುಡಿಯಬೇಕಾಯ್ತು. ಶಿವಶರಣರ ವಚನಗಳು ಕಾವ್ಯಕ್ಕಾಗಿ, ಅಲಂಕಾರಕ್ಕಾಗಿ ನಿರ್ಮಾಣಗೊಳ್ಳಲಿಲ್ಲ. ಹೀಗಾಗಿ ವಚನ ಸಾಹಿತ್ಯವನ್ನು

---

೧೫. ಆ. ವ. ೬೪೩, ೧೬. ಸಿ. ರಾ. ವ. ೧೦೭.

ಕಾವ್ಯದ ಕಕ್ಷೆಯಲ್ಲಿ ವಚನಕಾರರನ್ನು ಕವಿಗಳೆಂದು, ನೇರವಾಗಿ ಪರಿಗಣಿಸುವುದು ತಪ್ಪಾದೀತೆಂದೆನಿಸುತ್ತದೆ. ಇತರ ಕೃತಿ ರಚನೆಗಿಂತ ವಚನರಚನೆಯ ಉದ್ದೇಶವೇ ಭಿನ್ನವಾಗಿದ್ದು ವಚನ ರಚನೆಯ ಮೂಲ ಉದ್ದೇಶವನ್ನು ಬಸವಣ್ಣನವರು ಇಂತು ವಿವರಿಸಿದ್ದಾರೆ:

> "ವಚನದ ರಚನೆಯ ಅನುಭಾವವ ಬಲ್ಲೆನೆಂದೆಂಬರು
> "ವಚನ" ವಾವುದು, "ರಚನೆ" ಯಾವುದು, "ಅನುಭಾವ" ವಾವುದು
> ಹೇಳಿರಣ್ಣಾ !
> ವಚನ: ಆತ್ಮತೃಪ್ತಿಯನರಿಯ ಬಲ್ಲಡೆ;
> ರಚನೆ: ಸ್ಥಾವರ ಜಂಗಮದಲ್ಲಿ ದಯವಾಗಿರಬಲ್ಲಡೆ:
> ಅನುಭಾವ: ಅರಿಷಡ್ವರ್ಗಂಗಳ ಇಚ್ಛೆಗೆ ಹರಿಯದಿರಬಲ್ಲಡೆ·
> ಇಂತಲ್ಲದೆ ವೇದಶಾಸ್ತ್ರಾಗಮಂಗಳ ಬಲ್ಲೆನೆಂದು
> ನುಡಿವಾತನನುಭಾವಿಯೇ? ಅಲ್ಲ.
> ಆತನು ಇದಿರ ನಂಬಿಸಿ ಉಂಬ ಉದರಪೋಷಕನಯ್ಯಾ,
> ಕೂಡಲ ಚನ್ನಸಂಗಮದೇವಾ[೧೭]"

ವಚನ ಸಾಹಿತ್ಯವು ರಚನೆಯ ಕೌಶಲವನ್ನು ತೋರಿಸಲು ಹುಟ್ಟಿದುದಲ್ಲ; ಉದರ ಪೋಷಣೆಗೆ ಹೊರಹೊಮ್ಮಿದುದಲ್ಲ; ಆತ್ಮ ತೃಪ್ತಿ, ಅರಿಷಡ್ವರ್ಗ ನಿರ್ಮೂಲನೆಗಳಿಗೆ ಹೊರಹೊಮ್ಮಿದುದು ಎಂಬುದು ಈ ವಚನದ ತಾತ್ಪರ್ಯವಾಗಿದೆ. ಅದು "ದೇವಲೋಕಕ್ಕೆ ಬಟ್ಟೆ". ಶರಣರು "ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು ಗೀತ ಮಾತೆಂಬ ಜ್ಯೋತಿಯ ಬೆಳಗಿಟ್ಟರು."[೧೮] "ಶಬ್ದಸೋಪಾನದ ಬಲದಿಂದ ನಿಶ್ಶಬ್ದ ಸೋಪಾನವ ಕಟ್ಟಿ ನಡೆಸಿದವರು ನಮ್ಮ ಪುರಾತನರು"[೧೯]. "ಆದ್ಯರ ವಚನವೇನು ಬಟ್ಟೆಯ ಸಂಬಳವೇ ಮನೆಮನೆಯ ಹೊಕ್ಕು ಬೋಧಿಸುವಂತಾಗಿ?"– ಎಂದಿದ್ದಾನೆ ಚೆನ್ನಬಸವಣ್ಣ.[೨೦] ಅವನ ಹೇಳಿಕೆಯಂತೆ, ವಚನ ಸಾಹಿತ್ಯವು "ತಾನೆಂಬ ನಿಶ್ಚಯವ ತೋರುವುದು; ಹೀನ ಜಡತೆಯ ಮುಸುಕಿನ ಗ್ರಂಥಿಯನಳಿವುದು; ಭಾನು ಬಂದಡೆ ಕತ್ತಲೆ ಹರಿವಂತೆ ಬುಧರೊಳು ನೆನೆದಿರಲು ಕರ್ಮ ಹರಿವುದು."[೨೧] ಅನುಭಾವಿಗಳಾದ ಶಿವಶರಣರು ಬರಹಪಟ್ಟು ಬರೆಯಬೇಕೆಂಬ ಹಂಬಲದಿಂದ ಪ್ರೇರಿತರಾದವರಲ್ಲ. "ಮಾತಿನ ಮಾತಿನ ಗೀತಾಂಗದಲ್ಲಿ ಸುಜಾಣನಾಗಬಹುದು; ಶ್ರೋತ್ರದ ಸೊಗಸಿನಲ್ಲಿ, ಪ್ರಾಜ್ಞ ಪ್ರವೀಣತೆಯಲ್ಲಿ ಜಾಣನಾಗಬಹುದು; ಅಂತರಂಗ

---

೧೭. ಚ. ಬ. ವ. ೧೧೦೩
೧೮. " ೬೮೭
೧೯. ಅದೇ ವಚನ
೨೦. ಚ. ಬ. ವ. ೧೧೨೮
೨೧. " ೧೧೨೭

ಬಹಿರಂಗವನಱಿಯಬಹುದು; ಆಗಮ ಪುರಾಣ ಶ್ರುತಿಸ್ಮೃತಿಗಳಿಗೆ ಅತರ್ಕ್ಯನಾಗಿರಬಹುದು; ಭೂತವಿಕಾರದ ಪ್ರಕೃತಿ ಸ್ವಭಾವದ ಭ್ರಾಂತಿಯಳಿದಿರಬಹುದು; ಕಾಂತೆಯ ರತಿಗುಣ ವರ್ಜಿತನಾಗಿ ಕಾಶೀಕ್ಷೇತ್ರವಾಸಿಯಾಗಿರಬಹುದು; ಎನ್ನೊಡೆಯ **ಕೂಡಲ ಚನ್ನಸಂಗನ ನಚ್ಚಿನ ನೆಚ್ಚಿನ ಇಚ್ಛಾವಶವರ್ತಿಯಾಗಿರಬಾರದು ಲಿಂಗಾನುಭವಿಗಳಿಗಲ್ಲದೆ.**"[೨೨] ಎಂದ ಮೇಲೆ ಅನುಭಾವದ ನುಡಿ ಹೊರಹೊಮ್ಮುವುದು ಬಹು ಪ್ರಯಾಸಕರವೆಂದಂತಾಯಿತು. ಇಂತಹ ಅನುಭಾವಿಗಳ ಅನುಭಾವದ ನುಡಿಗಡಣವೇ ವಚನ ಸಾಹಿತ್ಯವಾಗಿದೆಯೆಂದಂತಾಯಿತು. ವಚನ ಸಾಹಿತ್ಯವು 'ಲಿಂಗದ ನಡೆ ಲಿಂಗದ ನುಡಿಯಾಗಿದೆ' ಅದು ದೈವಸಾಕ್ಷಾತ್ಕಾರದಲ್ಲಿ ನಡೆದ ಅನುಭಾವಿಗಳ ಆತ್ಮ ಪರೀಕ್ಷೆಯ ನುಡಿಗಡಣವಾದುದರಿಂದ ಅದನ್ನು ಅರಿತುಕೊಳ್ಳಲು ಅಂತಹರೇ ಯೋಗ್ಯರೆಂಬುದನ್ನು ವಚನಕಾರರು ಇಂತು ತಿಳಿಸುತ್ತಾರೆ:

"ನವಿಲಾಡಿತೆಂದು ಕೆಂಬೋತ ಪಕ್ಕವ ತಱಿಕೊಂಡಂತೆ,
ಹುಲಿಯ ಬಣ್ಣಕ್ಕೆ ನರಿ ಮೈಯ ಸುಟ್ಟುಕೊಂಡಂತೆ,
ಕೋಗಿಲೆ ಸರಗೆಯ್ದುದೆಂದು ಕಾಗೆ ಕಱೆದಂತೆ,
ಲಿಂಗನಿಷ್ಠಾಂಗಿ **'ವಚನ ಹಾಡಿದರೆ'** ಒಪ್ಪುವನಲ್ಲದೆ
ನಿಷ್ಠೆಹೀನರು **'ಓದಿ ಹಾಡಿದರೆ'**
ನಳ್ಳಿಗುಳ್ಳೆಯ ತಿಂದನರಿ ಹಳ್ಳದ ತಡಿಯಲ್ಲಿ
ಬಳ್ಳಿಟ್ಟು ಬಗುಳಿದಂತೆ ಎಂದು ಪಾಟ ಮಾಡೆನಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ"[೨೩]

ವಚನಗಳನ್ನು ಹಾಡಲು, ವಚನಗಳನ್ನು ಓದಲು ಲಿಂಗನಿಷ್ಠೆ ಅತ್ಯಾವಶ್ಯಕವೆಂಬುದನ್ನು ಸ್ಪಷ್ಟಪಡಿಸುತ್ತದೆ.

ವಚನಗಳಲ್ಲಿ **"ಶಿವವಚನ" "ಗುರುವಚನ" "ಪುರಾತನರ"** ವಚನಗಳೆಂದು ಹಾವಿನಾಳ ಕಲ್ಲಯ್ಯನು ಮೂರು ರೀತಿಯ ವಿಂಗಡನೆ ಮಾಡಿದ್ದಾನೆ. ಶಿವವಚನಗಳು ಶಿವನಿಂದಲೇ ಉಕ್ತವಾದ ನುಡಿಗಳು. ಶಿವನು ಹೇಳಿದನೆಂದು ಪುರಾಣದಲ್ಲಿ ಉಕ್ತವಾಗಿರುವ ಮಾತುಗಳೇ ಶಿವವಚನ; ಗುರುಗಳಿಂದ ಉಕ್ತವಾಗಿರುವ ಮಾತುಗಳೇ ಗುರುವಚನ; ಪುರಾತನ ಶಿವಶರಣರ ನುಡಿಗಳೇ ಪುರಾತನರ ವಚನಗಳು; "ಈ ವಚನಗಳನ್ನು ಕೇಳಿ ಬದುಕಿರಯ್ಯಾ: ತನು ಕರಗಿ, ಭಾವ ಬೆಚ್ಚು, ಶರಣರಲ್ಲಿ **ಅನುಭಾವವ ಕೇಳಿದರೆ,** ಅದೇ ಮುಕ್ತಿ ನೋಡಿರೇ. ಇಂತಲ್ಲದೆ ಮನವ್ಯಾಕುಲವಾಗಿ 'ಗೀತಂಗಳ' ತನುಮುಟ್ಟಿ ಕೇಳಿದಡೆ ಉಪದೇಶವೆಂತು ಸಲುವುದಯ್ಯಾ ಮಹಾಲಿಂಗ ಕಲ್ಲೇಶ್ವರಾ? ಗುರುವಚನ ಪರಾಙ್ಮುಖರಿಗೆ

೨೨. ಚ. ಬ. ವ. ೮೬೪
೨೩. ತೋ. ಸಿ. ಶಿ. ವ. ೨೧೯

ಎಂದೆಂದೂ ಭವಹಿಂಗದು ನೋಡಾ!"[೨೪] ಎಂದಿದ್ದಾನೆ ಹಾವಿನಾಳ ಕಲ್ಲಯ್ಯ. ತನುಮನಗಳ ವ್ಯಾಕುಲತೆಗಳನ್ನು ಕಳೆದು, ಅನುಭಾವಿಯನ್ನಾಗಿ ಮಾಡಿ ಮೋಕ್ಷವ ದೊರಕಿಸಿ ಕೊಡುವುದೇ ವಚನ ಸಾಹಿತ್ಯದ ಗುರಿಯಾಗಿದೆ. ವಚನ ಸಾಹಿತ್ಯವು ಕೇವಲ ವಾಗಾಡಂಬರದ ವಾಗ್ರಚನೆಯಲ್ಲ. "ವಾಗ್ರಚನೆಯೆಂಬುದು ಕರ್ಣಾಟಿ; ಆದ್ಯರಾಜ್ಞಿಯೆಂಬುದು ಈಶ್ವರಂಗೆ ಜ್ಯೋತಿ"ಯೆಂದಿದ್ದಾನೆ ಸಿದ್ಧರಾಮ ಶಿವಯೋಗಿ.[೨೫] ಅಲ್ಲದೆ ಅವನು, "ವಚನಾನುಭವ ವಾಗ್ರಚನೆಯಲ್ಲ: ವಚನಾನುಭವ ವಚೋನ ಎಂಬುದು ಶ್ರುತಿ ಸಿದ್ಧ" ಎಂದಿದ್ದಾನೆ.[೨೬] ಇಂತಹ ವಚನಗಳನ್ನು ವಚಿಸುವುದು ಅನುಭಾವಿಯಾಗುವದಕ್ಕೆಯೇ. "ವಚಿಸಿ ಅನುಭಾವಿಯಾಗದವ ಪಿಶಾಚಿಯಯ್ಯಾ; ವಚಿಸಿ ಅನುಭಾವಿಯಾಗದವ ಪಂಡಿತನಯ್ಯಾ"[೨೭] ಎಂದು ತಿಳಿಸುತ್ತ ವಚನ ಸಾಹಿತ್ಯವು ಮೂಲತಃ ಅನುಭಾವಿಯಾಗುವುದಕ್ಕಿದೆಯೆಂಬುದನ್ನೂ ಸ್ಪಷ್ಟಪಡಿಸಿದ್ದಾನೆ. ಅದು ಪಂಡಿತನಾಗಲು ಓದುವ ಸಾಹಿತ್ಯವಲ್ಲವೆಂಬುದನ್ನು ಸಿದ್ಧರಾಮನು ತಿಳಿಸಿದ್ದಾನೆ.

[೩]

ವಚನ ಸಾಹಿತ್ಯವನ್ನು ಕಾವ್ಯನಾಟಕ ಪ್ರಸ್ಥಾನಗಳೊಡನೆ ಹೋಲಿಸಿದಂತೆ ಶಾಸ್ತ್ರಾದಿಗಳೊಡನೆಯೂ ಜ್ಞಾನದಾಯಕ ಸಾಹಿತ್ಯವಾದ ವೇದಾದಿಗಳೊಡನೆಯೂ ಶರಣರು ಹೋಲಿಸಿದ್ದಾರೆ. ಅಲ್ಲಮ ಪ್ರಭುದೇವನು:

ವೇದವೆಂಬುದು ಓದಿನ ಮಾತು;
ಶಾಸ್ತ್ರವೆಂಬುದು ಸಂತೆಯ ಸುದ್ದಿ;
ಪುರಾಣವೆಂಬುದು ಪುಂಡರಗೋಷ್ಠಿ
ತರ್ಕವೆಂಬುದು ತಗರ ಹೋರಟೆ;
ಭಕ್ತಿಯೆಂಬುದು ತೋಱುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು[೨೮]

ಎಂದಿದ್ದಾನೆ ಮಾಚಿದೇವ.

ವೇದವಿಪ್ರರ ಬೋಧೆ; ಶಾಸ್ತ್ರ ಸಂತೆಯ ಮಾತು;
ಪುರಾಣ ಪುಂಡರಗೋಷ್ಠಿ; ಆಗಮ ಅನೃತದ ನುಡಿ;
ತರ್ಕ, ವ್ಯಾಕರಣ, ಕವಿತ್ವ, ಪ್ರೌಢಿಮೆ;

---

೨೪. ಹಾ. ಕ. ವ. ೫
೨೫. ಸಿ. ರಾ. ವ. ೮೬೦. ಕರ್ಣಾಟಿ- ಕಣ್ಣು ಕಟ್ಟು ವಿದ್ಯೆ, ಮಾಯಾಜಾಲ.
೨೬. ,, ೯೯೭.
೨೭. ,, ೧೦೪
೨೮. ಅ. ವ. ಚಂ. ವ. ೪೬೫

ಇದು ಕಾರಣ
ತನ್ನೊಳಗನರಿದ ಅನುಭವದಿಂದ
ಘನವಿಲ್ಲೆಂದ ಕಲಿದೇವರ ದೇವಾ ೨೯

ಎಂದು ಹೇಳಿದ್ದಾನೆ ಶಿವಯೋಗಿ ಸಿದ್ಧರಾಮನು.

ಶಾಸ್ತ್ರವೆಂಬುದು ಮನ್ಮಥ ಶಸ್ತ್ರವಯ್ಯಾ ;
ವೇದಾಂತವೆಂಬುದು ಮೂಲಮನೋವ್ಯಾಧಿಯಯ್ಯಾ;
ಪುರಾಣವೆಂಬುದು ಮೃತವಾದವರ ಗಿರಾಣವಯ್ಯಾ:
ತರ್ಕವೆಂಬುದು ಮರ್ಕಟಾಟವಯ್ಯಾ;
ಆಗಮವೆಂಬುದು ಯೋಗದ ಘೋರವಯ್ಯಾ;
ಇತಿಹಾಸವೆಂಬುದು ರಾಜರ ಕಥಾಭಾಗವಯ್ಯಾ;
ಸ್ಮೃತಿಯೆಂಬುದು ಪಾಪಪುಣ್ಯವಿಚಾರವಯ್ಯಾ;
ಆದ್ಯರ ವಚನವೆಂಬುದು ಬಹುವೇದ್ಯವಯ್ಯಾ;
ನಿಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ತಿಳಿಯಲಿಕ್ಕೆ ೩೦

ವಿದ್ಯೆ ಎಂದಡೆ ಭಾರತ ರಾಮಾಯಣವಲ್ಲ;
ಭಾರತವೆಂದಡೆ ಭರತದೇಶದಲ್ಲಿ ಜನಿಸಿ ಕಾಮಿನಿಯರ ಸೋಗುಹಾಕಿ
ಆ ದೇಶಕ್ಕಧಿಪತಿಯಾದ ಕಥೆಯೆ ಭಾರತವಯ್ಯಾ;
ರಾಮಾಯಣವೆಂದಡೆ ಆದಿನಾರಾಯಣನು ಪೃಥ್ವಿಯೊಳು ಪುಟ್ಟಿ,
ರಾಮನೆಂಬಭಿಧಾನವ ಧರಿಸಿ, ಸರ್ವರಂತೆ ಪ್ರಪಂಚಮಾಡಿ,
ರಾಕ್ಷಸರ ಗರ್ವವನುಳಿದುದೆ ರಾಮಾಯಣ.
ಮಾಡಿ ಉದ್ಧಟವಾದಲ್ಲಿ ಕಾಲಾಂತರದಲಾದರೂ
ಕುಂಜರಿಪಿನೊಳಗಾದವಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.'' ೩೧

ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ
ಸಮಬಾರದಯ್ಯಾ ;
ಎಮ್ಮ ವಚನದ ನೂಱೆಂಟಧ್ಯಯನಕ್ಕೆ ಶತರುದ್ರೀಯ-ಯಾಗ
ಸಮಬಾರದಯ್ಯಾ ;
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರೀ ಲಕ್ಷ ಜಪ
ಸಮಬಾರದಯ್ಯಾ ;
ಕಪಿಲಸಿದ್ಧಮಲ್ಲಿಕಾರ್ಜುನಾ''-೩೨ ಇತ್ಯಾದಿ

ಇಂತಹವೇ ವಚನಗಳು ಬಸವಣ್ಣ, ಅಕ್ಕಮಹಾದೇವಿ, ಮತ್ತು ಇತರ ವಚನಕಾರರಲ್ಲಿಯೂ ದೊರೆಯುತ್ತಿವೆಯಾದುದರಿಂದ ವಚನಕಾರರು ತಾವು

೨೯. ಮ. ಮಾ. ದೇ. ವ. ೨೨
೩೦. ಸಿ. ರಾ. ವ. ೮೬೧
೩೧ ಸಿ. ರಾ. ವ. ೧೦೪
೩೨. " ೮೫೬

ವಚನಗಳನ್ನು ರಚಿಸುವ ಮುನ್ನ ಭಾರತದಲ್ಲಿ ಉಪಲಬ್ಧವಿದ್ದ ಹೇರಳ ಸಾಹಿತ್ಯದ ಪರಿಚಯ ಪಡೆದಿದ್ದರೆಂಬುದು ಇಂತಹ ವಚನಗಳಿಂದ ಕಂಡು ಬರುತ್ತಿದೆ. ಅವರು ಹಿಂದಣ ಈ ಸಾಹಿತ್ಯದ ಪರವೆಯಿಲ್ಲದೆ ಕೇವಲ ಧಾರ್ಮಿಕ ಬೋಧನೆ ಮಾಡಹೋಗಿ ವಚನಗಳನ್ನು ನಿರ್ಮಿಸಿಲ್ಲ (ಗೌಣವಾಗಿ) ಆನುಷಂಗಿಕ ವಾಗಿ ವಚನಗಳಲ್ಲಿ ಸಾಹಿತ್ಯಾಂಶಗಳು ಇವೆಯೆಂಬ ಮಾತು ಸಮಂಜಸವಲ್ಲವೆಂದು ತಿಳಿದು ಬರುತ್ತದೆ. ಬುದ್ಧದೇವ, ಕ್ರೈಸ್ತ, ಗಾಂಧೀ ಇವರುಗಳು ಸಹ ಬರೆದುದು ಸಾಹಿತ್ಯಪ್ರೇರಣೆಯಿಂದಲ್ಲದಿದ್ದರೂ ಉತ್ತಮ ಸಾಹಿತ್ಯಾಂಶಗಳ ನ್ನೊಳಗೊಂಡಿರುವಂತ ವಚನ ಸಾಹಿತ್ಯವೂ ಇದೆ; ಯಾಕೆಂದರೆ ಅವರಿಗೆ ಜನಾಂಗದ ಬದುಕೇ ಮುಖ್ಯ ವಸ್ತುವಾಗಿರುತ್ತದೆ. ವಚನ ಸಾಹಿತ್ಯದ ಮೇಲಿನ ಉಕ್ತಿಗಳನ್ನು ಪರೀಕ್ಷಿಸಿದರೆ ಕಂಡು ಬರುವ ಇನ್ನೊಂದು ಮುಖ್ಯಗುಣವೆಂದರೆ, ಶರಣರು ಭಕ್ತಿಹೀನವಾದ, ದೈವಸಾಕ್ಷಾತ್ಕಾರಕ್ಕೆ ಸಹಾಯಕವಲ್ಲದ ಓದು, ಇಲ್ಲವೆ ಜ್ಞಾನವನ್ನು ಜ್ಞಾನವೆಂದು ಪರಿಗಣಿಸದಿದ್ದುದರಿಂದಲೂ ಅನುಭಾವ ಮಾರ್ಗಕ್ಕೆ ಪ್ರಾಶಸ್ತ್ಯವಿತ್ತುದರಿಂದಲೂ, ವೇದ, ಶಾಸ್ತ್ರ, ಕಾವ್ಯ, ಪುರಾಣಾದಿ ಗಳ ಜ್ಞಾನಕ್ಕೆಯೇ ಅಷ್ಟೊಂದು ಪ್ರಾಮುಖ್ಯತೆಯನ್ನೀಯಲಿಲ್ಲ. ತಮ್ಮ ಈ ಮಾತುಗಳಲ್ಲಿ ವಚನಶಾಸ್ತ್ರದ ಮಹತಿಯನ್ನು ಹೇಳುವುದೇ ಮುಖ್ಯ ವಿಷಯ ವಾಗಿರುವುದರಿಂದ ಕೆಲವಾರಿ ಇಳಿಯ ಮಾತುಗಳನ್ನು ಅವರು ಅತಿರಂಜಿತವಾಗಿ ಆಡಿದ್ದಾರೆ. ವಿದ್ಯೆ, ಜ್ಞಾನವೆಂಬವು ಜನರಿಗೆ ಚಾಡಿಹೇಳಿ, ಹಣ, ಅಧಿಕಾರ ಸಂಪಾದಿಸುವ ಉದರಪೋಷಣೆಯ ಮಾರ್ಗಗಳಾಗಿದ್ದುವೆಂಬುದನ್ನು ಶರಣರು ಖಂಡಿಸಲೇಬೇಕಾಯ್ತು. ಆದುದರಿಂದಲೇ ಸಿದ್ಧರಾಮೇಶ್ವರನು :

"ಓದುವುದು ಸದ್ಗುಣಕ್ಕಲ್ಲದೆ ಕಲಿಯುಸೂದುವುದಕ್ಕೇನೋ, ಅಯ್ಯಾ?
ಮಾಡುವ ಭಕ್ತಿ ಮೋಕ್ಷಕ್ಕಲ್ಲದೆ ಡಂಭಾಚಾರಕ್ಕೇನೋ, ಅಯ್ಯಾ"[33]
"ಓದಿದ ಫಲ ಕೂಚಿಭಟ್ಟನಂತಾಗಬಾರದು."[34]
"ಸುರಿಯುವುದು ಅಮೃತವನೊಂದು ಕೋಟಿ ವೇಳೆ;
ಬಿನ್ನೈ ನನೆಯುವುದೇ ನಿರ್ಧರವಾಗಿ ಸದ್ಭಕ್ತ ಸದಾಚಾರವ?
ಸದ್ಭಕ್ತ ಸದಾಚಾರಯುಕ್ತ ಮಹಾತ್ಮರ ಗಾವಮಾಡಿದ ಬಯಕೆಯಯ್ಯಾ"[35]

ಎಂದು ನುಡಿದಿದ್ದಾನೆ.[1]

ಈ ಮಾತುಗಳಲ್ಲದೆ ಸಿದ್ಧರಾಮನ ಇನ್ನು ಕೆಲವು ವಚನಗಳು ನಮಗೆ ವಚನಸಾಹಿತ್ಯದ ಬಗೆಗೆ ಕೆಲವು ಸ್ಪಷ್ಟ ತಿಳುವಳಿಕೆಯನ್ನು ಮಾಡಿಕೊಡು ತ್ತವೆ; ಉದಾಹರಣೆಗೆ ಬಂದೆರಡು ಅಂತಹ ವಚನಗಳನ್ನು ನೋಡಬಹುದು :

೩೩. ಸಿ. ರಾ. ವ. ೧೦೧

೩೪. " ೫೦೧

೩೫. " ೪೯೮

"ಶಾಸ್ತ್ರವ ಹೇಳುವರೊಂದು ಕೋಟಿ;
ವೇದವೇದಾಂತವ ಹೇಳುವರೊಂದು ಕೋಟಿ;
ನ್ಯಾಯಾನ್ಯಾಯವ ಹೇಳುವರೊಂದು ಕೋಟಿ;
ಕಪಿಲ ಸಿದ್ಧಮಲ್ಲಿಕಾರ್ಜುನಮಾಯಾಕೀಲವ
ಹೇಳುವವರೊಬ್ಬರೂ ಇಲ್ಲ ಎಲ್ಲಾದರೂ"[೩೬]
"ವ್ಯಾಕರಣವನೋದಿದಲ್ಲಿ ಶಬ್ದ ಶುದ್ಧಯಲ್ಲದೆ
ಮನಶುದ್ಧವಾಗಿ ಜ್ಞಾನಶುದ್ಧವಾಗದು ;
ಛಂದಸ್ಸನ್ನು ಸಾಧಿಸಿದಲ್ಲಿ ಕವಿತಾಶುದ್ಧಿಯಲ್ಲದೆ
ಕವಿತೆಯ ಸಾಧಿಸಿ ವ್ಯಾಸನಂತೆ ಚಿರಂಜೀವಿಯಾಗನು ;
ಅಷ್ಟಾದಶ ಪುರಾಣವ ಸಾಧಿಸಿದಲ್ಲಿ ವಾಕ್ಶುದ್ಧಿಯಲ್ಲದೆ
ಕಪಿಲಸಿದ್ಧಮಲ್ಲಿಕಾರ್ಜುನ ಮಹಾದೇವ,
ದೇಹಸ್ವಭಾವ ಶುದ್ಧಿಯಾಗದು ನೋಡಾ"[೩೭]
"ಭವವಳಿದು ಭಾಷಣೆಯ ಮಾಡುವುದೇ ವಾಕ್ಸಿದ್ಧಿ"[೩೮]

ಇಂತಹ ಮಾತುಗಳನ್ನು ವೀಕ್ಷಿಸಿದರೆ ಎಂದೋ ಒಂದು ಕಾಲದಲ್ಲಿ ಕೆಲವರು ಅನುಭವಿಸಿದ ಅನುಭವದ ನುಡಿಗಳನ್ನು ಅಪಾರ್ಥದಲ್ಲಿ ಬಳಸುತ್ತಿದ್ದಾಗ ಅವುಗಗಳನ್ನು ಮತ್ತೆ ಮತ್ತೆ ಸಿದ್ಧಾಂತದ ಮಾತುಗಳೆಂದು ಒಪ್ಪಬೇಕಾಗಿಲ್ಲವೆಂಬುದನ್ನು ಶರಣರ ವಚನಗಳು ಎತ್ತಿತೋರಿಸುವಲ್ಲಿ ವಚನ ಸಾಹಿತ್ಯವು ವ್ಯಕ್ತಿಸ್ವಾತಂತ್ರ್ಯಕ್ಕೆ ಇತ್ತ ಮನ್ನಣೆಯನ್ನೂ ತೋರಿಸುತ್ತಿದೆ. ಅನುಭಾವಿಗಳ ಈ ನುಡಿಗಳು ಹೊರಹೊಮ್ಮಲು ಲೌಕಿಕದ ಅಪಾರ ಪಾಂಡಿತ್ಯ ಅನಾವಶ್ಯಕ ಎಂದೂ ಶಿವಜ್ಞಾನವೇ ನಿಜವಾದ ಜ್ಞಾನವೆಂದೂ ಇತರ ಜ್ಞಾನವು ಉದರಪೋಷಣೆಯ ಜ್ಞಾನವೆಂದೂ ವಚನ ಸಾಹಿತ್ಯವೇ ನಿಚ್ಚಳಪಡಿಸುವದರಿಂದ ವಚನ ಸಾಹಿತ್ಯ ನಿರ್ಮಾಪಕರೆಲ್ಲ ಘನವಾದ ಪಂಡಿತರಿದ್ದರೇ ಎಂದು ಕೇಳುವ ಪ್ರಶ್ನೆಯೇ ಅಪ್ರಸ್ತುತವೆನಿಸುತ್ತದೆ. ವಚನ ಸಾಹಿತ್ಯವು ಅನುಭಾವಸಾಹಿತ್ಯವಾದುದರಿಂದ ಅದರ ಮೌಲ್ಯಮಾಪನೆಗೆ ಕವಿತ್ವ, ಪಾಂಡಿತ್ಯ, ಈ ಮೊದಲಾದ ಅಂಶಗಳನ್ನು ಒರೆಗಲ್ಲಾಗಿ ಇಟ್ಟುಕೊಳ್ಳುವದಕ್ಕಿಂತ ವಚನಕಾರರು ತಮ್ಮ ಅನುಭಾವವನ್ನು ಹೇಗೆ ವ್ಯಕ್ತಗೊಳಿಸಿದ್ದಾರೆಂಬುದನ್ನು ಪರೀಕ್ಷಿಸುವುದೇ ಉತ್ತಮ ಮಾನದಂಡವಾಗಬಹುದು. ಅನುಭಾವಿಯ ಅನುಭಾವವು ಭಗವಂತನ ನೆನಹು' ಅರ್ಚನೆ, ಪ್ರಾರ್ಥನೆ ಧ್ಯಾನಾದಿಗಳು ಹೆಚ್ಚಿದಷ್ಟೂ ಗಾಢವಾಗುತ್ತದೆ. ಆದುದರಿಂದ ಇಂತಹ ಸಾಹಿತ್ಯದ ಮೌಲ್ಯಮಾಪನಕ್ಕೆ ಅನುಭಾವಿಯೇ ಯೋಗ್ಯನೇ ವಿನಾ ಪಂಡಿತನಲ್ಲ. ಅನುಭಾವಿಗಳು ಅಪೇಕ್ಷಿಸುವ ಸಿದ್ಧಿ ಭಗವಂತನ ಸಾಕ್ಷಾತ್ಕಾರದ ಸಿದ್ಧಿ ; ಇತರ ಸಿದ್ಧಿಗಳು ಅವರಿಗೆ ಅನಪೇಕ್ಷಣೀಯ :

---

೩೬. ಸಿ. ರಾ. ವ. ೪೯೪
೩೭. " ೪೭೩
೩೮. " ೭೦೦

"ವಾಕ್ಸಿದ್ಧಿಯುಳ್ಳವರು ಕೋಟಾನುಕೋಟಿ;
ಮನೋರಥ ಸಿದ್ಧಿಯುಳ್ಳವರು ಕೋಟಾನುಕೋಟಿ
ಭಾವಸಿದ್ಧಿಯುಳ್ಳವರು ಕೋಟಾನುಕೋಟಿ;
ನಿಮ್ಮ ಸಿದ್ಧಿಯುಳ್ಳವರು ಇಲ್ಲ ಕಂಡಯ್ಯಾ-
ಕಪಿಲಸಿದ್ಧ ಮಲ್ಲಿಕಾರ್ಜುನಾ" [೩೯]

ಎಂದು ಸಿದ್ಧರಾಮನು ಆಡಿದುದನ್ನು ನೋಡಿದರೆ ವಚನ ಸಾಹಿತ್ಯದ ಉದ್ದೇಶವು ಎಂತಹ ಹಿರಿದಾದುದು ಇತ್ತೆಂದು ಗಮನಕ್ಕೆ ಬರುತ್ತದೆ. ಅನುಭಾವಿಗಳ ಅಂತರಂಗದ ಕಿಡಿನುಡಿಗಳೇ ವಚನ ಸಾಹಿತ್ಯವಾಗಿ ಹೊರಹೊಮ್ಮಿರುವುದರಿಂದ ಅವರು ಅಪೇಕ್ಷಿಸಿದ ಸಿದ್ಧಿಯು 'ವಾಕ್ಸಿದ್ಧಿ' 'ಕಾಯಸಿದ್ಧಿ' 'ಮನೋರಥ ಸಿದ್ಧಿ' 'ಭಾವಸಿದ್ಧಿ' ಗಿಂತಲೂ ಹಿರಿದಾಗಿದೆ. "ಸಿದ್ಧಾಂತಿಯ ಜ್ಞಾನ ಸಾಧನೆಯಲ್ಲಿ; ವೇದಾಂತಿಯ ಧ್ಯಾನವಾದದಲ್ಲಿ ಕ್ರಿಯಾವಂತನ ಧ್ಯಾನನುಡಿಯಲ್ಲಿ; ವ್ಯವಹಾರಿಕ ಜ್ಞಾನ, ದ್ರವ್ಯಾರ್ಜನೆಯಲ್ಲಿ; ಇವೆಲ್ಲ ಭವಕ್ಕೆ ಕಾರಣವಲ್ಲದೆ ಭವರಹಿತ ಜ್ಞಾನವು ಸಾಧ್ಯವಾಗುವುದು ದುರ್ಲಭವಯ್ಯಾ" ಎಂದಿದ್ದಾನೆ ಸಿದ್ಧರಾಮ.[೪೦] ಸರ್ವಸಿದ್ಧಿಗಳಿಗಿಂತ ಹಿರಿದಾದ ಸಿದ್ಧಿಯೆಂದರೆ 'ಭವವ ನೀಗುವುದು.' ಅದುವೇ ವಚನವಾಙ್ಮಯದ ಪರಮ ಗುರಿಯಾಗಿದ್ದಿತು. ಸಂಚಿತ, ಪ್ರಾರಬ್ಧ, ಆಗಾಮಿ ಕರ್ಮಗಳನ್ನು, ಪಂಚಪಾತಕ, ಪಂಚಸೂತಕಗಳನ್ನು ಕಳೆದುಕೊಳ್ಳುವುದೂ ವಚನಕಾರರ ಉದ್ದೇಶವಾಗಿದ್ದಿತು. ಆದುದರಿಂದ ಅಂತಹ ಸಾಹಿತ್ಯವನ್ನು ನಿರ್ಮಿಸುವುದೇ ಅವರ ಮುಂದೆ ಇದ್ದ ಘನೋದ್ದೇಶವಾಗಿತ್ತು. ವಚನಕಾರರು ವಚನಗಳನ್ನು ರಚಿಸಿ ಹಾಡುವಾಗ ಅವರಿಗೆ ಪುರಾತನ ಸಾಹಿತ್ಯದ ಪರಿಚಯವಿದ್ದುದಲ್ಲದೆ ವ್ಯಾಕರಣ ಮೊದಲಾದ ವಿಷಯಗಳ ಜ್ಞಾನವೂ ಇದೆ. ಉದಾಹರಣೆಗೆ ಸಿದ್ಧರಾಮನು ಒಂದು ವಚನದಲ್ಲಿ 'ಪಾಣಿನಿ'ಯ ಉಲ್ಲೇಖವನ್ನೇ ಮಾಡಿದುದನ್ನು ಕಾಣಬಹುದಾಗಿದೆ :

"ಮನಸ್ ಶಬ್ದ 'ನಪುಂಸಕ' ಎಂಬ ನ್ಯಾಯಜ್ಞನ ಮಾತು ಪುಸಿಯಲ್ಲ,
ನೋಡಯ್ಯಾ;
ಶಬ್ದ ನಪುಂಸಕವಾಗಿ ಕಾರ್ಯ ಪುಲ್ಲಿಂಗವಾದಡೆ
ಆ ಶಬ್ದ ಪಾಣಿನಿಗೆ ತಿಳಿಯದೆ ಹೋಯಿತ್ತೇನಯ್ಯಾ, ಕಪಿಲಸಿದ್ಧಮಲ್ಲಯ್ಯಾ?[೪೧]

ಎಂದಿದೆ. ಇದು ಅಲ್ಲದೆ ವಚನಕಾರರು ಸಂಸ್ಕೃತ ಗ್ರಂಥಗಳನ್ನು, ಸಂಸ್ಕೃತ ಶ್ಲೋಕಗಳನ್ನು, ಶ್ಲೋಕದ ತುಣುಕುಗಳನ್ನು ತಮ್ಮ ವಚನಗಳು ಪ್ರಮಾಣಬದ್ಧವಾದವುಗಳೆಂಬುದನ್ನು ತೋರಿಸಲು, ಮತ್ತು ವಚನಕಾರರ ಮಾತುಗಳಲ್ಲಿ

---

೩೯. ಸಿ. ರಾ. ವ. ೧೦೫
೪೦. " ೪೯೧
೪೧. " ೪೭೧

ಕೆಲವು ವೇದಾದಿಗಳಷ್ಟು ಪ್ರಾಚೀನವೆಂದೂ ತಿಳಿಸಲು ವಚನಗಳ ಮಧ್ಯದಲ್ಲಿ ಬಳಸಿರುವುದನ್ನು ನೋಡಿದರೆ ಅವರು ಸಾಕಷ್ಟು ಬಲ್ಲಿದರಾಗಿದ್ದರೆಂದೂ ಹೇಳಬಹುದಾಗಿದೆ. ತಮ್ಮ ಉದ್ದೇಶಕ್ಕೆ ಬೇಕಾಗುವ ಸಾಮಗ್ರಿಯನ್ನು ಪಡೆದುಕೊಂಡಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ; ತಾವು ಯಾವ ಮಾತುಗಳನ್ನು ಆಡುತ್ತಾರೆಯೋ ಅಂತಹ ಮಾತುಗಳ ಬಗೆಗೆ ಸಂಪೂರ್ಣ ವಿವೇಚನೆ, ತಯಾರಿ ಮಾಡಿಕೊಂಡೇ ಮಾತನಾಡುವವರಾಗಿದ್ದರು. ಅಂತಹ ಜ್ಞಾನವನ್ನೇ ನಾವು ಶಿವಜ್ಞಾನವೆಂದು ಕರೆಯಬಹುದಾಗಿದೆ. ಅವರು ಸುಮ್ಮನೆ ವಾದಕ್ಕಾಗಿ ವಾದ ಮಾಡುವವರಾಗಿದ್ದಿಲ್ಲ.*

[೪]

ಬೃಹತ್ ಕಾವ್ಯಗಳನ್ನು ಓದಲು ತಾಳ್ಮೆ ಬೇಕು; ಓದಿ ಅರ್ಥ ಮಾಡಲು, ಅರ್ಥವನ್ನು ನೆನಪಿನಲ್ಲಿಟ್ಟುಕೊಳ್ಳಲು ಪಾಂಡಿತ್ಯ, ಸ್ಮರಣಶಕ್ತಿ ಅಧಿಕವಿರಬೇಕು; ಆದರೆ ಕಿರಿದಾದ ಮತ್ತು ಬಿಡಿದಾದ ಒಂದೊಂದು ವಚನವನ್ನು ಅರ್ಥ ಮಾಡಿಕೊಳ್ಳಲು ಅಷ್ಟೊಂದು ಪರಿಶ್ರಮವಾಗಲಾರದು ; ವಚನಗಳು ಹಲವು ವ್ಯಕ್ತಿಗಳ ಅನುಭವದಿಂದೊಡಗೂಡಿರುವುದರಿಂದ ಪ್ರತಿ ಭಾವನೆಯ ನಿರೂಪಣೆಯಲ್ಲಿ ವೈವಿಧ್ಯವು ಅಲ್ಲಿ ಕಂಡು ಬರುತ್ತದೆ; ಆದರಿಂದ ಅವು ರುಚಿಯೆನಿಸುತ್ತವೆ; ಭಗವಂತನ ಸಂಬಂಧ ಆತ್ಮ ವಿಕಾಸ ಇವೇ ವಚನಕಾರರ ಪ್ರಮುಖ ಉದ್ದೇಶವಾಗಿರುವುದರಿಂದ ಯಾವಾಗಲೂ ಶುಚಿಯಾಗಿವೆ. ವಚನಕಾರರ ಮಾತಿನಲ್ಲಿ ಅಮೃತವಿದೆಯೆಂಬುದೂ ಈ ಅರ್ಥದಲ್ಲಿ. ಭಾವ ವೈವಿಧ್ಯ, ಲಯ ವೈವಿಧ್ಯ, ಭಾಷೆಯಲ್ಲಿ ಮಿತಿ, ಅರ್ಥಪೂರ್ಣ ದೃಷ್ಟಿ, ಇವು ವಚನಗಳನ್ನು ಸಾಹಿತ್ಯದ ಮೇಲ್ ಮಟ್ಟಕ್ಕೇರಿಸಿವೆ ; ತಾತ್ವಿಕ ಚಿಂತನೆ, ತಾತ್ವಿಕ ಮಥನ ಇವು ವಚನಗಳನ್ನು ಶಾಸ್ತ್ರದ ಕಕ್ಷೆಗೆ ಸೇರಿಸಿವೆ. ಹಿಂದಿನ ಸಾಹಿತ್ಯವು ಕೇವಲ ಕಲ್ಪನಾತ್ಮಕ, ವಿಷಯ ಸುಖಪ್ರದಾಯಕ, ಉದರ ಪೋಷಕ, ಹೃದಯ ಶುದ್ಧಿಯಿಲ್ಲದೆ ಬೌದ್ಧಿಕ ಕಸರತ್ತಿಗೆ ಪ್ರೇರಕವಾಗಿ, ಶುಷ್ಕವಾಗಿ ಉಪಯೋಗಿಸಲ್ಪಡುತ್ತಿದ್ದುದನ್ನು ಕಂಡು ಶರಣರು ನೊಂದಿದ್ದಾರೆ; ಈ ಅರ್ಥದಲ್ಲಿ ಪುರಾತನ ಸಾಹಿತ್ಯದ ಕೆಲವು ಭಾಗಗಳನ್ನು ಅವರು ಖಂಡಿಸಿದ್ದಾರೆ. ಇಂದ್ರಿಯಗಳನ್ನು ಉದರ ಪೋಷಣೆಗೇ ವಿನಿಯೋಗ ಮಾಡದೆ

---

* "ಅಕ್ಷರವ ಬಲ್ಲೆನೆಂದು ಅಹಂಕಾರವೆತಗೊಂಡು ಲೆಕ್ಕಗೊಳ್ಳರಯ್ಯ. ಗುರುಹಿರಿಯರು ತೋಱಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಸಲ್ಲದೆ ಅನುಪೋಗೆಂಬುವನಱಿಯರು; ಭಕ್ತಿಯನಱಿಯರು; ಮುಕ್ತಿಯನಱಿಯರು; ಯುಕ್ತಿಯನಱಿಯರು; ಮತ್ತೊ ವಾದಿಗೆಳಸುವರು; ನೋಡಾ ಗುಹೇಶ್ವರ, ಸಲೆಕೊಂಡ ಮಾಱಿಂಗೆ" (ಅ. ವ. ಚಂ. ವ. ೬೯)

ಭಗವಂತನ ಸೇವೆಗೆ ಮೀಸಲಾಗಿರಿಸುವುದು, ನುಡಿಗಿಂತ ನಡೆಗೆ ವಿಶೇಷ ಮಹತ್ವ ಕೊಟ್ಟಿರುವುದು, ಜ್ಞಾನ, ಸ್ವಾತಂತ್ರ್ಯ, ಶೀಲ, ವ್ರತಾದಿಗಳ ಅರ್ಥವನ್ನು ಸರಿಯಾದ ರೀತಿಯಲ್ಲಿ ವಿವರಿಸಿರುವುದು, ಇಂದ್ರಿಯಗಳನ್ನು ದುರ್ಗುಣ, ದುಶ್ಚಿಂತನೆಗಳಿಂದ ದೂರವಿರಿಸಿರುವುದು, ದೈವ ಶಕ್ತಿ-ಮಾನವ ಶಕ್ತಿಗಳ ಬಗೆಗೆ ನಿಶ್ಚಿತಾಭಿಪ್ರಾಯಗಳನ್ನು ತಾಳಿರುವುದು, ಭಾವನೆಗಳನ್ನು ಪವಿತ್ರಗೊಳಿಸಿರುವುದು-ಇವೇ ಮೊದಲಾದುವು ವಚನ ಸಾಹಿತ್ಯದ ಪ್ರಮುಖ ಗುಣಗಳಾಗಿವೆ. ಶರಣರ ವಚನಗಳಿಂದ ಅಂತಹ ಕೆಲ ಮಾತುಗಳನ್ನು ಇಲ್ಲಿ ಉದ್ಧರಿಸಬಹುದು.

೧) "ತಾ ಬಾಳಲಾರದೆ ವಿಧಿಯ ದೈವವೆಂಬ ನುಡಿಯಂತಾಯಿತ್ತು ;"
೨) "ನುಡಿದರೆ ಲಿಂಗಮೆಚ್ಚಿ ಅಹುದೆನ್ನಬೇಕು";
೩) "ಶಿವನ ಸೊಮ್ಮು ಶಿವಂಗೆ ಸಂದಿತ್ತು";
೪) "ಮರ್ತ್ಯವೆಂಬುದು ಕರ್ತಾರನ ಕಮ್ಮಟ";
೫) "ಲೋಕದ ಡೊಂಕ ನೀವೇಕೆ ತಿದ್ದುವಿರಿ?"
೬) "ಅರಿವಿಂಗೆ ಹಿರಿದು ಕಿರಿದುಂಟೇ ?"
೭) "ಕೊಲುವೆನೆಂಬುದು ದೇವನ ಭಾಷೆ ; ಗೆಲುವೆನೆಂಬುದು ಭಕ್ತನ ಭಾಷೆ";
೮) "ಕೊಲ್ಲೆನಯ್ಯಾ ಬಾಯಿಚ್ಚೆಗೆ; ಮೆಲ್ಲೆನಯ್ಯಾ ಬಾಯ್ರುಚಿಗೆ";
೯) "ಕಂಗಳ ನೋಟ ತಪ್ಪಿದರೆ ಮಾರಿ;"
೧೦) "ಪ್ರಸಾದ ಕಾಯವ ಕೆಡಿಸಲಾಗದು"
೧೧) "ಮಾತೆಂಬುದು ಜ್ಯೋತಿರ್ಲಿಂಗ"
೧೨) "ಶಿವನಂತುವನರಿಯದೆ ಚಿಂತಿಸುತಿದ್ದುದು ಲೋಕ";
೧೩) "ಅರಿದಡೆ ಶರಣ, ಮರೆದಡೆ ಮಾನವ" — ಇತ್ಯಾದಿ

ಇಂತಹವೇ ಉಕ್ತಿಗಳನ್ನು ಮನಗಂಡರೆ ವಚನ ಸಾಹಿತ್ಯವು ಸ್ವಾನುಭವದ, ಸತ್ಯದ ಸಾಕ್ಷಾತ್ಕಾರದ, ತನ್ನ ತಾನರಿವ, ಶರಣರ ಬಾಳಿನ ಕೈಗನ್ನಡಿಯಾಗಿದೆ; ಅದು ಗಿಳಿಯಂತೆ "ಕಂಠಪಾಠ ಮಾಡಿ ಒಪ್ಪಿಸುವ ಕೋಟಿ ಪಂಡಿತರ ಸಾಹಿತ್ಯವಲ್ಲ"; ಭಗವಂತನ ಸ್ವರೂಪವು, ನಿರೂಪವು, ತಿಳಿಸಿ, ಅಷ್ಟಮದ ಅಹಂಕಾರಗಳನ್ನು ದೂರೀಕರಿಸಿ, ಆತ್ಮತೃಪ್ತಿ, ಆತ್ಮವಿಕಾಸವನ್ನುಂಟು ಮಾಡುವ, ಭಗವಂತನ ಸಾಕ್ಷಾತ್ಕಾರವನ್ನೊದಗಿಸುವ ದಿವ್ಯ ಸಾಹಿತ್ಯವಾಗಿದೆ. ಭಗವಂತನ ಚಿಂತನೆ ಇಲ್ಲದವರ ಬಗೆಗೆ, ಅನೀತಿವಂತರ ಬಗೆಗೆ ರೋಷದ ನುಡಿಗಳಿವೆ. ಶರಣರು ವಿಚಾರಾಂಧರಾಗಿ, ವಿಶ್ವಾಸಹೀನರಾಗಿ ಜೀವನವನ್ನು ಕಂಡವರಲ್ಲ; ಮಾನವನ ಆಸೆ ಆಕಾಂಕ್ಷೆಗಳನ್ನು ಕಡೆಗಣಿಸಿದವರಲ್ಲ; ಬೇಕು ಬೇಡಗಳನ್ನು ಅರಿತು, ಜೀವನದ ಇತಿಮಿತಿಗಳ ಪರಿವೆಯಲ್ಲಿ ನಡೆಯಬೇಕೆಂದವರು. ವ್ಯಕ್ತಿಯ ಭಾವಶುದ್ಧಿ, ಹೃದಯಶುದ್ಧಿ, ಇಂದ್ರಿಯ ಶುದ್ಧಿಗಳಿಗೇ ಪ್ರಥಮ ಪ್ರಾಶಸ್ತ್ಯವಿತ್ತಿದ್ದಾರೆ.

[೫]

ವಚನ ವಾಙ್ಮಯವು ಉತ್ತಮ ಸಾಹಿತ್ಯವೇ ಎಂಬುದನ್ನು ಪರಿಗಣಿಸುವಾಗ ಅವರು ಬಳಸಿದ ಭಾಷೆಯನ್ನು ಪರೀಕ್ಷಿಸುವುದು ಪ್ರಥಮ ಕೆಲಸ. ದಿನನಿತ್ಯದ ಬಳಕೆ ಮಾತುಗಳು ವಚನ ವಾಙ್ಮಯದಲ್ಲಿ ಬಂದುದು ಅವರ ಮೂಲ ಉದ್ದೇಶಕ್ಕೆ ಅನುಗುಣವಾಗುವಂತಿದ್ದರೂ ಕಾವ್ಯಗಳಲ್ಲಿ ಕಂಡುಬರುವ ಪ್ರಾಸಾನುಪ್ರಾಸ, ಹಲವು ರೀತಿಯ ಅರ್ಥಾಲಂಕಾರಗಳು. ನಾಣ್ಣುಡಿ, ಜಾಣ್ಣುಡಿ, ದೇಶಿನುಡಿ, ಸೂತ್ರಾತ್ಮಕ ನುಡಿ, ಇವೆಲ್ಲವೂ ಅಲ್ಲಿ ಇರುವುವಲ್ಲದೆ ಅದರ "ಸೂಳ್ನುಡಿ", "ಕಿಡಿ ನುಡಿಗಳು" ಕನ್ನಡ ವಾಙ್ಮಯದ ಹೊಳೆಹೊಳೆವ ಚಿನ್ನದ ನಾಣ್ಯಗಳಂತಿದ್ದು ವಚನ ಸಾಹಿತ್ಯದ ಕೊಡುಗೆಗಳಾಗಿವೆ. ಬದುಕಿಗೆ ಅವರ ಮಾತುಗಳು ಕಾಂತಿಯನ್ನೀಯುತ್ತವೆ; ಅಮೃತದ ಸೇಚನೆಗೈಯುತ್ತವೆ; ಉದಾಹರಣೆಗೆ ಈ ಮಾತು ಕೇಳಿರಿ :

೧) ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ
ಗಂಗೆಯ ಮುಳುಗಿದಡೇನಾಗುವುದಯ್ಯಾ?
ಅದು ಕಾರಣ ಮನವ ನೋಯಿಸದವನೆ
ಒಬ್ಬರ ಘಾತವ ಮಾಡದವನೆ ಪರಮ ಪಾವನ[೪೨]

೨) "ಸಂಸಾರವೆಂಬ ರಾಹುವಿನ ಅಣಲೊಳಗೆ ಇದ್ದೆನಯ್ಯಾ;
"ಜ್ಞಾನವೆಂಬ ಕೂಕಂಬಿಯಲ್ಲಿ ಲಿಂಗವೆಂಬ ತಾರಾಮಂಡಲದ ನಡೆಸುವುದು"

೩) "ನೋಡಿ ನೋಡಿ ಕಣ್ಣು ನಟ್ಟಾಲಿ ಬಿದ್ದವವ್ವಾ"!

೪) "ನೀರಿಲ್ಲದ ಭೂಮಿಯಲ್ಲಿ ಮೂಜುಹೇಜು ನವಣೆಯ ಬೆಳೆದಂತೆ ಕಂಡೆ;"

೫) ಅಂದಣವನೇರಿದ ಸೊಣಗನಂತೆ ಬಿಡದು ಮುನ್ನಿನ ಸ್ವಭಾವವನು,
"ಸುಡುಸುಡು ಮನವಿದು ವಿಷಯಕ್ಕೆ ಎಳೆವುದು!"

೬) "ಸಗಣಕ್ಕೆ ಸಾಸಿರ ಹುಳುಗಳು ಪುಟ್ಟವೇ ಅಯ್ಯಾ?

೭) "ಹುತ್ತವ ಬಡಿದರೆ ಹಾವು ಸಾಯಬಲ್ಲದೇ?"

೮) "ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆ!"

೯) ಎನ್ನ ಚಿತ್ತವು ಅತ್ತಿಯ ಹಣ್ಣು

೧೦) "ಕಂಬಳಿಯೊಳು ಕಣಕವ ನಾದಿದಂತೆ"[೪೩] ಇತ್ಯಾದಿ

ಇಲ್ಲಿಯ ಉಪಮೆ, ರೂಪಕ, ದೃಷ್ಟಾಂತಾದಿಗಳು ಅತ್ಯಂತ ಧ್ವನಿಪೂರಿತವಾದವುಗಳು; ಅತ್ಯಂತ ಅರ್ಥಪೂರ್ಣವಾದವುಗಳು:

---

೪೨. ಶಿ. ರಾ. ವ. ೨೯೦

೪೩. " ೬೮, ೧೫೫, ೧೬೫, ೭೯೯

ಉದಕವೆಲ್ಲ ಒಂದೇ
ಈಚಲವ ಆಶ್ರಯಿಸಿ ಮದ್ಯಪಾನವೆನಿಸಿತ್ತು ;
ಸುರತರುವ ಆಶ್ರಯಿಸಿ ಅಮೃತವೆನಿಸಿತ್ತು ;
ದೇಹವೆಲ್ಲ ಒಂದೇ ;
ಅಂಗನೆಯುರ ಆಶ್ರಯಿಸಿ ಭವಕ್ಕೆ ಬೀಜವಾಯಿತ್ತು ;
ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಲವೆನಿಸಿತ್ತು (ಸಿ.ರಾ.ವ. ೭೬೩)

೨) "ಸಂಧ್ಯಾಕಾಲದಲ್ಲಿಯ ಪ್ರಕಾಶದಂತೆ ವಿಷಯ ಸುಖವಿರಬಲ್ಲಡೆ ಅದು ಯೋಗಿಗೆ ಭೂಷಣ". (ಸಿ.ರಾ.ವ. ೧೦೨೨) ವಚನಸಾಹಿತ್ಯವು ವಿಚಾರ ಪ್ರಚೋದಕ ಸಾಹಿತ್ಯವೂ ಆಹುದು. ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ ಪ್ರಚಲಿತವಿದ್ದ ಅನೇಕ ಪದಗಳಿಗೆ, ವಚನಕಾರರು, ಅವುಗಳಿಗೆ ಹತ್ತಿದ್ದ ತುಕ್ಕನ್ನು ಬಿಡಿಸಿ, ಹೊಸ ಹೊಸ ಅರ್ಥಗಳನ್ನು ಹಚ್ಚಿ, ಕ್ರಾಂತಿಯುತವಾಗಿ ಮಾಡಿ, ಮತ್ತೆ ಬಳಕೆಗೆಯಿತ್ತುದಲ್ಲದೆ ಆ ಪದಗಳಿಗೆ ಜನತೆಯು ಇತ್ತ ಸಂಕುಚಿತಾರ್ಥಗಳನ್ನು ಕಿತ್ತೆಸೆದರು. ಕೆಲವು ಉದಾಹರಣೆಗಳಿಂದ ಈ ಮಾತನ್ನು ವಿವರಿಸಬಹುದು :

೧) ಮಾಯೆ : "ಮನದ ಮುಂದಣ ಆಸೆಯೇ ಮಾಯೆ."
(ಪ್ರಭುದೇವ)

"ಯೋಗಿಗೆ ಕೋಪವೇ ಮಾಯೆ ;
ರೋಗಿಗೆ ಅಪಥ್ಯವೇ ಮಾಯೆ ;
ಜ್ಞಾನಿಗೆ ಮಿಥ್ಯವೇ ಮಾಯೆ." (ಸಿದ್ಧರಾಮ)

೨) ಭವಿ : "ಮದ್ಯಪಾನ, ಮಾಂಸಭಕ್ಷಣ, ಪರಸ್ತ್ರೀ ಸಂಗ, ಪರಧನ ಚೋರತ್ವ, ನಿಜವಸ್ತು – ಅಂತರತ್ವವಿದ್ದವನೆ ಭವಿ"
(ಸಿದ್ಧರಾಮ)

೩) ಸ್ವರ್ಗ : "ಆಚಾರವೆ ಸ್ವರ್ಗ"; "ಅಯ್ಯಾ ಎಂದಡೆ ಸ್ವರ್ಗ".
(ಬಸವಣ್ಣ)

"ಸ್ವರ್ಗವೆಂದರೆ ಸುಖಕ್ಕೆ ನಾಮ ;" (ಸಿದ್ಧರಾಮ)

೪) ನರಕ : "ಅನಾಚಾರವೆ ನರಕ ;" "ಎಲವೋ ಎಂದಡೆ ನರಕ"
(ಬಸವಣ್ಣ)

"ನರಕವೆಂದರೆ ಬಾಧೆಗೆ ನಾಮ" (ಸಿದ್ಧರಾಮ)

೫) ಪುಣ್ಯ ಪಾಪ : "ಸಂಗದಿಂ ಸುಖದುಃಖವಲ್ಲದೆ ಪೂರ್ವಾರ್ಜಿತ ಪುಣ್ಯ ಪಾಪವೆಂಬವ ತಿಳಿಯಬಾರದು" (ಸಿ.ರಾ.ವ)

೬) ಅಜ್ಞಾನ – ಸುಜ್ಞಾನ : "ಅಂಗವೆಂದಡೆ ಅಜ್ಞಾನ; ಲಿಂಗವೆಂದಡೆ ಸುಜ್ಞಾನ." (ಸಿ.ರಾ.ವ)

೭) "ಗುಣದಿಂದ ಹಾರುವನಲ್ಲದೆ ವಿದ್ಯಾಭ್ಯಾಸದಿಂದಲ್ಲ" (ಸಿ.ರಾ.ವ)
"ಬ್ರಹ್ಮಭೂತನಾದಾತನೆ ಬ್ರಾಹ್ಮಣ" ,,

೮) "ದುಷ್ಕರ್ಮವೆಂಬಡೆ ವಿಷಯ ವಾಸನೆ;
ಸತ್ಕರ್ಮವೆಂಬಡೆ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವ ವಾಸನೆ"

೯) "ನಡೆ ವಿಪರೀತವಾದಡೆ ದುಷ್ಕಾಲ;
ಶಿವಭಕ್ತಿ, ಶಿವಧ್ಯಾನ, ಶಿವಪೂಜೆಯೆ ಸತ್ಕಾಲ;" ,,

೧೦) "ಕೊಲ್ಲುವನೆ ಮಾದಿಗ; ಹೊಲಸು ತಿಂಬವನೆ ಹೊಲೆಯ"
(ಬಸವಣ್ಣ)

೧೧) "ಮನಸ್ಸಿನ ಕಲ್ಮಷವಳಿವುದು ಮಹಾಸ್ನಾನ" (ಸಿದ್ಧರಾಮ)

೧೨) "ಸಮವಚನವೇ ಸಕಲ ಜಪಂಗಳಯ್ಯಾ;
ಸಮವಿನಯವೇ ಸದಾಶಿವನೊಲುಮೆಯಯ್ಯಾ" (ಬಸವಣ್ಣ)

೧೩) 'ಶರ' ಎಂಬಡೆ ಬಾಣ; 'ನ' ಎಂಬಡೆ ಅಂಥ ಮನ್ಮಥ ಬಾಣವಿಲ್ಲದವ-
ಶರಣ. (ಸಿದ್ಧರಾಮ)

೧೪) "ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ;
ಇಲ್ಲದುದ ಕಳವ ಮಾಡದಿಪ್ಪುದೇ ಶೀಲ" (ಬಸವಣ್ಣ)

ಎಲ್ಲ ವಚನಕಾರರಿಂದ ಇಂತಹ ಪದಗಳನ್ನೇ ಆಯ್ದು ವಿವರಿಸಿದರೆ ಒಂದು ಉತ್ತಮ ಗ್ರಂಥವೇ ಆಗಿ ಬಹು ಉಪಯುಕ್ತವೂ ಆದೀತು. ಇಂತಹ ಮಾತುಗಳು ಮಾನವನಿಗೆ ಬದುಕಿನ ದಾರಿಯನ್ನು ತೋರಲು ನಿಶ್ಚಿತವಾಗಿಯೂ ಉಪಯುಕ್ತವಾಗಿವೆ; ಅಲ್ಲದೆ ಧಾರ್ಮಿಕ ತಿರುಳನ್ನೇ ತಿಳಿಸುತ್ತವೆ. ರೂಪಕ, ಪ್ರತಿಮೆ, ಬೆಡಗು, ಸಾಂಕೇತಿಕತೆ, ಪರ್ಯಾಯ. ದೃಷ್ಟಾಂತ, ನಿದರ್ಶನ ಇವು, ವಚನಕಾರರು ಭಾಷೆಯಲ್ಲಿ ಹೇರಳವಾಗಿ ಬಳಸಿದ ವಿಧಾನಗಳಾಗಿವೆ. ಇವುಗಳ ಮೂಲಕ ಸತ್ಯ ಸಂಶೋಧನೆ ಮಾಡಿದುದನ್ನು ತಿಳಿಸಲು ಹೊರಟಿದ್ದಾರೆ. ಇವೇ ಕಾವ್ಯಭಾಷೆಯ ಸತ್ವಯುತವಾದ ಅಂಶಗಳು. ಅನುಭಾವವನ್ನು ವಿವರಿಸಲು ಈ ವಿಧಾನಗಳನ್ನು ಅವರು ಬಳಸಿದುದರಿಂದಲೇ ಅವರ ವಚನಗಳ ಭಾಷೆಯು ದಿನನಿತ್ಯದ ವ್ಯವಹಾರದ ಭಾಷೆಯಿಂದ ಭಿನ್ನವಾಗಿ ಕಂಗೊಳಿಸುತ್ತವೆ. ಹಲವು ಪ್ರಾಣಿಗಳ, ಪಶುಗಳ, ಪಕ್ಷಿಗಳ, ತರುಮರಾದಿಗಳ ಚಟುವಟಿಕೆ, ಕ್ರಿಯಾದಿಗಳಿಂದ ಮಾನವಸ್ವಭಾವ, ಜಗತ್ತಿನ ಸ್ಥಿತಿ, ದೇವನ ನಿಲವು ಮೊದಲಾದ ವಿಚಾರಗಳನ್ನು ವಿವರಿಸುವಾಗ ಜನಾಂಗಕ್ಕೆ ಪರಿಚಿತವಾಗಿರುವ ವಸ್ತು-ಜೀವಿಗಳನ್ನೇ ಆಯ್ದುಕೊಂಡುದು ಅವರ ಉದ್ದೇಶಕ್ಕೆ ಅನುಗುಣವಾಗಿದೆ: ಕೆಲವು ಉದಾಹರಣೆಗಳನ್ನು ಇಲ್ಲಿ ಅವಲೋಕಿಸಬಹುದಾಗಿದೆ:

೧) **ಕತ್ತೆ** ಬಲ್ಲುದೆ ಕಸ್ತೂರಿಯ ವಾಸನೆಯ?

೨) ಬರಿಯ ಕರಗನ ಭಕ್ತಿ, ಮಠದೊಳಗಣ **ಬೆಕ್ಕು** ಇಲಿಯ ಕಂಡು ಪುಟನೆಗೆದಂತೆ !

೩) **ಹಂದಿ** ಶ್ರೀಗಂಧವ ಹೂಸಿದಡೇನು ?

೪) ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ **ಸೊಣಗ**ನಪ್ಪೆ ;

೫) ತುಪ್ಪದ ಸವಿಗೆ ಅಲಗು ನೆಕ್ಕುವ **ಸೊಣಗ**ನಂತೆ ;

೬) ಅಂದಣವನೇರಿದ **ಸೊಣಗ**ನಂತೆ ;

೭) **ಇಲಿ**ಗಡುಹಸೊಡ್ಡಿದಂತೆ ಎನ್ನ ಸಂಸಾರ ;

೮) **ಕಪ್ಪೆ ಸರ್ಪ**ನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ !

೯) ಸರ್ಪನ ಬಾಯ ಕಪ್ಪೆ, ಹಸಿದು ಹಾರುವ ನೊಣಕ್ಕೆ ಆಸೆಮಾಡುವಂತೆ!

೧೦) ಒಂದು **ಮೊಲ**ಕ್ಕೆ **ನಾಯಿನೊಂ**ಬತ್ತು ಬಿಟ್ಟಂತೆ – ಕಾಯ ವಿಕಾರ ,

೧೧) ಮರನೇರಿದ **ಮರ್ಕಟ**ನಂತೆ – ಎನ್ನ ಮನ ;

೧೨) ಕಾಡ **ಬಸವ**ನ **ಹುಲಿ** ಕೊಂಡೊಯ್ವರೆ ಆರಯ್ಯಲಾಗದೇ ?

೧೩) ಕೆಸರಲ್ಲಿ ಬಿದ್ದ **ಪಶು**ವಿನಂತಾನು ದೆಸೆದೆಸೆಗೆ ಬಾಯ
ಬಿಡುತ್ತಿದ್ದೇನಯ್ಯಾ !

೧೪) **ನರವಿಂಧ್ಯ**ದೊಳಗೆನ್ನ **ಹುಲುಗಿಳಿ**ಯ ಮಾಡಿ ಸಲಹಿದ
ಎಂದೆಂದಿಗಯ್ಯಾ ;

೧೫) **ಕರಿ**ಯುಂಬ ಬೆಳವಲದಂತಕ್ಕಯ್ಯಾ ; ನಾಗಸಂಹಾರಕನ
ವಂಚುವುದು ಕೂಡಲಸಂಗನ ಸಾಮುಕ್ಕಯ್ಯಾ ;

೧೬) ಲಿಂಗದ ಉಂಡಿಗೆಯ **ಪಶು**ವಾನಯ್ಯಾ ?

೧೭) ಕಬ್ಬುನದ **ಕೋಡಗ**ದ ಪರುಷ ಮುಟ್ಟಲು ಹೊನ್ನಾದರೇನು ತನ್ನ
ಮುನ್ನಿನ ರೂಹ ಬಿಡದನ್ನಕ್ಕ ?

೧೮) **ಕಾಗೆ** ನಂದನ ವನದೊಳಗಿದ್ದರೇನು **ಕೋಗಿಲೆ**ಯಾಗಬಲ್ಲುದೇ ?

೧೯) **ಕಾಗೆ** ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕೂಗಿಕರೆಯದೆ
ತನ್ನ ಕುಲವೆಲ್ಲವ ?

೨೦) **ಮರ್ಕಟ**ನ ಕೈಯಲ್ಲಿ ಮಾಣಿಕವಿದ್ದರೆ ಫಲವೇನು ?

೨೧) **ನೋರು** ಗುಣವನರಿಸುವುದೆ ಕಾಗೆಯಲ್ಲಿ ?

೨೨) ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದೊಡೆ
ಸಿಹಿಯಾಗದೆ ಮೂರು ದಿವಸಕ್ಕೆ ?

೨೩) ಸಾಣೆಯ ಪಣಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ
ಅದರ ನಾಟ ಬಿಡದಣ್ಣಾ !

೨೪) ಎರದೆಲೆಯಂತೆ ಒಳಗೊಂದು ಹೊಱಗೊಂದಾದರೆ ಮೆಚ್ಚುವನೇ?
೨೫) ಹೆಂಡದ ಮಡಕೆಯ ಹೊಱಗೆ ತೊಳೆದಂತೆ!
೨೬) ಎಲವದ ಮರ ಹೂತು ಫಲವಾದ ತೆಱನಂತೆ!
ಫಲವಾದರೇನು ಹಾವುಮೆಕ್ಕೆಯ ಕಾಯಿ?
ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ?

ಈ ಸುಂದರ, ಧ್ವನಿಪೂರಕ, ಮಾರ್ಮಿಕ ಉದಾಹರಣೆಗಳು ಅತ್ಯಂತ ಕಲಾಪೂರ್ಣವೂ, ರಚನಾತ್ಮಕವೂ, ರಸಪೋಷಕವೂ ಆಗಿರುವದರಿಂದ ವಚನ ಸಾಹಿತ್ಯವು ಉತ್ತಮ ಕಾವ್ಯಕ್ಕೆ ಸಮಾನವಾಗಿದೆ; ಕಾವ್ಯಕ್ಕೆ ಇದ್ದ ಸೀಮಿತವಾದ ಅರ್ಥವನ್ನು ವಿಸ್ತರಿಸಿದೆ. ಈ ಸಾಹಿತ್ಯವನ್ನು ಒಂದು ದೃಷ್ಟಿಯಿಂದ ನಾವು 'Philosophical Potery' "ತಾತ್ವಿಕ ಕಾವ್ಯ" ಎಂದು ಕರೆಯಬಹುದಾಗಿದೆ.

[೬]

ಪ್ರಪಂಚದಲ್ಲಿ ಶಾಶ್ವತವಾದುದೆಂದರೆ ದಾರ್ಶನಿಕರ ದರ್ಶನ; ದಾರ್ಶನಿಕರು ಕವಿಗಳಿಗಿಂತ ಹಿರಿಯರು; ಮತ್ತು ಪ್ರಪಂಚಕ್ಕೆ ಶಾಂತಿ ದೊರೆಯುವುದು ಸತ್ಯ, ಸೌಂದರ್ಯ, ಸೌಶೀಲ್ಯಗಳನ್ನು ಪ್ರಪಂಚಕ್ಕೆ ತಿಳಿಸಿದ ಮಹಾಸ್ತ್ರೀ ಪುರುಷರಿಂದ. ಅಂತಹ ಉದ್ದೇಶದ ಮಾತುಗಳಿಗೇ ವಚನ ಸಾಹಿತ್ಯ ನಿರ್ಮಿತವಾಗಿದೆ; ವಚನ ಸಾಹಿತ್ಯವು ಮಹಾಕಾವ್ಯಗಳ ವೀರವಾಣಿಯಂತಿಲ್ಲದಿದ್ದರೂ ಮಾನವ ಹೃದಯವನ್ನು ತಾಗಿ ಅಲ್ಲಿ ಪ್ರತಿಧ್ವನಿಯೆಬ್ಬಿಸುವಂಥದಾಗಿದೆ. ಅಲ್ಲಿ ದೊರೆಯುವದು ಬರಿ ಶಾಂತಿಯೇ ವಿನಾ ಭ್ರಾಂತಿಯಲ್ಲ. ಜನತೆಯ ನಾಡಿಯನ್ನು ಜನಪದ ಗೀತೆಗಳಲ್ಲಿಯೇ ಕಾಣಬೇಕು. ಯಾವ ದೇಶದಲ್ಲಿಯೇ ಆಗಲಿ ಜನಪದ ವಿಚಾರವನ್ನು ತಿಳಿಸದ ಸಾಹಿತ್ಯ ಇದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ. ವಚನ ಸಾಹಿತ್ಯವು ಇಂತಹ ಮನೋಧೋರಣೆಯಿಂದ ಪ್ರೇರಿತವಾದುದು ಎಂದು ಬೇರೆ ಹೇಳಬೇಕಿಲ್ಲ. ಅನ್ನಮಯ ಭೂಮಿಕೆಗೆ ಸೇರಿದ ಸಾಹಿತ್ಯದಂತೆ ಬೇರೆ ಭೂಮಿಕೆಗೆ ಸೇರಿದ ಸಾಹಿತ್ಯವೂ ಇದೆಯೆಂಬುದನ್ನು ಒಪ್ಪಿದರೆ ವಚನ ಸಾಹಿತ್ಯವನ್ನು ಮೊದಲನೆಯ ವರ್ಗದ ಸಾಹಿತ್ಯದಿಂದ ಬೇರ್ಪಡಿಸಲೇಬೇಕು. ವಚನಕಾರರ ವಚನಗಳನ್ನು ಒಳಹೊಕ್ಕು ನೋಡಿದರೆ ಅಲ್ಲಿ ಕಂಡು ಬರುವ ಮೂಲಭೂತ ವಿಚಾರಗಳೆಂದರೆ :

ಅ) ಲೌಕಿಕ ಅಲೌಕಿಕಗಳ ಸಂಬಂಧವನ್ನು ನಿರ್ಣಯಿಸುವುದು ;
ಆ) ಜೀವನದಲ್ಲಿ ಬದುಕನ್ನು ನಡೆಯಿಸುವ ಶಕ್ತಿಯಾವುದು ಎಂಬುದನ್ನು ನಿರ್ಣಯಿಸುವುದು ,
ಇ) ನಿತ್ಯ ಸತ್ಯಗಳನ್ನು ಕಂಡು ಹಿಡಿಯುವುದು ;

ಈ) ನಿಜವಾದ ಸತ್ಯವಡಗಿರುವುದು ಮಾನವನ ಬಹಿರಂಗ ಜೀವನದಲ್ಲಿಯೋ ಅಂತರಂಗ ಜೀವನದಲ್ಲಿಯೋ ಎಂಬುದನ್ನು ನಿರ್ಣಯಿಸುವುದು ;

ಉ) ಧರ್ಮದ ನಿಜಸ್ವರೂಪ, ಉದ್ದೇಶ, ಹಾಗೂ ಮಾನವ ಬದುಕಿನ ಕೊನೆಯ ಗುರಿಗಳನ್ನು ವಿಮರ್ಶಿಸುವುದು. ಅಲ್ಲದೆ

ಊ) ಮಾನವ ವ್ಯಕ್ತಿತ್ವ ವಿಕಾಸವು ಪರಿಪೂರ್ಣವಾಗುವುದೆಂತು ಎಂದು ತಿಳಿಸುವುದು.

ಇವೇ ಮೊದಲಾದುವು ಅಲ್ಲಿ ಕಂಡು ಬರುವ ಮುಖ್ಯ ಅಂಶಗಳಾಗಿವೆ. ಶೈಲಿಯ ಸೊಗಸು, ಮಾತಿನ ಚಾತುರ್ಯಗಳಿಂದಲೇ ಸಾಹಿತ್ಯವು ಶ್ರೇಷ್ಠವಾಗಬೇಕಿಲ್ಲ ; ಅದು ಹಿರಿದಾಗುವುದು, ಅದರ ಉದ್ದೇಶ ಹಾಗು ಪ್ರಯೋಜನಗಳಿಂದ. ಆದುದರಿಂದಲೇ ನಮ್ಮ ಪೂರ್ವಜರು :

"ಪಾಪಮಿದು, ಪುಣ್ಯಮಿದು, ಹಿತ-
ರೂಪಮಿದಹಿತಪ್ರಕಾರಮಿದು, ಸುಖಮಿದು, ದುಃ
ಖೋಪಾತ್ತಮಿದೆಂದಱಿಪುಗು,
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್" ೪೪

ಎಂದು ಕರೆದಿದ್ದಾರೆ. ಈ ಹಿನ್ನೆಲೆಯನ್ನು ನಾವು ಮರೆಯುವಂತಿಲ್ಲ. ವ್ಯಕ್ತಿಗತ ಆಕಾಂಕ್ಷೆ, ಸಾಮಾಜಿಕ ಹಿತ ಪ್ರೇರಣೆ ಇವುಗಳಿಂದ ಹೊರಹೊಮ್ಮಿದೆ ವಚನ ಸಾಹಿತ್ಯ. ಅಲ್ಲದೆ ಆಡುವ ನುಡಿಯಲ್ಲಿ "ಆಡಿದು ನುಡಿಯಬೇಕು" ಎಂಬ ಪ್ರಜ್ಞೆಯಿಂದ ಹೊರಹೊಮ್ಮಿದೆ. ಅಲ್ಲಿ ಪ್ರಜಾಪ್ರಭುತ್ವ, ಸಮಾಜವಾದ, ವ್ಯಕ್ತಿಸ್ವಾತಂತ್ರ್ಯ, ವ್ಯಕ್ತಿವಿಕಾಸ, ವಿಮರ್ಶಾತ್ಮಕ ದೃಷ್ಟಿ, ಜನತೆಯ ಭಾಷೆ, ಜಾನಪದ ಸಾಹಿತ್ಯಗಳಿಗೆ ಇಂದಿನ ಯುಗದಲ್ಲಿ ಹೆಚ್ಚು ಮನ್ನಣೆ ದೊರೆಯುತ್ತದೆಯೆಂಬುದನ್ನು ನಾವು ಬಲ್ಲೆವು. ಇಂತಹ ಕಾಲದಲ್ಲಿ ಶಿವಶರಣರ ವಾಙ್ಮಯವು ಇಂತಹ ದೃಷ್ಟಿಯನ್ನೇ ಗಮನದಲ್ಲಿರಿಸಿಕೊಂಡು ಬೆಳೆದುದರಿಂದ ಅದು ಪ್ರಿಯವಾಗುವದರಲ್ಲಿ ಸಂದೇಹವೇ ಇಲ್ಲ. ಪ್ರೌಢ ಸಾಹಿತಿಗಳಿಗೆ ಕೀರ್ತಿ, ಧನಸಂಚಯದ ಆಸೆ; ಜನಪ್ರಿಯಕವಿಗಳಿಗೆ ಜನತೆಯ ನೀತಿಯನ್ನು ಸುಧಾರಿಸುವ ಆಸೆ ; ಜಾನಪದ ಕವಿಗಳಿಗೆ ದಿನ ನಿತ್ಯದ ಸುಖದುಃಖಾನುಭವಗಳನ್ನು ತೋಡಿಕೊಳ್ಳುವ ಆಸೆ; ಶಾಸನ ಕವಿಗಳಿಗೆ ಸ್ತುತಿಸಲರ್ಹರಾದವರನ್ನು ಕೊಂಡಾಡುವ ಆಸೆ; ಶಾಸ್ತ್ರಕವಿಗಳಿಗೆ ಪಾಂಡಿತ್ಯಪ್ರದರ್ಶನದ ಆಸೆಗಳಿರುವಂತೆ ವಚನ ಸಾಹಿತಿಗಳಿಗೆ ಆತ್ಮವಿಕಾಸ, ಆತ್ಮಶುದ್ಧಿ, ಭಗವಂತನ ಸಾಕ್ಷಾತ್ಕಾರ ಪಡೆಯುವ ಆಸೆ ಇದ್ದು ಅದು ಎಲ್ಲದಕ್ಕಿಂತ ಹಿರಿದಾದುದು ಎಂಬುದನ್ನು ವಚನಕಾರರು ಸ್ಪಷ್ಟಪಡಿಸಿದ್ದಾರೆ.

---

೪೪. ಕ. ರಾ. ಮಾ. I 18.

ಅ) "ಎಲ್ಲ ಎಲ್ಲವನರಿದು ಫಲವೇನಯ್ಯಾ ತನ್ನ ತಾನರಿಯಬೇಕಲ್ಲದೆ ?"[೪೫]

ಆ) "ಆಸೆಗೆ ಸತ್ತುದು ಕೋಟಿ; ಆಮಿಷಕ್ಕೆ ಸತ್ತುದು ಕೋಟಿ;
ಹೊನ್ನು ಹೆಣ್ಣುಮಣ್ಣಿಂಗೆ ಸತ್ತುದು ಕೋಟಿ;
ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ,[೪೬]" (ಪ್ರಭುದೇವ)

ಇ) "ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ:
ತಮಂಧಗುರಿಯಾಗಿ ಲಯವಾಗಿ ಹೋದವರ ಕಂಡೆ;
ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ;
ನೀ ಗುರಿಯಾಗಿ ಹೋದವರನಾರನೂ ಕಾಣೆ, ಗುಹೇಶ್ವರಾ"[೪೭]

ಎಂಬಂತಹ ಇನ್ನೂ ವಚನಗಳಲ್ಲಿ ವಚನಕಾರರು ಸಾಧಿಸಬೇಕಾದುದಾವುದೆಂಬುದು ಸ್ಪಷ್ಟವಿದೆ.

ಆತ್ಮವಿಕಸನ, ಆತ್ಮಶುದ್ಧಿ, ಭಾವಶುದ್ಧಿ, ಭಗವಂತನ ಅರಿವುಗಳನ್ನು ಸಾಧಿಸುವುದೇ ಬದುಕಿನ ಪರಮಗುರಿಯೆಂಬುದನ್ನು ಒತ್ತಿಹೇಳಿದ ಶರಣರು ಸತ್ಯ, ಜ್ಞಾನ, ಶೀಲ ಸಮಾನತೆಗಳನ್ನು ಅಳವಡಿಸಿಕೊಳ್ಳುವುದರಿಂದಲೇ ಬದುಕಿಗೆ ಕಾಂತಿ, ಶಾಂತಿಗಳು ದೊರೆಯುತ್ತವೆಯೆಂದು ತಿಳಿಸಿದ್ದಾರೆ.

"ಸತ್ಯ ಸಹಜವೇ ಸತಿಶೀಲ ಗುಹೇಶ್ವರನನರಿಯಬಲ್ಲವಂಗೆ
ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು; ಲಕ್ಷಕ್ಕೊಮ್ಮೆ
ನುಡಿಯಲಾಗದು;
ಕೋಟಿಗೊಮ್ಮೆ ನುಡಿಯಲಾಗದು"[೪೮]

ಎಂಬ ಮಾತುಗಳೇ ಇಂತಹದಕ್ಕೆ ನಿದರ್ಶನ. ಕಿರುಕುಳ, ವಿಷಯವಾಸನೆ, ಜಾತ್ಯಂಧತೆ, ದುಷ್ಟ-ವ್ಯಸನ, ವೇಷದ ಡಾಂಭಿಕತೆ, ಅಜ್ಞಾನಗಳಿಂದ ದೂರವಿರಿಸಿ ಶಿವಜ್ಞಾನಿಯಾಗುವುದೇ ಜೀವನದ ಶ್ರೇಷ್ಠವಿದ್ಯೆಯೆಂದರು.

"ಜ್ಞಾನಿಯು ಕೂಡೆ ಜ್ಞಾನಿ ಮಾತಾಡುವನಲ್ಲದೆ ಅಜ್ಞಾನಿಯು ಕೂಡೆ
ಜ್ಞಾನಿ ಮಾತಾಡುವನೆ ?" (ಅ.ವ. ೩೧೫)
"ಉಚ್ಚೆಯ ಜವುಗಿನ ಬಚ್ಚಲ ತಂಪಿನಲ್ಲಿ
ನಿಚ್ಚ ನಿಚ್ಚಕ್ಕೆ ಹೊರಳುವ ಹೀಹಂದಿಯಂತೆ,
ಶಿವನಿಚ್ಛೆಯನರಿಯದೆ ಮಾತನಾಡುವರ ಮೆಚ್ಚುವನೆ ನಮ್ಮ
ಗುಹೇಶ್ವರಲಿಂಗವು?" ಅ.ವ. ೩೧೬.

---

೪೫. ಮ. ವ. ೩೨೦
೪೬. ಅ. ವ. ಚಂ. ವ. ೯೧
೪೭. ಅ. ವ. ಚಂ. ೧೩೨.
೪೮. " " ೩೫೮, ೩೨೧.

"ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ;
ಅವು ಜಗಕಿಕ್ಕಿದ ವಿಧಿ ನಿನ್ನೊಡವೆಯೆಂಬುದು ಗುರುಲಿಂಗ ಜಂಗಮಕ್ಕೆ
ದಾಸೋಹ ಮಾಡುವ ಜ್ಞಾನರತ್ನ. ಅಂತಪ್ಪ ದಿವ್ಯರತ್ನವ ಕೆಡಗುಡದೆ
ಆ ರತ್ನವ ನೀನಲಂಕರಿಸಿದೆಯಾದಡೆ ನಮ್ಮ ಗುಹೇಶ್ವರ ಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಾರು ಇಲ್ಲ ಕಾಣಾ ಎಲೆ ಮಗನೆ" ೪೯

ಇಂತಹವೇ ವಚನಗಳು ವಚನಕಾರರು ತಮ್ಮ ಮುಂದಿರಿಸಿಕೊಂಡ ಜೀವನದ ದೃಷ್ಟಿಯನ್ನು ನಿಚ್ಚಳವಾಗಿ ಪಡಿಮೂಡಿಸುತ್ತವೆ; ಅನುಭಾವವನ್ನು ಸುಂದರ ಚಿತ್ರಗಳ ಮೂಲಕ ಚಿತ್ರಿಸುತ್ತವೆ.

ಸಾಹಿತಿ ಸಮಾಜದ ಕೋಟೆಯಲ್ಲಿ ಕಟ್ಟಿದ ಕಾವಲ ಗಂಟೆಯಂತಿರುವವನೆಂದು ತಿಳಿದವರಿದ್ದರೇನು? ಅವನ ಕರ್ತವ್ಯ ಜನರ ಮಧ್ಯೆ ಇದ್ದು ಜನತೆಯ ಕಷ್ಟ ಕಾರ್ಪಣ್ಯವನ್ನರಿಯುವುದರಲ್ಲಿದೆ. ಅವರ ಕಷ್ಟಕಾಲದಲ್ಲಿ ಸಹಾಯಕ ಶಕ್ತಿಯಾಗಿ, ಅವರ ಬಾಳಿಗೆ ದಾರಿದೀಪವಾಗಿ ಕೆಲಸ ಮಾಡಬೇಕು. ಅದರಿಂದ ಅವರ ನಿರಾಶೆ, ಭಯ, ಭ್ರಾಂತಿ ತೊಲಗಬೇಕು. ಅದೇ ನಿಜವಾಗಿಯೂ ಸಾಹಿತಿಯ ಕರ್ತವ್ಯ. ಅಂತಹ ಕರ್ತವ್ಯ ಭಾವನೆಯಿಂದ ಪ್ರೇರಿತರಾಗಿದ್ದಾರೆ ವಚನಕಾರರು. ಉದಾಹರಣೆಗೆ ಈ ಮಾತನ್ನು ಅವಲೋಕಿಸಬಹುದು:

೧) "ಕಾಗೆ ಬಿಚ್ಚಿಸುವ ಹೊನ್ನ ಕಳಶವಹುದರಿಂದ
ಒಡೆಯದು ಬೋಗುಣಿಯ ಕಮ್ಮಾರಗಿಯ ಮಾಡಿದಾತ್ಮ" (ಬ.ವ.೪೭೧)

೨) "ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೇ
ಎಲವೋ ಎಲವೋ ಪಾಪಕರ್ಮವ ಮಾಡಿದವನೇ
ಒಮ್ಮೆ ಶರಣೆನ್ನೆಲವೋ! ಒಮ್ಮೆ ಶರಣೆಂದರೆ ಪಾಪ ಕರ್ಮ
ಓಡುವವು" ೫೦

೩) "ಮನೆಯಾಸೆಗೆ, ಕನಕಾಸೆಗೆ ಕಾಲವ ಕಳೆಯಬೇಡ ;
ಕ್ಷಣಾರ್ಧವಾದಡೆಯೂ ಆಗಲಿ ನಿಜವ ನೆನದೇ ಸಾಕು ;
ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ? ೫೧
ಮಾತಿನಮಾತಿಂಗೆ ನಿಮ್ಮ ಕೊಂಬರೆಂದು ಅಳುಕಿದಡೆ,
ಎಲೆ ದೋತ್ರೇ!
ವೇದವನೋದಿದರ ಮುಂದೆ ರಾಜ್ಯವ ಕೇಳದರ ಮುಂದೆ
ಅಳಲು ಬಂದಾ!
ನಿಃಸತ್ವವಕ್ಕೆ ತಕ್ಕುದ ಮಾಡುವ ಕೂಡಲ ಸಂಗಮದೇವ" ೫೨

೪೯. ಅ. ವ. ಚಂ. ವ. ೭೮೯
೫೦. ಬ. ವ. ೬೨೧.
೫೧. ಅ. ಪು. ಚಂ. ೮೫೫
೫೨. ಬ. ವ. ೫೭೪

ಇಂತಹ ಮಾತುಗಳು ತ್ರಸ್ತ ಜನಾಂಗಕ್ಕೆ ಅಭಯವಾಗಿವೆ. ಹೀಗೆ ಹಲವಂದದಿಂದ ವಿಚಾರಿಸಿ ನೋಡಿದಾಗ ವಚನ ಸಾಹಿತ್ಯದ ಉದ್ದೇಶಗಳು ಸ್ಪಷ್ಟವಾಗುತ್ತವೆ.

ಆತ್ಮದ ಅರಿವು, ಆತ್ಮದ ವಿಕಾಸ, ಸತ್ಯ ಸೌಂದರ್ಯಗಳ ಅರಿವು, ಸಂಸ್ಕೃತಿಯ ಸಾಧನೆ, ಜೀವನ ದರ್ಶನದ ಅರಿವು, ಭಗವಂತನ ಸಾಕ್ಷಾತ್ಕಾರ, ಪರಿಪೂರ್ಣ ಜೀವನ ದೃಷ್ಟಿ, ಧರ್ಮ, ನ್ಯಾಯ, ಶೀಲ, ಸಮತೆ ಇವುಗಳಿಂದ ನಡೆಯಲು ಪ್ರೇರೇಪಿಸುವುದೇ ಉನ್ನತ ಕಲೆಯ ಗುರಿಯಾಗಿದೆ. ಇದೇ ಶ್ರೇಷ್ಠ ಸಾಹಿತ್ಯದ ಉದ್ದೇಶಗಳೂ ಆಗಿವೆ. ವಚನ ಸಾಹಿತ್ಯವು ಇಂತಹ ಗುರಿಗಳನ್ನು ತನ್ನ ಮುಂದಿರಿಸಿಕೊಂಡಿರುವುದರಿಂದ ಅದನ್ನು ಎಂತಹ ಕಲೆ, ಎಂತಹ ಸಾಹಿತ್ಯವೆನ್ನಬೇಕು?[೫೩]

ಸಂಸ್ಕೃತಿಯೆಂದರೆ ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸುವ ಅಂಶವಲ್ಲದೆ ಮಾನವನು ಪರಿಪೂರ್ಣತೆ ಪಡೆಯಲು ಮಾಡುವ ಯತ್ನವೂ ಆಗಿದೆ. ವಚನ ಸಾಹಿತ್ಯವು ಪಾಶವೀ ಗುಣಗಳಿಂದ ಮಾನವನನ್ನು ದೂರವಿರಿಸಿ,*

---

53. "Great art is the arrangement of the environment so as to provide-for the soul vivid, but transient values. Human beings require something which absorbs them for a time, some thing out of the routine which they can stare at But you cannot sub divide life, except in the abstract analysis of thought. Accordingly, the great art is more than a transient refreshment. It is some thing which adds to the permanent richness of soul's self attainment. It justifies itself both by its immediate enjoyment and also by its discipline of the inmost being. Its discipline is not distinct from enjoyment, but by reason of it. It transforms the soul into the permanent realisation of values extending beyond its former self. The element of transition in art is shown by the restlessness exhibited in its history. An epoch gets saturated by the masterpieces of any one style. Somthing new must be discovered. The human being wanders on, yet there is a balance in things. Mere change before the attainment of adequacy of achivement, either in quality or out put, is destructive of greatness. But the importance of a living art, which moves on and yet leaves its permanent marks, can hardly be exaggerated" by A. N. Whitehead, Science and the Modern world' page 252, Cambridge University Press (1953).

* "ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ" ಬ. ವ. ೨೫೮. "ಬೆಳೆಭೂಮಿಯೊಳೊಂದು ಪ್ರಿಯದ ಕಸಹುಟ್ಟಿ, ತಿಳಿಯಲೀಯದು; ಎಚ್ಚರಲೀಯದು; ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗ ತಂದೆ." (ಬ ವ. ೫೦) "ಒಳಗೆ ಕುಟಿಲ: ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ ಒಲ್ಲನಯ್ಯಾ" ಬ. ವ. ೯೬

ಪರಿಪೂರ್ಣತೆ ಪಡೆಯಲು ರೂಪಿಸಿದ ಜೀವನ ಧರ್ಮವಾದುದರಿಂದ ಉದಾತ್ತ ಸಂಸ್ಕೃತಿಯ ದ್ಯೋತಕವೂ ಆಗಿದೆಯೆಂದು ಹೇಳಬಹುದಾಗಿದೆ. ಧರ್ಮ ಸಾಧನೆಗೆ ಶರೀರವೇ ಮೊದಲನೆಯ ಧರ್ಮ ಸಾಧನ; ಆದರಿಂದ ವಚನಕಾರರು ಧರ್ಮ ಸಾಧನೆಗೆ ಶರೀರದ-ಇಂದ್ರಿಯದ ಸುಖವನ್ನು ಅಲ್ಲಗಳೆಯಲಿಲ್ಲ. ಐಹಿಕ ಶಕ್ತಿಯೊಡನೆ ಆಧ್ಯಾತ್ಮ ಶಕ್ತಿ ಬೆಳೆಯಬೇಕು; ಜನರ ಮನಸ್ಸು ಹದಗೊಳ್ಳಬೇಕು; ಆತ್ಮವಿಕಾಸವಿಲ್ಲದವರು ಪುಣ್ಯ ಕ್ಷೇತ್ರಗಳಿಗೆ ಹೋಗಿ ಶುದ್ಧರಾದೆವೆಂಬುದು ಆತ್ಮವಂಚನೆಗೆ ದಾರಿ ಹೇಸಿಯಾದವನು ಕಾಶಿಗೆ ಹೋದರೂ ಅಷ್ಟೇ, ಕೈಲಾಸಕ್ಕೆ ಹೋದರೂ ಅಷ್ಟೇ ಎಂದು ತೀರ್ಮಾನಿಸಿ, ದೇವರ ಹೆಸರಿನಲ್ಲಿ ನಡೆಸುತ್ತಿದ್ದ ವಂಚನೆಯನ್ನು ಖಂಡಿಸಿದುದರಿಂದ ಅವರು ಇಂತು ನುಡಿದಿದ್ದಾರೆ.

೧) "ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಘನವೇನೋ?
...... ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು
(ಅ.ವ.ಸಂ.ವ. ೧೫೨).

೨) "ಇಂದ್ರಿಯ ನಿಗ್ರಹವ ಮಾಡಿದರೆ ಮುಂದೆ ಬಂದು ಕಾಡುವವು
ಪಂಚೇಂದ್ರಿಯಂಗಳು; ಹೊಂದುವವು ದೋಷಂಗಳು"
(ಬ.ವ. ೬೪೦).

೩) "ಒಳಗೆ ತೊಳೆಯಲರಿಯದೆ ಹೊರಗೆ ತೊಳೆದು
ಕುಡಿವುತ್ತಿದರಯ್ಯ!" (ಅ.ವ.ಸಂ.ವ. ೧೬೧).

೪) "ಯಾತ್ರೆ ಯಾತ್ರೆ ಬಂದಡಿಲ್ಲ; ಲಕ್ಷ ಗಂಗೆಯ ಮಿಂದಡಿಲ್ಲ; ತುಟ್ಟ
ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ; ನಿತ್ಯಕ್ಕೆ ನಿತ್ಯಕ್ಕೆ
ಅಂದಂದಿಗೆ ಅತ್ತಲಿತ್ತ ಹರಿವ ಚಿತ್ತವನಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ
ಬೆಳಗು ಗುಹೇಶ್ವರ ಲಿಂಗವು" (ಅ.ವ.ಸಂ.ವ. [illegible]).

ಭಕ್ತರ, ಶರಣರ, ಜ್ಞಾನಿಗಳ ಸಂಗವೇ ಮುಕ್ತಿಗೆ ದಾರಿ ಎಂಬುದು ಅವರ ಭಾವನೆ. ಡಾ. ಕೆ. ವಿ. ಪುಟ್ಟಪ್ಪನವರು ಒಂದೆಡೆ ಇಂತು ನುಡಿದಿದ್ದಾರೆ:

"ನಾನು ಪೂಜೆಯ ಸಲುವಾಗಿ ದೇವಸ್ಥಾನಗಳಿಗೆ ಕೂಡ ಹೋಗದೆ ಕಾಲು ಶತಮಾನಕ್ಕಿಂತಲೂ ಹೆಚ್ಚಾಯಿತೆಂದು ತೋರುತ್ತದೆ. ಪಂಚಾಂಗ ಇತ್ಯಾದಿಗಳ ಕಡೆ ಎಂದೆಂದೂ ಮನಸು ಹಾಕಿದವನಲ್ಲ; ನನಗೆ ರಾಹುಕಾಲ ಗುಳಿಕಕಾಲಗಳ ಅರ್ಥವೇ ಗೊತ್ತಿಲ್ಲ; ಪಿತೃಗಳಿಗೆ ಶ್ರಾದ್ಧ ಮಾಡುವುದು, ಪಿಂಡ ಅರ್ಪಿಸುವುದು ಇತ್ಯಾದಿಗಳನ್ನು ಕೇಳಬಲ್ಲೆನೇ ಹೊರತು ಮಾಡುವ ಗೋಜಿಗೆ ಹೋದವನಲ್ಲ"
(ಷಷ್ಠಿನಮನ ಪುಟ ೮೮; ೧೯೬೪)

ಈ ಮಾತುಗಳು ಶರಣ ಸಾಹಿತ್ಯವನ್ನರಿತವರಿಗೆ ಸುಲಭವಾಗಿ ಅರ್ಥವಾಗುತ್ತವೆಯಲ್ಲದ ಶರಣಮಾರ್ಗಾನುಸರಣೆಯ ನಿಜಾಚರಣೆಯನ್ನು ಎತ್ತಿತೋರಿಸುತ್ತವೆ.

ಶರಣ ಸಾಹಿತ್ಯವು ನೇರವಾಗಿ ಜೀವನಕ್ಕೆ ಸಂಬಂಧಿಸಿದುದು. ಜೀವನವನ್ನು ಸುಂದರವಾಗಿರಿಸಿಕೊಳ್ಳಲು ವಚನಕಾರರು ಯತ್ನಿಸಿದ್ದಾರೆ. ಸಂತೋಷ ದಾಯಕವಾದ ವಸ್ತುಗಳನ್ನು ಸುಂದರವೆಂದೂ ಸಂತೋಷಕರವಲ್ಲದ ವಸ್ತುಗಳನ್ನು ಸುಂದರವಲ್ಲವೆಂದೂ ಹೇಳುತ್ತೇವೆ; ಅದು ಸುಖರೂಪವಾದ ವೇದನೆ. ಇದು ಲಭಿಸುವುದು ಕಲಾದೃಷ್ಟಿಗೆ. ಭಾರತೀಯರಲ್ಲಿ ಸತ್ಯ – ಸೌಂದರ್ಯ – ಶಿವ ಈ ಮೂರೂ ಭಗವಂತನ ಮೂರು ಮುಖಗಳಿದ್ದಂತೆ; ಅವೆಲ್ಲ ಒಂದೇ ಎಂಬ ಭಾವನೆಯಿದ್ದುದರಿಂದ ಸೌಂದರ್ಯಾನುಭವವು ಪರಮಾತ್ಮನ ಸಾಕ್ಷಾತ್ಕಾರವೂ ಅಹುದು. ಈ ಅರ್ಥದಲ್ಲಿ ರಾಘವಾಂಕ ಕವಿಯು "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂದಿರುವುದು: ಆದುದರಿಂದ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ಪಡೆವ ಆನಂದವು ಸೌಂದರ್ಯಾನುಭವವಲ್ಲದೆ ಬೇರೆ ಅಲ್ಲ. ಆ ಸೌಂದರ್ಯಾನುಭವದ ಪರಿ ನಾಲ್ಕು : ಅ) ಇಂದ್ರಿಯ ಸೌಂದರ್ಯ– ವಸ್ತುವಿನ ಬೆಡಗಿಗೆ ಮಾರುಹೋಗಿ ಪಡೆವ ಇಂದ್ರಿಯ ತೃಪ್ತಿ : ಆ) ಕಲ್ಪನಾಸೌಂದರ್ಯ– ಮಾನಸಿಕವಾಗಿ ಯಾವುದೋ ಒಂದು ವಸ್ತುವನ್ನು ಊಹಿಸಿ ಪಡೆವ ಮಾನಸಿಕ ತೃಪ್ತಿ ; ಇ) ತಾತ್ತ್ವಿಕ ಸೌಂದರ್ಯ – ಎಲ್ಲ ಚೆಲುವುಗಳಿಗೆ ಮೂಲವಾದ ತತ್ತ್ವವನ್ನು ಕಂಡು ಅನುಭವಿಸುವ ಆನಂದ ಮತ್ತು ಈ) ಆತ್ಮ ಸೌಂದರ್ಯ – ಅನುಭಾವಿಯಾಗಿ ಪರಮಸತ್ತ್ವದ ಒಂದು ನೋಟ, ಇಲ್ಲವೆ ಸ್ಪರ್ಶವನ್ನು ಪಡೆದು ಅನುಭವಿಸುವ ಆನಂದ. ಇಲ್ಲಿ ಬಾಹ್ಯ ಸೌಂದರ್ಯಕ್ಕಿಂತ ಆಂತರಿಕಕ್ಕೇ ಮಹತ್ವ ಹೆಚ್ಚು. 'ಕಾಂತಿ', 'ಚೆಂದ', 'ಚೆಲುವು' ಎಂಬ ಪದಗಳೂ ಆ ಸೌಂದರ್ಯಸೂಚಕ ಪರ್ಯಾಯ ಪದಗಳು. ವಚನಕಾರರು 'ಚೆನ್ನ' ಎಂಬ ಪದವನ್ನೂ ಈ ಅರ್ಥದಲ್ಲಿಯೇ ವಿನಿಯೋಗಿಸಿದ್ದಾರೆ. ವಸ್ತುಗಳು ವಸ್ತುಗಳಾಗಿ ಕಾಣದೆ ಅವುಗಳ ಹಿಂದೆ ಅಡಗಿರುವ ದೈವೀ ಕಳೆ, ತೇಜಸ್ಸು ಕಾಣುವ ದೃಷ್ಟಿ, ಸೌಂದರ್ಯದೃಷ್ಟಿಯಲ್ಲದೆ ಇನ್ನೇನು? ವಚನಕಾರರು ವಸ್ತು–ವ್ಯಕ್ತಿಗಳನ್ನು ಕಂಡಾಗ ತಮಗಾದ ಅಪಾರ ದೈವೀಶಕ್ತಿಯ ಅನುಭವವನ್ನು ಇಂತು ನಿವೇದಿಸಿದ್ದಾರೆ. ಉದಾಹರಣೆಗೆ ಈ ಕೆಲವು ಉಕ್ತಿಗಳನ್ನು ಪರೀಕ್ಷಿಸಬಹುದು.

ಅ) "ಈಳೆ, ನಿಂಬೆ, ಮಾವು, ಮಾದಲಕ್ಕೆ ಹುಳಿ ನೀರನೆರೆದವರಾರಯ್ಯಾ?
ಕಬ್ಬು, ಬಾಳೆ, ಹಲಸು, ನಾರಿವಾಳಕ್ಕೆ ಸಿಹಿ ನೀರನೆರೆದವರಾರಯ್ಯಾ?
ಮರುಗ, ಮಲ್ಲಿಗೆ, ಪಚ್ಚೆ, ಮುಡಿವಾಳಕ್ಕೆ ಪರಿಮಳದುದಕವ –
ನೆರೆದವರಾರಯ್ಯಾ?
....ಚೆನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ!"
(ಮ. ವ. ೪).

ಆ) " ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡೆ ಚೆನ್ನ!
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ!" (ಜ.ವ. ೭೯೪,).

ನಡೆ – ನುಡಿ ಪರುಷುವಾದವರ ಜೀವನವು, ಭಗವಂತನ ಅನುಗ್ರಹಕ್ಕೆ ಪಾತ್ರ-ರಾದವರ ಜೀವನವು ಸುಂದರವಲ್ಲದೆ ಇನ್ನೇನು? ಅಕ್ಕಮಹಾದೇವಿಯ "ವನವೆಲ್ಲ ನೀನೆ; ವನದೊಳಗಣ ದೇವತರುವೆಲ್ಲಾ ನೀನೆ; ತರುವಿನೊಳ-ಗಾಡುವ ಖಗಮೃಗವೆಲ್ಲಾ ನೀನೆ;" "ವನವೆಲ್ಲಾ ಕಲ್ಪತರು; ಶಿಲೆಗಳೆಲ್ಲಾ ಪರುಷ; ಎಡಹುವ ಹರಳೆಲ್ಲಾ ಚಿಂತಾಮಣಿ;" (ಮ. ವ. ೩೩೬, ೩೩೭) ಎನ್ನುವ ವಚನಗಳೆಲ್ಲವೂ ಈ ವರ್ಗಕ್ಕೇ ಸೇರಿದ ಮಾತುಗಳಾಗಿವೆ. 'ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯು;" ಲಿಂಗಾನುಭಾವದಿಂದ ಭಗವಂತನನ್ನು ಕಂಡು ತಮ್ಮನ್ನು ಮರೆದವರು ಶಿವಶರಣರು. ಅವರು ಕಲಾನಿರ್ಮಿತಿಗೆ ದೇವಾಲಯು ರಚಿಸಿರಲಿಕ್ಕಿಲ್ಲ. ಆದರೆ ದೇಹವನ್ನೇ ದೇವಾಲಯುವಾಗಿ ಪರಿ-ವರ್ತಿಸಬೇಕೆಂದರು.

[೭]

ವಚನ ಸಾಹಿತ್ಯವು ಅನುಭಾವ ಪ್ರಧಾನ ಸಾಹಿತ್ಯವೆಂದು ಈ ಮೊದಲೆ ವಿವರಿಸಲಾಗಿದೆ. ಆದುದರಿಂದ ವಚನಕಾರರ ಮಾತಿನಲ್ಲಿ ಅನುಭಾವವೆಂದರೇ-ನೆಂಬುದನ್ನು ಇಲ್ಲಿ ವಿವರಿಸಿ ಈ ಲೇಖನ ಮುಗಿಸಬಹುದಾಗಿದೆ. ಅದು ಕೆಲವೆಡೆ 'ಭಕ್ತಿ' ಎಂಬ ಪದಕ್ಕೆ ಸಮಾನವಾದುದು ಎಂಬ ಭಾವನೆ ಬರುವಂತಿದೆ:

" ಭಕ್ತಿಗೆ ಅನುಭಾವವೇ ಬೀಜಕಾಣಿರೋ
ಭಕ್ತಿಗೆ ಅನುಭಾವವೇ ಆಚಾರ ಕಾಣಿರೋ
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು"

(ಚ.ಬ.ವ. ೮೪೦)

" ಅನುಭಾವವೆಂಬುದು ನೆಲದ ಮಱೆಯ ನಿಧಾನ; ಕಿರುಕಂಡ ಕನಸು!
ಅನುಭಾವವೆಂಬುದು ರಚ್ಚೆಯ ಮಾತೆ? ಸಂತೆಯ ಸುದ್ದಿಯೇ?
ಬೀದಿಯ ಪಸರವೇ? ಎನೆಂಟೆ ಹೇಳಾ ಮಹಾಘನವನು?
ಕಂಡಕಂಡಲ್ಲಿ ಗೋಷ್ಠಿ, ಸಿಂದಸಿಂದಲ್ಲಿ ಅನುಭಾವ, ಬಂದಬಂದಲ್ಲಿ ಪ್ರಸಂಗವ ಮಾಡುವ
ಪಾತಕರ ತೋಱದಿರಯ್ಯಾ! (ಚ.ಬ.ವ. ೮೪೧)

ಅನುಭಾವಿಗಳ ಸಂಗ ಅಗ್ನಿಯ ಸಂಗದಂತೆ; ಪರುಷದ ಸ್ಪರ್ಶದಂತೆ. ಈ ಅನುಭಾವಿಗಳ ಅನುಭಾವದ ನುಡಿಗಳಲ್ಲಿ ವಿಷಯಸುಖವಿಡಿದುಬಂದ ಲೌಕಿಕ ಅರಿಷಡ್ವರ್ಗಗಳಿಗಾಗಲಿ, ವ್ಯಾಮೋಹಗಳಿಗಾಗಲಿ, ಆಸೆದುರಾಸೆಗಳಿಗಾಗಲಿ ಎಡೆ ಇಲ್ಲ.

ಪರಮಾತ್ಮನೇ ಪತಿಯಾಗಿ ಆತ್ಮನೇ ಸತಿಯಾಗಿ ಪರಮಾನಂದವನ್ನು ಪಡೆವ ಬಗೆಯನ್ನು ಏನೆಂದು ವರ್ಣಿಸಬೇಕು ? " ಆಸೆಯೇ ದಾಸತ್ವ, ನಿರಾಶೆಯೇ ಈಶತ್ವ" ವೆಂದಿದ್ದಾನೆ ಉರಿಲಿಂಗ ಪೆದ್ದಿ. " ಒಂದಾಸೆಗೆ ಸಾಸಿರ ವರುಷ ನರಕ " ಎಂದಿದ್ದಾನೆ ಬಸವಣ್ಣ. " ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವ ; ಕಾಯಗೊಂಡು ಹುಟ್ಟಿದ ಮನದ ಮೂಢರೆಲ್ಲ ಸಾಯದ ಸಂಜೀವನಜೀವುದೇ ಚೆಲುವ " ಎಂದಿದ್ದಾರೆ ಪ್ರಭುದೇವರು. " ಮಣ್ಣ ಕಳೆದು ಮಡಿಕೆ ಇಲ್ಲ ; ತನ್ನ ಕಳೆದು ಜಗವಿಲ್ಲ " ಎಂದಿದ್ದಾನೆ ಚಂದಿಮರಸ. ಈ ಎಲ್ಲ ಮಾತುಗಳನ್ನು ಗಮನದಲ್ಲಿರಿಸಿಕೊಂಡು ಅನುಭಾವವೆಂದರೇನೆಂಬುದನ್ನು ಇಂತು ಸಂಗ್ರಹಿಸಿ ಹೇಳಬಹುದು.

ಅನುಭಾವವೆಂಬುದು ಆತ್ಮವಿದ್ಯೆ; ಅಂತರಂಗದ ರತ್ನ; ತಾನಾರೆಂಬುದನರಿವುದು; ರತ್ನದ ಶಿಲೆಯ ತಗೆದು ಕಾಂತಿಯ ಕಾಣಬಹುದೇ ? ಅಂತೆಯೇ ಲಿಂಗವಿಲ್ಲದೆ ಅಂಗವನರಿಯಬಹುದೇ ಎಂದಿದ್ದಾರೆ ಶರಣರು. ಲಿಂಗದಲ್ಲಿ ನಟ್ಟಿರುವ ದೃಷ್ಟಿಯಿಂದಾಗಿ ತನುಮನಗುಣಾದಿಗಳೆಲ್ಲ ದಹಿಸಿ ಭೌತಿಕ ಗುಣಧರ್ಮವಿಲ್ಲದ ವ್ಯಕ್ತಿ ಲಿಂಗಾನುಭಾವಿಯಾಗುವುದೇ ಅನುಭಾವ. ವಿಷಯವ ಬಿಟ್ಟು ನಿರ್ವಿಷಯಿಯಾಗುವುದೇ ಅನುಭಾವ. ಆತ್ಮವಿಕಾಸ ಭಗವಂತನ ಸಾಕ್ಷಾತರವೇ ಅನುಭಾವ. ಮಹಾನಂದದೊಳಗೆ ಓಲಾಡುವುದೆ ಅನುಭಾವ. ಈ ಅನುಭಾವವೇ ಶರಣರು ಮೋಕ್ಷವ ಪಡೆಯಲು ಬಳಸಿಕೊಂಡ ಮಾರ್ಗ; ಅವರ ನುಡಿಗಣವೇ ದೀಪ್ತಿಮಯ ವಚನ. ಇಲ್ಲಿ ನುಡಿಗಿಂತ ನಡೆಗೆ ಅಧಿಕಪ್ರಾಶಸ್ತ್ಯವಿತ್ತುದೊಂದು ವಿಶೇಷ. 'ಅಲ್ಲಿ' 'ಇಲ್ಲಿ' ಎಂಬ ಭೇದ ಮಾಡದೆ ಎಲ್ಲೆಲ್ಲಿಯೂ ಭಗವಂತನನ್ನು ಕಾಣಲು ಹಂಬಲಿಸಿದವರ ನುಡಿಗಡಣವೇ ವಚನ ಸಾಹಿತ್ಯ. ಇದರಿಂದ ಭಾವವು ನಿರ್ಮಲವಾಗಿ, ಬುದ್ಧಿಯು ಬೆಳಗಿ, ಪರಮಾನಂದವಾಗುತ್ತದೆ. ಸಾಹಿತ್ಯಕ್ಕೆ ಗದ್ಯಪದ್ಯವೆಂಬ ವಿಂಗಡನೆ ಮುಖ್ಯವಲ್ಲ; ಶ್ರೀಮಂತವಾದ ವಿಚಾರಗಳು ಮುಖ್ಯವಾಗಿವೆ. ಇಂದು ನಾವು ಗದ್ಯಮಯವಾಗಿರುವದನ್ನು ಮಾತ್ರ " ವಚನಸಾಹಿತ್ಯ "ವೆನ್ನುವ ಭಾವವನ್ನು ತಳೆದಿರುತ್ತೇವೆ; ಆದರೆ ಗದ್ಯ, ಪದ್ಯ, ಹಾದು (ಗೀತ) ಎಲ್ಲವನ್ನೂ ಸೂಚಿಸುವ ವಿಶಾಲಾರ್ಥದ ಪದವೆಂಬುದನ್ನು ಮರೆಯುವಂತಿಲ್ಲ.

ಇಲ್ಲಿ ಬಳಸಿಕೊಂಡಿರುವ ಗ್ರಂಥಗಳು

೧) ಬ. ವ. = ಬಸವಣ್ಣನವರ ವಚನಗಳು ಸಂ. ಶಿ. ಶಿ. ಬಸವನಾಳ (೧೯೫೧)
೨) ದೇ.ದಾ.ವ. = ದೇವರ ದಾಸಿಮಯ್ಯನ ವಚನಗಳು ,, ಫ. ಗು. ಹಳಕಟ್ಟಿ (?)
೩) ಚ.ಬ.ವ. = ಚನ್ನಬಸವಣ್ಣನವರ ವಚನಗಳು ,, ಡಾ. ಆರ್. ಸಿ. ಹಿರೇಮಠ (೧೯೬೫)
೪) ಸಿ.ರಾ.ವ. = ಸಿದ್ಧರಾಮೇಶ್ವರನ ವಚನಗಳು ,, ,, (೧೯೬೮)

೫) ಅ.ವ.ಚಂ. =	ಅಲ್ಲಮನ ವಚನ ಚಂದ್ರಿಕೆ	ಸಂ.	ಡಾ. ಎಲ್. ಬಸವರಾಜು (೧೯೬೦)
೬) ಆ. ವ. =	ಆದಯ್ಯನ ವಚನಗಳು	,,	ಚ. ಉತ್ತಂಗಿ (೧೯೫೭)
೭) ತೋಂ. ಸಿ. ಶಿ. ವ. =	ತೋಂಟದ ಸಿದ್ಧಲಿಂಗ ಶಿವಯೋಗಿಯ ವಚನಗಳು	,,	ಡಾ. ಆರ್. ಸಿ. ಹಿರೇಮಠ (೧೯೬೪)
೮) ಹಾ. ಕ. ವ. =	ಹಾವಿನಾಳ ಕಲ್ಲಯ್ಯನ ವಚನಗಳು	,,	ಫ. ಗು. ಹಳಕಟ್ಟಿ (?)
೯) ಮ. ಮಾ. ದೇ. ವ. =	ಮಡಿವಾಳ ಮಾಚಿದೇವನ ವಚನಗಳು	,,	,, (೧೯೩೯)
೧೦) ಕ. ರಾ. ಮಾ. =	ಕವಿರಾಜ ಮಾರ್ಗಂ	,,	ಎಂ. ವಿ. ಸೀತಾರಾಮಯ್ಯ (೧೯೬೮)
೧೧) ಮ. ವ. =	ಮಹದೇವಿಯಕ್ಕನ ವಚನಗಳು	,,	ಡಾ. ಆರ್. ಸಿ. ಹಿರೇಮಠ (೧೯೬೮)
೧೨)	ಸೌಂದರ್ಯ ಸಮೀಕ್ಷೆ	ಲೇ.	ಜಿ. ಎಸ್. ಶಿವರುದ್ರಪ್ಪ (೧೯೬೫)
೧೩)	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ	,,	ಚಿದಾನಂದಮೂರ್ತಿ (೧೯೬೬)
೧೪)	ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು	ಸಂ.	ಚೆನ್ನಪ್ಪನವರು ಉತ್ತಂಗಿ ಮತ್ತು ಸಂ. ಶಿ. ಭೂಸನೂರಮಠ (೧೯೫೦)

★ ಬಿ. ಸಿ. ಜವಳಿ

ಬೆಂಕಿ ಆರಿ ಬಂಗಾರವಾಯ್ತು

ನಮಾಜ ಮಾಡಾಕ ಹೋದಾಗ
(ಅಲ್ಲಾ ನೋಡಾಕ ಹೋದಾಗ)
ಮಶೀದಿ ಕೊಳ್ಳಿಗಿ ಬಿತ್ತು!
ಬಿದ್ದರ‍್ಯಾಕ ಬೀಳವೊಲ್ಲದು,
ತುಪ್ಪ ರೋಟ್ಯಾಗ ಬಿದ್ದಾಂಗಾತು!

ಅಲ್ಲಾ ಅಂದ್ರೂ ಇಲ್ಲಾ
ಇಲ್ಲಾ ಅಂದ್ರೂ ಎಲ್ಲಾ
ಕೊಟ್ಟ ಬಿಟ್ಟ ಮುಲ್ಲಾ
ಕೈಯ್ಯಾಗ ಖೊಬ್ರಿ ಬೆಲ್ಲಾ!

ಓಡಿ ಬಂದ ಬೆನ್ನಿಗಿ ಬಿದ್ರ
ಬಿಡೂದ ಹ್ಯಾಂಗ?
ಕೂಳಾ–ನೀರಾ–ನೆಳ್ಳಾ ಕೊಡದ
ಇರೂದ ಹ್ಯಾಂಗ?

"ಮನೀ ಮಂದೀ ಹೊಟ್ಟಿಗೇ
ಸಾಕಾಗವೊಲ್ಲದು"
ಇದೆಲ್ಲಿ ಬ್ಯಾತಾಳ ಬಂದ
ಹೊರಸಲಾ ಹೊಕ್ಕಿತೋ!' –
ಅಂದ್ರೇನ ಚೆಂದ? – ಅಂತ
ತಾಳಿ ಬಾಳೂದ ಭೇಸಿ! – ಅಂತ
ಉಗುಳ ನುಂಗಿ ನುಂಗಿ
ಗಂಟಲ ಬಾತರೇನಾತು?
ಕುರುವಿನ ಬಾವ ಒಡದ ಸೋರಿ ಹೋತು!

"ಗಂಡಾ – ಹೆಂಡರ ಜಗಳದಾಗ
ನೀಯಾಕ ಹಣಿಕಿ ಹಾಕೀದೀ? –'"
ಅಂತ ಬುದ್ಧೀ ಹೇಳಿದ ಮಂದಿ
ಕಣ್ಣ ಮ್ಯಾಗ ಕೌದೀ ಎಳಕೊಂಡ
ನಿದ್ದೀ ಹೊಡದರ ಮಾಡೂದೇನು?
ಸುಮ್ಮ ನಿಂತ ನೋಡೂದು?

ಛೇ!
ಇದ ಬರೀ ಗಂಡಾ ಹೆಂಡರ
ಜಗಳ ಅಲ್ಲಪೋ!
ಉಂಡ ಮಲಗಿದ ವ್ಯಾಲೂ
ಮುಗೀಲಿಲ್ಲಪೋ!
ಕುತಿಗೀ ಹಿಸಕಾಕ ಹತ್ಯಾನ!
ಹೋಯ್ಕೊ ಬಡಕೋ ನಡದೈತಿ!

ಅನೂ ಆಪತ್ತಿನ್ಯಾಗ ಆಗದಿದ್ರ
ನೆರೀ ಹೊರೀ ಆಗೂದ್ಯಾವಾಗ?
ದೊಡ್ಡ ದೊಡ್ಡ ಹೊಟ್ಟೆವರ,
ಬಿಡಸಾಕ ಬರ್‍ರಿಪೋ ನೀವೂ!–
ಮಾತ ಯಾರ ಕೀವಿ ಸೇರಲಿಲ್ಲಾ
ಜಗಳಕ್ಕ ಯಾರ ಎದೀ ಕರಗಲಿಲ್ಲಾ!

ನಮ್ಮದು ಹೇಳಿ ಕೇಳಿ ನೆರೀಮನಿ!
ಗದ್ದಲದಾಗ ಹೋಗದಿದ್ರೂ
ಗದ್ದಲ ತಾನss ಬಂದು
ನಮ್ಮ ಮನ್ಯಾಗ ಬೀಳದ ಬಿಟ್ಟೀತೇನು?

ಬಿತ್ತು!
ಬಂದ ಬಿತ್ತು!
ಹರಕೊಂಡ ಬಿದ್ದss ಬಿಟ್ಟಿತು!
(ಬೆಣ್ಣಿ ಗಡಿಗಿ?)
ಕೆಸರ ಹೆಡಿಗಿ!
ಅಲ್ಲಾ, ಬೆಂಕೀ ಅಗ್ಗಿಷ್ಟಿಗಿ!

ಕಣ್ಣ ಒರೆಸಾಕ ಹೋದ್ರ
ಕರಕೊಂಡ ಹೋಗಂತ
ಡಾಳೂ ಡಬ್ಬೂ ಹೊಡದ ಹಚ್ಚಬೇಕ?
"ತಲ್ಲಾಖ ಬೇಡಾಕ ಬಂದೀ?" - ಅಂತ
ಮಾರಿಗಿ ಕೊಳ್ಳೀ ತಿವೀಬೇಕ?

ಉರಿ ಉರಿ!
ಒಳಗೂ ಹೊರಗೂ ಹೊಗೀಧಗಿ!

ಕೆಂಡ ಕಿಚ್ಚ ಹಬ್ಬಿ ಹರವೇತಿ !
ಜೆಟ್ಟ ಜುಟ್ಟ ಹಾರ್‍ಯಾಡಿದುವು !
ಟ್ಯಾಂಕ ಟೊಂಕ ತಿಕ್ಕ್ಯಾಡಿದುವು
ಬೆಂಕೀ ಮಳೀ ಸುರದsi ಸುರೀತು !
ನೀರ ನೀರೆಲ್ಲಾ ಉರದsi ಉರೀತು !
ಥಕ ಪಕಾ ಹೆಣದ ಕೂಳ ಕುದೀತು

ಹುಲಿ – ಇಲೀ ಹಿಂಡ
ಒಟ್ಟಿಗೇ ಸುಟ್ಟ ಕರಕ ಆತು !
ಕಾಗಿ – ಗೂಗೀ ಹಿಂಡ
ರೆಕ್ಕೀ ಮುರಕೊಂಡ ಬಲ್ಯಾಗ ಬಿತ್ತು !

ಕೋಳಿ ಕೂಗಿತು ;
ಕಮುಕಾಳ ಕತ್ತಲಿ ಹೋಗಿ ಬೆಳಕಾತು !
ಸುರ್‍ಯಾ ಮೂಡಿ ಬಂದ !
ತಂಪ ಗಾಳಿ ಬೀಸಾಕ ಹತ್ತಿತು !
ಬೆಂಕಿ ಆರಿ ಬಂಗಾರ ಆಯ್ತು
ಹಕ್ಕೀ ಹಾಡು ಉಕ್ಕಿ ಬಂತು !
ಹಸರ ಬಾವುಟ ಹಾರ್‍ಯಾಡಿತು !
ಗೆಲವಿನ ಗುಲ್ಲೆದ್ದು
ಜಗದ ಕಿವೀ ತುಂಬಿ ಹೊರಚೆಲ್ಲಿತು !

★ ಭುಜೇಂದ್ರ ಮಹೀಶವಾಡಿ.

ಕನ್ನಡ ಸಾಹಿತ್ಯದಲ್ಲಿ ನವ್ಯಪ್ರಜ್ಞೆ

(ಒಂದು ಸಮೀಕ್ಷೆ)

[೧]

'ಕನ್ನಡ ಸಾಹಿತ್ಯದಲ್ಲಿ ನವ್ಯಪ್ರಜ್ಞೆ' ಶೀರ್ಷಿಕೆಯು 'ನವ್ಯ' ಎಂಬ ಪದದ ಬಳಕೆಯೇ ಈಗಿನ ಸಂದರ್ಭಗಳಲ್ಲಿ ಕೆಲವು ಸಂಕೋಚಗಳಿಗೆ ಈಡು ಮಾಡುವಂತಹ ದಾಗಿದೆ. ಏಕೆಂದರೆ, ಈಗಾಗಲೇ ಕನ್ನಡ ಸಾಹಿತ್ಯದ ಈ ಹೊಸ ಸಂಪ್ರದಾಯದಲ್ಲಿ ಅನೇಕ ಸೃಜನಾತ್ಮಕ ಪ್ರತಿಭಾಶಾಲಿಗಳಿಂದ ಉತ್ತಮ ಮಟ್ಟದ ಕೃತಿಗಳು ನಿರ್ಮಾಣ ಗೊಂಡಿವೆ. ತನ್ನ ಅಸ್ತಿತ್ವಕ್ಕೆ ಈ ಹೊಸ ಸಂಪ್ರದಾಯ, ಭದ್ರವಾದ ಅಡಿಪಾಯವನ್ನೇ ಹಾಕಿಕೊಂಡಿದೆ. ವಸ್ತುಸ್ಥಿತಿ ಹೀಗಿದ್ದರೂ, ಅನೇಕ ಬುದ್ಧಿಶಾಲಿಗಳು ಉದ್ದೇಶಪೂರಕ ವಾಗಿಯೊ, ತಿಳಿಯದೆಯೊ,–ಯಾವುದೇ ಸಾಹಿತ್ಯಸಂಪ್ರದಾಯದ ಆರಂಭಾವಸ್ಥೆಯಲ್ಲಿ-ರಬಹುದಾದ ಸ್ವಾಭಾವಿಕ ದೋಷಗಳನ್ನೇ ವಿಪರೀತವಾಗಿ ಬೃಹತ್ತೀಕರಿಸಿ–ಆಕ್ಷೇಪಿಸು ತ್ತಿರುವುದು; ಮತ್ತು ಅಂಥ ಆಕ್ಷೇಪಣೆಗಳು ಮುಂದುವರಿಯುತ್ತಿರುವುದು ಸಾಮಾ ನ್ಯವಾಗಿ ಬಿಟ್ಟಿದೆ. ಇದರ ಒಟ್ಟು ಪರಿಣಾಮ: ಸಾಮಾನ್ಯ ವಾಚಕರು ಈ ನವ್ಯ ಪದವನ್ನೇ ಸಂಶಯದ ದೃಷ್ಟಿಯಿಂದ ಕಾಣುತ್ತಿರುವ ಒಂದು ಅಸಹಾಯಕ ಕಳಕಳಿಯ ಚಿತ್ರವೇ ನಮ್ಮ ಕಣ್ಣೆದುರು ಬರುತ್ತದೆ. ನವ್ಯ ಪ್ರಜ್ಞೆಯ ಈ ಭರ್ತ್ಸನೆಯಲ್ಲಿ, ತಮ್ಮ ಸೃಷ್ಟ್ಯಾತ್ಮಕ ಕುದಿ ಕಮರುತ್ತಿರುವ ಇಳಿಗಾಲದಲ್ಲಿರುವ ಕೆಲವೊಂದಿಷ್ಟು ಹಳೆಯ ಸಂಪ್ರದಾಯದ ಲೇಖಕರ ಮತ್ತು ಅವರ ವಿಮರ್ಶಕರ ಪಾತ್ರ ದೊಡ್ಡದು. ತಮ್ಮ ಅಸ್ತಿತ್ವವನ್ನು ವಾಚಕರಲ್ಲಿ ಇನ್ನೂ ಹಸಿರಾಗಿರಿಸುವ ಒಣ ಹಟಕ್ಕಾಗಿ ಈ ಹೊಸ ಸಂಪ್ರದಾಯವನ್ನೇ, ಅದರ ಹುಟ್ಟಿನಿಂದಲೂ, ಪೂರ್ವಗ್ರಹಪೀಡಿತರಾಗಿ, ಪ್ರತಿ ಕ್ರಿಯೆಗಳನ್ನು ನೀಡುತ್ತ ಬಂದು, ನವ್ಯ ಪದದ ಸುತ್ತ ಹಬ್ಬಿದ ವಾತಾವರಣವನ್ನೇ ಕಲುಷಿತಗೊಳಿಸಲು ಈ ಅನೇಕರು ಯತ್ನಿಸುತ್ತಿದ್ದಾರೆ. ಆದರೆ, ಇಂಥ ಅತಾತ್ತ್ವಿಕ ಪ್ರತಿಕ್ರಿಯೆಗಳಿಗೆ ಉತ್ತರರೂಪವಾಗಿ ಏಷ್ಟೊಂದು ಸಮೃದ್ಧವಾದ, ಕೌಶಲಪೂರ್ಣವಾದ ಸಮಕಾಲೀನ ಪ್ರಜ್ಞೆಯ ಸಾಹಿತ್ಯವನ್ನು 'ನವ್ಯ'ವೆಂದು ಗುರುತಿಸಲ್ಪಡುವ ಲೇಖಕರು ಸೃಜಿಸಿದ್ದಾರೆಂಬುದನ್ನು ಈ ಸಮೀಕ್ಷೆಯಲ್ಲಿ ನೋಡಬಹುದಾಗಿದೆ.

ಇನ್ನೊಂದು ದೃಷ್ಟಿಯಲ್ಲಿ ಸು. ೩೦ ವರ್ಷಗಳಿಂದ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ಕೊಡುತ್ತಿರುವ ಹೆಚ್ಚು ಕ್ರಿಯಾಶೀಲ ಬರಹಗಳನ್ನು ನೀಡುತ್ತಿರುವ, ಈ ನವ್ಯಪ್ರಜ್ಞೆಯ ಹುಟ್ಟು ಹಾಗೂ ಅಸ್ತಿತ್ವವನ್ನು ಕುರಿತು, ನಮ್ಮ ಬದುಕಿನೊಂದಿಗಿನ ಅದರ ಆಂತರಿಕ ಹೊಂದಾಣಿಕೆಯನ್ನು ಕುರಿತು, ಕೆಲವು ವಿಮರ್ಶಕ ವಲಯ್ಯರಲ್ಲಿ ಇನ್ನೂ ಚರ್ಚೆ ನಡೆಯುತ್ತಿರುವುದು ಅಸಂಗತವೆನಿಸುತ್ತದೆ. 'ನವ್ಯ ಪ್ರಜ್ಞೆ ನಮ್ಮ ನೆಲದ್ದೇ?', 'ಅದೀಗ ಆಂತರಿಕ ಆವಶ್ಯಕತೆಯೇ ?', 'ಜನಸಾಮಾನ್ಯರಿಗೂ ನಿಲುಕುವಂತಹದೆ ?' ಇತ್ಯಾದಿ ಪ್ರಶ್ನೆಗಳನ್ನು ಇನ್ನೂ ಹೇರಿಸುತ್ತಿರುವುದು ತುಂಬ ಹಾಸ್ಯಾಸ್ಪದವಾಗಿ ತೋರುತ್ತದೆ.

ಪರಿಸ್ಥಿತಿ ಹೀಗಿರುವುದನ್ನು ತಮ್ಮೆಲ್ಲರ ಅವಗಾಹನೆಗೆ ತಂದ ಮೇಲೆಯೂ, ಕೆಲವು ಜನರ ತಿಳುವಳಿಕೆಗಾದರೂ, ಕನ್ನಡ ಸಾಹಿತ್ಯದಲ್ಲಿ, ನವೋದಯ ಸಾಹಿತ್ಯದ ನಂತರದಲ್ಲಿ ಬಂದ 'ನವ್ಯಪ್ರಜ್ಞೆ'—(ಈ ಪದವನ್ನು ನಾನು ಉಪಯೋಗಿಸದೇ ಇರಬಹುದಾಗಿತ್ತಾದರೂ, ಹೊಸ ಮಾರ್ಗವನ್ನು ತಟ್ಟನೆ ಗುರುತಿಸುವ ಅನುಕೂಲಕ್ಕಾಗಿ ಮಾತ್ರ 'ನವ್ಯ' ಪದವನ್ನು ಬಳಸುತ್ತೇನೆ.)–ಯ ಆವಶ್ಯಕತೆಯನ್ನು ಒಂದೆರಡು ಅಂಶಗಳಲ್ಲಿ ಸ್ಪಷ್ಟೀಕರಿಸುತ್ತೇನೆ.

ಸಂ. ೫೦ ವರ್ಷಗಳ ಹಿಂದೆ, ನವೋದಯದ ಆಚಾರ್ಯರುಗಳಾದ ಬಿ. ಎಂ. ಶ್ರೀ, ಮಾಸ್ತಿ, ಡಿ. ವಿ. ಜಿ, ಬೇಂದ್ರೆ, ಕೆ. ವಿ. ಪುಟ್ಟಪ್ಪ, ಪು.ತಿ.ನ ಮೊದಲಾದ ಅತಿರಥ, ಮಹಾರಥಿಗಳ ಮಾರ್ಗದರ್ಶನದಲ್ಲಿ ವೈಭವವನ್ನು ಮೆರೆದ ಆ ಸಂಪ್ರದಾಯದ ಪ್ರೇರಣೆಗಳಿಗಿದ್ದ ಕಾರಣಗಳನ್ನು ಹೀಗೆ ಗುರುತಿಸಬಹುದಾಗಿದೆ :

ಆಗಿನ ಭಾರತದ ಸ್ಥಿತಿಗತಿ; ಸ್ವಾತಂತ್ರ್ಯಾಂದೋಲನದ ಕೆಚ್ಚು; ಸ್ವತಂತ್ರ ರಾಷ್ಟ್ರವೊಂದರ ನಿರ್ಮಾಣಕ್ಕೆ ಅವಶ್ಯವಾದ ಕನಸುಗಾರಿಕೆ ; ಅಂತಹ ಕನಸುಗಾರಿಕೆಯ ಪೋಷಣೆಗೆ ಕಟ್ಟಿಕೊಂಡ ಆದರ್ಶಗಳು ; ಆದರ್ಶಕ್ಕೆ ತಕ್ಕುದಾಗಿ, ಶಿಸ್ತಿನ ಬದುಕಿನ ಹಂಬಲ ; ಆಗಲೇ ಜಗದ್ವಿಖ್ಯಾತಿ ಪಡೆದ ಠಾಕೂರ ಅವರ ಸುಕುಮಾರ ಸಾಹಿತ್ಯ ಮತ್ತು ಅವರ ಆದರ್ಶಗಳ ಪ್ರತೀಕವಾಗಿ ಸ್ಥಾಪಿತವಾದ ಶಾಂತಿನಿಕೇತನ, ಅದರ ಪ್ರಭಾವಗಳು ; ಆಗಿನ ಸಮಕಾಲೀನ ಜೀವಂತ ಬದುಕಿಗೆ ಅವಶ್ಯ ಧೋರಣೆಯಾಗಿದ್ದ ನಾಡು–ನುಡಿಗಳ ಮೇಲಿನ ಅನನ್ಯ ಭಕ್ತಿ ಮತ್ತು ಬಿಎಂಶ್ರೀ ಅವರ ಆಂಗ್ಲ ಕವಿತೆಗಳ ಅನುವಾದದ ಅಗಾಧ ಪರಿಣಾಮ[೧] ಇತ್ಯಾದಿ ಪ್ರೇರಣೆಗಳು ಆ ಸಂಪ್ರದಾಯದ ಅಡಿಪಾಯವಾಗಿ

---

೧ ಇಲ್ಲಿ ಇನ್ನೊಂದು ಮಾತನ್ನು ಬಹಳ ಮುಖ್ಯವಾಗಿ ಗಮನಿಸಬಹುದಾಗಿದೆ. ಆಚಾರ್ಯ ಬಿಎಂಶ್ರೀ ಅವರ ಆಂಗ್ಲ ಕವಿತೆಗಳಲ್ಲಿ, ಅವರ ಅಭ್ಯಾಸ ಪರಿಮಿತಿಯಲ್ಲಿ ಇಲ್ಲದ್ದರಿಂದಲೋ, ಅವರಿಗೆ ಮಹತ್ವದ್ದಾಗಿ ತೋರದ್ದರಿಂದಲೋ, ಅಥವಾ (ಈಗಿನ ಕನ್ನಡ ಸಂದರ್ಭದಲ್ಲಿಯಂತೆ) 'ರೋಮ್ಯಾಂಟಿಕ್' ಮನೋಧರ್ಮದ ಅವರಿಗೆ, ಆ 'ನವ್ಯ' ರಚನೆಗಳು ಅಸಂಬದ್ಧವೆನ್ನಿಸಿದ್ದರಿಂದಲೋ, ಅಂತೂ ಆಗಿನ 'ಸಮಕಾಲೀನ' ಯಾವುದೇ ಖ್ಯಾತ ಇಂಗ್ಲಿಷ್ ಕವಿಗಳ ಉಲ್ಲೇಖ ಅಲ್ಲಿ ಇಲ್ಲದೇ ಇರುವುದು. ಬಹುಪಾಲು ಹದಿನೇಳು-ಹದಿನೆಂಟನೆಯ ಶತಮಾನದ ಕವಿಗಳನ್ನೇ ನೆಚ್ಚಿಕೊಂಡು, ೧೯ನೆಯ ಕೊನೆಯ, ೨೦ನೆಯ ಶ. ದ ಆರಂಭದಲ್ಲಿದ್ದ ಅತ್ಯಂತ ಪ್ರಭಾವಶಾಲಿ ಕವಿಗಳಾದ ಎಲಿಯಟ್, ಎಜ್ರಾಸೌಂಡ್, ಲಾರೆನ್ಸ್, ಏಟ್ಸ್ ಇತ್ಯಾದಿ ಪ್ರಭೃತಿಗಳ ಅಸ್ತಿತ್ವದ ಕುರಿತು ಕೂಡ ಪರಿಚಯಿಸದಿದ್ದುದು ಆಶ್ಚರ್ಯವೆನಿಸುತ್ತದೆ. ಬಹುಶಃ ಈ ಒಂದು ಕಾರಣದಿಂದಲೂ ಕೂಡ, ನವೋದಯದ ಆರಂಭದಲ್ಲಿಯ ಕವಿಗಳು ವಸ್ತುನಿಷ್ಠ 'ಎಚ್ಚರ' ದಿಂದ ಬಹುಪಾಲು ವಂಚಿತರಾಗಿ, ಆದರ್ಶಗಳ 'ಕನಸುಗಾರಿಕೆ' ಯಲ್ಲಿಯೇ ಮೈಮರೆಯಬೇಕಾಯಿತೇನೋ. ಪರಿಣಾಮ : ಆರಂಭದ ಪೂರ್ವಗ್ರಹೀತ ರೋಮ್ಯಾಂಟಿಕ್ ದೃಷ್ಟಿ ಪ್ರಾಬಲ್ಯದಿಂದಾಗಿ, ಸದ್ಯದ ಜಟಿಲವಾದ ಬದುಕು-ಸಾಹಿತ್ಯ ಮತ್ತು ಮೌಲ್ಯಗಳ ಐತಿಹಾಸಿಕ ಅನಿವಾರ್ಯ ಕುರಿತು, ಇಂಥ ಅನ್ಯೋನ್ಮುಖ ಕವಿಗಳನ್ನು ಈಗಲೂ ಒಪ್ಪಿಸುವುದು ಕಷ್ಟಸಾಧ್ಯವಾದ ಗುದ್ದಾಟ.

ನಿಂತವು. ಇಂತಹ ಪ್ರೇರಣೆಗಳ ಹಿನ್ನೆಲೆಯಲ್ಲಿ ಸತತವಾಗಿ ಮೂರು ದಶಕಗಳಷ್ಟು ಕಾಲ ಸಮೃದ್ಧಿಯಿಂದ ಕೂಡಿದ ನವೋದಯ ಸಂಪ್ರದಾಯ, ಸ್ವಾತಂತ್ರ್ಯೋತ್ತರ ಭಾರತವಲ್ಲಿ ಕುಸಿದದ್ದು ಸ್ವಾಭಾವಿಕವೇ ಆಗಿದೆ. ಮೇಲ್ಕಾಣಿಸಿದ ಯಾವುದೇ ಪ್ರೇರಣೆಗಳ ಪಾರ್ಶ್ವದಲ್ಲಿ, ಬದುಕಿನ ಸರ್ವಾಂಗಗಳಲ್ಲಿಯೂ ಮೌಲ್ಯ ಪಲ್ಲಟಗೊಂಡ ಸದ್ಯದ ಭಾರತದಲ್ಲಿ ಯಾವುದೇ ಬಗೆಯ ಚಿರಂತನ ಮೌಲ್ಯಗಳ ಸಾಹಿತ್ಯ ನಿರ್ಮಾಣ ಅಶಕ್ಯದ ಸಂಗತಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಮಾತನ್ನು ನಿಚ್ಚಳಗೊಳಿಸುವುದಕ್ಕೆ, ನವೋದಯ ಸಂಪ್ರದಾಯದಲ್ಲಿ, ಮೂರು-ನಾಲ್ಕರ ದಶಕಗಳಲ್ಲಿ ಉಜ್ವಲವಾದ, ಚಿರಂತನವೆನ್ನಬಹುದಾದ ಮೌಲಿಕ ಕಾವ್ಯ ಸೃಷ್ಟಿಸಿದ ಅಂಬಿಕಾತನಯದತ್ತರ ಕಾವ್ಯದ ಕುರಿತು ಒಂದೆರಡು ಅಂಶಗಳನ್ನು ಗಮನಿಸಬಹುದಾಗಿದೆ.

ಆಗಿನ ಸಮಕಾಲೀನ ವಾಸ್ತವ ಸಮಸ್ಯೆಗಳನ್ನು ತಮ್ಮ 'ಮೂವತ್ತುಮೂರು ಕೋಟಿ', 'ಅಹಹ ಸ್ವಾತಂತ್ರ್ಯದೇವಿ', 'ತರುಣ ತಪಸ್ವಿ' 'ಕನಸಿನೊಳಗೊಂದು ಕಣಸು' – ಇತ್ಯಾದಿ ಭಾವಗೀತೆಗಳಲ್ಲಿ ನಿಸ್ಫುರವಾಗಿ ಅಭಿವ್ಯಕ್ತಿಸಿದಂತೆ, ಸ್ವಾತಂತ್ರ್ಯೋತ್ತರ ಸಮಕಾಲೀನ ಸಮಸ್ಯೆಗಳತ್ತ ಬೇಂದ್ರೆಯವರು ಗಮನ ನೀಡದೇ ಇದ್ದುದು. ಹೀಗಾಗುವುದಕ್ಕೆ ಅನೇಕ ಕಾರಣಗಳಿರಬಹುದು. ಅವುಗಳಲ್ಲಿ ಈ ಮೂರನ್ನು ಪರಿಶೀಲಿಸಬಹುದು.

೧. ಸ್ವಾತಂತ್ರ್ಯಪೂರ್ವ ಭಾರತದಲ್ಲಿಯ ನವೋದಯದ ಪ್ರೇರಣಾ ಪ್ರನಾಳಿಕೆಯ ಪಾರ್ಶ್ವದಲ್ಲಿದ್ದ ಅಂದಿನ ಮುಖ್ಯ ಸಮಸ್ಯೆಗಳಿಗೆ ತಮ್ಮನ್ನು ಇಡಿಯಾಗಿ ಒಡ್ಡಿಕೊಂಡಷ್ಟು ತೀವ್ರವಾಗಿ, ಇಂದಿನ ಕುದಿಯುವ ಸಮಸ್ಯೆಗಳಿಗೆ ಬೇಂದ್ರೆಯವರು ತಮ್ಮನ್ನು ಒಡ್ಡಿಕೊಳ್ಳಲಾಗದ್ದು.

೨. ಅಂತಹ ಸಮಕಾಲೀನ ಸಮಸ್ಯೆಗಳನ್ನು ಆಹ್ವಾನಿಸಿಕೊಂಡಾಗಲೂ, ಕವನದಲ್ಲಿ ಅನುಭವ, ಆಳ ಹಾಗೂ ವಿಸ್ತಾರ ಪಡೆಯದೆ, ಇಡೀ ಕವನ ಸುಮತೀಂದ್ರ ನಾಡಿಗರು ಗುರುತಿಸಿದಂತೆ : 'ತಂತ್ರ ಚಮತ್ಕಾರ'ವಾಗಿ ಉಳಿದು ಬಿಡುವುದು.

೩. ತಮ್ಮ ಅಖಂಡ ವ್ಯಕ್ತಿತ್ವ, ಪ್ರೇರಣೆಗಳನ್ನು ಇತ್ತೀಚಿಗೆ ಲೌಕಿಕಕ್ಕಿಂತ ಹೆಚ್ಚಾಗಿ ಬೇಂದ್ರೆಯವರು ಅನುಭಾವದ ಕಡೆಗೆ ಹೊರಳಿಸಿದ್ದು.

ಬೇಂದ್ರೆಯವರು ಹೀಗೆ ಆಧ್ಯಾತ್ಮಿಕತೆಯ ಕಡೆಗೆ ಒಲಿಯುವುದಕ್ಕೆ ಬಹುಶಃ ನಮ್ಮ ಸಂಸ್ಕೃತಿಯಲ್ಲಿಯ ವಿಸಂಗತಿ ಎನ್ನುವುದೂ ಒಂದು. ವೃದ್ಧನಾದಂತೆ, ವ್ಯಕ್ತಿ ಈ ನೆಲದಲ್ಲಿ ಪಾರಮಾರ್ಥಿಕತೆಗೆ ಸಲೀಸಾಗಿ ಒಗ್ಗಿಕೊಳ್ಳುವುದು. ಅಂದರೆ ವ್ಯಕ್ತಿಗಿಂತ ಸಂಸ್ಕೃತಿ ನಮ್ಮಲ್ಲಿ ಹೆಚ್ಚಿನದೆನ್ನಿಸುವದರಿಂದ, ಯಾವುದೇ ಕ್ಷಣಕ್ಕೂ, ಈ ಸಂಸ್ಕೃತಿಯು ವ್ಯಕ್ತಿಯ ವೈಯಕ್ತಿಕತೆಯನ್ನು ಕಬಳಿಸಿಬಿಡಬಹುದಾಗಿದೆ. ಈ ಮಾತನ್ನು ಇನ್ನೂ ಸ್ಪಷ್ಟಪಡಿಸಬೇಕೆಂದರೆ, ಜಾತಿ-ಧರ್ಮಗಳು ಸಂಸ್ಕೃತಿಯ ಅನಿವಾರ್ಯ ಅಂಗಗಳೆಂದು ನಾವು (ಅನೇಕರು) ಭಾವಿಸುವದರಿಂದ; ಮೇಲೆ ಸೂಚಿಸಿದಂತೆ, ವ್ಯಕ್ತಿತ್ವಕ್ಕಿಂತ, ಈ ಬಗೆಯ ಸಂಸ್ಕೃತಿಯೇ ಮಿಗಿಲಾದದ್ದು ಎಂದೂ ತಿಳಿಯುವದರಿಂದ ಸಾಹಿತ್ಯದಲ್ಲೂ

ಕೂಡ, ಸಾಹಿತಿಯು ವ್ಯಕ್ತಿ ವೈಶಿಷ್ಟ್ಯ, ನಿಷ್ಠುರತೆಗಳಿಗಿಂತ, ಅನೇಕ ಸಲ ಜಾತಿ ವರ್ಗವೂ ಒಂದು ಮಹತ್ವದ ಪಾತ್ರವಾಡುವುದನ್ನು ಲಕ್ಷಿಸಬೇಕು. ಇಲ್ಲಿ ಕೆಲಕಾಲದ ಹಿಂದಿನ 'ಚೆನ್ನಬಸವನಾಯಕ' ಕಾದಂಬರಿಯ ಬಗೆಗಿನ ವಿವಾದವನ್ನು ಮತ್ತು ಇತ್ತೀಚೆಗೆ 'ಪೂಚಂತೇ' ಅವರು ಸಾಹಿತ್ಯದಲ್ಲಿ 'ಮಾಧ್ವ ಬ್ರಾಹ್ಮಣರು' ಹಾಗೂ 'ಗರುಡ ಪುರಾಣ' ಗಳ ಪಾತ್ರಗಳನ್ನು ಕುರಿತು, ಎತ್ತಿರುವ ಆಕ್ಷೇಪಗಳನ್ನು ಗಮನಿಸಬಹುದಾಗಿದೆ.

ಈಗ ನವೋದಯಕ್ಕೆ ಸಕಾಲಿಕ ಪ್ರತಿಕ್ರಿಯೆಯಾಗಿ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬದಲಾದ ನಮ್ಮ ಬದುಕಿಗೆ, ಐತಿಹಾಸಿಕ ಅಗತ್ಯವಾಗಿ ಕಾಲಿಟ್ಟ ಹೊಸ ಸಾಹಿತ್ಯವನ್ನು ಕುರಿತು, ಅದರ ಪ್ರೇರಣೆ ಪರಿಣಾಮಗಳನ್ನು ಕುರಿತು ಹೀಗೆ ವಿಶ್ಲೇಷಿಸಬಹುದಾಗಿದೆ.

ಸ್ವಾತಂತ್ರ್ಯಪೂರ್ವದ ಕುದಿಯುವ ವಾತಾವರಣದಲ್ಲಿ ಅರವಿಂದರಂತಹ ಅಗಾಧ ವ್ಯಕ್ತಿತ್ವದ ವ್ಯಕ್ತಿ, ಅಂದಿನ ಕೆಚ್ಚಿನ ವಾತಾವರಣಕ್ಕೆ ಪ್ರತಿಭಟನಾತ್ಮಕವಾಗಿ ಕ್ರಾಂತಿಕಾರಿಯೂ ಆಗಿದ್ದಂತೆ, ಕುಸಿಯುತ್ತಿರುವ ಭಾರತೀಯತ್ವದ ಆದರ್ಶಗಳ ಪುನರುತ್ಥಾನಕ್ಕೆ ಸಂತನೂ ಆಗಬಲ್ಲವನಾಗಿದ್ದ. ಆದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿಯ ವ್ಯಕ್ತಿತ್ವದ ಕತ್ತು ಹಿಚುಕುವ ಆವರಣದಲ್ಲಿ, ಹೊಟ್ಟೆಪಾಡಿಗಾಗಿ ವ್ಯಕ್ತಿತ್ವವನ್ನೇ ಹಲ್ಲುಗಿಂಜಿಸಬೇಕಾದ ದರಬೇಸಿ ವಾತಾವರಣದಲ್ಲಿ ಪ್ರತಿಭಾವಂತನೂ ಕೂಡ ಜಾತಿ, ಕೋಮು, ರಾಷ್ಟ್ರಭಕ್ತಿ, ಸಂವಿಧಾನ ಇತ್ಯಾದಿ ಸಂಕೋಲೆಗಳಿಂದ ಬಂಧಿತನಾದವನು ಕ್ರಾಂತಿಕಾರನೂ ಆಗದೆ, ಸಂತನೂ ಆಗದೆ, ಕೇವಲ 'ತಪ್ತ'ನಾಗಿ ಮಾತ್ರ ಉಳಿಯಬಲ್ಲ. ಈ ತರದ ದಾರುಣ ಅಸಹಾಯಕತೆ, ಕೊಲೆಯಾದ ಆದರ್ಶಗಳು, ವೈಯಕ್ತಿಕ ಸಾಮಾಜಿಕ ಹಲವು ಹದಿನೆಂಟು ಅನ್ಯಾಯಗಳು—ಇವುಗಳಿಂದ ಸಹಜವಾಗಿ ಉದ್ಭವಿಸುವ ಕೆಚ್ಚು, ನವೋದಯದ ಆದರ್ಶಗಳಿಗೆ ತೀರ ವ್ಯತಿರಿಕ್ತವಾಗಿ. ಸಾಮಾಜಿಕ ಸಂಭ್ರಮಗಳಲ್ಲೂ ಕೂಡ, ಆಳವಾಗಿ ಅಷ್ಟೇ ಕ್ರೂರವಾಗಿ ಬೇರುಬಿಟ್ಟ ಜಾತೀಯತೆಗಳಿಂದ ಛಿದ್ರೀಕರಿಸಲ್ಪಟ್ಟ ಸಂವೇದನಾಶೀಲನೊಬ್ಬನ ತೀಕ್ಷ್ಣ ಅನ್ನಿಸಿಕೆಗಳು. ನವ್ಯ ಸಾಹಿತ್ಯವಾಗಿ ಪ್ರಕಟಗೊಂಡಾಗ, ಅವುಗಳನ್ನು ಕೇವಲ ಆಕ್ಷೇಪಿಸುವುದರ ತಳಬುಡಗಳು ಅರ್ಥವಿಲ್ಲದವು.

ಮೇಲೆ ಕಾಣಿಸಿದಂತಹ ಅಸಹನೀಯ ವಾತಾವರಣದಲ್ಲಿ, ಮೌಲ್ಯಗಳೇ ಸತ್ತ ಸಮಾಜದಲ್ಲಿ, ವಿಶ್ವಾಸಗಳೇ ಕಮರಿರುವ ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳಲ್ಲಿ. ಸ್ವವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವ ಹಾಗೂ ಬದುಕಿನ ಮೂಲಭೂತ ಮೌಲ್ಯಗಳನ್ನು ಅರಸುವ ಅತ್ಯಂತ ಜವಾಬ್ದಾರಿಯುತ ಸೃಷ್ಟ್ಯಾತ್ಮಕ ಕಾರ್ಯದಲ್ಲಿ ಮಗ್ನನಾಗಿರುವ ಹೊಸ ಲೇಖಕ, ರೂಢಿಗತ ನಂಬಿಕೆಗಳನ್ನು ಧಿಕ್ಕರಿಸುವಂತೆ ತೋರುತ್ತಾನೆ. ಆದರೆ. ಅಮೂರ್ತವಾದರೂ. ಕೆಲವು ಗುರಿ-ಸಾಧನೆಗಳತ್ತ ಆತ ದೃಷ್ಟಿ ಇಟ್ಟಿದವನು. ವಾಚ್ಯವಾಗಿ ಯಾವುದೇ ಆದರ್ಶಗಳನ್ನು ಘೋಷಿಸದೆ, ಗಟ್ಟಿಯಾದ ಚಿರಂತನ ಮೌಲ್ಯಗಳನ್ನು ನಿಷ್ಠುರವಾಗಿ ಪ್ರತಿಪಾದಿಸುವವನು. ಇಂತಹ ಆಂತರಿಕ ಹಿನ್ನೆಲೆಯಲ್ಲಿ ತುಂಬ ಜಾಗರೂ-

ಕತೆಯಿಂದ ರಚಿಸಲ್ಪಡುತ್ತಿರುವ ನವ್ಯ ಬರವಣಿಗೆಯ ಕೆಲವು ವಿಶೇಷಗಳನ್ನು ಹಾಗೂ ಬರಹಗಾರರ ಅನನ್ಯತೆಯನ್ನು ವಿವಿಧ ಸಾಹಿತ್ಯ ಪ್ರಕಾರಗಳ ಸಮೀಕ್ಷೆಯಿಂದ ಗುರುತಿಸಬಹುದಾಗಿದೆ.

[೨]

ತಮ್ಮ ಅಭಿವ್ಯಕ್ತಿಯ ಮಾಧ್ಯಮದಲ್ಲಿ ಕೇವಲ ಪ್ರಯೋಗಕ್ಕಾಗಿ ನವ್ಯತೆ ತಂದ 'ವಿನಾಯಕ' ಮತ್ತು ಆಂತರಿಕ ಅವಶ್ಯಕತೆಯಾಗಿ ಆವಿರ್ಭವಿಸಿಕೊಂಡ ಗೋಪಾಲಕೃಷ್ಣ ಅಡಿಗರಿಂದ ನವ್ಯಕಾವ್ಯ ಕನ್ನಡದಲ್ಲಿ ಕಾಲಿಟ್ಟಿದೆ. ಆಂಗ್ಲಕಾವ್ಯವನ್ನು ಆಳವಾಗಿ ಓದಿಕೊಂಡ, ಬದುಕಿನ ಹಲವು ಹಂತಗಳಲ್ಲಿ ಅನುಭವದ ವಿಸ್ತಾರ ಪಡೆದ ವಿನಾಯಕರ ಕಾವ್ಯದಲ್ಲಿ ನವ್ಯತೆ ಕೇವಲ ತಂತ್ರವಾಗಿ ಉಳಿದುಬಿಟ್ಟದ್ದು ವಿಷಾದಕರ. ಒಂದು ದೃಷ್ಟಿಯಿಂದ ಬೇಂದ್ರೆ ಅವರ ಇತ್ತೀಚಿನ ಕವಿತೆಗಳಲ್ಲಿಯ ಅನುಭಾವದ 'ಹೊರಳು' ವಿಕೆಯೇ ವಿನಾಯಕರ ಕಾವ್ಯದಲ್ಲಿಯೂ ಹಾವಸೆಗಟ್ಟಿರುವುದು. ಅಂದರೆ, ಪ್ರಸಕ್ತ ಪರಿಸರದಲ್ಲಿ ವ್ಯಕ್ತಿಯೊಬ್ಬನ ಗಟ್ಟಿ 'ಅನುಭವ'ಗಳಿಗಾತೀತವಾಗಬಹುದಾದ 'ಅನುಭಾವ'ಗಳ ಹುರುಳನ್ನು ಕಾವ್ಯದ ಕಲಾತ್ಮಕ ಗುಣಧರ್ಮದ ತೆಕ್ಕೆಗೆ ಒಗ್ಗಲಾರದ ಪರಿಸರಗಳಲ್ಲಿ ತುಂಬಿಸಿ, ಕಾವ್ಯದ ಧ್ವನಿಯಿಂದ ವಂಚಿತವಾದ ಹೇಳಿಕೆಗಳಾಗಿ ಮಾತ್ರ—ಅನಿವಾರ್ಯವಾಗಿ ನಿಲ್ಲಿಸುವುದು. ಒಟ್ಟು ಸಮಕಾಲೀನ ನಿಷ್ಠುರ ಸಮಸ್ಯೆಗಳ ಗಟ್ಟಿ ನೆಲದ ಮೇಲೆ ಭದ್ರ ನಿಲ್ಲದ ಅವರು ಅನುಭಾವದತ್ತ ಜಾರಿದ್ದು. ಸದ್ಯದ ಸಾಮಾಜಿಕ ವೈಯಕ್ತಿಕ ಪರಿಸರ, ಸಂಬಂಧ ಮತ್ತು ಅನಿವಾರ್ಯ ವಾಸ್ತವ್ಯಗಳ ಕಠೋರ ಪರಿಸರಗಳಿಗಿಂತ, ಅರವಿಂದ, ಸತ್ಯಸಾಯಿಬಾಬಾದಿಗಳ 'ಪ್ರಾಜಾರ್ಥ', 'ವ್ಯಕ್ತಿವಿಶಿಷ್ಟ,' 'ಭಕ್ತಿ' ವಾತಾವರಣದಲ್ಲಿಯ 'ಪಲಾಯನ'ದಲ್ಲಿಯೇ ಮೌಲ್ಯ ಶೋಧನೆ (?)ಯನ್ನು ಕೈಕೊಳ್ಳುವುದು ಹೆಚ್ಚು ಆಕರ್ಷಕ ಹಾಗೂ ಅನಿವಾರ್ಯವೆಂದು ಅವರಿಗೆ ಅನ್ನಿಸಿದ್ದು. ದುರಂತ ಬದುಕನ್ನು ಕುರಿತು, ತೀವ್ರ ಜಿಜ್ಞಾಸುಗಳಾಗಿ, ಅದನ್ನು ಹಂತ ಹಂತಗಳಲ್ಲಿ ವಿಶ್ಲೇಷಿಸುವ ಸಾಮರ್ಥ್ಯದ ಪ್ರತಿಭಾಂತರ ಅಪೇಕ್ಷಿತ (ಐತಿಹಾಸಿಕ) ರಚನೆಗಳಿಂದ ಕನ್ನಡ ಕಾವ್ಯ ವಂಚಿತವಾದದ್ದು.

ಇದಕ್ಕೆ ತೀವ್ರ ಪ್ರತಿಕ್ರಿಯೆಯಾಗಿ, ಬದುಕನ್ನು ಕುರಿತು ಗಾಢ ಶ್ರದ್ಧೆ, ಸಾಧನೆಗಳ ಕುರಿತಂ ತೀವ್ರ ತುಡಿತ, ಹಲವು ಅನುಭವಗಳ ತಲ್ಲಣಗಳ ಒತ್ತಡದಿಂದ ತುಂಬ ಪ್ರಾಮಾಣಿಕವಾಗಿ ಹೊರಬಂದ ಅಡಿಗರ ಕಾವ್ಯ, ಕನ್ನಡ ಸಾಹಿತ್ಯದ ಒಂದು ದೊಡ್ಡ ಸಾಧನೆ. ಲಂಕೇಶರ ಮಾತಿನಲ್ಲಿ 'ಒಂದು ಜನಾಂಗದ ಕಣ್ಣು ತೆರೆಯಿಸಿದ ಶ್ರೇಯಸ್ಸು ಅಡಿಗರ ಕಾವ್ಯ ಹಾಗೂ ಬದುಕಿಗೂ ಇದೆ' ಎಷ್ಟೋ ದೃಷ್ಟಿಗಳಿಂದ. ಸದ್ಯದ ಸಂವೇದನಾಶೀಲ ಯುವಜನಾಂಗಕ್ಕೆ ಅಡಿಗರ ಕಾವ್ಯದ ಪ್ರಭಾವ ಒಂದು ಆವಶ್ಯಕ, ಪ್ರಾಥಮಿಕ ಹಂತವಾಗಿದೆ. ಒಂದು ಅರ್ಥದಲ್ಲಿ, ಈ ಪ್ರಭಾವದಿಂದ ಪಾರಾಗುವುದೇ, ಹೊಸ ಕವಿಗಳಿಗೆ ಒಂದು ಹೋರಾಟವಾಗುತ್ತಿದೆ. ಅಂದರೆ, ಅಡಿಗರು ಈ ಗದಿಯ ತಲೆ

ಮಾರಿಗೆ ಒಂದು ಅಬ್ಸೆಶನ್ ಆಗಿದ್ದಾರೆ. ಅಡಿಗರ ಪ್ರಭಾವದ ಅನಿವಾರ್ಯತೆ, ಪ್ರಭಾವಕ್ಕೆ ಸಿಲುಕಿದವರ ಅಸಹಾಯಕತೆ, ಇವುಗಳನ್ನು ಲಂಕೇಶರ ಮಾತಿನಲ್ಲಿ ವರ್ಣಿಸುವದಾದರೆ—

‘ ಇವರ ಮಾತನ್ನು ಗುದ್ದಿ ಸುದ್ದಿಯಾಗಲೆ ?
ಜ್ಯೋತಿಷ್ಯಕ್ಕೆ ಜ್ಯೋತಿಯಾಗಲೆ ?
ಬಾವಲಿಯಾಗಿ ನೇತಾಡಲೆ ?
ಸತ್ಯಗೆಲ್ಲುವುದೆಂದು ಸಂತೋಷಪಡಲೆ ?
ಹಳೆಯ ಪ್ರಭಾವಗಳ, ಭಾವಗಳ, ಕಳಸಗಳ ಕಾಯುತ್ತ ಕೂರಲೆ ?
ಇವರ ಹಳಿಗಳ ಹತ್ತಿ ತೆಪ್ಪಗೆ ಓಡಲೆ?’[1]

ಎಂದು ಗೊಂದಲಕ್ಕೀಡಾಗುವಷ್ಟು ದಟ್ಟವಾಗಿದೆ.

ತಮ್ಮ ಅನುಭವ—ಅನ್ನಿಸಿಕೆಗಳ ಅತ್ಯಂತ ಸಮರ್ಥ ನಿರೂಪಣೆ ಮತ್ತು ಯಶಸ್ಸಿಗೆ ಮುಖ್ಯ ಕಾರಣ ; ಅಡಿಗರು ದುಡಿಸಿಕೊಳ್ಳುವ ಭಾಷೆ. ಅಡಿಗರ ಕಾವ್ಯ ಕುರಿತು ಸಮರ್ಥವಾಗಿ ವಿಶ್ಲೇಷಿಸಿದ ಯು. ಆರ್. ಅನಂತಮೂರ್ತಿ[2] ಗುರುತಿಸುವಂತೆ— “ ಅನುಪ್ರಾಸ, ಧ್ವನಿ, ಸಾಮ್ಯ, ಶ್ಲೇಷೆ, ವಿಡಂಬಕವಾಗಿ ಶಬ್ದಗಳನ್ನೂ, ಚಿತ್ರಗಳನ್ನೂ ಹತ್ತಿರ ಹತ್ತಿರ ಇಡುವುದು-ಮುಂತಾದವುಗಳನ್ನು ಬೆಳೆಸಿಕೊಂಡು ಕನ್ನಡ ಭಾಷೆಯ ಸಾಧ್ಯತೆಗಳನ್ನು ಪೂರಾ ಸೂರೆಗೊಳ್ಳುವುದಕ್ಕೆ ಯತ್ನಿಸುವ ಅವರ ಕವನಗಳು ” ಸ್ವಾಭಾವಿಕವಾಗಿ ಶ್ರೇಷ್ಠತೆಯನ್ನು ಮೆರೆಯುತ್ತವೆ. “ಕೇವಲ ನಮ್ಮ ಭಾಷೆಯ ಜಾಯಮಾನಕ್ಕೆ ತಕ್ಕಂತಿರುವ ಲಯ, ಗತಿ, ಶಬ್ದ, ರೂಪಗಳು ಮುಂತಾದವುಗಳಿಂದ ಭಾವದ (ಅರ್ಥದ ಅನುಭವದ) ಪುನರಭಿನಯವಾಗುವುದೇ ಅಡಿಗರ ಕಾವ್ಯದ ಮುಖ್ಯ ಲಕ್ಷಣವಾಗಿದೆ. ಅವರ ಶಬ್ದಕೋಶದ ಭಾಷಾವ್ಯಾಪ್ತಿ–ಆದ್ದರಿಂದ ಅನುಭವದ ವ್ಯಾಪ್ತಿ–ಆಶ್ಚರ್ಯ ಹುಟ್ಟಿಸುವಷ್ಟು ಸ್ವಕೀಯವಾಗಿವೆ.......ಅವರ ಭಾಷೆ, ಸಹಜವಾಗಿ ರಂಪದರ ಜೊತೆಗೆ, ಸಂಕೋಚಗಳನ್ನು ಬಿಟ್ಟದ್ದೂ ಆಗಿ, ಅವರ ಅನುಭವಶೋಧಕವಾದ ಸೃಜನೋದ್ದೇಶಗಳಿಗೆ ಸಮರ್ಥ ಮಾಧ್ಯಮವಾಗುತ್ತದೆ.”

ಬದುಕನ್ನು ಕುರಿತು ತೀವ್ರ ಎಚ್ಚರ, ಅನುಭವಗಳನ್ನು ನಿಷ್ಠುರವಾಗಿ ಎದುರಿಸುವ ಬಗೆ, ಕಾವ್ಯ ಮತ್ತು ಬದುಕನ್ನು ಬೇರ್ಪಡಿಸಲಾಗದ ಪ್ರಾಮಾಣಿಕತೆಗಳ ಹಿನ್ನೆಲೆಯಲ್ಲಿ ಸಾವಯವಗಳಾಗಿ ಮೂಡುವ ಅತ್ಯಂತ ಪ್ರಬಲ ಪ್ರತಿಮೆಗಳು, ವ್ಯಂಜಕತೆಯನ್ನು ತುಂಬಿನಿಂತ ಪ್ರತೀಕಗಳು, ಮೊದಲಿನಿಂದ ಕೊನೆಯ ವರೆಗೆ ಸುಸೂಕ್ಷ್ಮವಾಗಿ, ಪ್ರತಿಮೆಗಳಗುಂಟ ಹಂತಹಂತವಾಗಿ ಮೇಲೇರುವ ಕವನದ ಶಿಲ್ಪ, ಸಾಲಿನಿಂದ ಸಾಲಿಗೆ ಅರ್ಥ

---

೧. ಪಿ. ಲಂಕೇಶ್ : “ಬಿಚ್ಚು”(ಕವನ ಸಂಕಲನ) ಸಹ್ಯಾದ್ರಿ ಪ್ರಕಾಶನ. ಕಡಿದಾಳು.೧೯೬೭
೨. ಯು. ಆರ್. ಅನಂತಮೂರ್ತಿ. ‘ಪ್ರಜ್ಞೆ ಮತ್ತು ಪರಿಸರ’ (ವಿಮರ್ಶೆಗಳು) ಅಕ್ಷರ ಪ್ರಕಾಶನ, ಸಾಗರ ೧೯೭೧.

ಹಬ್ಬುತ್ತ ನಡೆಯುವ ಒಟ್ಟು ಕೃತಿಗಳು, ಅಡಿಗರ ರಚನೆಗಳನ್ನು ಶ್ರೇಷ್ಠತೆಯತ್ತ ಎಳೆದೊಯ್ಯುತ್ತವೆ.

'ಚಂಡೆ ಮದ್ದಳೆ', 'ಭೂಮಿಗೀತ'ದಂತಹ ದೊಡ್ಡ ಸಾಧನೆಯ ಸಂಕಲನಗಳನ್ನಲ್ಲದೆ, 'ಕೂಪ ಮಂಡೂಕ', 'ಶ್ರೀ ರಾಮನವಮಿಯ ದಿವಸ', 'ವರ್ಧಮಾನ'ಗಳಂತಹ ಆಳವಾದ, ಅರ್ಪಣೆಯ ಪ್ರಜ್ಞೆಯ, ಬಹು ಚರ್ಚಿತವಾದ ಕವಿತೆಗಳನ್ನು ಕುರಿತು ಇನ್ನೂ ಹೆಚ್ಚಿನ ಅರ್ಥವಿಸ್ತಾರಗಳನ್ನೊಳಗೊಂಡ ವಿಮರ್ಶೆಗಳನ್ನು ನಿರೀಕ್ಷಿಸಬಹುದಾಗಿದೆ.

ಅಡಿಗೋತ್ತರ ಕವಿಗಳಲ್ಲಿ ಅನಂತಮೂರ್ತಿಯವರು ಈಗಾಗಲೇ ಗುರುತಿಸಿದಂತೆ, 'ಬದುಕನ್ನು ಹಾಗೂ ಕಾವ್ಯವನ್ನು ಕುರಿತು ಸ್ಪಷ್ಟವಾದ ಧೋರಣೆ ತಳೆದ ಕವಿ ಗಂಗಾಧರ ಚಿತ್ತಾಲ'. ನವೋದಯದ ಕಾವ್ಯದ ಆವರಣದಲ್ಲೇ ಬೆಳೆದ ಕವಿ ಚಿತ್ತಾಲರು ಅಡಿಗರಂತೆಯೇ, ನಮ್ಮ ಸಂಸ್ಕೃತಿಯಲ್ಲಿ ಬೇರು ಬಿಟ್ಟ, ಮಣ್ಣಿನ ವಾಸನೆಯಿಂದ ಕೂಡಿದ, ಟೊಂಗೆ–ಟಿಸಿಲುಗಳೊನ್ನೊಡೆದವರು. 'ಕಾಲನ ಕರೆ'ಯಿಂದ ಆರಂಭವಾದ ಚಿತ್ತಾಲರ ಕಾವ್ಯಧಾರೆ 'ಹರಿವ ನೀರಿದು' ವರೆಗೆ ಸತತ ಮುನ್ನಡೆಯುತ್ತ, ತನ್ನ ವೈಶಾಲ್ಯವನ್ನೂ, ಆಳ-ಹರಹುಗಳನ್ನು ವಿಸ್ತರಿಸುತ್ತ, ಕನ್ನಡ ಕಾವ್ಯಕ್ಷೇತ್ರಕ್ಕೆ ಮತ್ತೆ ಮತ್ತೆ ಹೊಸ ನೀರನ್ನು ತುಂಬುತ್ತ ಬಂದಿದೆ.

ಚಿತ್ತಾಲರಂತೆಯೇ, ನವೋದಯದ ಆವರಣದಲ್ಲಿ ಪ್ರೋಷಿಸಿಕೊಂಡು, ಅದರ ಶ್ರೀಮಂತಿಕೆಯನ್ನು ಅನುಭವಿಸಿ, ಈಗೀಗ ನವ್ಯದತ್ತ ಹೊರಳಿದವರಲ್ಲಿ ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಶಂಕರ ಮೊಕಾಶಿ (ಪುಣೇಕರ) ಮತ್ತು ಚೆನ್ನವೀರ ಕಣವಿ – ಈ ಮೂವರು ಪ್ರಮುಖರು. ಇವರೆಲ್ಲರೂ ಕೂಡ ನಮ್ಮ ಸಂಸ್ಕೃತಿಯಲ್ಲಿ ಚೆನ್ನಾಗಿ ಬೇರು ಬಿಟ್ಟ ಕವಿಗಳು. ನವೋದಯದ ಚೆಲುವು, ಸುಕುಮಾರತೆಯ ಹೂರಣ ತುಂಬಿಕೊಂಡ ಇವರ ಇತ್ತೀಚಿನ ನವ್ಯ ರಚನೆಗಳು ಆವರಣದಲ್ಲಿ ಮಾತ್ರ ಹೊಸತನ ತೋರಿಸಿದರೂ, ಅನೇಕ ದೃಷ್ಟಿಗಳಿಂದ ನವೋದಯದ ಧೋರಣೆಗಳನ್ನೇ ಪ್ರತಿಪಾದಿಸುತ್ತವೆ. ಈ ಬಗೆಯ 'ಸಮನ್ವಯ'ದ ಧೋರಣೆಯನ್ನು, ಜಿ. ಎಸ್. ಶಿವರುದ್ರಪ್ಪನವರ 'ತೆರೆದ ದಾರಿ', ಕಣವಿ ಅವರ 'ಎರಡು ದಡ', ಶಂಕರ ಮೊಕಾಶಿ ಅವರ 'ಮಾಯಿಯ ಮೂರು ಮುಖಗಳು' ಇತ್ಯಾದಿ ಇತ್ತೀಚಿನ ಸಂಕಲನಗಳಲ್ಲಿ ಕಾಣಬಹುದು. ವಿಶೇಷವಾಗಿ ಮೊಕಾಶಿಯವರ ಕೃತಿಯಲ್ಲಿ ಸಂಸ್ಕೃತಿಪರ ನವೋದಯದ ಮೌಲ್ಯಗಳನ್ನು ಕುರಿತ ವಕೀಲೀ ಧೋರಣೆ ಎದ್ದು ಕಾಣುವಂತಹದು.

ನವೋದಯದ ಆವರಣದಲ್ಲಿ ಹುಟ್ಟಿದರೂ, ನವ್ಯದಲ್ಲಿಯೇ ವಿಶೇಷ ಬೆಳವಣಿಗೆ ತೋರುತ್ತಿರುವ ಇನ್ನಿಬ್ಬರು ಕವಿಗಳು: ರಾಮಚಂದ್ರಶರ್ಮ ಮತ್ತು ಕೆ. ಎಸ್. ನರಸಿಂಹಸ್ವಾಮಿ ಮುಖ್ಯರು. 'ಮೈಸೂರು ಮಲ್ಲಿಗೆ'ಯಂತಹ ನವುರಾದ ಪದ್ಯ ಸಂಕಲನ ನೀಡಿದ ನರಸಿಂಹಸ್ವಾಮಿಗಳ ಮುಂದಿನ ಪರಿವರ್ತನೆ ವಿಸ್ಮಯಕರವಾದುದು. 'ಶಿಲಾಲತೆ', 'ಮನೆಯಿಂದ ಮನೆಗೆ' ಸಂಕಲನಗಳಲ್ಲಿಯ ಅವರ ಕೆಲವು ಅತ್ಯುತ್ತಮ

ಪ್ರಯತ್ನಗಳನ್ನು; ಇತ್ತೀಚೆಗೆ ಪ್ರಕಟವಾದ 'ಮುಚ್ಚಿದ ಬಾಗಿಲು', 'ತೆರೆದ ಕಿಟಕಿ' ಇತ್ಯಾದಿ ಬಿಡಿಗವನಗಳನ್ನು ಹಾಗೂ ಅಭಿವ್ಯಕ್ತಿಗೆ ತಕ್ಕುದಾಗಿ ಅವರು ದುಡಿಸಿಕೊಳ್ಳುತ್ತಿರುವ ಸತ್ತ್ವಪೂರ್ಣ ಗದ್ಯವನ್ನು ಗಮನಿಸಿದರೆ, ಇನ್ನೂ ಕವಿಯಿಂದ, ಭವಿಷ್ಯದಲ್ಲಿ ಉತ್ತಮ ಕೃತಿಗಳನ್ನು ಅಪೇಕ್ಷಿಸಬಹುದು.

'ಏಳುಸುತ್ತಿನ ಕೋಟೆ', 'ಬುವಿ ನೀಡಿದ ಸ್ಫೂರ್ತಿ'ಗಳಿಂದ 'ಹೇಸರಗತ್ತೆ'ಯಂತಹ ಸಂಕಲನದ ವರೆಗೆ ವಿಶಿಷ್ಟ ವ್ಯಕ್ತಿತ್ವದ ಮಿಡಿತಗಳನ್ನು ಅಭಿವ್ಯಕ್ತಿಸಿದ ರಾಮಚಂದ್ರ ಶರ್ಮ, ಉತ್ತಮ ನಗರ ಪ್ರಜ್ಞೆಯುಳ್ಳ ಕವಿ. ಹತ್ತಾರು ದೇಶಗಳ ಪರ್ಯಟನ, ಹತ್ತೆಂಟು ರಂಗಗಳಲ್ಲಿ ಸುತ್ತುವರಿದ ಅನುಭವಗಳ ಸಾಂದ್ರತೆಯಲ್ಲಿ ಸಂಕೀರ್ಣ ಅಭಿವ್ಯಕ್ತಿ ತಾಳಿದ ಶರ್ಮರ ಕೃತಿಗಳು ವಾಚಕನ ಅನುಭವದ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

ಇದೇ ಅವಧಿಯಲ್ಲಿ ಕೆಲವು ಅತ್ಯುತ್ತಮ ಕವಿತೆಗಳನ್ನು ರಚಿಸಿ, ಕನ್ನಡ ಕಾವ್ಯ ಇನ್ನೂ ಹೆಚ್ಚಿನದನ್ನು ಅವರಿಂದ ಅಪೇಕ್ಷಿಸುತ್ತಿರುವಾಗಲೇ, ಕಣ್ಮರೆಯಾದ ಇಬ್ಬರು ಕವಿಗಳು – ಪೇಜಾವರ ಸದಾಶಿವರಾಯ ಮತ್ತು ಯರ್ಮುಂಜೆ ರಾಮಚಂದ್ರ ಅವರನ್ನು ಈ ಸಂದರ್ಭದಲ್ಲಿ ನೆನೆಯಬೇಕು.

ಕಳೆದ ಅರವತ್ತರ ದಶಕದಲ್ಲಿ ನವ್ಯ ಕವಿತೆ ಬಟಾಲಿಯನ್‌ಗಟ್ಟಳೆ ಕವಿಗಳಿಂದ ದಾಳಿಗೀಡಾಗಿದೆ. ಶೇ. ೮೦ ರಷ್ಟು ಜೊಳ್ಳಾಗಿದ್ದರೂ, ಉಳಿದ ಕೆಲವೇ ಅಂಶಗಳಲ್ಲಿಯ ಬೆರಳೆಣಿಕೆಯ ಲೇಖಕರು ತುಂಬ ನಿಷ್ಠೆಯಿಂದ ದುಡಿಯುತ್ತ ಹೊಸ ಕಾವ್ಯದ ಸಮೃದ್ಧಿಗೆ ಕಾರಣರಾಗಿದ್ದಾರೆ.

ಜಾನಪದ ಹುನ್ನಾರದಿಂದ ತಮ್ಮ ಕವಿತೆಗಳಿಗೊಂದು ಜೀವಂತ ಹೊದಿಕೆಯನ್ನಿತ್ತ ಚಂದ್ರಶೇಖರ ಕಂಬಾರ, ಅನುಭವಗಳನ್ನು ನಿರ್ದಾಕ್ಷಿಣ್ಯವಾಗಿ ವಿಶ್ಲೇಷಣೆಗೆ ಈಡು ಮಾಡಿ. ತೀಕ್ಷ್ಣವಾಗಿ ಬರೆಯುವ ಲಂಕೇಶ್, ನಗರ ಪ್ರಜ್ಞೆಯ ತಿರುಮಲೇಶ, ಕುತೂಹಲಕಾರಿ ಪ್ರಯೋಗ ನೀಡಿದ ರಾಮಾನುಜನ್, ಸುಕುಮಾರ ಪದ್ಯಗಳ ಸುಮತೀಂದ್ರ ನಾಡಿಗ್, ವ್ಯಂಗ್ಯದೃಷ್ಟಿಯ ನಿಸಾರ್ ಅಹ್ಮದ್ ಮತ್ತು ಪಾಟೀಲ್, ಸುಂದರ ಪ್ರತಿಮೆಗಳ ಸಿದ್ಧಲಿಂಗ ಪಟ್ಟಣಶೆಟ್ಟಿ ಇತ್ಯಾದಿ ಅನೇಕರು: ಪ್ರಾಮಾಣಿಕ ಅನುಭವಗಳ ಸತ್ತ್ವಪೂರ್ಣ ಅಭಿವ್ಯಕ್ತಿಗಳನ್ನು, ತಮ್ಮ ಸೃಜನಾತ್ಮಕತೆಯಿಂದ ಒಳ್ಳೆಯ ಕಾವ್ಯವಾಗಿರಿಸಲು ಹೆಣಗುತ್ತ, ನವ್ಯಕಾವ್ಯದ ಹೊಸ ತಿರುವು, ಹೊಸ ಹೊಳಪು, ದಟ್ಟತೆ – ಸಮೃದ್ಧಿಗೆ ಕಾರಣರಾಗಿದ್ದಾರೆ.

ಕಾವ್ಯದ ಜವಾಬ್ದಾರಿ ಹೊತ್ತುಕೊಳ್ಳಲು ಅವಶ್ಯಕವಾದ ಹೊಸದೊಂದು ತಲೆಮಾರು ಕೂಡ ಆಗಲೇ ಸಿದ್ಧವಾಗಿ ನಿಂತಿದೆ. 'ಮಣ್ಣಿನ ಹಾಡಿ'ನ ಕೃಷ್ಣ ಆಲನಹಳ್ಳಿ, 'ಮನುಷ್ಯ' ಸಂಗ್ರಹದ 'ಆರ್ಯ', 'ತೆರೆ' ಬಿಚ್ಚಿದ ಸುಬ್ರಾಯ ಚೊಕ್ಕಾಡಿ, 'ಗೋಪಿ ಮತ್ತು ಗಾಂಡಲೀನ್'ದ ಲಕ್ಷ್ಮಣರಾವ್, 'ನಾಲ್ಕು ಹಿಡಿ ಬೆಂಕಿ'ಯ ದೇಶಪಾಂಡೆ ಸುಬ್ಬರಾಯ, 'ರಾಮದಾಸರ ಕವಿತೆಗಳ'ಗಳ ರಾಮದಾಸ್, 'ಗಂಡ–

ಪೆಂಡಿರ ಜಗಳ ಗಂಧ ತೀಡಿದ್ದಾಂಗ'ದ ಇಮಾಮಪೂರ, ಮುಂತಾಗಿ ಅನೇಕರು ತಮ್ಮ ಸ್ವವ್ಯಕ್ತಿತ್ವಗಳಿಂದ ಜವಾಬ್ದಾರಿಯುತ ವಿಮರ್ಶಕರ ಗಮನ ಸೆಳೆದಿದ್ದಾರೆ.

ಇವರಲ್ಲದೆ, ಅನೇಕ ಬಿಡಿಗವನಗಳಲ್ಲಿ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಗಂಭೀರವಾಗಿ ಪ್ರಯತ್ನಿಸುತ್ತಿರುವ ರಾಮಚಂದ್ರದೇವ, ಅ. ನಾ. ಪ್ರಸನ್ನ, ಕಾಳೇಗೌಡ ನಾಗವಾರ, ಶಾಮಸುಂದರ ಬಿದರಕುಂದಿ, ಜಗದೀಶ್ ಮಂಗಳೂರಮಠ, ಇತ್ಯಾದಿ ಕವಿಗಳನ್ನು ಕಾದುನೋಡಬೇಕಾಗಿದೆ.

ಕಳೆದ ೨೦ ವರ್ಷಗಳಲ್ಲಿ ಕನ್ನಡ ಕಾವ್ಯ ಸಾಧಿಸಿರುವ ಭವ್ಯ ಸಾಧನೆಯನ್ನು ಸಮಗ್ರ ನೋಟದಲ್ಲಿ ಗಮನಿಸಬೇಕೆಂದರೆ ಇತ್ತೀಚೆಗೆ ಪ್ರಕಟವಾದ ಎರಡು 'ಅಂಥಾಲಜಿ'ಗಳನ್ನು ಅವಶ್ಯವಾಗಿ ನೋಡಬೇಕು. ಪಿ. ಲಂಕೇಶರು ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ' ಮತ್ತು ಹುಬ್ಬಳ್ಳಿಯ ಸಾಹಿತ್ಯ ಮಂಟಪ ಪ್ರಕಟಿಸಿದ 'ಹೊಸ ಜನಾಂಗದ ಕವಿತೆಗಳು'. ಈ ಎರಡು ಸಂಗ್ರಹಗಳಲ್ಲಿರುವ ಕೆಲವೊಬ್ಬ ಕವಿಗಳನ್ನುಳಿದು, ಬಹುಪಾಲು ಬರಹಗಾರರು ಅತ್ಯಂತ ಹೊಣೆಗಾರಿಕೆಯಿಂದ ತಮ್ಮ ಕಷ್ಟಸಾಧ್ಯ ಗುರಿಗಳನ್ನು ಸಾಧಿಸಲು ಇನ್ನೂ ಗುದ್ದಾಡುತ್ತಿರುವುದು ಎದ್ದು ತೋರುತ್ತದೆ.

ಮೊದಲನೆಯ ಸಂಗ್ರಹದಲ್ಲಿ ಸಾಧನೆಯ ಒಂದು ಘಟ್ಟಕ್ಕೆ ಬಂದು ತಲುಪಿದವರ (ಬಹುಶಃ ಇನ್ನು ಮೇಲೇರಲಾಗದವರು, ಕೆಲವರಂತೂ ಅಭಿವ್ಯಕ್ತಿಯ ಮಾಧ್ಯಮ ಬದಲಾಯಿಸಿದವರು) ಸಂಖ್ಯೆ ಹೆಚ್ಚಾಗಿದ್ದರೆ, ಎರಡನೆಯ ಸಂಗ್ರಹದಲ್ಲಿ ಭವಿಷ್ಯದಲ್ಲಿ ತಮ್ಮ ಉಜ್ವಲತೆಯನ್ನು ಬೆಳಗುವ ಭರವಸೆ ಹೊತ್ತವರ ಸಂಖ್ಯೆ ಅಧಿಕವಾಗಿದೆ. ಕವಿಗಳ ಆಯ್ಕೆ ಕುರಿತು, ಪುಟಗಳನ್ನು ಹಂಚುವವರ ಕುರಿತು, ಮುನ್ನುಡಿಗಳ ತುತ್ತೂರಿಗಳಲ್ಲಿ ವಿಜೃಂಭಿಸುವವನ್ನು, ಗೋಕಾಕರಿಂದ ವಿಷ್ಣುಮೂರ್ತಿಗಳ ವರೆಗಿನ ಅನೇಕ ಕವಿಗಳ ಕೈಬಿಟ್ಟಿದ್ದನ್ನು ಮತ್ತು 'ಹೊಸ ಜನಾಂಗ' ಪದದ ಅರ್ಥವ್ಯಾಪ್ತಿಯನ್ನು ಕೇವಲ ೨೯ ಕವಿಗಳಿಗೆ ಮೊಟಕುಗೊಳಿಸಿದ್ದನ್ನು ಕುರಿತು, ಅನೇಕ ಅರ್ಥಪೂರ್ಣ ಆಕ್ಷೇಪಗಳ ರಾಶಿಯನ್ನು ಎದುರಿಸಿದರೂ, ಸು. ೬೩ ಜನ ಕವಿಗಳನ್ನೊಳಗೊಂಡ ಈ ಎರಡೂ ಸಂಗ್ರಹಗಳು ಕನ್ನಡ ನವ್ಯಕಾವ್ಯ ಸಾಧಿಸಿದ ಭವ್ಯ ಶ್ರೀಮಂತಿಕೆಯನ್ನು ಒಂದು ಪಕ್ಕ ನೋಟದಲ್ಲಿ ನೀಡುತ್ತವೆ.

[೩]

ಕನ್ನಡ ಸಾಹಿತ್ಯದಲ್ಲಿ ನವ್ಯ ಪ್ರಜ್ಞೆಯ ಆಗಮನ ಕಾವ್ಯಾಭಿವ್ಯಕ್ತಿಯ ಮೂಲಕವಾದರೂ ಅದರ ವಿಶೇಷ ಬೆಳವಣಿಗೆ ಕಾದಂಬರಿಗಳಲ್ಲಿ, ಸಣ್ಣಕತೆಗಳಲ್ಲಿ ಹಾಗೂ ಇತ್ತೀಚೆಗೆ ನಾಟಕಗಳಲ್ಲಿ ಎದ್ದುಕಾಣುತ್ತಿದೆ.

ಕನ್ನಡ ಕಾದಂಬರಿ ಪ್ರಪಂಚಕ್ಕೊಂದು ಹೊಸ 'ಸಂಸ್ಕಾರ' ನೀಡಿದ ಅನಂತಮೂರ್ತಿ, 'ಬಿರುಕು' ನೀಡಿದ ಲಂಕೇಶ, 'ನಾಲ್ಕನೆಯ ಆಯಾಮ' ಬರೆದ ಕುಸುಮಾಕರ ದೇವರಗೆಣ್ಣೂರು, 'ಗತಿ-ಸ್ಥಿತಿ'ಯ ಗಿರಿ, 'ಸ್ವರೂಪ'ದ ಪೂರ್ಣ

ಚಂದ್ರ ತೇಜಸ್ವಿ, 'ಮೂರು ದಾರಿಗಳ' ಯಶವಂತ ಚಿತ್ತಾಲ, 'ಮುಕ್ತಿ'ಯ ಶಾಂತಿನಾಥ ದೇಸಾಯಿ, ಇತ್ಯಾದಿ ಲೇಖಕರು ಕನ್ನಡ ನವ್ಯ ಕಾದಂಬರೀ ಕ್ಷೇತ್ರದಲ್ಲಿ ಮಹತ್ವದ ಪಾತ್ರ ಆಡಿದ್ದಾರೆ.

ಒಂದು ವಿಶಿಷ್ಟ ಸಂದರ್ಭದಲ್ಲಿ ತನ್ನ ಬದುಕಿನ ಹಳೆಯ ಆವರಣವನ್ನು ಕಿತ್ತೆಸೆದು ಹೊಸ ಕವಚವನ್ನು ತೊಡುವ ವ್ಯಕ್ತಿಯೊಬ್ಬನ ಪ್ರತೀಕದ ಹಿನ್ನೆಲೆಯಲ್ಲಿ ಸಮಕಾಲೀನ ಬದುಕು ಮತ್ತು ಮುರುಟಿದ ಮೌಲ್ಯಗಳನ್ನು ಕುರಿತು ಬರೆದ ಬಹು ಚರ್ಚಿತ ಕಾದಂಬರಿ 'ಸಂಸ್ಕಾರ'೪, ಕನ್ನಡ ನವ್ಯ ಪ್ರಜ್ಞೆ, ಭಾರತೀಯ ಸಾಹಿತ್ಯಕ್ಕಿತ್ತ ದೊಡ್ಡ ಕಾಣಿಕೆಯಾಗಿದೆ. ಈ ಕಾದಂಬರಿಯನ್ನು ಕುರಿತು ತುಂಬ ಸಮರ್ಥವಾಗಿ ವಿಶ್ಲೇಷಿಸಿದ ಡಾ. ಜಿ. ಎಸ್. ಆಮೂರರ ಒಂದು ಅವತರಣಿಕೆಯನ್ನು ಉಲ್ಲೇಖಿಸಬಹುದು.

'ಆಳವಾದ ಚಿಂತನ, ಬಾಳಿನ ಮೂಲಭೂತ ಪ್ರಶ್ನೆಗಳ ಅರಿವು, ನಿಕಟವಾದ ಜೀವನಾನುಭವ, ಜಟಿಲವಾದ, ಸಂದಿಗ್ಧವಾದ ಮನಃಕ್ರಿಯೆಯನ್ನು ಪದರ ಪದರುಗಳಾಗಿ ಬಿಡಿಸಿ ನೋಡುವ ಜಾಣ್ಮೆ, ಸಜೀವ ಭಾಷೆಯ ಮೇಲಿನ ಹಿಡಿತ ಮೂಲತಃ ಕಾವ್ಯ ಭಾಷೆಯ ಅಂಗಗಳಾದ ಪ್ರತಿಮೆ, ಪ್ರತೀಕಗಳನ್ನು ಗದ್ಯದ ಬರವಣಿಗೆಯಲ್ಲಿ ಅಳವಡಿಸಿಕೊಂಡ ಶೈಲಿ,–ಎಲ್ಲಕ್ಕಿಂತ ಹೆಚ್ಚಾಗಿ, ಅನುಭವಕ್ಕೆ ಮೂರ್ತರೂಪ ಕೊಡಬಲ್ಲ ನಾಟ್ಯೀಕರಿಸಬಲ್ಲ ಶಕ್ತಿ–ಇವೆಲ್ಲವುಗಳ ಫಲವಾಗಿ ಬಂದ 'ಸಂಸ್ಕಾರ' ಸತ್ತ್ವಯುತವಾದ, ಬಹುದಿನ ಬಾಳಬಲ್ಲ ಕೃತಿಯಾಗಿದೆ. ೫

ಯಾವುದೇ ಬಗೆಯ ಹೆಚ್ಚಿನ ತಾತ್ತ್ವಿಕ ಭಾರವಿಲ್ಲದೆ, 'ತನ್ನ ವೈಯಕ್ತಿಕ ಅನುಭವವನ್ನೆದುರಿಸಿ, ಅದನ್ನು ಅರ್ಥವಿಸಿಕೊಳ್ಳುವ' ಪ್ರಯತ್ನದಲ್ಲಿರುವ ನಾಯಕನೊಬ್ಬನ ಕಥೆಯಾದ ಶಾಂತಿನಾಥ ದೇಸಾಯರ 'ಮುಕ್ತಿ' ಕನ್ನಡದಲ್ಲಿ ಪ್ರಥಮ ನವ್ಯ ಕಾದಂಬರಿಯಾಗಿದೆ.

ಡಾ. ಆಮೂರ ಅವರು ಸರಿಯಾಗಿ ಗುರುತಿಸಿರುವಂತೆ, 'ಭೀತಿ. ಆದರ್ಶ. ಬಂಡಾಯ––ಇವು ಮನುಷ್ಯನ ಮನಸ್ಸು–ಕೃತಿಗಳನ್ನು ಹೇಗೆ ಪ್ರಭಾವಿಸುತ್ತವೆ ಎಂಬುದನ್ನು ಕಲಾತ್ಮಕವಾಗಿ ನಿರೂಪಿಸುವುದು ಲೇಖಕರ ಸಂಕಲ್ಪಿತ" ೫ ಉದ್ದೇಶವಾಗಿರುವ ಯಶವಂತ ಚಿತ್ತಾಲರ 'ಮೂರು ದಾರಿಗಳು'ಕೂಡ ಒಂದು ಸಾರ್ಥಕ ಪ್ರಯತ್ನವಾಗಿದೆ. 'ಕಾದಂಬರಿ ಬೆಳೆದಂತೆ, ಈ ಮೂರು ಮಾರ್ಗಗಳ ಕೊನೆ ದುಃಖದಲ್ಲಿಯೇ ಎನ್ನುವುದ'ನ್ನು ಸ್ಪಷ್ಟಪಡಿಸುತ್ತ. ಓದುಗನ ಮೇಲೆ ಅನನ್ಯ ಪರಿಣಾಮ ಬೀರುವ ಚಿತ್ತಾಲರ ಈ ಕೃತಿ ಒಂದು ಸೊಗಸಾದ ರಚನೆ.

"ಇಂದಿನಿಂದ ನಾನೊಬ್ಬ ಬೇರೆಯೇ ವ್ಯಕ್ತಿ. ದಬ್ಬಾಳಿಕೆಯ ವಿರುದ್ಧ, ನಾನು ಬಂಡು ಏಳುತ್ತೇನೆ. ಇಂದಿನಿಂದಲೇ ನಾನು ನನ್ನ ಸ್ವರೂಪವನ್ನು ತಿಳಿದುಕೊಂಡೆ.

---

೪. ಈ ಕಾದಂಬರಿಯನ್ನಾಧರಿಸಿದ ಅದೇ ಹೆಸರಿನ ಕನ್ನಡ ಚಲನಚಿತ್ರಕ್ಕೆ ಇತ್ತೀಚೆಗೆ ರಾಷ್ಟ್ರಾಧ್ಯಕ್ಷರ ಸುವರ್ಣ ಪದಕ ದೊರಕಿರುವುದನ್ನು ನೆನೆಯಬಹುದು.

೫. ಡಾ. ಗುರುರಾಜ ಆಮೂರ: ಕೃತಿ ಪರೀಕ್ಷೆ: ಸಮಾಜ ಪುಸ್ತಕಾಲಯ ಧಾರವಾಡ: ೧೯೬೧

ಏನು ಮಾಡಬಹುದು ? ಮೊದಲು ಸ್ನೇಹಿತನ ಭಾರವನ್ನು ತೆಗೆದು ಹಾಕುತ್ತೇನೆ. ತಂದೆಯ ಅಧಿಕಾರವನ್ನು ಕಿತ್ತೊಗೆಯುತ್ತೇನೆ. ತಾಯಿಯ ಮಮತೆಯ ಬಲೆಯನ್ನು ಕತ್ತರಿಸಿ ಹಾಕುತ್ತೇನೆ. ಸಂಸ್ಕೃತಿಯ ವಿರುದ್ಧವೇ ಹೋರಾಟ ಹೂಡುತ್ತೇನೆ." ಎಂದು 'ನಾಲ್ಕನೆಯ ಆಯಾಮ' ಕಾದಂಬರಿಯ ಒಂದು ಹಂತದಲ್ಲಿ ನಾಯಕ ಉದ್ಘೋಷಿಸುತ್ತಾನೆ. ಆದರೆ, ಇಂಥ 'ಬಂಡು' 'ಹೋರಾಟ,' 'ದಬ್ಬಾಳಿಕೆ' 'ಸ್ವರೂಪ' ಇತ್ಯಾದಿ ತೀವ್ರವಾದ ಆಳ-ಅಗಲದ ಅರ್ಥವ್ಯಾಪ್ತಿಗಳನ್ನು ಹೊಂದಿದ ಪದಗಳನ್ನು ಉಚ್ಚರಿಸುವ ಪ್ರೋಜ್ ವ್ಯಕ್ತಿತ್ವದಲ್ಲೇ ತೃಪ್ತಿ ಕಂಡುಕೊಂಡು, ಅಥವಾ, ತಾನು ಬಡಬಡಿಸುತ್ತಿರುವ ಪದಗಳ ಉಚ್ಚಾರ್ಥಗಳನ್ನು ಅರ್ಥಯಿಸಿಕೊಳ್ಳುವಷ್ಟು ಕೂಡ, ವ್ಯವಧಾನ, ಪ್ರಯತ್ನ, ಬುದ್ಧಿವಂತಿಕೆ, ಕ್ರಿಯಾಶೀಲತೆಗಳಿಲ್ಲದೆ ಮಹಾವ್ಯಕ್ತಿತ್ವ ಸಾಧನೆಯ ಬರೀ ಹುರುಹುರುತನವನ್ನೇ ಮತ್ತೆ ಮತ್ತೆ ಪ್ರದರ್ಶಿಸುತ್ತ, ಕೊನೆಗೆ ಪೂರ್ಣ ನೆಲಸಮವಾಗುವ ಇಲ್ಲಿಯ ದುರ್ಬಲ ನಾಯಕ, ಇಂದಿನ ಹಿಂಡು ಹಿಂಡು ಯುವಕರಿಗೆ ಹಿಡಿದ ಭೂತಗನ್ನಡಿಯಾಗಿದ್ದಾನೆ.

ಜಾತಿ, ಅಧಿಕಾರ, ಪ್ರಭಾವ, ದಗಾಕೋರತನದಲ್ಲಿ ಸಾಯುತ್ತಿರುವ ಶಿಕ್ಷಣ; ಪ್ರಲೋಭನ: ಪ್ರೋಜು-ಪ್ರೇಮಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಒಡ್ಡಾಡುವ ತಾರ್ಕಿಕತೆ, ಆಕಸ್ಮಿಕವಾಗಿ ವಕ್ಕರಿಸಿದ ಭೀಕರ ಕೊಲೆಯೊಂದರ ಅಸಹಾಯಕ ಘಟನೆ: ನಾಯಕನ ಮಾನಸಿಕ-ವೈಚಾರಿಕ ಮಟ್ಟಗಳಲ್ಲಿ ಇಬ್ಬಂದಿ ಕೊರಗಾಟಗಳ ಚಿತ್ರಣಗಳೊಂದಿಗೆ ಕತೆಯ ಕೊನೆಯಲ್ಲಿ ಮೂಡುವ ನಾಯಕನ ಆಳವಾದ ದುರಂತ ವಿಷಣ್ಣತೆ. ಅಸಹಾಯಕತೆಗಳು-ಇವೆಲ್ಲವುಗಳನ್ನೂ ಅತ್ಯಂತ ಸತ್ವಯುತವಾಗಿ ನಿರೂಪಿಸಿದ ಭಾಷೆ. ತಂತ್ರ-ಜಾಣ್ಮೆಯಿಂದಾಗಿ 'ಸ್ವರೂಪ,' ತನ್ನ ಗಾತ್ರಕ್ಕಿಂತ ಎಷ್ಟೋ ಮಿಗಿಲಾದ ದಟ್ಟ ಪರಿಣಾಮ ಬೀರುತ್ತದೆ.

ಗಂಗಪ್ಪನಂಥ ಬೂರ್ಶ್ವಾಗಳು, ಶಿಕ್ಷಣ ರಂಗದಲ್ಲಿ 'ನಾಟಕ' ಗಳನ್ನಾಡಿಕೊಂಡು, ಸಮಯಕ್ಕೊಂದು ಬಣ್ಣ ಹಚ್ಚಿಕೊಂಡು ಮೆರೆಯುವ ರಂಗಯ್ಯ ಮತ್ತು 'ಅಗಾಧ' ಇಂಗ್ಲಿಷಿನ ಬುಳ್ಳಪ್ಪನಂತಹ ವಿದ್ಯಾಧಿಪತಿಗಳು: ಯಾಂತ್ರಿಕತೆಯನ್ನು ಮೆರೆಯುತ್ತ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡ ಆಫೀಸುಗಳು: ಕಿಟ್ಟದಗಳ ಕಲ್ಲಿನೊಂದಿಗೆ ಕಲ್ಲಾಗಿ ಹೋದ ಕ್ಲಾರ್ಕುಗಳು ; ಇಂದಿರಾ, ಪರಮ, ವಸಂತ, 'ಘೋಸ್' ಇಂಗ್ಲಿಷಿನ ಮೀನಾ, ಇತ್ಯಾದಿಗಳು ಪ್ರತಿನಿಧಿಸುವ ನಮ್ಮ ವಿದ್ಯಾರ್ಥಿ ವರ್ಗ ; ಚಂದ್ರಕಾಂತರ ಸಾಹಿತ್ಯ ಮತ್ತು ಸಿಂಡಿಕೇಟ್ ಜಗತ್ತು, ಗತ್ತಿನ ಪೋಲೀಸ್ ಇನ್ಸ್‌ಪೆಕ್ಟರ್ ಮುತ್ತಯ್ಯ, ಈ ಎಲ್ಲ ಜಗತ್ತನ್ನು ತನ್ನ ಏಕನಾಯಕ ಮುಷ್ಟಿಯಲ್ಲಿಟ್ಟುಕೊಂಡ ನಾಯಕ; ಇವೆಲ್ಲವುಗಳೊಂದಿಗೂ ಕೊಂಡಿ ಕೂಡಿಸಿಕೊಳ್ಳಬಲ್ಲ ಶಾಂತ, ಇವರೆಲ್ಲರ 'ಅದ್ಭುತ' ಜಗತ್ತಿನ ಹಿನ್ನೆಲೆಯಲ್ಲಿ ಅತ್ಯಂತ ಪ್ರಭಾವಶಾಲಿಯಾಗಿ ಮೂಡಿಬಂದ ಪಿ. ಲಂಕೇಶರ 'ಬಿರುಕು' ಒಂದು ಗಣ್ಯ ಸೃಷ್ಟಿ ಎನ್ನಿಸುತ್ತದೆ.

ಸೂಕ್ಷ್ಮ ಸಂವೇದನೆಗಳನ್ನು ಹೊಂದಿದವನೊಬ್ಬನ ಸುತ್ತಲೂ ಹಬ್ಬಿಕೊಂಡಿರುವ ಅಸಹನೀಯ ವಾತಾವರಣವನ್ನು ಪ್ರತಿನಿಧಿಸುವ; ಆ 'ನಗರ' ದಿಂದ ಹೊರಕ್ಕೆ ಓಡಲೆತ್ನಿಸಿದಷ್ಟೂ, ಮುಚ್ಚಿಕೊಂಡು ಬಿಟ್ಟಿರುವ ಬೀದಿಗಳು, ನಮ್ಮ ಬದುಕಿಗೆ ಸುತ್ತಿಕೊಂಡ ಸಂಕೋಲೆಗಳನ್ನು, ಅವುಗಳಿಂದ ಪಾರಾಗಲಾರದ ನಮ್ಮ ಅಸಹಾಯು-ಕತೆಗಳನ್ನು, 'ಉರಿಯುತ್ತ' ಲೇ ಬಿದ್ದುಕೊಂಡಿರಬೇಕಾದ ಅನಿವಾರ್ಯತೆಯನ್ನು ಸೂಚಿಸಿ-ದರೆ; ಸೂಕ್ಷ್ಮ ವಿಚಾರ – ಸಂವೇದನೆಗಳ, ಜೀವಂತ ಮನುಷ್ಯನಿಗೆದುರಾಗಿ ನಿಂತ, ಸದ್ಯದ ಸಮಾಜದ ಅರ್ಥಗಳನ್ನು ಕಳಚಿಕೊಂಡು, 'ಜೀವಂತಿಕೆ' 'ಸತ್ತು', ಕೇವಲ ಬದುಕಿದ ಶವಗಳಾದ ಅನೇಕ ಕೋಟಿಗಳನ್ನು ಪಟ್ಟಿಕಟ್ಟುತ್ತ ಕುಳಿತ ಪಾನ್‌ವಾಲಾ ಅತ್ಯಂತ ಸಮರ್ಪಕವಾಗಿ ಪ್ರತಿನಿಧಿಸುತ್ತಾನೆ. 'ಜೀವಂತ' ಮತ್ತು 'ಸತ್ತ' ವ್ಯಕ್ತಿಗಳ ನಡುವೆ ಸಾಧ್ಯವೇ ಆಗಲಾರದ ಸಂಭಾಷಣೆಗಳಿಗೆ ಪಾನ್‌ವಾಲಾನ ಕಿವುಡು ನಿರ್ಲಕ್ಷ್ಯತನ, 'ಗಿರಿ' ಅವರ 'ಗತಿಸ್ಥಿತಿ' ಯಲ್ಲಿ ಒಂದು ಅತ್ಯುತ್ತಮ ವಿಡಂಬನೆಯಾಗಿ ನಿಲ್ಲುತ್ತದೆ. ಬದುಕಿನ ಕೊಳಕು ಯಾಂತ್ರಿಕತೆಯ ಕಚೇರಿಗಳು; ಉಚ್ಚ ನಾಗರಿಕ ಜನತೆಯ ನಿರಂತರ ಮೂರ್ಖತನ, ಶೈಕ್ಷಣಿಕ ಸಂಸ್ಥೆಗಳಲ್ಲಿ ಬೆಳೆದುನಿಂತ ಬೇಜವಾ-ಬ್ದಾರಿತನ, ಅಪ್ರಾಮಾಣಿಕತೆ, ಜೀವಂತ ಮತ್ತು ಸತ್ತ ಸಂದರ್ಭಗಳು ಕೂಡಿ ಬದುಕುವಿಕೆ, ಮತ್ತು ಆ ನಡುವೆ ಬಾಯಿ ತೆರೆಯುವ ಅನಿವಾರ್ಯ ಬಿರುಕುಗಳ ಉತ್ಕೃಷ್ಟ ಚಿತ್ರಣ 'ಗತಿಸ್ಥಿತಿ' ಕನ್ನಡದ ಇತ್ತೀಚಿನ ಉತ್ತಮ ಕಾದಂಬರಿಗಳಲ್ಲೊಂದು.

ಮೇಲಿನವುಗಳಲ್ಲದೆ, ವ್ಯಾಸರಾವ ನಿಂಜೂರರ 'ಉಸಿರು', ಸುಂದರ ನಾಡಕರ್ಣಿ ಯವರ 'ಮೋಹಿತರು', ಶ್ರೀಕೃಷ್ಣ ಆಲನಹಳ್ಳಿಯವರ 'ಕಾಡು', ಮತ್ತು ಕೆಲವೇ ಪುಟಗಳಷ್ಟು ಪ್ರಕಟವಾಗಿರುವ ಲಂಕೇಶರ 'ಮಾರಲಾಗದ ನೆಲ' ಕೂಡ ಪರಿಶೀಲ ನಾರ್ಹ ಕಾದಂಬರಿಗಳಾಗಿವೆ.

[೪]

ಸಧ್ಯದ ಸಾಮಾಜಿಕ ಮತ್ತು ವೈಯಕ್ತಿಕ ಅಸ್ತಿತ್ವಗಳ ನೆಲಪಾಯವಾಗಿ ನಿಂತಿರುವ ಮೌಲ್ಯಗಳನ್ನು, ಅವುಗಳ ಮೇಲೆ ಹಮ್ಮಿಕೊಂಡಿರುವ ವಿಶಾಲ ಬದುಕನ್ನು, ಬದುಕಿನ ಆಳದಲ್ಲಿರುವ ಸಂಸ್ಕೃತಿಯ ಅರ್ಥಗಳ ಉದ್ದಗಲಗಳನ್ನು, ನಿಶ್ಚಿತ ಸಂದರ್ಭಗಳಲ್ಲಿ ಅಥವಾ ಒಟ್ಟಾರೆ ಬದುಕಿನ ತನ್ನ ನಿಲುವನ್ನು, ಎಲ್ಲವನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸುವ ಪ್ರತಿಭೆ ಉತ್ತಮ ನವ್ಯ ಕತೆಗಾರನಲ್ಲಿದೆ. ಬರವಣಿಗೆ ಮತ್ತು ಅನುಭವಗಳನ್ನು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗದಂತೆ, ಮೈಗಂಟಿದ ಚರ್ಮದಷ್ಟು ಅವಿಭಾಜ್ಯವಾಗಿ ಬರೆಯುವ ನವ್ಯಕತೆಗಾರರ ಬರವಣಿಗೆಯಲ್ಲಿಯ ವಾಸ್ತವತೆ, ನಿಷ್ಠುರತೆ ಮೆಚ್ಚಬೇಕಾದ ಅಂಶಗಳು. ಈ ದಿಕ್ಕಿನಲ್ಲಿ ಕಳೆದ ದಶಕ ತುಂಬ ಸಮೃದ್ಧಿಯನ್ನು ಕಂಡಿದೆ.

ಮಾಸ್ತಿಯವರ ನಂತರ ಕನ್ನಡ ಸಣ್ಣಕತೆಗಳಲ್ಲಿ ಅತ್ಯಂತ ಮಹತ್ವದ ಪಾತ್ರ ವನ್ನಾಡಿದ ಕತೆಗಾರ: ಯು. ಆರ್. ಅನಂತಮೂರ್ತಿ. ಯಾವುದೇ ಶ್ರೇಷ್ಠ ಕತೆಗಾರ

ನಿಗಿರಬೇಕಾದ ಬದುಕಿನ ವಿಶಾಲ ಅನುಭವ, ಸೂಕ್ಷ್ಮ ದೃಷ್ಟಿಕೋನ ಮತ್ತು ಉತ್ತಮ ಮಟ್ಟದ ಅಭ್ಯಾಸ ಪ್ರವೃತ್ತಿ ಹೊಂದಿದ ಅವರು, ಮುಖ್ಯವಾಗಿ ಒಬ್ಬ ಒಳ್ಳೆಯ ಮಟ್ಟದ ವಿಚಾರಶೀಲರೂ ಆಗಿರುವದರಿಂದ, ವಿಚಾರ ಪ್ರಧಾನವಾದ ಅವರ ಕತೆಗಳು ಕಾವ್ಯಮೂಲವಾದ ಪ್ರತಿಮೆ, ಪ್ರತೀಕಗಳ ಹಿನ್ನೆಲೆಯಲ್ಲಿ ತೀವ್ರವಾದ ಪ್ರಭಾವ ಬೀರುತ್ತವೆ. (ಸಂಸ್ಕಾರದ ಇಡಿಯ ಕತೆ ಒಂದು ಪ್ರತೀಕ ಎನ್ನುವದನ್ನು ನೆನೆದಾಗ, ತಮ್ಮ ವಿಚಾರಗಳಿಗೆ ಪೋಷಕವಾಗುವಂತೆ ಎಷ್ಟೊಂದು ಸಮರ್ಥವಾಗಿ ಇವರು ಕತೆಯನ್ನು ಕಟ್ಟಬಲ್ಲರು ಎಂಬುದು ಸ್ಪಷ್ಟವಾಗುತ್ತದೆ) ಸೋಲುಗಳ ಮೇಲೆ ಸೋಲುಗಳ ರಾಶಿಯನ್ನೆದುರಿಸುತ್ತ, ಭೌತಿಕವಾಗಿ, ಮಾನಸಿಕವಾಗಿ, ಮೆಟ್ಟಿಲು ಮೆಟ್ಟಿಲಾಗಿ ಕುಸಿಯುತ್ತ, ಬದುಕಿನ ತೀವ್ರ ಪ್ರಬಲತೆಗೆ ತಲೆಬಾಗಿದ ವ್ಯಕ್ತಿಯೊಬ್ಬನ ದುರಂತ ಮೂಡಿಸುವ 'ಪ್ರಕೃತಿ'; ಭೂತ-ವರ್ತಮಾನಗಳ ಬಿಡಿಸಲಾಗದ ಕಗ್ಗಂಟಿನ ಬದುಕಿನಲ್ಲಿ ತನ್ನ ಅಸ್ತಿತ್ವದ 'ಇಂದ'ನ್ನು, 'ನಿನ್ನೆ'ಗಳ ಕಸಪಿಸಿಗಳಿಂದ ಬಿಡಿಸಿ, ಜೀವಂತಿಕೆಯನ್ನು ಕಾಣಲು ಹಾತೊರೆವ ನಾಯಕನ ಸಮರ್ಥ ಚಿತ್ರಣದ 'ಕಾರ್ತಿಕ'ದಂತಹ ಉತ್ತಮ ಕತೆ, ಮತ್ತು 'ಪ್ರಶ್ನೆ', 'ಘಟಶ್ರಾದ್ಧ', 'ಪ್ರಸ್ತ'ಗಳಂತಹ ಒಳ್ಳೆಯ ಸಾಧನೆಗಳಲ್ಲದೆ ಪೂರ್ವ ಪಶ್ಚಿಮಗಳೆರಡು ಅಸಂತೃಪ್ತ ಜನಾಂಗಗಳ ಪ್ರಾತಿನಿಧಿಕ ಒದ್ದಾಟ-ದ್ವಂದ್ವ ಚಿತ್ರಿಸುವ 'ಕ್ಲಿಪ್ ಜಾಯಿಂಟ್'; ಎರಡು ವಿರುದ್ಧ ನೆಲೆಗಳ ಆಚೆ-ಈಚೆಗಳಲ್ಲಿ ಒಟ್ಟೊಟ್ಟಿಗೆ ಹಣಿಕ್ಕಿ, ಬದುಕನ್ನು ಸೂಕ್ಷ್ಮವಾಗಿ ಪರಿಶೀಲಿಸುವ 'ಮೌನಿ' ಕತೆಗಳ ಕನ್ನಡ ನವ್ಯ ಕತೆಗಳ ಶ್ರೇಷ್ಠತೆ ಮೆರೆಯುವಂತಿವೆ.

ಸಾಹಿತ್ಯದ ಸರ್ವಾಂಗಗಳಲ್ಲಿಯೂ ತಮ್ಮ ವೈಶಿಷ್ಟ್ಯವನ್ನು ಮೆರೆಯುತ್ತಿರುವ ಪಿ. ಲಂಕೇಶರ ಕಥಾಕ್ಷೇತ್ರದಲ್ಲಿಯ ಸಾಧನೆಯೂ ಗಮನಾರ್ಹವಾಗಿದೆ. ಮನುಷ್ಯನ ಸಣ್ಣತನ, ಸಮಯ ಸಾಧಕತೆ, ಕ್ಷುಲ್ಲಕತೆಗಳ ಹಿನ್ನೆಲೆಯಲ್ಲಿ ಸಾಯುತ್ತಿರುವ ಮಾನವೀಯತೆಯನ್ನು, ಹಿಡೆಯಾಡುತ್ತಿರುವ ಪೋಜುಗಳನ್ನು, ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ತಲೆಯೆತ್ತಿ ಕುಣಿಯುತ್ತಿರುವ ದಾಂಭಿಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು, ಆಯ್ದುಕೊಂಡ ಅನುಭವದ ಆಳ ಮತ್ತು ತೀಕ್ಷ್ಣ ವಿಶ್ಲೇಷಣೆಗಳಿಂದಾಗಿ ಸೂಕ್ಷ್ಮ ಓದುಗನನ್ನು ಒಪ್ಪಿಸುತ್ತ ಹೋಗುವ ಅವರ 'ಕುರುಡ ಕಾಂಚಾಣ', 'ನಿವೃತ್ತರು', 'ವಾಮನ', 'ರೊಟ್ಟಿ', 'ಆಕ್ಟೋಪಸ್', 'ಸಪ್ಟಂಬರದಲ್ಲಿ ಪ್ರಥಮ ರಾತ್ರಿ'-ಕಥೆಗಳು ವಾಚಕನ ಮೇಲೆ ಗಂಭೀರ ಪರಿಣಾಮ ಬೀರುತ್ತವೆ.

ಯಾವುದೇ ಬಗೆಯ ಹೆಚ್ಚಿನ ರಭಸವಿಲ್ಲದೆ, ಆಕ್ರೋಶಗಳಿಲ್ಲದೆ, ಅತ್ಯಂತ ಸಂಯಮದಿಂದ ಮತ್ತು ವಿಶಿಷ್ಟಪೂರ್ಣವಾಗಿ, ಸಣ್ಣ ಕತೆಗಳಲ್ಲಿ ತಮ್ಮ ವ್ಯಕ್ತಿತ್ವ ಬೆಳಗುತ್ತಿರುವ ಇಬ್ಬರು ಮುಖ್ಯ ಕತೆಗಾರರು: ಯಶವಂತ ಚಿತ್ತಾಲ ಮತ್ತು ಕೆ. ಸದಾಶಿವ.

ಉತ್ತರ ಕನ್ನಡದ ನೇಗಿಲುತಾಗದ (ಕರಾವಳಿಯ) ಅನುಭವ ಭೂಮಿಯನ್ನು ಸಾಹಿತ್ಯದ ಒಂದು ಹದಕ್ಕೆ ತಂದು, ಉತ್ತಿ ಬೆಳೆದ ಕೀರ್ತಿ ಯಶವಂತರಿಗಿದೆ. ಉತ್ತಮ

ಕಾವ್ಯಕ್ಕೆ ಹೆಚ್ಚು ಸಮೀಪವಿರುವ ಚಿತ್ತಾಲರ ಸತ್ತ್ವಯುತ ಗದ್ಯ ಕತೆಗೆ ಕಾವ್ಯದ ಕಾವನ್ನು ನೀಡುತ್ತ, ಅನುಭವ, ಹೊಸ ಹೊಳಪಿನಿಂದ ಮೆರೆಯುವಂತೆ ಮಾಡುತ್ತದೆ. 'ಸಂದರ್ಶನ' ಮತ್ತು 'ಅಬೋಲಿನ್'ಗಳ ನಂತರದ 'ಆಟ' ಸಂಗ್ರಹದಲ್ಲಿಯ 'ಸೆರೆ'. 'ಆಟ', 'ಛಲ' 'ಪಯಣ'–ಈ ಉತ್ಕೃಷ್ಟ ಕತೆಗಳು ಕನ್ನಡದ ನವ್ಯ ಕತೆಗಳಿಗೆ ಅಭಿಮಾನದ ಕೊಡುಗೆಗಳಾಗಿವೆ.

'ನಲ್ಲಿಯಲ್ಲಿ ನೀರು ಬಂತು'[೬] ಸಂಗ್ರಹದ ಅನೇಕ ಸಮರಾದ ಕತೆಗಳನ್ನು ಬರೆದ ಕೆ. ಸದಾಶಿವರು, ಪ್ರಗತಿಶೀಲ ಚಳುವಳಿಯಲ್ಲಿ ಬೆಂದು ಬಂದಿದ್ದರೂ, ಆ ಸಂಪ್ರದಾಯದ ಕಣ್ಣೀರು, ಆಕ್ರೋಶಗಳನ್ನು ಅಷ್ಟೊಂದು ಸುಲಭವಾಗಿ, ಆಚೆಗಿಟ್ಟದ್ದನ್ನು ಗಮನಿಸಿದರೆ, ಅವರ ಸಾಧನೆಯು ಕುರಿತು ಅಭಿಮಾನವೆನಿಸುತ್ತದೆ. 'ಗಿಡ್ಡಿ', 'ನಲ್ಲಿಯಲ್ಲಿ ನೀರು ಬಂತು', 'ಹಾವು', 'ಮತ್ತೆ ಮಳೆ ಹೊಯ್ಯುತಿದೆ ಎಲ್ಲ ನೆನಪಾಗುತ್ತಿದೆ......', 'ಅಪರಿಚಿತರು' ಮುಂತಾದ ಅನೇಕ ಉತ್ತಮ ಕತೆಗಳನ್ನು ಬರೆದ ಅವರು ಇತ್ತೀಚಿನ 'ಅಪರಿಚಿತರು' ಸಂಗ್ರಹದಲ್ಲಿ ನೀಡಿದ 'ರಾಮನ ಸವಾರಿ ಸಂತೆಗೆ ಹೋದದ್ದು' ಸದಾಶಿವರ ಕಥಾ ಸಾಧನೆಯಲ್ಲಿ ಮಹತ್ವದ ತಿರುವಾಗಿದೆ. ಗೋರೂರರ ತಿಳಿಹಾಸ್ಯದ ಶೈಲಿ ನೆನಪಾಗುವಂತಹ ಭಾಷೆ, ಮಗುತನದ ಮುಗ್ಧತೆಯೊಂದಿಗೆ, ಅದರ ಬೆನ್ನಿಗಂಟೇ ಅತ್ಯಂತ ಗಂಭೀರ ಸನ್ನಿವೇಶಗಳನ್ನು ಒಟ್ಟೊಟ್ಟಾಗಿ, ಪರಿಣಾಮಕಾರಿಯಾಗಿ ಹೆಣೆದಿರುವುದನ್ನು ಲಕ್ಷಿಸಿದರೆ, ಸದಾಶಿವರಿಂದ ಇನ್ನೂ ಅನೇಕ ಉತ್ತಮ ಕತೆಗಳನ್ನು ಅಪೇಕ್ಷಿಸಬಹುದು ಎನ್ನಿಸುತ್ತದೆ.

'ಮಂಜುಗಡ್ಡೆ' 'ಕ್ಷಿತಿಜ' ಮತ್ತು ಇತ್ತೀಚೆಗೆ 'ದಂಡೆ' ಕಥಾ ಸಂಗ್ರಹಗಳನ್ನು ರಚಿಸಿದ ಶಾಂತಿನಾಥ ದೇಸಾಯರೂ ಕೂಡ, ನವ್ಯ ಕಥಾಸಾಹಿತ್ಯಕ್ಕೆ ಅನೇಕ ಒಳ್ಳೆಯ ಕತೆಗಳನ್ನು ನೀಡಿದ್ದಾರೆ. ಮನೋವಿಶ್ಲೇಷಣಾತ್ಮಕ ಬರಹ, ದೇಸಾಯರ ವೈಶಿಷ್ಟ್ಯ. ವಿಶೇಷವಾಗಿ, ಆಧುನಿಕ ಜಗತ್ತಿನ ಹೊಸ ಮನೋಧರ್ಮದ ಮನುಷ್ಯನನ್ನು ವಿಶಿಷ್ಟ ಸಂದರ್ಭಗಳಲ್ಲಿ ತೊಡಗಿಸಿ. ಆತನ ಮನಸ್ಸನ್ನು ಹಿಂಜಿನೋಡಿ, ವಸ್ತುನಿಷ್ಠವಾಗಿ ಬರೆಯುವ ದೇಸಾಯರ ಕತೆಗಳು, ಅವರ ಒಂದು ವಿಶಿಷ್ಟಸಾಧನೆ. ಕನ್ನಡ ನವ್ಯದಲ್ಲೇ ಅತ್ಯುತ್ತಮವಾದ 'ಕ್ಷಿತಿಜ'ವನ್ನಲ್ಲದೆ, 'ದಂಡೆ'. 'ದಿಗ್ಭ್ರಮೆ'. 'ಅಕಾಲ' 'ಬೇಸರ', 'ನಿರ್ಣಯ'. ಮೊದಲಾದ ಕತೆಗಳನ್ನು ಒಳ್ಳೆಯವೆಂದು ಗಣಿಸಬಹುದಾಗಿದೆ.

ಶೇಕಡಾ ೯೯ ರಷ್ಟು ಪುರುಷಧ್ವನಿಗಳಿಂದ ತುಂಬಿ ಹೋಗಿರುವ ನವ್ಯಕಥಾ ಮಾರ್ಗದಲ್ಲಿ ತಮ್ಮ ಮಹಿಳಾಸ್ವರದಿಂದ ಓದುಗರನ್ನಾಕರ್ಷಿಸಿದ ಏಕಮಾತ್ರ ಕತೆಗಾರ್ತಿ ವೀಣಾ. ಆಧುನಿಕ ಮಹಿಳೆಯೊಬ್ಬಳ, ಅದರಲ್ಲೂ ವಿಶೇಷವಾಗಿ ಹೊಸ ಮನೋಧರ್ಮದ ಯುವತಿಯ ಮನಸ್ಸಿಗೆ ಕೊಕ್ಕೆ ಸಿಕ್ಕಿಸಿ ಗಾಳ ತೂಗುವ ಅವರ ಕಥೆಗಳನ್ನು ಓದುವುದೇ

---

೬. ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟಿನ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳು ಈ ಹೆಸರಿನ ಕಥೆಯನ್ನು ಆದರಿಸಿ ಒಂದು ಪ್ರಭಾವಶಾಲಿ ಪ್ರಾಯೋಗಿಕ ಚಲನಚಿತ್ರ ನಿರ್ಮಿಸಿದ್ದನ್ನು ಇಲ್ಲಿ ನೆನೆದುಕೊಳ್ಳಬಹುದು.

ಒಂದು ಸೊಗಸು. 'ಮುಳ್ಳುಗಳು' ಸಂಗ್ರಹದ ಕೊನೆಯು ಮತ್ತು ಈಚೆಗೆ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲ ಕತೆಗಳನ್ನು ಗಮನಿಸಿದರೆ. ವೀಣಾರಲ್ಲೂ (ನಮ್ಮಲ್ಲಿ ಬಹುಪಾಲು ಮಹಿಳೆಯರಿಗೆ ತ್ಯಜಿಸಲಾಗದ) ರೋಮ್ಯಾಂಟಿಕ್ ಮನೋಭಾವ ತಲೆಯೆತ್ತುತ್ತಿದೆಯೋ ಎಂಬ ಭಯವೆನಿಸಿದರೂ, 'ಮುಳ್ಳುಗಳು', 'ಅತಿಥಿ', 'ನೆನಪು ಬರೀ ನೆನಪು ...' ಮೊದಲಾದ ಕತೆಗಳ ಉತ್ತಮ ಸಾಧನೆಯನ್ನು ಒಪ್ಪಲೇಬೇಕು.

ಈಚೆಯ ಹೊಸ ತಲೆಮಾರಿನ ನವ್ಯ ಲೇಖಕರಲ್ಲೆಲ್ಲ ಅತ್ಯಂತ ಆಳವಾದ ಆರ್ಷೇಯ ಪ್ರಜ್ಞೆ ಹೊಂದಿದ 'ಆರ್ಯ'ರು ಅತ್ಯಂತ ಪ್ರಭಾವಶಾಲಿಯಾದ ಹೊಸಧ್ವನಿಯಾಗಿದ್ದಾರೆ. ಬದುಕನ್ನು ನೋಡುವ ಗಂಭೀರ ಬಗೆ. ಅನುಭವದ ಸತ್ಯಪೂರ್ಣ ನಿವೇದನೆ – ವಿಶ್ಲೇಷಣೆ. ಗಟ್ಟಿಮುಟ್ಟಾದ ಬರಹವನ್ನು ಅಳವಡಿಸಿಕೊಂಡ ಆರ್ಯರ 'ದೃಷ್ಟಿ' ಸಂಕಲನ ಕತೆಗಳು ನವ್ಯ ಸಾಹಿತ್ಯಕ್ಕೆ ಚೆಗಿತ ಹೊತ್ತ ಹೊಸ ರೇಖೆ – ಕೋದೆಗಳಾಗಿವೆ. ಸತ್ತು ಹಿಂದಿಹೋದ ಬದುಕಿನ ಕೊನೆಯ ಗಳಿಗೆಗಳಲ್ಲಿ ನುಗ್ಗಿನುಗ್ಗಿ ಬರುವ ಭೂತದ ಭೀಕರ ಒತ್ತಡವನ್ನು ವಿವರಿಸಲಾಗದೆ, ಆತ್ಮಹತ್ಯೆಗೆ ಎಳಸಿದ ಮುದುಕ ಚೌಧರಿಯು ಅತ್ಯಂತ ಪ್ರಭಾವಶಾಲಿ ಕತೆ: 'ನೆರಳು': ತನ್ನ ಹೊಳಪಿನ ಗದ್ಯದಿಂದಾಗಿ ಆಕರ್ಷಿಸುವ 'ರಣಗಾಳಿಯ ಹೂ'ಗಳಂತಹ ಅತ್ಯುತ್ತಮ ಕಥೆ ಬರೆದ ಆರ್ಯರಿಂದ ಇನ್ನೂ ಸಾಕಷ್ಟನ್ನು ನಿರೀಕ್ಷಿಸಬಹುದು.

'ಒಂದು ತೊಲ ಪುನುಗು ಮತ್ತು ಇತರ ಕತೆಗಳಂತಹ ಅತ್ಯಂತ ಚಿಕ್ಕದಾದ, ಚೊಕ್ಕ ಸಂಕಲನ ಕೊಟ್ಟ 'ಕಾಮರೂಪಿ' ಅವರು ವಿಲಕ್ಷಣವೆನ್ನಿಸುವ, ಒರಟಾಗಿ ತೋರುವ, ಆದರೆ ಪ್ರಭಾವಶಾಲಿಯೆನಿಸುವ ಕತೆಗಳನ್ನು ಬರೆದಿದ್ದಾರೆ. 'ಉಪಪತ್ತಿಯೋಗ' ಎಂಬ ಕತೆ ಉಲ್ಲೇಖಾರ್ಹ.

ಮೇಲಿನ ಕತೆಗಾರರಲ್ಲದೆ 'ಖಿನ್ನೆಯ ಜೀವ'ದ ರಾಮಚಂದ್ರ ಶರ್ಮ: 'ಮಗುವಾಗಿ ಬಂದವನು' ಸಂಕಲನದ ಜಿ. ಎಸ್. ಸದಾಶಿವ; 'ಜ್ವಾಲೆ ಅರಿತು' ಸಂಗ್ರಹದ ಟಿ. ಜಿ. ರಾಘವ; 'ಹುಲಿಯೂರಿನ ಸರಹದ್ದು' ರಚಿಸಿದ 'ಪೂರ್ಣಚಂದ್ರ ತೇ': 'ಆವೇಮರಿಯಾ'ದ ರಾಜಲಕ್ಷ್ಮಿ ಎನ್. ರಾವ್: 'ತಪ್ತ' ಸಂಗ್ರಹದ ಶ್ರೀಕೃಷ್ಣ ಆಲನಹಳ್ಳಿ; 'ಅಸಹಜ' ಬರೆದ ಸೂ. ರಮಾಕಾಂತ; 'ಆ ಮುಖ ಈ ಮುಖದ' ರಚಿಸಿದ ಗಿರಡ್ಡಿ ಗೋವಿಂದರಾಜ, ಅಲ್ಲದೆ ಅನೇಕ ಒಳ್ಳೆಯ ಬಿಡಿ ಕತೆಗಳನ್ನು ಬರೆದ ಅಬ್ದುಲ್ ಮಜೀದ್ ಖಾನ್: ರಾಘವೇಂದ್ರ ಖಾಸನೀಸ್: ಸುಮತೀಂದ್ರ ನಾಡಿಗ್: ಎ. ಕೆ. ರಾಮಾನುಜನ್: ರಾಮಚಂದ್ರದೇವ್: ದೇವನೂರು ಮಹಾದೇವ್ ಮೊದಲಾದವರ ಸಾಧನೆಗಳಿಂದ ಹೊಸ ಕಥಾ ಸಾಹಿತ್ಯ ತುಂಬ ಶ್ರೀಮಂತಿಕೆಯಿಂದ ಸೂಸುತ್ತದೆ.

[೫]

೧೯೬೦ರಲ್ಲಿ ಪ್ರಕಟವಾದ ಶ್ರೀರಂಗರ 'ಕತ್ತಲೆ ಬೆಳಕು' ಕನ್ನಡ ನಾಟಕಗಳಲ್ಲಿ ಹೊಸ ಸಾಧ್ಯತೆಗೆ ತಿರುವು ಕೊಟ್ಟಿತು. ಸದ್ಯದ ಭಾರತದಲ್ಲಿ ಬದಲಾಗುತ್ತಿರುವ

ಸಾಮಾಜಿಕ ರಂಗ ಮತ್ತು ವೈಯಕ್ತಿಕ ಬದುಕು ಹಾಗೂ ಇವುಗಳ ನಡುವಿನ ಅನೇಕ ಬಿರುಕುಗಳು ಇವುಗಳಿಂದ ಉದ್ಭವವಾಗುವ ದುಃಖ. ರೋಷ, ನಿರಾಶೆ ಇತ್ಯಾದಿ ಭಾವನೆಗಳಿಗೆ, ಪ್ರಚೋದಿಸಲ್ಪಡುವ ವಿಚಾರಗಳಿಗೆ ಒಂದು ಹೊಸ ರೂಪವನ್ನು ಕೊಟ್ಟು, ಅವುಗಳನ್ನು ರಂಗಭೂಮಿಯ ಮೇಲೆ ಯಶಸ್ವಿಯಾಗಿ ತರಬಹುದೆಂಬ ಆಶೆಯನ್ನು ಈ ನಾಟಕ ಸೂಚಿಸಿತು.

೧೯೬೧ರಲ್ಲಿ ಹೊರ ಬಂದ ಗಿರೀಶ ಕಾರ್ನಾಡರ 'ಯಯಾತಿ'; ೧೯೬೪ರಲ್ಲಿ ಪ್ರಕಾಶಿತಗೊಂಡ 'ತುಘಲಕ್'–ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿತ್ವಗಳ ಹಿನ್ನೆಲೆಯಲ್ಲಿ ಹೊಸ ಮೌಲ್ಯಗಳ ಚರ್ಚೆ ಮತ್ತು ಪುನರ್‌ಮೌಲ್ಯೀಕರಣಗಳ ಸಾಧ್ಯತೆ ಕಂಡಾಗ, ನಾಟಕ ರಂಗವು ಅನೇಕ ಪ್ರತಿಭಾವಂತ ಬರಹಗಾರರ ಗಮನ ಸೆಳೆಯಲು ಸಾಧ್ಯವಾಯಿತು.[೭]

ಇತ್ತೀಚಿನ ೫–೬ ವರ್ಷಗಳಲ್ಲಿ ಕನ್ನಡ ನಾಟಕ, ತನ್ನ ಹೊಸ ಹೊಳಪಿನಿಂದ ಹೊಸ ಸಾಧ್ಯತೆಗಳಿಂದ, ಹೊಸ ಆಸೆಗಳನ್ನು ಕುದುರಿಸುವಂತೆ, ಹೆಚ್ಚಿನ ನವ್ಯ ಲೇಖಕರು ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ತಮ್ಮ ಸ್ಪಷ್ಟ ಹಾಗೂ ಪ್ರಾಮಾಣಿಕ ಅಭಿಪ್ರಾಯಗಳಿಗೆ ಸೃಜನಾತ್ಮಕ ಹೊಸ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಕಾಯುತ್ತಿದ್ದ ನಾಲ್ವರು ನವ್ಯ ಕವಿಗಳು ತುಂಬ ಪರಿಶ್ರಮದಿಂದ ಒಳ್ಳೆಯ ನಾಟಕಗಳನ್ನು ನೀಡಲು ಯತ್ನಿಸುತ್ತಿದ್ದಾರೆ.

ಕಾವ್ಯ, ಕಥೆ, ಕಾದಂಬರಿ ರಂಗಗಳ ತುಂಬ ಈಗಾಗಲೇ ನೋಡಿದ ಪಿ. ಲಂಕೇಶರ ಅಸ್ತಿತ್ವ ಇನ್ನೂ ಉಜ್ವಲವಾಗಿ ಕಾಣುವುದು ನಾಟಕಗಳಲ್ಲಿ. ಒಂದು ದೃಷ್ಟಿಯಿಂದ ನಾಟಕ ರಂಗವೇ ಲಂಕೇಶರ ಪ್ರತಿಭೆಯ ಹಬ್ಬುವಿಕೆಗೆ ಹೆಚ್ಚು ಯೋಗ್ಯವಾದ, ವಿಶಾಲವಾದ ಕ್ಷೇತ್ರ. ಅವರ ಕಥೆ–ಕವಿತೆಗಳಲ್ಲೂ ಕೂಡ, ನಾಟಕ ಮೂಲ ಮನೋಧರ್ಮವನ್ನು ಗುರುತಿಸಬಹುದು. ಪೊಳ್ಳುತನ, ಬೊಟ್ಟಿತನ, ರಾಜಕಾರಣ, ಸುಳ್ಳುಗಳು, ಒಂಟಿತನ ಮತ್ತು ಕ್ರೌರ್ಯಗಳ ಮೊಸರು ಬತ್ತದ ಮಿಶ್ರಣವಾಗಿರುವ ಸದ್ಯದ ಬದುಕಿನ ಕೊಳೆತ ಪದರುಗಳನ್ನು ಬಿಡಿಸಿ ಬಿಡಿಸಿ ಚಿತ್ರಿಸುವ, ಈ ವರೆಗಿನ ಲಂಕೇಶರ ಏಳು ನಾಟಕಗಳಲ್ಲಿ ಮೂರು ವರ್ಗಗಳನ್ನು ವಿಂಗಡಿಸಬಹುದು.

ಆಧುನಿಕ ವ್ಯಕ್ತಿಯೊಬ್ಬನ, ಮುಖ್ಯವಾಗಿ ಯುವಕನೊಬ್ಬನ ಸಿಟ್ಟು. ವೇದನೆ ಅಸಹಾಯಕತೆಗಳನ್ನು ಅಷ್ಟೇ ತೀವ್ರವಾಗಿ, ಅಸಹಾಯಕವಾಗಿ ಮೂಡುವ ಬೇರೆ

---

೭. ೧೯೭೧ರಲ್ಲಿ ಪ್ರಕಟಗೊಂಡು, ಕಮಲಾದೇವಿ ಚಟ್ಟೋಪಾಧ್ಯಾಯ ರಾಷ್ಟ್ರೀಯ ನಾಟಕ ಪ್ರಶಸ್ತಿ ಗಿಟ್ಟಿಸಿದ 'ಹಯವದನ' ನಾಟಕ ಮಾತ್ರ, ಕಾರ್ನಾಡರ 'ತುಘಲಕ್' ಪ್ರತಿಭೆ ಒಂದು ಹೆಜ್ಜೆ ಹಿಂದೆ ಸರಿದಂತೆ ಅನ್ನಿಸುತ್ತದೆ. ಈ ನಾಟಕ ಓದಿದಾಗ ಒಂದು ಒಳ್ಳೆಯ ಕೃತಿಯನ್ನು ಓದಿದ 'ಸಂತೋಷ' ಲಭಿಸುವುದೇ ಹೊರತು, ಶ್ರೇಷ್ಠ ಕೃತಿಯೊಂದನ್ನು ಓದಿದ 'ಅನುಭವ' ಲಭಿಸುವದಿಲ್ಲ.

ಬೇರೆ ಸಂದರ್ಭಗಳಲ್ಲಿ ತೂಗಿ ನೋಡಿ, ಕನ್ನಡದ ಆಗಿನ ಸಂದರ್ಭದಲ್ಲಿ ತೀರ ಹೊಸದೆನ್ನಿಸುವ ಶೈಲಿಯಲ್ಲಿ ಬರೆದ 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ಮತ್ತು 'ನನ್ನ ತಂಗಿಗೊಂದು ಗಂಡು ಕೊಡಿ'-ಗಳು; ಈಗಿನ ಸಂದರ್ಭಗಳಲ್ಲಿ ಅಸಾಧ್ಯವಾಗಿ ಕಮರಿ ಹೋಗುತ್ತಿರುವ ಸಂಬಂಧಗಳನ್ನು, ಸಾಯುತ್ತಿರುವ ವಿಶ್ವಾಸ-ಬದುಕನ್ನೂ, ಭೂತ-ವರ್ತಮಾನಗಳು ಕೊರೆದ ಗೆರೆಗಳಾಚೆ ದಾಟಲಾಗದೆ, ಬೇಯಲಾರದೆ, ಒಟ್ಟಾರೆ ಒಪ್ಪುವ ಅಸಹಾಯಕತೆಯನ್ನು ಉತ್ಕೃಷ್ಟವಾಗಿ ತೋರಿಸುವ 'ತೆರೆಗಳು' ಮತ್ತು ದಾಂಭಿಕತೆಯ ಹೊಸ ಪೋಜು ಮುಖವಾಡ ತೊಟ್ಟು ಮೆರೆಯುತ್ತಿರುವ ಕೇವಲ ಸಪ್ಪಳವಾಗುತ್ತಿರುವ ಕಮ್ಯೂನಿಜಂನ ಪಾಡು; ಒಂದು ರೀತಿಯಲ್ಲಿ ಆದರ್ಶದ ವೇಷ ತೊಡುತ್ತಿರುವ ನಕ್ಸಲೈಟ್ ಮನೋಧರ್ಮ ಮತ್ತು ಒಳಿತು-ಕೆಡಕು, ಸಂಪತ್ತು-ಮರ್ಯಾದೆಗಳ ತೊಡಕಿನಲ್ಲಿ ತುಂಬ ಸರಳಗೊಂಡೂ, ಎದುರಿಸಲಾಗದ ಸಮಾಜಗಳ ಮುಖಾ ಮುಖಿಯನ್ನು ಸಾಧ್ಯವಾದಷ್ಟು ಪ್ರಭಾವಶಾಲಿಯಾಗಿ ತೋರಲು ಪ್ರಯತ್ನಿಸಿದ 'ಕ್ರಾಂತಿ ಬಂತು ಕ್ರಾಂತಿ'-ಈ ನಾಟಕಗಳು; ಶ್ರೀ 'ಸಂಸ'ರ ಬದುಕಿನ ಭೀತಮನೋಧರ್ಮವನ್ನು ಹಿನ್ನೆಲೆಯಾಗಿಟ್ಟು ಕೊಂಡ ಪ್ರಭಾವಶಾಲಿ ನಾಟಕ: 'ಪೋಲೀಸರಿದ್ದಾರೆ ಎಚ್ಚರಿಕೆ'; ಕಮರುತ್ತಿರುವ ವಾಸ್ತವತೆ: ಪರಿಣಾಮವಾಗಿ ಬೆಳೆಯುವ ಕನಸುಗಾರಿಕೆ ಹಾಗೂ ಅನಿವಾರ್ಯ ನಾಟಕೀಯ ಸಂದರ್ಭಗಳನ್ನೊಳಗೊಂಡ 'ಸಿದ್ಧತೆ'; ಮತ್ತು ತಮ್ಮದೇ ಆದ 'ಕುರುಡು ಕಾಂಚಾಣ' ಎಂಬ ಕತೆಯನ್ನಾಧರಿಸಿದ 'ಗಿಳಿಯು ಪಂಜರದೊಳಿಲ್ಲ'-ಈ ಮೂರು ವರ್ಗಗಳಲ್ಲಿರುವ ೭ ನಾಟಕಗಳನ್ನು ಗಮನಿಸಿದರೆ, ಎಷ್ಟೊಂದು ನಿಷ್ಠುರವಾಗಿ, ಪ್ರಾಮಾಣಿಕವಾಗಿ ಮತ್ತು ಮುಖ್ಯವಾಗಿ ಪ್ರಕೃತ ಸಮಕಾಲೀನ ಜೀವನಕ್ಕೆ ಬೇರ್ಪಡಿಸಲಾಗದಷ್ಟು ತೀರ ಹೊಂದಿ ಕೊಂಡು, ಲಂಕೇಶರ ಬರವಣಿಗೆ ಓಡುತ್ತಿವೆ ಎಂಬುದು ಅರ್ಥವಾಗುತ್ತದೆ.

ಈವರೆಗೆ 'ಋಷ್ಯಶೃಂಗ,' 'ನಾರ್ಸಿಸಸ್' ಮತ್ತು 'ಚಾಳೇಶ್' ಈ ಮೂರು ನಾಟಕಗಳನ್ನು ಬರೆದ ಚಂದ್ರಶೇಖರ ಕಂಬಾರರೂ ಸಹ ತುಂಬ ಗಮನಾರ್ಹ ರೀತಿಯಲ್ಲಿ ತಮ್ಮ ಪ್ರಯೋಗಗಳನ್ನು ಮುಂದುವರಿಸಿದ್ದಾರೆ. ಈ ಮೂರು ನಾಟಕಗಳಲ್ಲಿ, 'ಹೇಳತೇನ ಕೇಳ' ಧ್ವನಿಗೆ ಹೆಚ್ಚು ಸಮೀಪವೆನ್ನಿಸುವ 'ಋಷ್ಯಶೃಂಗ'; ಒಂದು ಒಳ್ಳೆಯ ಪ್ರಯೋಗ ಎಂದೆನಿಸುವ 'ಚಾಳೇಶ್' ಬಿಟ್ಟರೆ, 'ನಾರ್ಸಿಸಸ್' ಮಾತ್ರ ಕಂಬಾರರ ಈವರೆಗಿನ ಬಂಧು ಉತ್ತಮ ಸಾಧನೆ. 'ಅವನಿ'ಗಾಗಿ ಕಾದು ಕೂತಿರುವ ನಾಣಿ 'ಅವನಿ'ಗಾಗಿ ಬದುಕಿ, ಇವನಿಗಾಗಿ ಕಾಯುವ ಜೋಗತಿ, ನಾಣಿಗಾಗಿ ಹಾತೊರೆಯುವ ಗೀತ,-ಈ ಮೂವರೊಂದಿಗೆ ಬೆರೆತು, ಯಾರೊಂದಿಗೂ ಕೊಂಡಿ ಬೆಸೆಯಲಾಗದ ಭೀಮ್ಯಾ, ಇವರಿಂದ, ಹಂತಹಂತವಾಗಿ ಮೇಲೇರುತ್ತ, 'ಅವನು' ಯಾವನೂ ಅಲ್ಲದೆ, ತಾನು – 'ತಾನೇ' 'ತಾನೊಬ್ಬನೇ' ಎನ್ನುವ ಅನಾಥ ಪ್ರಜ್ಞೆಯಲ್ಲಿ ನಾಣಿ ಕಿರುಚು-ವಾಗ, ಮುಗಿಯುವ ನಾಟಕ, ಒಂದು ಗಾಢ ಪ್ರಭಾವ ಬೀರುತ್ತದೆ. ಕಂಬಾರರ ನಾಟಕಗಳ ಯಶಸ್ಸಿಗೆ ಮುಖ್ಯ ಕಾರಣ: ಅವರ ಜೀವಂತ ಜಾನಪದ ಭಾಷೆಯೂ ಇಹುದು.

ಹೆಚ್ಚಾಗಿ ಭಾಷೆಯ ಮೇಲೆಯೇ, ಈ ವರೆಗೆ ತಮ್ಮ ನಾಟಕಗಳನ್ನು ಸಾಗಿಸಿ-ಕೊಂಡು ಬಂದಿರುವ ಚಂದ್ರಶೇಖರ ಪಾಟೀಲರ ಸಾಧನೆಯನ್ನೂ ಇಲ್ಲಿ ಪರಿಶೀಲಿಸ-ಬಹುದು: ಪಾಟೀಲರ ನಾಟಕಗಳ ಈ ವರೆಗಿನ ಸಫಲತೆಗೆ ಕಾರಣ: ಕವಿಯಾಗಿ, ಕಾವ್ಯದ ಮೂಲಕ ಸಮಗೆ ಹೆಚ್ಚು ತಾಗಿಸಲಾಗದ ತಮ್ಮ ಮನೋಧರ್ಮಗಳನ್ನು, ಅನುಭವಗಳನ್ನು ನಾಟಕಗಳ ಮುಖಾಂತರ ಹೆಚ್ಚು ಪರಿಣಾಮಕಾರಿಯಾಗಿ ತಾಗಿಸುತ್ತಿರುವುದು. ಇದಕ್ಕೆ ಆಡುಮಾತಿನ ಜೀವಂತಿಕೆ ಮತ್ತಿಕೊಂಡ ಭಾವಗೀತಾತ್ಮಕ ಕಾವ್ಯ ಭಾಷೆಯೂ ಒಂದು ಮುಖ್ಯ ಕಾರಣ.

'ಕೊಡೆಗಳಿ'ಂದ ಆರಂಭಿಸಿ, 'ಟಿಂಗರ ಬುಡ್ಡಣ್ಣ'ನ ವರೆಗಿನ ಪಾಟೀಲರ ನಾಟಕಗಳಲ್ಲಿ 'ಮಾತನಾಡುವುದೇ' ಹೆಚ್ಚಾಗಿ ನಾಟಕೀಯವಾಗಿ 'ಬೆಳೆಯುವುದು' ಮತ್ತು 'ಆಗುವುದು' ಕಡಿಮೆ ಎನ್ನಿಸುತ್ತದೆ. ಹಾಗಿದ್ದರೂ, ವ್ಯಕ್ತಿತ್ವದ ವಲಯ ಸೀಮಿತತೆಯನ್ನು ಹೇಳುವ 'ಕುಂಟಾ ಕುಂಟಾ ಕುರವತ್ತಿ' ಮತ್ತು ಈ ವಸ್ತುವನ್ನೇ ಮುಂದುವರಿಸಿದ 'ಗುರುತಿನವರು' ಫ್ಯಾಂಟಸಿಯನ್ನು ಪರಿಣಾಮಕಾರಿಯಾಗಿ ಬಳಸಿ ಕೊಂಡ 'ಟಿಂಗರ ಬುಡ್ಡಣ್ಣ' — ಈ ನಾಟಕಗಳು ಅವರ ಮುಂದಿನ ಹೊಸ ಸಾಧನೆಗಳಿಗೆ ತೋರುಗೈಯಾಗಿ ನಿಂತಾವೆಂದು ತೋರುತ್ತವೆ.

ನಾಟಕ ರಂಗದಲ್ಲಿ ಲಕ್ಷಿಸಬೇಕಾದ ಇನ್ನೊಂದು ಹೆಸರು: ಚಂದ್ರಕಾಂತ ಕುಸನೂರ. 'ಹಳ್ಳಾ ಕೊಳ್ಳಾ ನೀರು'ವಿನಿಂದ ಆರಂಭಿಸಿ 'ವಿದೂಷಕ'ದ ತನಕ ಕುಸನೂರರು ೫-೬ ನಾಟಕಗಳನ್ನು ಬರೆದಿದ್ದರೂ, 'ರೆಕ್ಕೆ' ಎಂಬುದು ನನಗೆ ತುಂಬ ಹಿಡಿಸಿದ ನಾಟಕ. ಮನುಷ್ಯನ ಅಸೀಮಿತ ಆಸೆ. ಸೀಮಿತ ವ್ಯಕ್ತಿತ್ವ-ಸುತ್ತುವರಿದ ಅಸಂಗತ ಸಂದರ್ಭಗಳು (ಇಡೀ ಕತೆ ನಡೆಯುವ ಸ್ಥಳ: ಕಾಡು), ಯಾವುದೇ ಕ್ಷಣಕ್ಕೂ ನಮ್ಮಿಂದ 'ನಾವು' ಕಳೆದುಹೋಗಬಹುದಾದ ಜಾರುವ ವ್ಯಕ್ತಿತ್ವಗಳು (ರಾಮಗೋಪಾಲ್ 'ಹುಚ್ಚ'ನಾಗುವುದು), ಬರೀ ವಾಸನೆಯಿಂದ 'ವ್ಯಕ್ತಿತ್ವ' ಮರುಕಳಿಸುವಷ್ಟು ಅಯಸ್ಕಾಂತಮಯ ಹೆಣ್ಣಿನ ತೊಗಲು (ಅಂಗೈ ವಾಸನೆಯಿಂದ ಎಚ್ಚರಾಗುವುದು) ಇವೆಲ್ಲವುಗಳನ್ನು ಒಳಗೊಂಡು, ದುರ್ಬಲತೆ, ಸಬಲತೆಗಳಿಗೆ ಕನಸು ಸಂದರ್ಭಗಳ ಬೆಳಕನ್ನರುಹುತ್ತ ಪರಾಕಾಷ್ಠೆಗೇರಿ. ಫಕ್ಕನೆ ಮುಗಿಯುವ ನಾಟಕ ಒಂದು ಅತ್ಯುತ್ತಮ ಅನುಭವ. ಕುಸನೂರರ 'ಮನೆ'ಯೂ ಕೂಡ ಒಂದೆರಡು ಪರಿಶೀಲನಾರ್ಹ ಅಂಶಗಳಿಂದ ಕೂಡಿದೆ.

'ಎಲ್ಲಿಗೆ' ನಾಟಕದಿಂದ ಪರಿಚಿತರಾದ ನ. ರತ್ನ, ಒಬ್ಬ ಪ್ರತಿಭಾವಂತ ನಾಟಕಕಾರನ ಆಗಮನ ಸೂಚಿಸುತ್ತಾರೆ. ಅವಕಾಶ ಸಿಕ್ಕಿದಾಗ, ಸಿಕ್ಕಷ್ಟೇ ಪರಿಸರದಲ್ಲಿ ತಮ್ಮದೇ ವ್ಯಕ್ತಿತ್ವದ ಪರಿಗಳನ್ನು ಬಿಚ್ಚಿ ಸಂಭ್ರಮಿಸುವ ಸಮಾಜವನ್ನೂ ಅದರ ಕೊಳೆತ ಬೇರುಗಳ ದರ್ಶನ ಸಹಿತ ಮೂಡುವ 'ಎಲ್ಲಿಗೆ' ಒಂದು ಉತ್ತಮ ನಾಟಕವಾಗಿದೆ.

ಕಥೆ, ಕಾದಂಬರಿ ವಿಮರ್ಶೆಗಳ ಕ್ಷೇತ್ರದಲ್ಲಿ ಗಮನಾರ್ಹ ಮಟ್ಟವನ್ನು ತಲುಪಿದ ಅನಂತಮೂರ್ತಿಯವರ 'ಆವಾಹನೆ' ಒಂದು 'ಪರದಾ ಇಲ್ಲ' ಕೃತಿಯಾಗಿದ್ದರೂ,

ಈ ತರದ ವಸ್ತು, ಅವರ ಅನೇಕ ಸಣ್ಣ ಕತೆಗಳಲ್ಲಿ ಆಗೀಗ ನುಗ್ಗಿದ್ದು ಕಂಡು ಬರುತ್ತದೆ.

ಐನೆಸ್ಕೋವಿನ 'ಅಮೇದಿ'ಯ ದೂರದ ಪ್ರತಿಫಲನ ಎನ್ನಿಸುವ ಟಿ. ಎನ್. ಸೀತಾರಾಮರ 'ಯಾರಾದರೇನಂತೆ': ಸುಮತೀಂದ್ರ ನಾಡಿಗರ ಅನುಕರಿತ ನಾಟಕ 'ಬೊಕ್ಕ ತಲೆ ನರ್ತಕಿ, ಕೂಡ ಒಳ್ಳೆಯ ಪ್ರಯೋಗಗಳಾಗಿವೆ.

ನವ್ಯ ಪ್ರಜ್ಞೆಯಲ್ಲಿ ಇತ್ತೀಚೆಗೆ ಪ್ರವೇಶಿಸಿದ 'ಅಸಂಗತ' (Absurd) ನಾಟಕ ಸಂಪ್ರದಾಯ. ಮೂಲತಃ ಸಾರ್ತ್ರ್. ಕಾಮೂ, ಐನೆಸ್ಕೋ ಇತ್ಯಾದಿ ಪಾಶ್ಚಾತ್ಯ ಲೇಖಕರಿಂದ ಸ್ಫೂರ್ತಿ ಪಡೆದಿದ್ದರೂ. ಈ ನೆಲದ ಬದುಕಿನಲ್ಲಿರುವ ಅಸಂಗತ ಸಮಸ್ಯೆಗಳಿಗೆ ಅದನ್ನು ಸರಿಯಾದ ಅಭಿವ್ಯಕ್ತಿಯಾಗಿಸಿ. ದುಡಿಸಿಕೊಳ್ಳುವ ಸ್ವಂತಿಕೆ ಮತ್ತು ಪ್ರತಿಭೆ ಮೇಲಿನ ಎಲ್ಲ ಲೇಖಕರಲ್ಲಿಯೂ ಎದ್ದು ಕಾಣುವ ಅಂಶವಾಗಿದೆ. ಈ ದೇಶದ ಪ್ರಸ್ತುತ ಗಳಿಗೆಗಳಲ್ಲಿ ಅರ್ಥಹೀನವಾಗುತ್ತಿರುವ ಬದುಕಿನ ಮೂಲಭೂತ ಮೌಲ್ಯಗಳು, ಜಾರುತ್ತಿರುವ ಆದರ್ಶಗಳು, ಸಾಮಾಜಿಕ ವ್ಯತ್ಯದ ತಕ್ಕೆಯಲ್ಲಿ ಹರಿದು ಹಂಚಿ ಹೋಗುತ್ತಿರುವ ಸೂಕ್ಷ್ಮ ಜೀವಿಯೊಬ್ಬನ ವ್ಯಕ್ತಿತ್ವ ಕೊನೆಯುಸಿರೆಳೆಯುತ್ತಿರುವ ಆಧುನಿಕ ಬದುಕಿನ ಚೈತನ್ಯ, ಒಟ್ಟಾರೆಯಲ್ಲಿ ತೀವ್ರ ಅಸಹಾಯಕತೆಯ ಹಿನ್ನೆಲೆಯಲ್ಲಿ ರಚಿತವಾಗುತ್ತಿರುವ ಅಸಂಗತ ನಾಟಕಗಳು ಹೊಸ ಅರ್ಥಗಳ ಹುಡುಕಾಟದಲ್ಲಿ ಯಶಸ್ಸನ್ನು ಸಂಪಾದಿಸುತ್ತಿವೆ. ವಸ್ತು, ಅನುಭವ ಹಾಗೂ ಅಭಿವ್ಯಕ್ತಿಯ ಹೊರಳುದಾರಿಯಾದ ಅತ್ಯಂತ ಸೂಕ್ಷ್ಮ ಭಾಷಾ ಪ್ರಯೋಗದ ಕುಸುರಿನ ಕೆಲಸ ಕೂಡ, ನವ್ಯ ನಾಟಕ ರಚನೆಯಲ್ಲಿ ಒಂದು ಮೆಚ್ಚಬೇಕಾದ ಅಂಶವಾಗಿದೆ.

[೬]

ಎಂ. ಜಿ. ಕೃಷ್ಣಮೂರ್ತಿ, ಜಿ. ಎಸ್. ಆಮೂರ, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ರಾಜೀವ ತಾರಾನಾಥ ಮೊದಲಾದ ಪ್ರತಿಭಾವಂತ ನವ್ಯ ವಿಮರ್ಶಕರ ವಿಶ್ಲೇಷಣೆಗೆ ಒಳಗಾದ ಕನ್ನಡ ಸಾಹಿತ್ಯ ತನ್ನ ಅಭಿವ್ಯಕ್ತಿಯ ಮೌಲ್ಯ ಮಾಪನದಲ್ಲಿ ಹೆಚ್ಚಿನ ಅರ್ಥವನ್ನು, ಹೊಸ ಕಳೆಯನ್ನು ಹಾಗೂ ವಿಸ್ತಾರಗಳನ್ನು ಗುರುತಿಸಿಕೊಳ್ಳುತ್ತಿದೆ.

ತನ್ನೆದುರಿಗಿರುವ ಕೃತಿಯನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸುವ ಹೊಸ ವಿಮರ್ಶಕ, ತನ್ನ ಇಡೀ ವ್ಯಕ್ತಿತ್ವವನ್ನು ತೊಡಗಿಸಿ, ಆ ಕೃತಿಗೆ ಯೋಗ್ಯವಾದ ಬೆಲೆ ನೀಡುವಲ್ಲಿ ಸದಾ ಜಾಗೃತನಾಗಿರುತ್ತಾನೆ. ಸಮಕಾಲೀನ ಲೇಖಕರ ಬಗೆಗೆ, ಇಂದಿನ ಸಮಸ್ಯೆ ಹಾಗೂ ಪ್ರಜ್ಞೆಗಳ ಕುರಿತು ವಿಮರ್ಶೆಯ ರೂಪದಲ್ಲಿ, ಇನ್ನೊಂದು ಕೃತಿಯ ಅನಿಸಿಕೆ. ವಿಚಾರಗಳಿಗೆ ಪ್ರತಿಕ್ರಿಯೆಯ ರೂಪದಲ್ಲಿ, ಈ ವಿಮರ್ಶಕರು ತೋರುವ ಕಾಳಜಿ ಬಹುಶಃ ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಎಂದೆನಿಸುತ್ತದೆ. ಒಂದು ದೃಷ್ಟಿಯಲ್ಲಿ ವಿಮರ್ಶೆ, ನಮ್ಮ ಸಾಹಿತ್ಯದ ಒಂದು ಮುಖ್ಯ ಪ್ರಕಾರವಾಗಿ ಬೆಳೆಯಲು ನವ್ಯ ವಿಮರ್ಶಕರು ತುಂಬ ಶ್ರಮಿಸುತ್ತಿದ್ದಾರೆ.

‘ಇಂದು ಕನ್ನಡದಲ್ಲಿ ಜಾಹೀರಾತು ಜಾತಿಯ ಕೂಗುಮಾರಿ ಕೃತಿಗಳಷ್ಟೋ ಹೊಸ ಬರಹದ ಸೋಗು ತೊಟ್ಟು ಬೀದಿ ಹಾಯುತ್ತಿವೆ. ಕೇವಲ ಮೇಲು ಹೊಳಪಿನ ಇಂಥ ಬಲೂನು ಬರಹಗಳನ್ನು ಕಾಳುಕೃತಿಗಳಿಂದ ಪ್ರತ್ಯೇಕಿಸಬಲ್ಲ ಪ್ರಬುದ್ಧ ವಿಮರ್ಶೆ ಈಗ ತೀರ ಅಗತ್ಯವಾಗಿದೆ. ಅದಕ್ಕೆ ಬೇಕಾದ ಪ್ರೌಢ ವ್ಯಾಸಂಗ, ಆಳ ಚಿಂತನೆ[೮] ಗಳಿರುವ ಲೇಖಕ ಯು. ಆರ್. ಅನಂತಮೂರ್ತಿ, ಅವರ ‘ಪ್ರಜ್ಞೆ ಮತ್ತು ಪರಿಸರ’ ಹಲವಾರು ದೃಷ್ಟಿಗಳಿಂದ ತುಂಬ ಬೆಲೆಯುಳ್ಳ ವಿಚಾರ ವಿಮರ್ಶೆಗಳ ಸಂಕಲನವಾಗಿದೆ. ‘ಅಸ್ತಿತ್ವವಾದದ’ ಸಾರ್ತ್ರನಿಂದ ಹಿಡಿದು, ಅರ್ಪೇಯ ಪ್ರಜ್ಞೆಯ ಅಡಿಗರ ವರೆಗೆ; ಮಾರ್ಕ್ಸ್‌ವಾದದಿಂದ ಗಾಂಧೀವಾದದ ತನಕ; ಬೆಕೆಟ್‌ನಿಂದ ಲೋಹಿಯಾವರೆಗೆ– ಹತ್ತಾರು ಕ್ಷೇತ್ರಗಳಲ್ಲಿ ಹಬ್ಬಿದ ಆಳ ವಿಚಾರಗಳ ಇವರ ಲೇಖನ, ಅವುಗಳನ್ನು ಕುರಿತು ನಾವು ಒಪ್ಪುವ ಮೊದಲು, ಗಾಢವಾಗಿ ಯೋಚಿಸಲು ತೊಡಗಿಸುತ್ತದೆ.

ವಿಮರ್ಶಾ ಕ್ಷೇತ್ರದಲ್ಲಿ ಮಾತ್ರವೇ ಹೆಸರು ಕೇಳಿಬರುತ್ತಿರುವ ಇಬ್ಬರಲ್ಲಿ ಒಬ್ಬರಾದ ಎಂ. ಜಿ. ಕೃಷ್ಣಮೂರ್ತಿಯವರು ಅತ್ಯಂತ ಸಮರ್ಥವಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ನಿನ್ನೆಯ ‘ಕಾನೂರು ಹೆಗ್ಗಡತಿ’ಯಿಂದ : ಇಂದಿನ ‘ಬಿರುಕು’– ‘ಸಂಸ್ಕಾರ’ ಮೊದಲಾದ ಕೃತಿಗಳು, ಅದಕ್ಕಂಟಿದ ಸಮಾಜ, ಅದರ ಮೌಲ್ಯಗಳ ಆಳ ಅಗಲದ ಚಿಕಿತ್ಸಕ ವಿವೇಚನೆಗಳೊಂದಿಗೆ ಆಯ್ದುಕೊಂಡ ಕೃತಿಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ ಅವರ ಪ್ರತಿಭಾಪೂರ್ಣ ವಿಚಾರಗಳು ಕನ್ನಡ ವಿಮರ್ಶೆಗೆ ನೀಡಿದ ಶ್ರೀಮಂತ ಕೊಡುಗೆಗಳಾಗಿವೆ.

ವಿಮರ್ಶಾ ಕ್ಷೇತ್ರದೊಂದಿಗೆ ಮಾತ್ರ ಜೀವಂತ ಸಂಬಂಧವಿಟ್ಟುಕೊಂಡವರಲ್ಲಿ ಇನ್ನೊಬ್ಬರಾದ ಜಿ. ಎಸ್. ಆಮೂರ ಕೂಡ ಗಮನಾರ್ಹರು. ‘ವಾಲ್ಮೀಕಿ ಮತ್ತು ಹೋಮರ’ ಇವರ ಸೂಕ್ಷ್ಮ ಅಭ್ಯಾಸದೊಂದಿಗೆ ಆರಂಭವಾಗಿ, ಕೈಲಾಸಂ (ಇಂಗ್ಲಿಷ) ಮತ್ತು ಶ್ರೀರಂಗರ ನಾಟಕಗಳು; ಅದರೊಂದಿಗೆ ರಂಗಭೂಮಿಯ ಸಮಸ್ಯೆಗಳನ್ನು ಚರ್ಚಿಸಿ, ‘ಬೆಟ್ಟದ ಜೀವ’, ‘ಸಂಸ್ಕಾರ’, ‘ಗ್ರಾಮಾಯಣ’ ‘ಮರಳಿ ಮಣ್ಣಿಗೆ’ ಮೊದಲಾದ ಕಾದಂಬರಿಗಳನ್ನು ಹೊಸ ಬೆಳಕಿನಲ್ಲಿ ದರ್ಶನ ಮಾಡಿಸಿ, ರಾಜಾರಾಯರ ಕನ್ನಡ ಕೃತಿ ಸಮೀಕ್ಷೆ ಹಾಗೂ ಇಂದಿನ ಕನ್ನಡ ವಿಮರ್ಶೆಯ ಹೊಸ ಒಲವುಗಳ ವಿವೇಚನೆಯೊಂದಿಗೆ ಮುಕ್ತಾಯವಾಗುವ ಅವರ ‘ಕೃತಿ ಪರೀಕ್ಷೆ’ ಕೂಡ ಕನ್ನಡ ವಿಮರ್ಶೆಗೆ ದೊರೆತ ಒಂದು ಸಾರ್ಥಕ ಗ್ರಂಥವಾಗಿದೆ.

ವಿಮರ್ಶೆಯಲ್ಲಿಯೂ ಕೂಡ ತಮ್ಮ ಪ್ರತಿಭೆಯನ್ನು ಮೆರೆಯುತ್ತಿರುವ ಪಿ. ಲಂಕೇಶರು ತಮ್ಮ ನಿಷ್ಠುರ ದೃಷ್ಟಿಕೋನದಿಂದಾಗಿ ಅನೇಕ ಸಾಹಿತಿಗಳಿಗಂತೂ ನುಂಗಲಾರದ ತುತ್ತಾಗಿದ್ದಾರೆ. ಆಯ್ದುಕೊಂಡ ಕೃತಿ, ವಸ್ತು ಮತ್ತು ವ್ಯಕ್ತಿ – ಎಲ್ಲವನ್ನೂ ನಿರ್ಭಿಡೆಯಾಗಿ ವಿವೇಚಿಸಿ ಬರೆಯುವ ಲಂಕೇಶರ ನಿರ್ದಯ ಶೈಲಿ ಕನ್ನಡ ವಿಮರ್ಶಾ

---

೮. ರಕ್ಷಾಪುಟ ವಿವರಣೆ: ‘ಪ್ರಜ್ಞೆ ಮತ್ತು ಪರಿಸರ’.

ಪುಟಗಳಲ್ಲಿ ತನ್ನದೇ ಸ್ಥಾನ ಪಡೆದಿದೆ. ಕುರ್ತಕೋಟಿ ಅವರ ವಿಮರ್ಶಾ ಪ್ರಜ್ಞೆಯನ್ನು ಕುರಿತು. ಲಂಕೇಶ ಬರೆದ ಲೇಖನ ಅವರ ತೀಕ್ಷ್ಣತೆಗೊಂದು ಮಾದರಿಯಾಗಿದೆ.

'ಸಾಹಿತ್ಯ ವಿಮರ್ಶೆಯಲ್ಲಿ ವೈಚಾರಿಕ ಸಮಸ್ಯೆಗಳು'; 'ನಾಟಕ ಮತ್ತು ನಾಟಕ ಪ್ರಜ್ಞೆ' ಮೊದಲಾದ ಸಾಹಿತ್ಯದ ಮೂಲ ಸಮಸ್ಯೆಗಳನ್ನು ಕುರಿತ ಉಚ್ಚ ಮಟ್ಟದ ಲೇಖನಗಳಲ್ಲದೆ. ಎಲಿಯಟ್ ಮತ್ತು ಕಾರ್ನಾಡರ ನಾಟಕಗಳನ್ನು ಕುರಿತು ಸಮರ್ಥವಾಗಿ ವಿಶ್ಲೇಷಿಸಿ ಬರೆದಿರುವ ರಾಜೀವ್ ತಾರಾನಾಥರ ವಿಮರ್ಶಾ ಪ್ರಜ್ಞೆಯಿಂದ ಇನ್ನೂ ಅಮೂಲ್ಯ ಕೊಡುಗೆಗಳನ್ನು ಅಪೇಕ್ಷಿಸಬಹುದಾಗಿದೆ.

ಕನ್ನಡ 'ಸಣ್ಣ ಕತೆಯ ಹೊಸ ಒಲವುಗಳು' ಎಂಬ ಚಿಕ್ಕ ವಿಮರ್ಶಾಕೃತಿಯನ್ನು ರಚಿಸಿದ; ಅನೇಕ ಬಿಡಿ ವಿಮರ್ಶೆಗಳನ್ನು ಬರೆದ ಗಿರಡ್ಡಿ ಗೋವಿಂದರಾಜರ ಪ್ರಯತ್ನಗಳೂ ಪರಿಶೀಲನಾರ್ಹವಾಗಿವೆ.

ಈ ಮೇಲಿನವರುಗಳಲ್ಲದೆ, 'ಮನ್ವಂತರ', 'ಸಾಕ್ಷಿ', 'ಸಂಕ್ರಮಣ' ಇತ್ಯಾದಿ ನಿಯತ ಕಾಲಿಕಗಳು ಮತ್ತು 'ಪ್ರಜಾವಾಣಿ'–'ಕನ್ನಡ ಪ್ರಭ'ಗಳಂತಹ ದಿನ ಪತ್ರಿಕೆಗಳು ನಿರ್ಮಿಸಿರುವ ಹೊಸ ವೇದಿಕೆಗಳಲ್ಲಿ; ಹಲವಾರು ವಿಮರ್ಶಾ ಲೇಖನಗಳಾದ ಸಂಗ್ರಹಗಳಾದ 'ಸಂವೇದನೆ' ಮತ್ತು 'ಅಭಿವ್ಯಕ್ತಿ'ಗಳಲ್ಲಿ ಒಂದೊಂದೇ ಕೃತಿಯನ್ನು ಸಮಗ್ರವಾಗಿ ವಿವೇಚಿಸಿರುವ 'ಗ್ರಾಮಾಯಣ ಸಮೀಕ್ಷೆ' ಮತ್ತೂ 'ಸಂಸ್ಕಾರ' 'ಸಮೀಕ್ಷೆ' ಗ್ರಂಥಗಳಲ್ಲಿ ತಮ್ಮ ವಿಚಾರಗಳನ್ನು ನೀಡಿರುವ, ನೀಡುತ್ತಿರುವ, ಪಾ. ಲ. ಸುಬ್ರಹ್ಮಣ್ಯಂ. ಜಿ. ಎಚ್. ನಾಯಕ್, 'ಗಿರಿ', ಮಾಧವ ಕುಲಕರ್ಣಿ, ಸುಮತೀಂದ್ರ ನಾಡಿಗ್. ಸುಧಾಕರ, ಎಚ್. ಎಂ. ಚೆನ್ನಯ್ಯ, ಜಿ. ದಾಮೋದರರಾವ್. – ಈ ಮೊದಲಾದವರ ಗಂಭೀರ ಪ್ರಯತ್ನಗಳಿಂದ ಕನ್ನಡ ವಿಮರ್ಶಾ ಕ್ಷೇತ್ರ ಫಲವತ್ತಾಗುತ್ತಿದೆ.

* * *

ಇಷ್ಟೊಂದು ಸೂಕ್ಷ್ಮವಾಗಿದ್ದರೂ ಕೂಡ, ನವ್ಯ ವಿಮರ್ಶೆಯಲ್ಲಿ ಅರಿವಿದ್ದೋ. ಇಲ್ಲದೆಯೋ. ಉಳಿದಿರುವ ಅನೇಕ ಕೊರತೆಗಳು ಕಣ್ಣಿಗೆ ಹೊಡೆಯುವಂತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನಮೂದಿಸಬಹುದಾಗಿದೆ.

೧. ಐತಿಹಾಸಿಕ ಇಲ್ಲವೆ ಪೌರಾಣಿಕವಾದ ಸಿದ್ಧ ಕಥಾ ವಸ್ತುವನ್ನು ಹೊಂದಿದ. ಅಷ್ಟೊಂದು ಹೊಳಪಿರದ ಭಾಷಾ ಶರೀರ ಪಡೆದ ಗಿರೀಶ ಕಾರ್ನಾಡರ ನಾಟಕಗಳು ರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವಾಗ, ಸಮಕಾಲೀನ ಪ್ರಜ್ಞೆಯ ಪ್ರಚಲಿತ ಸಮಸ್ಯೆಗಳ ಸ್ವಂತ ವಸ್ತುಗಳನ್ನು ಹೊಂದಿದ. ಅನುಭವದ ಅಭಿವ್ಯಕ್ತಿಗೆ ತಕ್ಕ ಬೀಜ ಭಾಷಾಭಿವ್ಯಕ್ತಿಯನ್ನು ಸಾಧಿಸಿದ ಲಂಕೇಶ್ ಮತ್ತು (ಕೆಲವು ದೃಷ್ಟಿಗಳಿಂದ) ಪಾಟೀಲರ ನಾಟಕಗಳು ರಾಜ್ಯದ ಕುಬ್ಜ ಮಟ್ಟದಲ್ಲಿಯೇ ಉಳಿದುಬಿಟ್ಟಿರುವುದರ ಕಾರಣ ಅರ್ಥವಾಗದೆ, ಅಚ್ಚರಿ ಎನಿಸುವುದು.

೨. ಕನ್ನಡ ಸಾಹಿತ್ಯದಲ್ಲಿ ಈ ವರೆಗೆ ಇಂಗ್ಲಿಷ್. ರಷ್ಯನ್. ಫ್ರೆಂಚ ಮೊದಲಾದ ಪಾಶ್ಚಾತ್ಯ ಮತ್ತು ಭಾರತದ ಅನೇಕ ಭಾಷೆಗಳಿಂದ ಎಷ್ಟೋ ಶ್ರೇಷ್ಠ ಭಾಷಾಂತರಗಳು

ಬಂದಿದ್ದರೂ. ಅವುಗಳಲ್ಲಿಯ ಯಾವುದಕ್ಕೂ ಅಷ್ಟೊಂದು ಗಮನ ನೀಡದ ನವ್ಯ ವಿಮರ್ಶಕರು ಈಗ ಅಂಥದೇ ಇನ್ನೊಂದು ಭಾಷಾಂತರ ಮಾತ್ರವಾದ 'ಹಳದಿ ಮೀನು' ಕಾದಂಬರಿ ಕುರಿತು (ಅವರ ಉತ್ತಮ ಭಾಷಾ ಬಳಕೆಯನ್ನು ಹೊರತುಪಡಿಸಿ) ಎಷ್ಟೆಲ್ಲ ವಿವರವಾಗಿ ಮಾತನಾಡುವುದರ ಔಚಿತ್ಯ ಅರ್ಥವಾಗುತ್ತಿಲ್ಲ.

೨. ನವ್ಯ ವಿಮರ್ಶಕರು ಮತ್ತೆ ಮತ್ತೆ ಕೆಲವೇ ಜನ. ಅದೂ, ಇನ್ನೂ ಬೆಳೆಯುತ್ತಿರುವ ಸಮಕಾಲೀನ ಲೇಖಕರ ಬಗ್ಗೆ ಮಾತ್ರವೇ ತೀಡಿ ತೀಡಿ ಬರೆಯುತ್ತ, ಅನೇಕ ಇತರ ಒಳ್ಳೆಯ ಸಮಕಾಲೀನರ ಕುರಿತು ತೋರಿಸುವ ಉದಾಸೀನತೆಯೂ ಅರ್ಥವಾಗುವದಿಲ್ಲ. ನಮ್ಮ ಎಷ್ಟೋ ನವ್ಯರಿಗಿಂತ, ಆಳವಾದ ಅಭ್ಯಾಸವನ್ನು, ಬದುಕನ್ನು ಕುರಿತ ಗಾಢವಾದ ಚಿಂತನೆಗಳನ್ನು, ಅನುಭವದ ವಿಸ್ತಾರ ಪಡೆದ ಎಸ್. ಎಲ್. ಭೈರಪ್ಪನವರ ಕಾದಂಬರಿಗಳನ್ನು ಕುರಿತು, ಒಬ್ಬಿಬ್ಬರನ್ನು ಬಿಟ್ಟರೆ, ಯಾವ ನವ್ಯ ವಿಮರ್ಶಕರೂ ಅಭ್ಯಾಸಪೂರ್ಣವಾಗಿ ವಿವೇಚಿಸಿಲ್ಲ.

೩. ಪ್ರಕೃತ ಸಂದರ್ಭದಲ್ಲಿ ನವ್ಯ ವಿಮರ್ಶಕರು ಕೆಲವೇ ಜನ ಸಮಕಾಲೀನ ಬರಹಗಾರರ ಸಾಹಿತ್ಯದ ಸಂಭ್ರಮದ ಕುರಿತಾಗಿ ಮಾತ್ರ ಹೆಚ್ಚೆಚ್ಚು ಬರೆಯುತ್ತ, ಅದನ್ನೇ ಪ್ರತಿಪಾದಿಸುವದರೊಟ್ಟಿಗೆ, ಒಟ್ಟಾರೆ ಕನ್ನಡ ಸಾಹಿತ್ಯದ ಪುನರ್ಮೌಲೀಕರಣದ ಗುರುತರ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಬೇಕಾಗಿದೆ. ಎಂದಾಗಲೇ ನವ್ಯ ವಿಮರ್ಶಕರ ಸ್ವಯಂಸಾಮರ್ಥ್ಯದೊಂದಿಗೆ, ಸಾವಿರ ವರ್ಷದ ನಮ್ಮ ಸಾಹಿತ್ಯ ಪರಂಪರೆಗಳ ಅಗತ್ಯವಾದ ಸಂಸ್ಕರಣವೂ ಬೆಳಕು ಕಾಣುತ್ತದೆ. ಆದ್ದರಿಂದ, ಪಂಪನಿಂದ ಹಿಡಿದು, ನವೋದಯದ ಬೇಂದ್ರೆ–ಕುವೆಂಪು ಮೊದಲಾದವರ ಪ್ರತಿಯೊಂದು ಬಗೆಯ ಸಾಹಿತ್ಯವನ್ನು ಸಮಕಾಲೀನ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಒಂದು ಮಹತ್ವದ ಐತಿಹಾಸಿಕ ವಿಮರ್ಶೆಯ ಅಗತ್ಯವನ್ನು ಪೂರೈಸುವಲ್ಲಿ ನವ್ಯ ವಿಮರ್ಶಕರು ಹೆಚ್ಚಿನ ಹೊಣೆಗಾರಿಕೆ ವಹಿಸಿಕೊಳ್ಳಬೇಕಾದುದು ಅಷ್ಟೇ ಅಗತ್ಯವಾಗಿದೆ.*

★ ದೇಶಪಾಂಡೆ ಸುಬ್ಬರಾಯ

* ಈ ಲೇಖನ ಬರೆಯಲು ನನ್ನೊಂದಿಗೆ ಸಹಕರಿಸಿದ ಶಾಮಸುಂದರ ಬಿದರಕುಂದಿ ಮತ್ತು ಫಕೀರೇಶ ಬೆಂಚನಮನಿ ಈ ಸ್ನೇಹಿತರಿಗೆ ಕೃತಜ್ಞ.

ಭಾರತೀಯ ಸಂವಿಧಾನದ ಲಕ್ಷಣಗಳು

ಅಂದಿನ ಬ್ರಿಟಿಶ್ ಸರಕಾರದ ಪ್ರಧಾನ ಮಂತ್ರಿ ಮಿ. ಕ್ಲಿಮೆಂಟ್ ಆ್ಯಟ್ಲಿಯವರು ಸಂವಿಧಾನಾತ್ಮಕ ತೊಡಕುಗಳನ್ನು ನಿವಾರಿಸಲು ಭಾರತಕ್ಕೆ ಕ್ಯಾಬಿನೆಟ್ ಮಿಶನ್ (Cabinet Mission) ನಿಯೋಗವನ್ನು ಕಳಿಸಿದರು. ಅದರ ಯೋಜನೆಯ ಪ್ರಕಾರ ಸಂವಿಧಾನ ಸಭೆಯು ಸ್ವಾತಂತ್ರ್ಯ ದೊರಕುವ ಮೊದಲೇ ೯ ನೇ ಡಿಸೆಂಬರ ೧೯೪೬ ರಲ್ಲಿ ದೇಶಕ್ಕೆ ಸಂವಿಧಾನ ರಚಿಸಲು ಅಸ್ತಿತ್ವದಲ್ಲಿ ಬಂದಿತು. ಅದರ ನಿಜವಾದ ಕಾರ್ಯಾಚರಣೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಪ್ರಾರಂಭವಾಯಿತು. ಸಂವಿಧಾನವನ್ನು ಸಿದ್ಧಗೊಳಿಸಲು ಸಂವಿಧಾನ ಸಭೆಯು ಹನ್ನೊಂದು ಅಧಿವೇಶನಗಳು ಸೇರಿದವು. ಸಂವಿಧಾನ ರಚನೆಗೆ ಎರಡು ವರ್ಷ ಹನ್ನೊಂದು ತಿಂಗಳು ಮತ್ತು ಹದಿನೆಂಟು ದಿನಗಳು ಹತ್ತಿದವು. ಸಭೆಯು ಹೊಸ ಘಟನಾವಳಿಯು ೨೬ ನೇ ನವಂಬರ ೧೯೪೯ ರಲ್ಲಿ ಜನತೆಯ ಹೆಸರಿನಲ್ಲಿ ಅಂಗೀಕರಿಸಿ ಶಾಸನವನ್ನಾಗಿ ಮಾಡಿತು. ಅದರ ಘಟನಾವಳಿಯು ಉದ್ಘಾಟನೆ ೨೬ ನೇ ಜಾನವರಿ ೧೯೫೦ ರಲ್ಲಿ ಜಾರಿಗೆ ಬಂದಿತು. ಇದನ್ನೆ "ಗಣರಾಜ್ಯ ದಿನ" ಎಂದು ನಾವು ಇಡೀ ದೇಶದಲ್ಲಿ ಆಚರಿಸುತ್ತೇವೆ.

ಡಾ. ಐವ್ಹರ ಜೆನಿಂಗ್ಸ್ (Dr. Ivor Jennings) ರವರು ಹೇಳಿದಂತೆ ಭಾರತದ ಸಂವಿಧಾನವು ಎಲ್ಲ ದೇಶಗಳಿಗಿಂತ ಅತಿ ಉದ್ದ ಮತ್ತು ದೊಡ್ಡ ಗಾತ್ರದ ದಾಖಲೆಯಾಗಿದೆ. ಇದು ಅಮೇರಿಕೆಯ ಸಂವಿಧಾನಕ್ಕಿಂತ ಏಳು ಪಟ್ಟು ದೊಡ್ಡದಿದೆ. ಇದಕ್ಕೆ ಕಾರಣಗಳು— (೧) ಸಂವಿಧಾನವು ಕೇವಲ ವಿಶಾಲ ತತ್ವಗಳನ್ನೊಳಗೊಂಡಿರದೆ ಆಡಳಿತಾತ್ಮಕ ವಿವರಗಳನ್ನೊಳಗೊಂಡಿದೆ. (೨) ಕೇಂದ್ರ ಸರಕಾರಕ್ಕೆ ಆಡಳಿತದ ಯಂತ್ರವನ್ನು ಒದಗಿಸುವದಲ್ಲದೆ ರಾಜ್ಯ ಸರಕಾರಗಳ ಆಡಳಿತದ ವಿವರಗಳನ್ನು ಒದಗಿಸುತ್ತದೆ. (೩) ಸಂವಿಧಾನವು ಸಂಯುಕ್ತ ಲಕ್ಷಣಗಳನ್ನು ಹೊಂದಿದ್ದರಿಂದ ಸಂವಿಧಾನದ ಗಾತ್ರವನ್ನು ಹೆಚ್ಚಿಸಿದೆ. (೪) ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಂಬಂಧವನ್ನು ಬಹಳ ವಿವರವಾಗಿ ತಿಳಿಸಿದೆ. (೫) ಮೂಲಭೂತ ಹಕ್ಕುಗಳ ಘೋಷಣೆ ಮತ್ತು ಅವುಗಳ ಸೀಮಿತ ವಿವರಗಳು ಅದರ ಗಾತ್ರವನ್ನು ಮತ್ತಷ್ಟು ಹಿಗ್ಗಿಸಿದೆ. (೬) ಒಂದು ಪೂರ್ಣ ಪ್ರಕರಣವನ್ನು (One Complete chapter) ರಾಷ್ಟ್ರ ಧೋರಣೆಯ ಮಾರ್ಗದರ್ಶಕ ತತ್ವಗಳಿಗೆ ಮೀಸಲಾಗಿದೆ. (೭) ಅಲ್ಪ ಸಂಖ್ಯಾಕರಿಗೆ ಮತ್ತು ಪ್ರತ್ಯೇಕ ವರ್ಗದವರಿಗೆ ಪ್ರತ್ಯೇಕವಾದ ರಕ್ಷಣೆಗಳನ್ನು ಒದಗಿಸಿದೆ. (೮) ದೇಶಕ್ಕೆ ಯಾವುದೇ ಗಂಡಾಂತರವನ್ನೆದುರಿಸಲು ಗಂಡಾಂತರ ಕುಶಾಗ್ರಗಳನ್ನು (Emergency Provisions) (೯) ಕಲಮುಗಳಲ್ಲಿ ಹೇಳಲ್ಪಟ್ಟಿದೆ. ಇದಲ್ಲದೆ ರಾಷ್ಟ್ರೀಯ ಭಾಷೆ, ಪ್ರಾದೇಶಿಕ ಭಾಷೆಗಳು, ಚುನಾವಣೆಗಳು, ಪೌರತ್ವ

(Citizenship) ವ್ಯಾಪಾರ, ವಾಣಿಜ್ಯ ಮತ್ತು ಅಂತರ್ದೇಶಿಯ ವ್ಯವಹಾರದ ಬಗ್ಗೆ ಏರ್ಪಾಡುಗಳನ್ನು ಮಾಡಿದೆ.

ಪ್ರಸ್ತಾವನೆ :

ನಮ್ಮ ಸಂವಿಧಾನದಲ್ಲಿ ಭಾರತವು 'ಸರ್ವತಂತ್ರ ಪ್ರಜಾಪ್ರಭುತ್ವ ಗಣ ರಾಜ್ಯ' ಎಂದು ಹೇಳಲ್ಪಟ್ಟಿದೆ. ಈ ಶಬ್ದಗಳ ಅರ್ಥವನ್ನು ತಿಳಿಯುವುದು ಅತಿ ಮಹತ್ವದ್ದು. ತನ್ನ ಜನತೆಯ ಬಗ್ಗೆ ಯಾವ ರೀತಿಯ ಜೀವನವನ್ನಾದರೂ ರೂಪಿಸುವದಕ್ಕೆ ನಮ್ಮ ದೇಶಕ್ಕೆ ಸ್ವಾತಂತ್ರ್ಯವಿರುತ್ತದೆ. ನಮ್ಮ ಅಂತರಿಕ ವ್ಯವಹಾರಗಳಲ್ಲಿ ಕೈ ಹಾಕಲು ಅಥವಾ ನಮ್ಮ ದೇಶದ ಯಾವ ಭಾಗವನ್ನಾದರೂ ವಶಪಡಿಸಿಕೊಳ್ಳಲು ಅಥವಾ ಆಕ್ರಮಿಸಲು ಜಗತ್ತಿನ ಯಾವ ರಾಷ್ಟ್ರಕ್ಕೂ ಹಕ್ಕಿರುವದಿಲ್ಲ. ನಮ್ಮದು ಸರ್ವತಂತ್ರ ಸ್ವತಂತ್ರ ರಾಷ್ಟ್ರ. ಅಮೇರಿಕಾ, ರಶಿಯಾ ಮತ್ತು ಬ್ರಿಟನ್ ದೇಶಗಳಂತೆ ಸಾರ್ವಭೌಮ ರಾಷ್ಟ್ರವಾಗಿದೆ. ಆದ ಕಾರಣ ನಮ್ಮ ರಾಷ್ಟ್ರವೂ ಇತರ ರಾಷ್ಟ್ರಗಳೊಡನೆ ಸಮಾನವಾದುದು. ಬ್ರಿಟಿಶರ ಪ್ರಭುತ್ವ ನಮ್ಮ ಮೇಲೆ ಇದ್ದಾಗ ನಮಗೆ ಸಾರ್ವಭೌಮ ಅಧಿಕಾರವಿರಲಿಲ್ಲ. ಅದು ಈಗ ಲಭಿಸಿದೆ. ಅದರೆ ಭಾರತ ಕಾಮನ್‌ವೆಲ್ತ ದೇಶಗಳ ಸದಸ್ಯತ್ವ ಹೊಂದಿರುವದರಿಂದ ಆದಕ್ಕೆ ಸಾರ್ವಭೌಮ ಅಧಿಕಾರವೆಲ್ಲಿ? ಎಂಬ ಟೀಕೆ-ಗಳುಂಟು. ಇದಕ್ಕೆ ಸಮನಾದ ದೃಷ್ಟಾಂತ – ಸಂಯುಕ್ತರಾಷ್ಟ್ರ ಸಂಘದ ಸದಸ್ಯತ್ವ – ಇದೂ ಒಂದು ಸಮಾಧಾನಕರ ಉತ್ತರ. ನಮ್ಮದು ಗಣರಾಜ್ಯ. ನಮ್ಮ ಸರ್ವೋಚ್ಚಾಧಿಕಾರ ರಾಜನಲ್ಲಿ ಅಥವಾ ರಾಜಕುಮಾರನಲ್ಲಿ ನೆಲಸಿರುವದಿಲ್ಲ. ಇದು ಜನತೆಯಲ್ಲಿ ಇರುತ್ತದೆ. ಇದೂ ಅಲ್ಲದೆ ಕಾಮನ್‌ವೆಲ್ತ ದೇಶಗಳ ಸದಸ್ಯತ್ವವನ್ನು ಬೇಕಾದಾಗ ತ್ಯಜಿಸಬಹುದು. ಇದಕ್ಕೆ ಒಂದು ಕರಾರು-ಭಾರತ ಅಂತರ್‌ರಾಷ್ಟ್ರೀಯ ಪ್ರಾಮುಖ್ಯ ವಿಷಯಗಳ ಸಂಬಂಧವಾಗಲೀ ಅಥವಾ ಪರಸ್ಪರ ಅಭಿರುಚಿಯ ಸಂಬಂಧದಲ್ಲಿಯಾಗಲೀ ತಾನು ತನ್ನ ಧೋರಣೆಯನ್ನು ಅನುಸರಿಸುವದಕ್ಕಿಂತ ಮುಂದೆ ಪರಸ್ಪರ ಅಪ್ತಾಲೋಚನೆಯನ್ನು ಮಾಡುವ ದಾಗಿದೆ. ಆದ್ದರಿಂದ ನಮ್ಮ ಹೊಸ ಸಂವಿಧಾನದ ರಚನೆ – ನಮ್ಮಿಂದ ನಾವೇ ತಯಾರಿಸಿದ್ದುದು ಮತ್ತು ನಮ್ಮ ಅಂತರಿಕ ವ್ಯವಹಾರಗಳಲ್ಲಿ ಕೈಹಾಕಲು ಅಥವಾ ನಮ್ಮ ದೇಶದ ಯಾವ ಭಾಗವನ್ನಾದರೂ ವಶಪಡಿಸಿಕೊಳ್ಳಲು ಜಗತ್ತಿನ ಯಾವ ಶಕ್ತಿಗೂ ಹಕ್ಕಿರುವದಿಲ್ಲ.– ಎಂಬವುಗಳು ನಮ್ಮ ಸಂವಿಧಾನದ ಅನೇಕ ಲಕ್ಷಣಗಳಲ್ಲಿ ಇದೂ ಒಂದು ಪ್ರಾಮುಖ್ಯ ಲಕ್ಷಣ.

ರಾಜ್ಯಗಳ ಒಕ್ಕೂಟ :

ನಮ್ಮ ಪ್ರಜಾಪ್ರಭುತ್ವದ ತಳಹದಿಯಲ್ಲಿ ಐದುವರೆ ಲಕ್ಷ ಹಳ್ಳಿಗಳಿವೆ. ಇವನ್ನು ಬ್ಲಾಕ್ ಅಥವಾ ಜಿಲ್ಲೆಗಳನ್ನಾಗಿ ಗುಂಪು ಮಾಡಲಾಗಿದೆ. ಬ್ಲಾಕ್

ಜಿಲ್ಲೆಗಳ ಬಳಿಕ ರಾಜ್ಯಗಳನ್ನಾಗಿ ಒಟ್ಟುಗೂಡಿಸಲಾಗಿದೆ. ಭಾರತ ಇಂತಹ ರಾಜ್ಯಗಳ ಒಕ್ಕೂಟ. ಪ್ರತಿ ರಾಜ್ಯವೂ ಒಮ್ಮಟ್ಟಾದ ರಾಜಕೀಯ ಘಟಕ. ಆಶ್ಚರ್ಯದ ಸಂಗತಿಯೆಂದರೆ ಭಾರತದಲ್ಲಿ ಸಂಯುಕ್ತ ಪದ್ಧತಿಯ ಸರಕಾರ ವಿದ್ದರೂ ಸಂಯುಕ್ತ ಪದವನ್ನು (The term Federation) ಸಂವಿಧಾನದಲ್ಲಿ ಎಲ್ಲಿಯೂ ಉಪಯೋಗಿಸಿಲ್ಲ. ಸಂವಿಧಾನದ ಒಂದನೇ ಭಾಗದ ಒಂದನೇ ಕಲಮಿನಲ್ಲಿ ಭಾರತ ರಾಜ್ಯಗಳ ಒಕ್ಕೂಟ ಅಂತಾ ಹೇಳಿದೆ.

ಒಕ್ಕೂಟ ಶಬ್ದದ ಬಳಕೆ ಉದ್ದೇಶಪೂರ್ವಕವಾದದ್ದು. ದೇಶದ ಐಕ್ಯತೆ ಮತ್ತು ಅಖಂಡತೆಯ ಅವಶ್ಯಕತೆಯನ್ನು ಒಕ್ಕೂಟ ಪದದ ಬಳಕೆಯು ಉತ್ಪ್ರೇಕ್ಷಿಸುತ್ತದೆ. ಇನ್ನೊಂದು ಮಹತ್ವದ ಅಂಶವೆಂದರೆ ಭಾರತ ಸಂಯುಕ್ತ ರಾಷ್ಟ್ರವಾಗಿದ್ದರೂ ಪರಿಪೂರ್ಣ ರಾಷ್ಟ್ರವಲ್ಲ. ಅದು ಅನೇಕ ಏಕಸೂತ್ರ ಲಕ್ಷಣಗಳುಳ್ಳ ಅಪರಿಪೂರ್ಣ ಸಂಯುಕ್ತ ರಾಷ್ಟ್ರ. ಸಂವಿಧಾನವು ಶಾಂತಿ ಸಮಯದಲ್ಲಿ ಸಂಯುಕ್ತ ತತ್ವಗಳಂತೆ ಕಾರ್ಯ ಮಾಡುವದು. ಗಂಡಾಂತರ ಪರಿಸ್ಥಿತಿಯಲ್ಲಿ ಏಕಸೂತ್ರ ಪದ್ಧತಿಗೆ ಅನಾಯಾಸವಾಗಿ ಪರಿವರ್ತನ ಗೊಳ್ಳುವದು. ಇದಕ್ಕೆ ಅವಶ್ಯವಾಗಿ ಬೇಕಾದದ್ದು ಗಣರಾಜ್ಯ—ಅಧ್ಯಕ್ಷರ ಗಂಡಾಂತರ ಘೋಷಣೆ. ರಾಷ್ಟ್ರದಲ್ಲಿ ರಾಷ್ಟ್ರಾಧ್ಯಕ್ಷರ ಗಂಡಾಂತರ ಘೋಷಣೆ ಇರುವ ವರೆಗೂ ರಾಷ್ಟ್ರದ ಸಾರ್ವಭೌಮಾಧಿಕಾರ ವ್ಯವಹಾರಿಕವಾಗಿ ಸ್ಥಗಿತ ಗೊಳ್ಳುವದು. ರಾಜ್ಯಗಳ ಕಾರ್ಯಕಾರಣ ಅಧಿಕಾರವನ್ನು ಹೇಗೆ ಚಲಾಯಿಸ ಬೇಕೆಂಬುದನ್ನು ಅಧ್ಯಕ್ಷರು ಆದೇಶವನ್ನು ಕಳಿಸಬಹುದು. ಇಂಥ ಅವಕಾಶ ಇನ್ನುಳಿದ ಸಂಯುಕ್ತ ಸಂವಿಧಾನದಲ್ಲಿ (Federal Constitution) ಕಂಡು ಬರುವದಿಲ್ಲ. ಅಮೇರಿಕಾದಲ್ಲಿ ಎರಡು ಕಾರ್ಯಾಂಗ, ಎರಡು ಶಾಸನಾಂಗ, ಎರಡು ನ್ಯಾಯಾಂಗ ಮತ್ತು ಎರಡು ಪೌರತ್ವಗಳು ಇವೆ. ಭಾರತದಲ್ಲಿ ಎರಡು ಕಾರ್ಯಾಂಗ, ಎರಡು ಶಾಸನಾಂಗ ಮತ್ತು ಎರಡು ನ್ಯಾಯಾಂಗಗಳಿದ್ದರೂ ಒಂದೇ ಪೌರತ್ವವಿದೆ. ಅದುವೇ 'ಭಾರತದೇಶದ ನಾಗರಿಕತ್ವ'. ಇದರಲ್ಲಿ ಇನ್ನೊಂದು ಅಂಶವೆಂದರೆ 'ಒಂದೇ ಪೌರತ್ವದ ಜೊತೆಗೆ ಇಡೀ ದೇಶಕ್ಕೆ ಒಂದೇ ಅಖಂಡವಾದ ನ್ಯಾಯಾಂಗ (One Integrated System of Judiciary), ಒಂದೇ ಅಖಿಲಭಾರತ ಆಡಳಿತ ಮತ್ತು ಪೋಲೀಸ್ ಸೇವೆಗಳು. (All India Administrative and Police services)

ಸಂಕ್ಷಿಪ್ತ ವಿವರಿಸಲು ಸಂಯುಕ್ತ ರೂಪ ಸರಕಾರವಿದ್ದರೂ ಸಂವಿಧಾನವು ದೇಶದ ಭದ್ರತೆ ಮತ್ತು ಐಕ್ಯತೆಯನ್ನು ಕಾಪಾಡಲು ಪ್ರಯತ್ನಿಸಿದೆ. ಏಕೆಂದರೆ ದೇಶದ ಇತಿಹಾಸ - ಮೂಲದಿಂದಲೂ ದೇಶವಿಭಜನೆಯವರೆಗೆ—ದೇಶಘಾತಕ ಶಕ್ತಿಗಳು ಹೇಗೆ ರುದ್ರನಾಟಕವನ್ನು ಅಭಿನಯಿಸಿವೆ ಎಂಬುದು ಸಂವಿಧಾನ

ಕರ್ತೃಗಾರರಿಗೆ ಅರಿವಿದ್ದಿತು. ಅದು ಈಗ ಅಖಂಡ ದೇಶದ ಮರ್ಮವನ್ನೇ ಭೇದಿಸಿದಂತಾಗಿದೆ.

ಜಾತ್ಯಾತೀತತೆ :

ಜಾತ್ಯಾತೀತತೆಯು ಗಣರಾಜ್ಯ ಸಂವಿಧಾನದ ಮತ್ತೊಂದು ವೈಶಿಷ್ಟ್ಯವೆಂದು ಹೇಳಬಹುದು. ಕೆಲವೊಂದು ಹಿತಾಸಕ್ತಿಗಳು ಇದಕ್ಕೆ ಅಪಾರ್ಥ ಕಲ್ಪಿಸಿವೆ. ಭಾರತ ಜಾತ್ಯಾತೀತ ರಾಷ್ಟ್ರ ಅನ್ನುವದು ಸರಕಾರವಾಗಲೀ ಅಥವಾ ರಾಷ್ಟ್ರವಾಗಲೀ ಇದೇ ರಾಷ್ಟ್ರದ ಧರ್ಮವೆಂದು ಘೋಷಿಸುವದಾಗಲೀ ಅಥವಾ ಸರಕಾರ ಇಂಥದೇ ಧರ್ಮದ ವಿರುದ್ಧ ಘೋಷಣೆಯನ್ನು ಮಾಡುವದಾಗಲೀ ಅಥವಾ ಇಂಥದೇ ಧರ್ಮವು ಅಧರ್ಮವೆಂದು ಹೇಳುವದಾಗಲೀ ಎಂಬ ಅನರ್ಥಕ ಅಂಕಿತ ನಾಮವನ್ನು ಕೊಡುವದಿಲ್ಲ. ಇದರ ಅರ್ಥ ವಿಶ್ಲೇಷಣೆ ಇಷ್ಟೇ--ರಾಷ್ಟ್ರ ಅಥವಾ ಸರಕಾರ ಧಾರ್ಮಿಕ ರಂಗದಲ್ಲಿ ಸಂಪೂರ್ಣ ತಾಟಸ್ಥ್ಯ ಮನೋವೃತ್ತಿಯನ್ನು ತಾಳುವದು. ಬ್ರಿಟನ್ ದೇಶದಲ್ಲಿ ಪ್ರೊಟೆಸ್ಟಂಟ ಧರ್ಮದಂತೆ ಪಾಕಿಸ್ತಾನದಲ್ಲಿ ಇಸ್ಲಾಂ ಧರ್ಮದಂತೆ ನಮ್ಮ ದೇಶದಲ್ಲಿ ಯಾವ ಅಂಥ ಸರಕಾರ ಘೋಷಿಸಿದಂಥ ಧರ್ಮವಿಲ್ಲ (Ofticial Religion).

ಈ ಸರ್ವಸಾಮಾನ್ಯವಾಗಿ ಅಭಿಮಾನಕ್ಕೆ ಧಕ್ಕೆಯಾಗುವಂಥ ಅನಿಸಿಕೆಯೆಂದರೆ ನಾವೂ ಸಹ ಸರ್ವವ್ಯಾಪಕವಾದ ಹಿಂದೂ ಧರ್ಮವನ್ನು ದೇಶದ ಧರ್ಮವೆಂದು ಸಂವಿಧಾನದಲ್ಲಿ ಘೋಷಿಸಬಾರದಾಗಿತ್ತೇ ಎಂಬುದು ನಮ್ಮೆಲ್ಲರ ನರನಾಡಿಗಳಲ್ಲಿ ದಿನವೂ ಮಿಡಿಯುತ್ತಿದೆ. ಇದಕ್ಕೆ ಕಾರಣ — ಪರಕೀಯ ಧರ್ಮ ಸಂಸ್ಕೃತಿಗಳ ದುರತಿಕ್ರಮಣ. ನಮ್ಮದು ವಿಶ್ವಬಂಧುತ್ವದ ಮನೋವೃತ್ತಿಯಿರುವದರಿಂದ ಇಂಥ ಹೀನಾತಿಶಯದ ದುರಾಕ್ರಮಗಳನ್ನು ಅವಲೋಕಿಸಲು ಸಹನೆ ತಾಳ್ಮೆಗೆ ಒರೆಗಲ್ಲಾಗಿದೆ. ಧರ್ಮ ಕುಲ ಹದಿನೆಂಟು ಜಾತಿಮತ ಪಂಥಗಳ ಭೇದವಿಲ್ಲದೆ ಸಮಾನ ಹಕ್ಕು ಮತ್ತು ಅವಕಾಶಗಳ ಉಪಭೋಗವನ್ನು ನಮ್ಮ ಸಂವಿಧಾನವು ಸಕಲರಿಗೂ ಒದಗಿಸಿದೆ. ಒಬ್ಬನು ಒಂದು ಧರ್ಮವನ್ನಾಚರಿಸಿದರೆ ಮತ್ತೊಬ್ಬನು ಅದನ್ನೇ ಅನುಸರಿಸಬೇಕೆಂಬ ನಿರ್ಬಂಧವಿಲ್ಲ ಮನುಷ್ಯನ ಧರ್ಮ ವೈಯಕ್ತಿಕವಾದದ್ದು. ಅದು ಅವನ ಮತ್ತು ದೇವರ ನಡುವಿನ ಖಾಸಗಿ ವ್ಯವಹಾರವಾಗಿದೆ. ರಾಷ್ಟ್ರಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ತಾರ್ಕಿಕವಾಗಿ ಅವಲೋಕಿಸಿದರೆ ಜಾತ್ಯಾತೀತತೆಯು ಧಾರ್ಮಿಕ ಸಹಿಷ್ಣುತೆಗೆ ಸಮಾನ ಅರ್ಥವನ್ನು ಪಡೆಕೊಂಡಿದೆ. ಭಾರತ ಧರ್ಮಗಳ ಕರ್ಮಕ್ಷೇತ್ರವೆಂಬ ಅನ್ವರ್ಥಕ ನಾಮವನ್ನು ಗಳಿಸಿದೆ. ಆದರೆ ಇದು ಧರ್ಮಗಳ ಕುರುಕ್ಷೇತ್ರ ಎಂಬ ಅನರ್ಥನಾಮವನ್ನು ಭಾವೀ ಜೀವನದಲ್ಲಿ ಗಳಿಸದೇ ಇರಲಿ. ಜಾತೀಯತೆಯು ರಾಷ್ಟ್ರಗಳಿಗೆ ಧರ್ಮವಂತರಾಗಿ

ವಿಶ್ವಬಂಧುತ್ವದ ಮನೋಭೂಮಿಕೆಯನ್ನು ಹದಗೊಳಿಸಲು ನಮ್ಮ ಜಾತ್ಯಾತೀತ ಸಂವಿಧಾನದ ಶಕೆ ಬಲಯುತವಾಗಿ ತಾಗಬಲ್ಲದು. ಇದು ಸಧ್ಯದ ನಾಗರಿಕತೆಗೆ ಅವಶ್ಯವಾಗಿ ಬೇಕಾಗಿದೆ. ಪ್ರಾಚೀನ ಕಾಲದಿಂದ ಇವತ್ತಿನವರೆಗೂ ವಿಶ್ವಧರ್ಮವಾದ ಹಿಂದೂದೇಶವು ಧರ್ಮ ಸಹಿಷ್ಣುತೆಗೆ ಪ್ರಸಿದ್ಧವಾಗಿದೆಂದು ಹೇಳಲು ಯಾವ ಅತಿಶಯೋಕ್ತಿಯಿಲ್ಲ. "ಭಾರತದೇಶ ಎಲ್ಲರಿಗಾಗಿ" (India for All) ಎಂಬ ಸಂದೇಶವು ಗಾಂಧೀಜಿಯವರ ಮಂತ್ರವಾಗಿತ್ತು. ಈ ಮಂತ್ರದ ಪತಾಕೆಯಲ್ಲಿ ಸಮಸ್ತ ಭಾರತೀಯರ ಧ್ವನಿ ಅಡಗಿತ್ತು ಮತ್ತು ಅಡಗಿದೆ. ಮುಸ್ಲಿಂ ಮತ್ತು ಇತರ ಅಲ್ಪ ಸಂಖ್ಯಾತರು ತಮ್ಮ ಭವಿಷತ್ತಿನ ಬಗ್ಗೆ ಹೆದರದೆ ಶಾಂತಿ ಮತ್ತು ಶಿಸ್ತಿನ ಜವಾನರಂತೆ ಬಾಳಲು ಸದವಕಾಶವನ್ನು ಕೊಟ್ಟಿದೆ. ಹಿಂದೂ ಪವಿತ್ರ ಗ್ರಂಥಗಳಾದ 'ರಾಮಾಯಣ', 'ಮಹಾಭಾರತ' ಮತ್ತು 'ಭಗವದ್ಗೀತೆಗಳು' ಶಾಶ್ವತವಾದ ಮತ್ತು ಆಳವಾದ ಆಧ್ಯಾತ್ಮಿಕ ಮೌಲ್ಯಗಳ ಸತ್ವರಾಶಿಯನ್ನೇ ಜಗತ್ತಿಗೆ ತೂರಿವೆ. ಇಂಥ ಆಧ್ಯಾತ್ಮಿಕ ಸಿರಿ ಸಂಪತ್ತಿನ ಸಂಗ್ರಹದ ರಾಶಿಯನ್ನೇ ನಮ್ಮ ಗಣರಾಜ್ಯ ಸಂವಿಧಾನವನ್ನು ನಾವು ಕಡೆಗಣಿಸಿದರೆ ಜಗತ್ತಿಗೆ ದ್ರೋಹವೆಸಗಿದಂತಾಗುವದು.

ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗಲೇ ನಮ್ಮ ಧುರೀಣರು ದೇಶದ ಭವಿಷ್ಯ ಕುರಿತು ಚಿಂತನ ಮಾಡುತ್ತಿದ್ದರು. ಈ ಸ್ವಾತಂತ್ರ್ಯ ಯಾವ ರೂಪ ತಾಳಬೇಕು. ಸ್ವಾತಂತ್ರ್ಯ ಬಂದ ಬಳಿಕ ಎಂತಹ ಸರಕಾರವನ್ನು ರಚಿಸಬೇಕು. ಈ ಸರಕಾರ ನಮಗಾಗಿ ಏನೆಲ್ಲ ಮಾಡಬೇಕು ಇತ್ಯಾದಿಯಾಗಿ ಈ ಧುರೀಣರು ಆಲೋಚಿಸುತ್ತಿದ್ದರು. ಕೆಲವು ಮೂಲಕಲ್ಪನೆಗಳು ಆ ಕಾಲದಲ್ಲೇ ನಮಗೆ ಸ್ಪಷ್ಟವಾಗಿ ಗೋಚರಿಸಿದ್ದವು. ಇವುಗಳಲ್ಲಿ ಸ್ವತಂತ್ರ ಭಾರತದ ಸರಕಾರ ಜನತೆಯಿಂದ ಜನತೆಗಾಗಿ ರಚಿಸಲಾದ ಜನತಾ ಸರಕಾರವಿರಬೇಕೆಂಬುದು ಒಂದು ಕಲ್ಪನೆ. ದೇಶದಲ್ಲಿ ವಾಸಿಸುವ ಜನರೆಲ್ಲ ಸಮಾನರು. ಜಾತಿ, ಮತ, ಪಂಥ, ಪ್ರದೇಶ ಅಥವಾ ಲಿಂಗದ ಆಧಾರದ ಮೇಲೆ ಯಾವ ವಿಶೇಷ ಹಕ್ಕು ಇರಕೂಡದು. ಇದೇ ಸಮಯದಲ್ಲಿ ಯಾವುದೇ ವ್ಯಕ್ತಿಯು ತನ್ನ ಸ್ವಂತ ಧರ್ಮವನ್ನು ಅನುಸರಿಸುವದಕ್ಕೆ, ತನ್ನ ಇಷ್ಟ ಬಂದ ಜೀವನವನ್ನು ನಡೆಸುವದಕ್ಕೆ ಹಕ್ಕಿರಬೇಕು ಎಂಬುದು ಎರಡನೆಯ ಕಲ್ಪನೆ. ಜನತೆಯ ಕಲ್ಯಾಣಕ್ಕಾಗಿ ಕೆಲಸ ಮಾಡುವದು ಸರಕಾರದ ಗುರಿಯಾಗಿರಬೇಕು. ಅದು ನಮ್ಮ ನಡುವೆ ಬೇರೂರಿರುವ ಅಜ್ಞಾನ ಮೂಢನಂಬಿಕೆ ಬಡತನಗಳನ್ನು ಸಾಧ್ಯವಿದ್ದಷ್ಟು ಬೇಗನಿರ್ಮೂಲಗೊಳಿಸಬೇಕು. ಇದು ಮೂರನೆಯ ಕಲ್ಪನೆ. ಈ ಕಲ್ಪನೆಗಳನ್ನು ಕೆಲವು ಸಲ ಸಮಾಜವಾದ, ಜಾತ್ಯಾತೀತತೆ, ಪ್ರಜಾಪ್ರಭುತ್ವ ಎಂಬ ದೊಡ್ಡ ದೊಡ್ಡ ಶಬ್ದಗಳಿಂದ ಬರೆಯಲಾಗುತ್ತಿದೆ. ಈ ಶಬ್ದಗಳ ನಿಜವಾದ ಅರ್ಥ ಅತಿ ಸುಲಭ. ಸರಕಾರ ಜನತೆಯ ಸಮ್ಮತಿಯಿಂದ ಬಾಳಿ ಉಳಿಯಬೇಕು, ಕೆಲಸ ಮಾಡ-

ಬೇಕು, ಅದು ಎಲ್ಲ ಜನರನ್ನು ಸಮನಾಗಿ ನೋಡಿಕೊಳ್ಳಬೇಕು. ಮುಖ್ಯವಾಗಿ ಅದು ಜನತೆಯ ಯೋಗಕ್ಷೇಮ ಹಾಗೂ ಏಳಿಗೆಗಾಗಿ ಗಮನಕೊಡ ಬೇಕು. ಇಷ್ಟೇ ಈ ಶಬ್ದಗಳ ಅರ್ಥ. ನಮ್ಮ ಪ್ರಜಾಪ್ರಭುತ್ವ ಎಂಬ ಶಬ್ದದಲ್ಲಿ ಈ ಕಲ್ಪನೆಗಳಲ್ಲಿ ಅಡಕವಾಗಿವೆ. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಹಾಗೂ ಆರ್ಥಿಕ ಗುರಿಗಳ ಬಗ್ಗೆ ಕೆಲಸ ಮಾಡಬೇಕು. ಆದ್ದರಿಂದ ನಮ್ಮ ದೇಶದ ಧುರೀಣರು ದೀರ್ಘಾಲೋಚನೆ ಮಾಡಿ ಅಲ್ಪ ಸಂಖ್ಯಾಕರರ ಹಿತರಕ್ಷಣೆಯ ಗುರಿಯನ್ನು ಮುಂದಿಟ್ಟುಕೊಂಡು ವಿವಿಧ ಜನಾಂಗಗಳಿಂದ ಕೂಡಿದ ನಮ್ಮ ದೇಶಕ್ಕೆ ಜಾತ್ಯಾತೀತತೆಯ ಗುರಿಯೇ ಬುನಾದಿ ಯಾಗಬೇಕೆಂದು ಸಂಕಲ್ಪ ಮಾಡಿ ಅದನ್ನು ಸಂವಿಧಾನದಲ್ಲಿ ಅಳವಡಿಸಿದರು.

ಮೂಲಭೂತ ಹಕ್ಕುಗಳು :

ಸಂವಿಧಾನದಲ್ಲಿ ಅನೇಕ ಮೂಲಭೂತ ಹಕ್ಕುಗಳನ್ನು ಸೇರಿಸಲಾಗಿದೆ. ಸಂವಿಧಾನವು ಜನರಿಗೆ ಯಾವ ಹಕ್ಕುಗಳ ಭರವಸೆ ಕೊಡುವದೋ ಅವುಗಳಿಗೆ ವಾಡಿಕೆಯಾಗಿ ಮೂಲಭೂತ ಹಕ್ಕುಗಳೆನ್ನುವರು. ಅವುಗಳಿಗೆ ' ಮೂಲಭೂತ ' ಎಂದು ಯಾಕೆ ಕರೆಯುತ್ತಾರೆ ? ಕಾರ್ಯಾಂಗ ಅಥವಾ ಶಾಸನಾಂಗ ಸಂವಿಧಾ ನವು ಭರವಸೆ ಕೊಟ್ಟು ಹಕ್ಕುಗಳನ್ನು ಮೊಟಕುಗೊಳಿಸಲು ಅಥವಾ ಕಸಿದು ಕೊಳ್ಳಲು ಅಥವಾ ಅತಿಕ್ರಮಿಸಲು ಬರುವದಿಲ್ಲ. ಒಂದು ವೇಳೆ ಕೇಂದ್ರ ಅಥವಾ ರಾಜ್ಯ ಶಾಸನ ಸಭೆಗಳು ಸಂವಿಧಾನಕ್ಕೆ ವಿರುದ್ಧವಾಗಿ ಕಾಯಿದೆಗಳನ್ನು ಮಾಡಿದರೆ ವರಿಷ್ಠ ನ್ಯಾಯಾಲಯವು ಅಂಥ ಕಾಯಿದೆಗಳು ಸಂವಿಧಾನ ಬಾಹಿರ ಎಂದು ನಿರ್ಣಯಿಸುವವು. ಅವು ಕಾರ್ಯಾಚರಣೆಯಲ್ಲಿ ಬರಲು ಸಾಧ್ಯವಿಲ್ಲ. ಸರ ಕಾರವು ಅಂಥ ಕಾಯಿದೆಗಳನ್ನು ರದ್ದು ಮಾಡಬೇಕಾಗುವದು. ತಾತ್ಪರ್ಯವೆಂದರೆ ಮೂಲಭೂತ ಹಕ್ಕುಗಳ ತತ್ವ ನಿಯಂತ್ರಿತ ಸರಕಾರವನ್ನು ಸೂಚಿಸುತ್ತದೆ. ಆದರೆ ಅನೇಕ ದೇಶಗಳಲ್ಲಿ ಯಾವ ಹಕ್ಕುಗಳು ಮೂಲಭೂತ ಹಕ್ಕುಗಳು ಅನ್ನುವದು ಆಯಾ ದೇಶಗಳ ಕಾಲಮಾನ ಪರಿಸ್ಥಿತಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಐತಿಹಾಸಿಕ ಪರಿಸ್ಥಿತಿಗಳ ಒತ್ತಡದ ಮೇಲೆ ಅವಲಂಬಿಸಿರು ತ್ತದೆ. ಉದಾಹರಣೆಗೆ ಆಸ್ತಿಯ ಹಕ್ಕು ಜಗತ್ತಿನ ಅನೇಕ ದೇಶಗಳಲ್ಲಿ ಮೂಲ ಭೂತಹಕ್ಕು ಎಂದು ಪರಿಗಣಿಸಿಲ್ಲ. ನಮ್ಮ ದೇಶದಲ್ಲಿ ಅದು ಮೂಲಭೂತ ಹಕ್ಕು ಅಂತಾ ಇಂದಿನವರೆಗೆ ಪರಿಗಣಿಸಿದ್ದೆವು. ಮೊನ್ನಿನ ೨೪ ನೇ ಸಂವಿಧಾನ ತಿದ್ದುಪಡಿ ಮಸೂದೆಯು ಈ ಹಕ್ಕನ್ನು ಮೊಟಕುಗೊಳಿಸಿದೆ ಎಂಬ ಟೀಕೆಗಳು ಬರುತ್ತಲಿವೆ. ಯಾಕಂದರೆ ಗೋಲಕನಾಥ ಪ್ರಕರಣದಲ್ಲಿ ವರಿಷ್ಠ ನ್ಯಾಯಾ ಲಯವು ೧೯೬೪ರಲ್ಲಿ ಆಸ್ತಿಗೆ ಸಂಬಂಧವಾಗಿ ಮಹತ್ವವಾದ ತೀರ್ಪನ್ನು ನೀಡಿದೆ. ಆದಕಾರಣ ಅಲ್ಲಿಂದ ಇಲ್ಲಿಯವರೆಗೆ ನಮ್ಮ ದೇಶದಲ್ಲಿ ನ್ಯಾಯಾಂಗ

ಮತ್ತು ಶಾಸನಾಂಗಗಳ ನಡುವೆ ಬಲಾಬಲ ಸ್ಪರ್ಧೆ ನಡದೇ ಇತ್ತು. ಈ ಬಲಾಬಲ ಕೊನೆಗಾಣುವ ಹಂತದಲ್ಲಿದೆ. ಶಾಸನಾಂಗವೇ ಸರ್ವಶ್ರೇಷ್ಠ. ಸಂವಿಧಾನದ ಯಾವದೇ ಭಾಗವನ್ನು ತಿದ್ದುಪಡಿ ಮಾಡಲು ಶಾಸನಾಂಗಕ್ಕೆ ಹಕ್ಕಿದೆ ಎಂದು ೨೪ನೇ ಸಂವಿಧಾನ ತಿದ್ದುಪಡಿಯಿಂದ ನಮ್ಮೆಲ್ಲರಿಗೆ ತಿಳಿದ ಮಾತು. ಪ್ರೊಫೆಸರ ಲಾಸ್ಕಿಯವರು ಹೇಳಿದ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಯಾವುದೇ ಒಂದು ರಾಷ್ಟ್ರದ ಅಸ್ತಿತ್ವವು ಯಾವ ಹಕ್ಕುಗಳನ್ನು ಅದು ಕಾಪಾಡಿದೆ ಎಂಬುದರ ಮೇಲೆ ಅವಲಂಬಿಸಿದೆ. ಆದರಂತೆ ಇನ್ನೂ ಒಂದು ಮಾತು – ನಾಗರಿಕರಿಗೆ ಮೂಲಭೂತ ಹಕ್ಕುಗಳ ಅವಶ್ಯಕತೆ ಇದೆ. ನಿಜ. ಆದರಂತೆ ಕರ್ತವ್ಯದ ಹಕ್ಕೂ ಇದೆ. ಇದನ್ನೂ ಸಹ ಮೂಲಭೂತ ಹಕ್ಕುಗಳ ಸಾಲಿನಲ್ಲಿ ನಿಲ್ಲಿಸಬೇಕಾಗಿತ್ತು. ಯಾಕೆಂದರೆ ನಮ್ಮಲ್ಲಿ ಕೇವಲ ಹಕ್ಕುಗಳನ್ನು ಕೇಳುವ ಮನೋವೃತ್ತಿ ಇದೆ. ಆದರೆ ಕರ್ತವ್ಯ ಪೂರೈಸಬೇಕೆಂಬ ಪ್ರಜ್ಞೆ ಅತಿ ಕಡಿಮೆ. ಕರ್ತವ್ಯ ಮಾಡಿದರೆ ಮಾತ್ರ ಮೂಲಭೂತ ಹಕ್ಕುಗಳನ್ನು ಉಪಯೋಗಿಸಲಿಕ್ಕೆ ಹಕ್ಕು ಇದೆ ಎನ್ನುವ ನೈತಿಕ ಮನೋಧಾರ್ಢ್ಯ ಆಯಾ ದೇಶಗಳಲ್ಲಿ ಬಾಳಿ ಉಳಿದು ಬೆಳೆಯುಬೇಕು.

ಮೂಲಭೂತ ಹಕ್ಕುಗಳನ್ನು ಮತ್ತು ಅವುಗಳಿಗೆ ಇರುವ ಮಿತಿಗಳನ್ನು ಶಕ್ಯವಿದ್ದ ಮಟ್ಟಿಗೆ ನ್ಯಾಯಾಲಯಗಳು ಅವುಗಳ ವಿಷಯವಾಗಿ ನಿರ್ಣಯಗಳನ್ನು ಕೊಡಬೇಕಾಗುವದರಿಂದ ಸ್ಪಷ್ಟವಾದ ಶಬ್ದಗಳಲ್ಲಿ ವಿವರಿಸಲಾಗಿದೆ ಸಂವಿಧಾನವು ಮೂಲಭೂತ ಹಕ್ಕುಗಳನ್ನು ಕೆಳಗೆ ಹೇಳಿದ ಏಳು ಶೀರ್ಷಿಕೆಗಳಲ್ಲಿ ಗುಂಪು ಮಾಡಲಾಗಿದೆ. (೧)ಸಮಾನತೆಯ ಹಕ್ಕು - ನಾಗರಿಕರಲ್ಲಿ ಜಾತಿ ಮತ ಪಂಥಗಳ ಭೇದಭಾವಗಳನ್ನು ರಾಷ್ಟ್ರವು ಎಣಿಸುವದಿಲ್ಲ. ಆದರೆ ರಾಷ್ಟ್ರವು ಮಹಿಳೆಯ ಹಾಗೂ ಮಕ್ಕಳಿಗಾಗಿ ವಿಶೇಷ ಸೌಕರ್ಯಗಳನ್ನು ಒದಗಿಸಿ ಕೊಡಲು ಇದರಿಂದ ನಿರ್ಬಂಧಿಸಿದಂತಾಗುವದಿಲ್ಲ. ಪ್ರತಿಯೊಬ್ಬನಿಗೂ ರಾಷ್ಟ್ರದ ನೌಕರಿಗಳಲ್ಲಿ ಅವಕಾಶ ಕಲ್ಪಿಸಿಕೊಡಲಾಗುವದು. ಜನ್ಮಸ್ಥಳ ಜಾತಿ ಮತ ಪಂಥಗಳ ಯಾವದೇ ಕಾರಣಗಳಿಂದ ರಾಷ್ಟ್ರದ ನೌಕರಿಗಳಲ್ಲಿ ಹಿಂದುಳಿದ ವರ್ಗದವರು ಸಾಕಷ್ಟು ಪ್ರಮಾಣದಲ್ಲಿಲ್ಲವೆಂದು ಕಂಡು ಬಂದರೆ ಅವರಿಗಾಗಿ ಸ್ಥಳಗಳನ್ನು ಕಾಯ್ದಿರಿಸಲು ಅವಕಾಶ ಮಾಡಿಕೊಡುವದಕ್ಕೆ ರಾಷ್ಟ್ರವನ್ನು ಇದರಿಂದ ಬಂಧಿಸಿದಂತಾಗುವದಿಲ್ಲ. ಯಾಕಂದರೆ ಅವರು ಅನಾದಿಕಾಲದಿಂದ ಸ್ವಾತಂತ್ರ್ಯ ದೊರಕುವವರೆಗೂ ಒಂದಿಲ್ಲೊಂದು ರೀತಿಯಿಂದ ಹತ್ತಿಕ್ಕಲ್ಪಟ್ಟವರೇ ಎಂಬುದು ನಿರ್ವಿವಾದ. ಹಾಗೆ ಕೆಲವೊಂದು ಸ್ಥಳಗಳನ್ನು ಕಾಯ್ದಿರಿಸಲು ಅವಕಾಶ ಮಾಡಿಕೊಡುವದರಿಂದ ಕೆಲವು ಮಟ್ಟಿಗಾದರೂ ಸಮತೆಯನ್ನು ಸಾಧಿಸುವದಾಗಿದೆ. (೨) ಸ್ವಾತಂತ್ರ್ಯದ ಹಕ್ಕು – ವ್ಯಕ್ತಿ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಸ್ವಯಂಸಿದ್ಧ ತಿಳಿವಳಿಕೆ. ವಾಕ್ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಶಾಂತ ರೀತಿಯಿಂದ ಸಭೆ ಕೂಡಿಸುವ ಸ್ವಾತಂತ್ರ್ಯ, ಸಂಘ ಸಂಸ್ಥೆಗಳನ್ನು

ರಚಿಸುವ ಸ್ವಾತಂತ್ರ್ಯ, ದೇಶದ ಯಾವದೇ ಪ್ರದೇಶದಲ್ಲಿ ಸ್ವತಂತ್ರವಾಗಿ ಚಲಿಸುವ ಮತ್ತು ವಾಸಿಸುವ ಸ್ವಾತಂತ್ರ್ಯ, ಆಸ್ತಿ ಸಂಪಾದಿಸುವ ಮತ್ತು ವಿಲೇವಾರಿ ಮಾಡುವ ಸ್ವಾತಂತ್ರ್ಯ, ವ್ಯಾಪಾರ ವೃತ್ತಿ ಕೈಗೊಳ್ಳುವ ಸ್ವಾತಂತ್ರ್ಯ ಇವೆಲ್ಲವುಗಳು ಸ್ವಾತಂತ್ರ್ಯದ ಹಕ್ಕುಗಳ ವ್ಯಾಪ್ತಿಯಲ್ಲಿ ಬರುವವು. ಆದರೆ ಈ ಹಕ್ಕುಗಳು ಸಂಪೂರ್ಣವಾದವುಗಳಲ್ಲ. ಕೆಲವೊಂದು ದೃಷ್ಟಿಯಲ್ಲಿ ಸೀಮಿತವಾದವುಗಳು. (೩) ಶೋಷಣೆಯಿಂದ ಬಿಡುಗಡೆಯಾಗುವ ಹಕ್ಕು – ಸಂವಿಧಾನ ಜಾರಿಗೆ ಬರುವದಕ್ಕಿಂತ ಪೂರ್ವದಲ್ಲಿ ನಮ್ಮ ದೇಶದೊಳಗೆ ಕೆಲವೊಂದು ವಿಚಿತ್ರ ರೀತಿಯ ಮನುಷ್ಯ ವ್ಯಾಪಾರ (Traffic in Human-beings) ಮತ್ತು ಒತ್ತಾಯವಾದ ಕೂಲಿ ಅಸ್ತಿತ್ವದಲ್ಲಿತ್ತು. ಕಲಮು ೨೩ ಅಂಥ ಎಲ್ಲ ಶೋಷಣೆಗಳಿಗೆ ಪ್ರತಿಬಂಧವನ್ನುಂಟು ಮಾಡಿದೆ. ಇದಲ್ಲದೆ ೧೪ ವರ್ಷದೊಳಗಿನ ಎಲ್ಲ ಬಾಲಕರನ್ನು ಕಾರಖಾನೆ ಮತ್ತು ಇತರ ಯಾವದೇ ಅಪಾಯಕಾರಕ ಉದ್ಯೋಗಗಳಲ್ಲಿ ನೇಮಿಸಲು ತಡೆಯನ್ನುಂಟು ಮಾಡಿದೆ. (೪) ಧಾರ್ಮಿಕ ಸ್ವಾತಂತ್ರ್ಯ – ಪ್ರತಿಯೊಬ್ಬ ನಾಗರಿಕನಿಗೆ ಧಾರ್ಮಿಕ ಸ್ವಾತಂತ್ರ್ಯದ ಭರವಸೆಯನ್ನು ಸಂವಿಧಾನವು ನೀಡಿದೆ. ಯಾವದೇ ನಾಗರಿಕನು ಯಾವದೇ ಧರ್ಮವನ್ನಾದರೂ ತನ್ನ ಮನಸ್ಸಿನ ಒಲವಿನಂತೆ ಆಚರಿಸಬಹುದು. ಆದರೆ ಅದು ಸಾರ್ವಜನಿಕ ಅಭಿರುಚಿಗೆ ಬಾಧಕವಾಗಿರಬಾರದು. ಯಾವದೇ ಧಾರ್ಮಿಕ ಪ್ರೋತ್ಸಾಹನೆಗೆ ಯಾವದೇ ವ್ಯಕ್ತಿಯಿಂದ ಜುಲುಮೆಯಿಂದ ಹಣ ವಸೂಲ ಮಾಡಲಾಗದು. ರಾಷ್ಟ್ರವು ನಡೆಯಿಸುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡಲಾಗುವದಿಲ್ಲ. ಆದರೆ ಸಮಾಜ ಸುಧಾರಣೆಗೆ ಅಥವಾ ಧಾರ್ಮಿಕ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆಗೆ ಕಾಯಿದೆಗಳನ್ನು ಮಾಡಲು ಬಂಧನವಾಗಲಾರದು. (೫) ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳು :– ಭಾರತದ ಯಾವದೇ ಭಾಗದ ನಾಗರಿಕರು ತಮ್ಮ ವಿಶಿಷ್ಟವಾದ ಭಾಷೆ ಸಂಸ್ಕೃತಿ ಲಿಪಿಗಳನ್ನು ಕಾಯ್ದುಕೊಂಡು ಹೋಗಲು ಹಕ್ಕು ಇರುವದು. ಜಾತಿ ಮತ ಪಂಥ ಹಾಗೂ ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಿದ್ದರೆ ರಾಷ್ಟ್ರದಿಂದ ನಡೆಯಿಸಲ್ಪಡುವ ಶಿಕ್ಷಣ ಸಂಸ್ಥೆಗಳಲ್ಲಿ ಅವರಿಗೆ ಪ್ರವೇಶ ದೊರೆಯಲು ತಾರತಮ್ಯವೆಸಗುವದಿಲ್ಲ. ಅಲ್ಪ ಸಂಖ್ಯಾಕರಿದ್ದವರು ಯಾವದೇ ರೀತಿಯಿಂದ ತಮ್ಮವೇ ಆದ ಶಿಕ್ಷಣ ಸಂಸ್ಥೆ ಸಂಘಗಳನ್ನು ಸ್ಥಾಪಿಸಿ ನಡೆಯಿಸಿಕೊಂಡು ಹೋಗಲು ಹಕ್ಕಿರುವದು. ಯಾವದೇ ಸಂಸ್ಕೃತಿ ಅಥವಾ ಭಾಷೆಯನ್ನು ಯಾವದೇ ಗುಂಪು ಅಥವಾ ಸಮಾಜದ ಮೇಲೆ ಹೇರಲು ಪ್ರಯತ್ನ ಮಾಡಿದರೆ ಅಂಥವುಗಳನ್ನು ಪ್ರತಿಬಂಧಿಸಲು ರಾಷ್ಟ್ರಕ್ಕೆ ಕಾಯಿದೆ ಮಾಡಲು ಅಧಿಕಾರ ನೀಡಿದೆ. ಹೀಗೆ ಸಂವಿಧಾನವು ಸಂಪದ್ಭರಿತ ಹೊಂದಾಣಿಕೆಯ ಗುರಿಯನ್ನು ಹೊಂದಿದೆ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ.

(೬) ಆಸ್ತಿಯ ಹಕ್ಕುಗಳು--ಸಂವಿಧಾನವು ಚರಾಚರ ಆಸ್ತಿಯ ಹಕ್ಕನ್ನು ಮನ್ನಿಸಿದೆ ಕಾಯಿದೆಯಿಂದ ಹೊರತುಪಡಿಸಿ ಯಾವದೇ ರೀತಿಯಿಂದ ಯಾವನೊಬ್ಬನ ಆಸ್ತಿಯನ್ನು ವಶಪಡಿಸಿಕೊಳ್ಳಲಾಗುವದಿಲ್ಲ. ಆದರೆ ಯಾವದೇ ವ್ಯಕ್ತಿಯ ಅಥವಾ ಕಂಪನಿಯ ಅಥವಾ ವಾಣಿಜ್ಯ ಉದ್ದಿಮೆಗಳಿಗಾಗಿರುವ ಚರಾಚರ ಆಸ್ತಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಅಂಥಹ ಆಸ್ತಿಯನ್ನು ವಶಪಡಿಸಿಕೊಳ್ಳಲಾಗುವದು. ಕಾಯಿದೆಯಲ್ಲಿ ಪರಿಹಾರ ಹಣ ಕೊಡಲು ಕಲಮು ಇದೆ. ಈಗ ೨೪ ಮತ್ತು ೨೫ನೇ ತಿದ್ದುಪಡಿಗಳು ಪಾಸಾಗುವ ಹಂತದಲ್ಲಿರುವದರಿಂದ ಇವೆಲ್ಲವುಗಳು ವಾದಗ್ರಸ್ತ ಅಂಶಗಳಾಗಿವೆ. ಸಮಾಜವಾದಿಗಳು ಪರಿಹಾರ ಹಣವನ್ನು ಕೊಡುವ ಕಲಮನ್ನು ವಿರೋಧಿಸುತ್ತಾರೆ ರಾಷ್ಟ್ರವು ಭೂ ಒಡೆಯನಿಂದ ಅಥವಾ ಆಸ್ತಿಯ ಮಾಲಕನಿಂದ ಸಾರ್ವಜನಿಕ ಉದ್ದೇಶಗಳಿಗಾಗಿ ವಶಪಡಿಸಿಕೊಂಡ ಆಸ್ತಿಗೆ ಪರಿಹಾರ ಹಣವನ್ನು ಕೊಡಲು ಒತ್ತಾಯ ತಂದರೆ ಭೂಒಡೆಯನ ಅಥವಾ ಆಸ್ತಿಯ ಮಾಲಕನ ಹಕ್ಕುಗಳಿಗೆ ಬಹಳ ಮನ್ನಣೆ ತೋರಿಸಿದಂತಾಗುವದು-ಎಂಬುದು ಅವರ ವಾದವಾಗಿದೆ. ಏನೇ ಇದ್ದರೂ ಪರಿಹಾರ ಧನವು ಆರ್ಥಿಕ ಬದಲಾವಣೆಗೆ ಮತ್ತು ಆರ್ಥಿಕ ಅಸಮಾನತೆಯ ನಿವಾರಣೆಗೆ ತೊಂದರೆದಾಯಕವಾಗಿ ಪರಿಣಮಿಸುವದು. (೭) ವಿಧಾಯುಕ್ತ ಪರಿಹಾರ ಪಡೆಯುವ ಹಕ್ಕು-ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೆ ಮೇಲೆ ಹೇಳಿದ ಮೂಲಭೂತ ಹಕ್ಕುಗಳ ಭರವಸೆಯನ್ನು ಕೊಡುವದಲ್ಲದೆ ಅವುಗಳ ಕಾರ್ಯಾಚರಣೆಗೆ ವರಿಷ್ಠ ನ್ಯಾಯಾಲಯಕ್ಕೆ ಹೋಗಲು ಸಹ ಹಕ್ಕನ್ನು ನೀಡಿದೆ. ಹಕ್ಕುಗಳು ಸಂವಿಧಾನಾತ್ಮಕ ಕ್ರಮಗಳಿಂದ ಕಾಪಾಡಿದ್ದರೆ ಅವುಗಳಿಗೆ ಗರ್ಭಿತಾರ್ಥ ಇರುವದಿಲ್ಲ. ಸಂವಿಧಾನದ ೩೨ನೇ ಕಲಮು ಅವುಗಳ ಜಾರಿಯ ಕ್ರಮಗಳನ್ನು ಒದಗಿಸಿದೆ. ಇದು ಸಂವಿಧಾನದ ಹೃದಯ ಮತ್ತು ಆತ್ಮ ಎಂದು ವರ್ಣನೆ ಮಾಡಬಹುದು. ಎಲ್ಲ ದೇಶಗಳ ಸಂವಿಧಾನಗಳು ತಮ್ಮ ತಮ್ಮ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ಕೊಡಬಹುದು. ಆದರೆ ಅವುಗಳ ವಿಧಾಯುಕ್ತ ಪರಿಹಾರ ಪಡೆಯುವ ಹಕ್ಕನ್ನು ಕೊಡಮಾಡಿಲ್ಲ. ಕಾರ್ಯಾಂಗ ಮತ್ತು ಶಾಸಕಾಂಗಗಳಿಗೆ ಮೂಲಭೂತ ಹಕ್ಕುಗಳನ್ನು ಜಾರಿಯನ್ನುಂಟು ಮಾಡಲು ನಿರ್ಬಂಧಿಸುವದಾಗಿದೆ. ವರಿಷ್ಠ ನ್ಯಾಯಾಲಯವು ಈ ಹಕ್ಕುಗಳು ದೊರೆಯುವ ಬಗ್ಗೆ ಯೋಗ್ಯ ಆಜ್ಞೆಗಳನ್ನು ವಿಧಿಸಿ ನಿರ್ದೇಶಿಸಬಹುದು. ಹಿರಿಯ ನ್ಯಾಯಾಲಯವು ಯಾವದಾದರೊಂದು ಸ್ಥಾನಿಕ ನ್ಯಾಯಾಲಯಕ್ಕೆ ತನ್ನ ಅಧಿಕಾರ ಕ್ಷೇತ್ರದಲ್ಲಿ ವರಿಷ್ಠ ನ್ಯಾಯಾಲಯದ ಎಲ್ಲ ಇಲ್ಲವೇ ಕೆಲವು ಅಧಿಕಾರಗಳನ್ನು ನಡೆಯಿಸಲು ಕಾಯಿದೆಯಿಂದ ಅಧಿಕಾರ ವಹಿಸಿಕೊಡಬಹುದು. ಮೂಲಭೂತ ಹಕ್ಕುಗಳನ್ನು ಸಂಪಾದಿಸಲು ವರಿಷ್ಠ ನ್ಯಾಯಾಲಯದವರೆಗೆ ಹೋಗುವ ಹಕ್ಕನ್ನಲ್ಲದೆ ಶಾಸನ ಸಭೆಗಳು ಮಾಡಿದ ಕಾಯಿದೆಗಳು ಅಥವಾ ಕಾರ್ಯಾಂಗದ ಯಾವದೇ ಕೃತಿಯು

ಸಂವಿಧಾನದ ವಿರುದ್ಧ ವಿದ್ದರೆ ನಾಗರಿಕನಿಗೆ ವಿರೋಧ ಮಾಡುವ ಹಕ್ಕು ಇದೆ. ಶಾಂತಿ ಸಮಯದಲ್ಲಿ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಲು ಬರುವದಿಲ್ಲ. ಗಂಡಾಂತರ ಪರಿಸ್ಥಿತಿಯಲ್ಲಿ ಅದು ಅಂತರ್ಯುದ್ಧವೇ ಇರಲಿ ಅಥವಾ ಅಂತರ್ರಾಷ್ಟ್ರೀಯ ಯುದ್ಧವೇ ಇರಲಿ ಮೂಲಭೂತ ಹಕ್ಕುಗಳ ಮತ್ತು ಅವುಗಳ ವಿಧಾಯಕ ಪರಿಹಾರ ಪಡೆಯುವ ಹಕ್ಕನ್ನು ಸ್ಥಗಿತಗೊಳಿಸಲಾಗುವದು.

ರಾಷ್ಟ್ರ ಧೋರಣೆಯ ಮಾರ್ಗದರ್ಶಕ ತತ್ವಗಳು :

ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದೆ ಕೇವಲ ರಾಜಕೀಯ ಪ್ರಜಾಪ್ರಭುತ್ವ ನಿರರ್ಥಕವಾದುದು. ಆದ್ದರಿಂದ ಕಲಮು ೩೮—ರಾಷ್ಟ್ರೀಯ ಜೀವನದಲ್ಲಿ ಎಲ್ಲ ಸಂಸ್ಥೆಗಳಲ್ಲಿ ಸಮಾಜದ ವ್ಯವಸ್ಥೆಯನ್ನು ದೊರಕಿಸುವದಲ್ಲದೆ ಅದನ್ನು ಕಾಪಾಡಿ ಜನರ ಸರ್ವಾಂಗೀಣ ಅಭಿವೃದ್ಧಿಯನ್ನು — ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸುವದಾಗಿದೆ- ರಾಷ್ಟ್ರವು ಈ ಕೆಳಗಿನ ವಿಷಯ ಬಗ್ಗೆ ಸಂರಕ್ಷಣೆ ದೊರೆಯುವಂತೆ ತನ್ನ ಧೋರಣೆಯನ್ನು ನಿರ್ಧರಿಸುವದು. (೧) ನಾಗರಿಕರಿಗೆ ಸಂರಕ್ಷಣೆ (೨) ನಾಗರಿಕರಿಗೆ ಸಹಾಯ, (೩) ನಾಗರಿಕರಿಗೆ ಶಿಕ್ಷಣ, (೪) ರಾಷ್ಟ್ರದ ಪ್ರಾಥಮಿಕ ಕರ್ತವ್ಯ (೫) ಸ್ಮಾರಕಗಳ ರಕ್ಷಣೆ, (೬) ಅಂತರ್ರಾಷ್ಟ್ರೀಯ ಶಾಂತಿ ಭದ್ರತೆ ಮುಂತಾದವುಗಳು. ಈ ಕಲಮುಗಳನ್ನು ಜಾರಿಯಲ್ಲಿ ತರಲು ಯಾವದೇ ನ್ಯಾಯಾಲಯವು ಒತ್ತಾಯಪಡಿಸಲು ಬರುವದಿಲ್ಲ. ಆದರೆ ಸರಕಾರದ ಧೋರಣೆ ನಿರ್ಧರಿಸುವಲ್ಲಿ ಈ ತತ್ವಗಳು ಮಾರ್ಗದರ್ಶನ ಮಾಡುವವು. ಆರ್ಥಿಕ ತತ್ವ ಮತ್ತು ನೈತಿಕ ಕಟ್ಟಳೆಗಳೇ ಈ ತತ್ವಗಳಿಗೆ ರಕ್ಷಾ ಕವಚ.

ವಿಷಯ ಪಟ್ಟಿಗಳು :

ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಅಧಿಕಾರಗಳನ್ನು ನಮ್ಮ ಸಂವಿಧಾನವು ಕೆಳಗೆ ಹೇಳಿದಂತೆ ಹಂಚಿದೆ :

(೧) ಒಕ್ಕೂಟ ವಿಷಯ ಪಟ್ಟಿ-೯೭ ವಿಷಯಗಳ ಮೇಲೆ ಒಕ್ಕೂಟ ಸರಕಾರದ ಸಂಪೂರ್ಣ ಅಧಿಕಾರವಿದ್ದು ಅದು ಶಾಸನಗಳನ್ನು ಮಾಡಬಹುದು. ಅವುಗಳ ಆಡಳಿತವನ್ನು ಸಾಗಿಸಬಹುದು— ಅವರಲ್ಲಿ ತತ್ವ ಸಂರಕ್ಷಣೆ, ಪರರಾಷ್ಟ್ರ ಸಂಪರ್ಕ, ಅಂಚೆ ತಂತಿ ಟೆಲಿಫೋನ್ ಬಾನುಲಿ ರೇಲ್ವೆ ಮುಂತಾದವುಗಳು.

(೨) ರಾಜ್ಯಗಳ ವಿಷಯಪಟ್ಟಿ — ೬೬ ವಿಷಯಗಳ ಮೇಲೆ ರಾಜ್ಯ ಸರಕಾರಗಳ ಸಂಪೂರ್ಣ ಅಧಿಕಾರವಿದ್ದು. ಅದು ಶಾಸನಗಳನ್ನು ಮಾಡಬಹುದು.

ಅವುಗಳ ಆಡಳಿತವನ್ನು ಸಾಗಿಸಬಹುದು— ಕಾಯಿದೆ ಮತ್ತು ಶಿಸ್ತು ನ್ಯಾಯಾಲಯಗಳು, ಪೋಲಿಸ್ ಸೆರೆಮನೆಗಳು, ಕೃಷಿ ಮುಂತಾದವುಗಳು.

(೩) ಸಂಪಾತಿ ಪಟ್ಟಿ:- ಈ ಪಟ್ಟಿಯಲ್ಲಿ ವಿಷಯಗಳ ಬಗ್ಗೆ ಒಕ್ಕೂಟ ಮತ್ತು ರಾಜ್ಯಸರಕಾರಗಳು ಕಾಯಿದೆಗಳನ್ನು ಮಾಡಬಹುದು. ಆದಷ್ಟು ಪಟ್ಟಿಗೆ ಎರಡೂ ಸರಕಾರ ಕಾಯಿದೆಗಳಲ್ಲಿ ಘರ್ಷಣೆ ತಲೆದೋರದಂತೆ ನೋಡಿಕೊಳ್ಳಲಾಗುತ್ತಿದೆ. ಇದರಲ್ಲಿ ೪೭ ವಿಷಯಗಳಿವೆ— ಮದುವೆ ಕಾರಖಾನೆಗಳು ಗಿರಣಿಗಳು, ಫೌಜದಾರಿ ಕಟ್ಟಳೆಗಳು, ಶ್ರಮಜೀವಿಗಳ ಹಿತ, ನಿರುದ್ಯೋಗಿಗಳ ವಿಮೆ ಮುಂತಾದವುಗಳು.

(೪) ಉಳಿದ ವಿಷಯಗಳು:- ಮೇಲೆ ಕಾಣಿಸಲಾದ ಮೂರು ವಿಷಯಗಳ ಪಟ್ಟಿಗಳಲ್ಲಿ ಬಾರದೆ ಉಳಿದ ವಿಷಯಗಳಗಳನ್ನು ಒಕ್ಕೂಟ ಸರಕಾರಕ್ಕೆ ಬಿಟ್ಟುಕೊಡಲಾಗಿದೆ.

ಸಂವಿಧಾನ ಪಂಡಿತರು ಸಾರಾಸಾರ ವಿಚಾರ ಮಾಡಿ ಮುತ್ಸದ್ದಿತನದಿಂದ ಭಾರತಕ್ಕೆ ಸಂಯುಕ್ತ ರೂಪ ಸರಕಾರವನ್ನು ಕೊಟ್ಟರು.ಕೇಂದ್ರ ಮತ್ತು ರಾಜ್ಯಗಳ ಅಧಿಕಾರಗಳು ವಿಧಾನಾತ್ಮಕವಾಗಿವೆ, ವರ್ಗೀಕರಿಸಲ್ಪಟ್ಟಿವೆ. ಕೇಂದ್ರ ಸರಕಾರವು ಈ ಅಧಿಕಾರವನ್ನು ಸಹಜವಾಗಿ ಬದಲು ಮಾಡಲಾರದು. ಒಂದು ವೇಳೆ ಕೇಂದ್ರವಾಗಲೀ ಅಥವಾ ರಾಜ್ಯ ಸರಕಾರವಾಗಲೀ ತಮ್ಮ ತಮ್ಮ ಸೀಮಾಧಿಕಾರವನ್ನು ಬಿಟ್ಟು ಒಂದರ ಒಂದು ಸೀಮೋಲ್ಲಂಘನ ಮಾಡಿದರೆ ವರಿಷ್ಠ ನ್ಯಾಯಾಲಯವು ಆಯಾ ಸರಕಾರಗಳ ಸೀಮೆಯನ್ನು ಪರಿಶೀಲಿಸಿ ಕ್ಷೇತ್ರಾಧಿಕಾರ ಉಲ್ಲಂಘನೆಯಾಗಿದೆಯೆಂದು ಕಂಡು ಬಂದರೆ ಅದು ಸಂವಿಧಾನ ಬಾಹಿರವೆಂದು ನಿರ್ಣಯಿಸಬಹುದು. ಒಂದು ವೇಳೆ ಅದರಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಸಂವಿಧಾನದಲ್ಲಿ ನಿರ್ದೇಶಿಸಿದಂತೆ ಸಂವಿಧಾನ ತಿದ್ದುಪಡಿ ಮಾಡಬೇಕಾಗುವದು. ಅದು ತಿದ್ದುಪಡಿಯಾಗಬೇಕಾದರೆ ಸಂಸತ್ತಿನ ಎರಡು ಸದನಗಳಲ್ಲಿ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಕನಿಷ್ಠ ಪಕ್ಷ 2/3 ರಷ್ಟು ಸದಸ್ಯರ ಹಾಜರಿದ್ದು ಮತ ಕೊಟ್ಟು ಬಹುಮತದಿಂದ ಪಾಸು ಮಾಡಬೇಕು. ಅನಂತರ ಅದನ್ನು ಅಧ್ಯಕ್ಷರ ಅನುಮತಿಗಾಗಿ ಕಳಿಸಲಾಗುವದು. ಅದಕ್ಕೆ ಅವನ ಅನುಮತಿಯು ದೊರೆತರೆ ಗೊತ್ತುವಳಿಯಲ್ಲಿಯ ಕಲಮುಗಳಂತೆ ತಿದ್ದುಪಡಿ ಮಾಡಲಾಗುವದು. ರಾಜ್ಯ ಸರಕಾರಗಳ ಅಧಿಕಾರಗಳು ಸಂವಿಧಾನದ ಜೀಲಿಗೆ ಮತ್ತು ಮೂಲ ಉತ್ಪತ್ತಿಯಾದದ್ದು. ವರಿಷ್ಠ ನ್ಯಾಯಾಲಯವು ಘಟನಾತ್ಮಕವಾಗಿ ಅಸ್ತಿತ್ವವನ್ನು ಹೊಂದಿದೆ. ಸಂವಿಧಾನದ ಅರ್ಥ ವಿವರಣೆಯನ್ನು ಮಾಡುವ ಅಧಿಕಾರವನ್ನು ಸಂವಿಧಾನವು ಕೊಟ್ಟಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ

ಘರ್ಷಣೆ ತಲೆದೋರಿದರೆ ಅಥವಾ ರಾಜ್ಯ ರಾಜ್ಯಗಳಲ್ಲಿ ವಿವಾದ ಉಂಟಾದರೆ ಅವುಗಳನ್ನು ಇತ್ಯರ್ಥಗೊಳಿಸುವದು. ನ್ಯಾಯ ವಿಮರ್ಶೆಯನ್ನು ಮಾಡುವ ಅಧಿಕಾರವನ್ನು ಸಹ ಸಂವಿಧಾನವು ವರಿಷ್ಠ ನ್ಯಾಯಾಲಯಕ್ಕೆ ಕೊಟ್ಟಿದೆ. ಇದು ಸಂವಿಧಾನದ ಅಗ್ಗಳಿಕೆಯನ್ನು ಎತ್ತಿ ತೋರಿಸುತ್ತದೆ.

ಇತರ ಲಕ್ಷಣಗಳು :

ಇಂಥ ವಿಶಾಲ ಲಕ್ಷಣಗಳಲ್ಲದೆ ಇನ್ನೂ ಕೆಲವು ಸಂವಿಧಾನದ ಲಕ್ಷಣಗಳ ವಿವೇಚನೆ ಅವಶ್ಯವಿದೆ ಸಂವಿಧಾನವು ಜಗತ್ತಿನಲ್ಲಿಯೇ ಅತಿದೊಡ್ಡ ಮತ್ತು ಉದ್ದ ದಾಖಲೆಯೆಂದು ಈ ಮೊದಲೇ ವಿವೇಚನೆ ಮಾಡಲಾಗಿದೆ. ಬಹಳ ವಿವರಗಳಿರುವ ಸಂವಿಧಾನವು ಆರೋಗ್ಯಕರವಲ್ಲವೆಂದು ರಾಜಕೀಯ ವಿಜ್ಞಾನಿಗಳು ಹೇಳುತ್ತಾರೆ. ಯಾಕಂದರೆ ಬೆಳೆಯುತ್ತಿರುವ ರೂಢಿ ಸಂಪ್ರದಾಯಗಳಿಗೆ ಸಂವಿಧಾನದಲ್ಲಿ ಕಡಿಮೆ ಅವಕಾಶ ಮಾಡು ಕೊಡುವದುಂಟು. ಭಾವೀ ಪೀಳಿಗೆಯನ್ನು ಇಂದಿನ ಬೌದ್ಧಿಕ ಸೀಮೆಗೆ ಬಂಧಿಸಿದಂತಾಗುವದೆಂಬ ಭೀತಿ ಇದೆ. ಆದರೂ ಅದರ ಲಾಭಗಳು ಇಲ್ಲದೇ ಇಲ್ಲ. ಡಾ. ಅಂಬೇಡಕರರ ಅಭಿಪ್ರಾಯ ಹೀಗೆ ಇದೆ–ಸಂಪೂರ್ಣವಾಗಿ ಪ್ರಜಾಸತ್ತಾತ್ಮಕ ಸಂವಿಧಾನ ರಚನೆಯ ಅವಶ್ಯಕತೆ ಹೆಚ್ಚಿದೆ. ಸದ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಮಾಜ ಮತ್ತು ದೇಶ ವಿಘಾತಕ ಶಕ್ತಿಗಳಾದ ದುಷ್ಟ ಸಂಪ್ರದಾಯ ಮತ್ತು ದೇಶ ವಿಘಾತಕ ಶಕ್ತಿಗಳಾದ ದುಷ್ಟ ಸಂಪ್ರದಾಯ ಮತ್ತು ಪರಿಸ್ಥಿತಿಯನ್ನು ಕೊಡವಿ ಬುದ್ಧಿ ಚಾಪಲ್ಯಕ್ಕೊಳಪಡುವಂತಹ ಬಹುಮತವನ್ನೊಳಗೊಳ್ಳುವ ಶಾಸನಾಂಗಕ್ಕೆ ಬಹಳ ವಿಷಯಗಳನ್ನು ಆಕಸ್ಮಿಕವಾಗಿ ಬಿಡದೆ ಸಂವಿಧಾನವೇ ಎಲ್ಲ ವಿವರಗಳನ್ನು ಹೊಂದಿರಬೇಕೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದು ನಿಜ. ಯಾಕೆಂದರೆ ಅತಿ ಹಿಂದುಳಿದ ಗುಂಪು ಮತ್ತು ಅಲ್ಪ ಸಂಖ್ಯಾಕರ ಸಲಕರಣೆಯ ಹಕ್ಕುಗಳನ್ನು ಯಾವದೇ ದೇಶವು ಕಡೆಗಣಿಸಲಿಕ್ಕಾಗದು. ದೇಶದ ಪ್ರಗತಿ ಎಲ್ಲ ಜನರ ಪ್ರಗತಿಯ ಮೇಲೆ ಶುಭ ಸಂಕೇತ. ಅದರಂತೆ ಪ್ರಾದೇಶಿಕ ಭಾಷೆಗಳ ರಕ್ಷಣೆ ಮತ್ತು ಪ್ರಗತಿಯೂ ಅವಶ್ಯವಿದೆ. ಇಲ್ಲದಿದ್ದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ. ಭಾರತೀಯ ಸಂವಿಧಾನವು ಇವೆಲ್ಲ ರಕ್ಷಣೆಗಳನ್ನು ಒಳಗೊಂಡಿರುವದರಿಂದ ಅದು ದೊಡ್ಡ ಮತ್ತು ಉದ್ದವಾದ ದಾಖಲೆಯಾಗಿದೆ.

ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮ ಸಂವಿಧಾನವು ಅನೇಕ ದೇಶಗಳ ಸಂವಿಧಾನಾತ್ಮಕ ಪ್ರಯೋಗಗಳ ಅನುಭವವನ್ನು ಸ್ವತಂತ್ರವಾಗಿ ಹೀರಿಕೊಂಡಿದೆ. ಪಾರ್ಲಿಮೆಂಟರೀ ರೂಪ ಸರಕಾರ (Parliamentary Form of Government)

ರೂಲ ಆಫ್ ಲಾ (Rule of Law) ಮತ್ತು ಲೆಜಿಸ್ಲೇಟಿವ್ಹ ಪ್ರೊಸೀಜರ (Legislative Procedure) ಇವುಗಳು ಬ್ರಿಟಿಶ್ ಸಂವಿಧಾನದ ಅನುಕರಣೆ. ಪ್ರಸ್ತಾವನೆ (Preamble) ಮತ್ತು ವರಿಷ್ಠ ನ್ಯಾಯಾಲಯ ರಚನೆ ಮತ್ತು ಅಧಿಕಾರಗಳು ಅಮೇರಿಕದ ಮಾದರಿಯಂತೆ. ಬಲಿಷ್ಠ ಕೇಂದ್ರ ಸರಕಾರದ ಯೋಜನೆ ಕ್ಯಾನಡಾ ಸಂವಿಧಾನದ ಚೌಕಟ್ಟನ್ನು ಅನುಸರಿಸಲು ಪ್ರಯತ್ನಿಸಿದೆ. ರಾಷ್ಟ್ರಧೋರಣೆಯ ಮಾರ್ಗದರ್ಶಕ ತತ್ವಗಳನ್ನು (Directive principles of State policy) ಯುರಿಶ್ ಸಂವಿಧಾನದ ಪಡಿಯಚ್ಚು. ಮತ್ತೊಂದು ಮಹತ್ವದ ಅಂಶವೆಂದರೆ ಸಂವಿಧಾನ ಪಂಡಿತರು ಬೇರೆ ಪ್ರಮುಖ ದೇಶಗಳ ಸಂವಿಧಾನ-ವನ್ನು ಅನುಸರಿಸಲು ಉತ್ಸುಕರಾಗಿದ್ದರೂ ರಾಷ್ಟ್ರದ ಐಕ್ಯತೆಗೆ ಭದ್ರತೆಗೆ ಮತ್ತು ಅಭಿರುಚಿಗೆ ಧಕ್ಕೆಯಾಗುವ ಅಂಶಗಳನ್ನು ನಿರಾಕರಿಲು ಹಿಂದು ಮುಂದು ನೋಡಿಲ್ಲ. ಭಾರತದಲ್ಲಿ ಇಂಗ್ಲಂಡದಲ್ಲಿ ಹಾಗೆ ವಂಶ ಪರಂಪರೆಯಿಂದ ಆಳುವ ಅರಸನಿಗೆ ಸಂವಿಧಾನದಲ್ಲಿ ಸ್ಥಾನಮಾನವನ್ನು ನಿರ್ಮಾಣ ಮಾಡಬಹುದಾಗಿತ್ತು. ಆದರೆ ಶ್ರೇಷ್ಠಾಧಿಕಾರವನ್ನು ರಾಜನಲ್ಲಿ ಅಥವಾ ರಾಜಕುಮಾರನಲ್ಲಿ ಕೊಡದೆ ಜನತೆಯಲ್ಲಿ ಕೊಟ್ಟಿದ್ದಾರೆ. ನಮ್ಮ ರಾಷ್ಟ್ರಪತಿ, ನಮ್ಮ ಪ್ರಧಾನಮಂತ್ರಿ ಹಾಗೂ ರಾಜ್ಯಗಳ ಮುಖ್ಯಮಂತ್ರಿ ನಮ್ಮ ನಿಮ್ಮಂತೆಯೇ ಸಾಮಾನ್ಯ ವ್ಯಕ್ತಿಗಳು. ಜನತೆಯ ಇಚ್ಛೆಯಂತೆ ಅಧಿಕಾರದಲ್ಲಿರುವವರು.

ಕೊನೆಯದಾಗಿ ಘಟನಾವಳಿಯಲ್ಲಿಯ ವಿಷಯಪಟ್ಟಿಗಳನ್ನು ಪರಿಶೀಲಿಸಿದರೆ ಸಂವಿಧಾನ ಪಂಡಿತರು ೧೯೩೫ ನೇ ಹಿಂದುಸ್ಥಾನ ಕಾಯದೆಯನ್ನು (Govt. of India Act of 1935) ಹೆಚ್ಚು ಅನುಕರಣೆ ಮಾಡಿದ್ದುದು ಕಂಡು ಬರುತ್ತದೆ. ಈ ಏರ್ಪಾಟಿನಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಆಗಾಗ್ಗೆ ಘರ್ಷಣೆಗಳು ತಲೆದೋರಿದ್ದುಂಟು ಮತ್ತು ಸಂಭವಿಸುವದು ಅಸಾಧ್ಯವೇನಲ್ಲ. ಈಗಿನ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ರಾಜ್ಯಗಳಿಗೆ ಹೆಚ್ಚು ಸ್ವಾಯತ್ತಾಧಿಕಾರದ ಬೇಡಿಕೆಯನ್ನು ಒಕ್ಕೂಟ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಈ ಬೇಡಿಕೆ 'ಬಲಿಷ್ಠ ಕೇಂದ್ರ ಸರಕಾರ ಬಲಿಷ್ಠ ದೇಶ' ಎಂಬ ತತ್ವಕ್ಕೆ ವಿರುದ್ಧವಾದರೂ ಅಸಮಂಜಸವೇನೂ ಇಲ್ಲ ಪಾಕಿಸ್ತಾನದಲ್ಲಿ ಅಂತರ್ಯುದ್ಧ ನಡೆದಿರುವದೂ ಈ ಬೇಡಿಕೆಯ ಈಡೇರಿಕೆಗಾಗಿಯಲ್ಲದೆ ಮತ್ತೇನು ? ವರಿಷ್ಠ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಮಿ. ಹಿದಾಯತುಲ್ಲಾರವರು ಮೊನ್ನೆ ೩ ನೇ ನವಂಬರ ೧೯೭೧ ರಂದು ಪಂಜಾಬ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಐಕ್ಯತೆ ಎಂಬ ವಿಷಯದ ಮೇಲೆ ಭಾಷಣ ಮಾಡುವಾಗ ಹೀಗೆ ಹೇಳಿದ್ದಾರೆ– ಭಾರತ ಪ್ರಾರಂಭದಲ್ಲಿಯೇ ಏಕ ಸೂತ್ರ ಸಂವಿಧಾನವನ್ನು ಹೊಂದಬೇಕಾಗಿತ್ತು. ಸಡಿಲು ರಾಜ್ಯಗಳ ಒಕ್ಕೂಟವನ್ನು

ನಿರ್ವಾಣ ಮಾಡಿದ್ದು ತಪ್ಪು. ನಮ್ಮ ಎಲ್ಲ ತೊಂದರೆಗಳು ಇಲ್ಲಿಂದಲೇ ಉತ್ಪನ್ನವಾಗಿವೆ. ಒಮ್ಮೆ ನಾವು ರಾಜ್ಯಗಳ ಒಕ್ಕೂಟ ಎಂಬ ಶಬ್ದದಿಂದ ಆರಂಭವಾದ ಮೇಲೆ ಅದರ ಜೊತೆಗೆ ಅಧಿಕಾರಗಳ ಹಂಚಿಕೆ ಮತ್ತು ಸಾರ್ವ-ಭೌಮತ್ವವೂ ತಂತಾನೇ ಹಿಂಬಾಲಿಸುವದು. ಪ್ರತಿಯೊಂದು ಒಕ್ಕೂಟದ ಘಟಕವು ಅನೇಕ ರೀತಿಯಿಂದ ಸಾರ್ವಭೌಮತ್ವವನ್ನು ಹೊಂದಲಿಕ್ಕೆ ಪ್ರಯತ್ನ ಮಾಡುವದು. ಘಟಕಗಳನ್ನು ಅಖಂಡ ಭಾರತದ ಮೂಲ ಪಿಂಡಾಂಶವನ್ನೇ ನಿರ್ವಾಣ ಮಾಡಬಹುದಾಗಿತ್ತು. ನಾವು ನಮ್ಮ ಆಡಳಿತಗಾರರಿದ್ದರೂ ಹಳೆಯ ರಾಜ್ಯ ವೈಭವದ ದಿನಗಳ ನೆನಪನ್ನು ಕೊಡುವ ರಾಜ್ಯಪಾಲರ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದೇವೆ.

★ ಎನ್. ಎ. ಪಾಟೀಲ

ಸಲಕಿನಕೊಪ್ಪದ ಸಾರ್ಥಕ ಸೇವಾಶಿಬಿರ

ಆಸ್ಪತ್ರೆಯ ಕೋಣೆಯಲ್ಲಿ

ಮಾನಸಿಕ ಆರೋಗ್ಯ ಕೇಂದ್ರದ ದೊಡ್ಡ ಕೋಣೆ. ನಾವೆಲ್ಲರೂ ಕುಳಿತಿದ್ದೇವೆ. ಆರೋಗ್ಯ ಕೇಂದ್ರದ ಮುಖ್ಯಸ್ಥೆ ಡಾ. ಸರೋಜಾಬಾಯಿಯವರು, ಕೇಂದ್ರದ ಒಂಬತ್ತು ಮನೋಚಿಕಿತ್ಸಾರ್ಥಿಗಳು. ಕರ್ನಾಟಕ ವಿಶ್ವವಿದ್ಯಾಲಯದ ಸಮಾಜ ಕಾರ್ಯದ ಸ್ನಾತಕೋತ್ತರ ಪದವಿಗಾಗಿ ಅಭ್ಯಾಸದಲ್ಲಿ ತೊಡಗಿದ್ದ ಮೊದಲ ವರ್ಷದ ಎಂಟು ವಿದ್ಯಾರ್ಥಿಗಳು. ಇಬ್ಬರು ಕೇಂದ್ರದ ಸಿಪಾಯಿಗಳು, ಈ ಕೇಂದ್ರದಲ್ಲಿಯೇ ಮಾನಸಿಕೋಪಚಾರದಲ್ಲಿ ಶಿಕ್ಷಣ ಪಡೆದು ಊರಿಗೆ ಹೊರಟು ನಿಂತವರೊಬ್ಬರು, ಕಲಾವಿದ ಕುಲಕರ್ಣಿ ಹಾಗೂ ನಾನು.

ಈ ಕೋಣೆಯಲ್ಲಿ ಸಂತೋಷದ ವಾತಾವರಣ, ತೃಪ್ತಿಯ ಮಂದಹಾಸವಿತ್ತು. ಸಭೆಯು ನಡೆಯುತ್ತಿದ್ದುದು ಹತ್ತು ದಿನ ಧಾರವಾಡ ನಗರದ ಹತ್ತಿರದ ಸಲಕಿನಕೊಪ್ಪ ಗ್ರಾಮದಲ್ಲಿ ನಡೆಸಿದ ಸಮಾಜ ಸೇವಾಶಿಬಿರದ ಅನುಭವವನ್ನು ಸ್ಥೂಲವಾಗಿ ಪರಿಶೀಲಿಸಲು, ಒಬ್ಬರಿಗೊಬ್ಬರು ಅಭಿನಂದನೆ, ಕೃತಜ್ಞತೆ ಸಲ್ಲಿಸಲು. ಸಂತೋಷದಿಂದ ಅದರೂ ಔಪಚಾರಿಕವಾಗಿ ಬೀಳ್ಕೊಂಡು ಬೀಳ್ಕೊಡಲು. ಮುಂದಿನ ಕಾರ್ಯಕ್ರಮಗಳನ್ನು ಸಾಧ್ಯವಾದರೆ ನಿಯೋಜಿಸಲು.

ಸೇವಾಶಿಬಿರದಲ್ಲಿ ತಮಗಾದ ವೈಯಕ್ತಿಕ ಅನುಭವಗಳನ್ನು ವಿವರಿಸುವಂತೆ ಮನೋಚಿಕಿತ್ಸಾರ್ಥಿಗಳನ್ನು ಡಾ. ಸರೋಜಾಬಾಯಿಯವರು ಕೇಳಿದರು. ಉತ್ತರವಾಗಿ ಈ ರೀತಿಯ ಅಭಿಪ್ರಾಯಗಳು ವ್ಯಕ್ತವಾದವು :

"ಇಲ್ಲಿನ ವಾತಾವರಣಕ್ಕೂ ಅಲ್ಲಿನ ವಾತಾವರಣಕ್ಕೂ ಬಹಳ ವ್ಯತ್ಯಾಸವಿದೆ."

"ಇಂಥ ಶಿಬಿರಗಳನ್ನು ನಡೆಸುವುದು; ಅವರಲ್ಲಿ ಭಾಗವಹಿಸಲೂ ಬಹುದು: ಅನುಭವ ಎಂತಹದೊ ಹೇಳಲಾಗದು."

"ಅಲ್ಲಿ ಪೂರ್ಣ ಸ್ವಾತಂತ್ರ್ಯವಿತ್ತು; ಇಲ್ಲಿ ಬಂಧನದಲ್ಲಿ ಇರುವೆನ್ನಿಸುತ್ತದೆ."

"ಅಲ್ಲಿನ ಊಟದಲ್ಲಿ ವೈವಿಧ್ಯವಿತ್ತು; ಸಾಕಷ್ಟು ಕೆಲಸವಿತ್ತು : ಮನರಂಜನೆಯಿತ್ತು."

"ಆ ಶಿಬಿರವೊಂದು ಡಿಪ್ಲೊಮಾ ಕೋರ್ಸ್ ಇದ್ದಂತಿತ್ತು."

"ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದುತ್ತಿದ್ದರೂ. ದೊಡ್ಡ ಪ್ರೊಫೆಸರರಾಗಿದ್ದರೂ, ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ನಮ್ಮನ್ನು ಸಮಾನತೆಯ ಭಾವನೆಯಿಂದ ಕಂಡರು."

"ಇಂತಹ ಶಿಬಿರಗಳು ಆಗಾಗ ನಡೆಯಬೇಕು ಎನ್ನಿಸುತ್ತದೆ: ಸಮಾಜದಲ್ಲಿ ಗುಣಮುಖರಾದ ಮನೋಚಿಕಿತ್ಸಾರ್ಥಿಗಳು ಪುನರ್ವಸತಿಗೊಳ್ಳಲು ಇಂಥ ಪೂರ್ವಭಾವೀ ಶಿಬಿರಗಳು ಅಗತ್ಯವೆನ್ನುವಂತೆ ಈ ಶಿಬಿರವು ನಮ್ಮ ಅನುಭವಕ್ಕೆ ಬಂದಿತು."

"ಗ್ರಾಮಸ್ಥರು ನಮ್ಮನ್ನು ಸ್ನೇಹದಿಂದ ನೋಡಿಕೊಂಡರು ; ನಮ್ಮೊಡನೆ ಒಂದಾಗಿ ದುಡಿದರು. ನಮ್ಮ ಬಂಧುಗಳು ಹೀಗೆ ನಮ್ಮೊಡನೆ ವರ್ತಿಸಿದ್ದಿದ್ದರೆ ನಾವು ರೋಗಿಗಳಾಗುತ್ತಿದ್ದಿಲ್ಲವೇನೋ !"

"ಮನೋವಿಕಾಸಕ್ಕೆ ಬೇಕಾದ ಚರ್ಚಾಕೂಟ ಶಿಬಿರದಲ್ಲಿ ಏರ್ಪಾಟಾಗಿತ್ತು ; ನಾವೂ ಅದರಲ್ಲಿ ಭಾಗವಹಿಸಬಹುದಿತ್ತು, ಭಾಗವಹಿಸಿದೆವೂ ಕೂಡ."

"ನಮ್ಮಲ್ಲಿ ಒಬ್ಬಾತನು ದೀಪಾವಳಿಯ ದಿನವೇ ಅಲ್ಲಿಂದ ಬಿಡುಗಡೆ ಹೊಂದಿ ತನ್ನ ಮನೆಗೆ ಹೋದ ; ನಮಗೆ ಸಂತೋಷವಾಯಿತು ; ನಾವೂ ನಮ್ಮ ಮನೆಗಳಿಗೆ ಹೋಗುತ್ತೇವೆ ಎಂಬ ಆನಂದದ ಭಾವನೆ ನಮಗೆ ಉಂಟಾಯಿತು."

ಡಾಕ್ಟರರು ವಿದ್ಯಾರ್ಥಿಗಳ ಕಡೆಗೆ ಹೊರಳಿದರು. ವಿದ್ಯಾರ್ಥಿಗಳ ಅನುಭವ ಹೇಗೆ, ಎಂದು ತಿಳಿಯುವ ಅಪೇಕ್ಷೆ ಅವರಿಗೆ. ವಿದ್ಯಾರ್ಥಿಗಳೂ ತಮ್ಮ ಅನುಭವ – ಅಭಿಪ್ರಾಯಗಳನ್ನು ಪ್ರಕಟಿಸಿದರು.

"ಇದೊಂದು ಹೊಚ್ಚ ಹೊಸ ಅನುಭವ ನಮಗೆ."

"ಮೊದಮೊದಲು ನಮಗೆ ತುಂಬಾ ಹೆದರಿಕೆ ; ಅವರೊಡನೆ ಹೇಗೆ ನಡೆದುಕೊಳ್ಳಬೇಕೊ ಎಂಬ ಅನಿರ್ದಿಷ್ಟ ಮನೋಸ್ಥಿತಿ ನಮ್ಮದಾಗಿತ್ತು."

"ಅವರನ್ನು ಹತ್ತಿರದಿಂದ ನೋಡುವ, ಅವರೊಡನೆ ಹತ್ತು ದಿನ ಜೀವಿಸುವ, ಅವರ ನಡವಳಿಕೆಯನ್ನು ವೀಕ್ಷಿಸುವ ಸದವಕಾಶ ನಮ್ಮದಾಗಿತ್ತು."


"ಅವರು ದುಡಿದ ರೀತಿ, ನಮ್ಮೆಲ್ಲರೊಡನೆ ಅವರು ಹೊಂದಿಕೊಂಡು ಜೀವಿಸಿದ ಪರಿ ನಮಗೆ ಆಶ್ಚರ್ಯವನ್ನುಂಟುಮಾಡಿತು."

"ವಂದನಾರ್ಪಣೆಯನ್ನು ಅತ್ಯಂತ ಸಮರ್ಪಕವಾಗಿ ಅವರಲ್ಲಿ ಇಬ್ಬರು ಮಾಡು-ತ್ತಿದ್ದರು. ಬಹುಶಃ ನಾವು ಅವರಷ್ಟು ಸಮರ್ಥವಾಗಿ ಅದನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ."

"ಅವರನ್ನೂ,ನಮ್ಮನ್ನೂ.ನಮ್ಮಿಬ್ಬರ ಸಮಸ್ಯೆಗಳನ್ನೂ.ಹಳ್ಳಿಗರ ಪರಿಸ್ಥಿತಿಯನ್ನೂ ಪರಿಚಯ ಮಾಡಿಕೊಳ್ಳಲು ನಮ್ಮ ಶಿಬಿರವು ಉತ್ತಮ ಲೆಬೊರೇಟರಿಯಾಗಿತ್ತು."

ಹೀಗೆಯೇ ವಿದ್ಯಾರ್ಥಿಗಳು ಶಿಬಿರದಲ್ಲಿ ತಾವು ಮನೋಚಿಕಿತ್ಸಾರ್ಥಿಗಳೊಡನೆ ಕಳೆದ ಸಮಯದ ಬಗ್ಗೆ ಹೇಳಿದರು.

ಮನೋಚಿಕಿತ್ಸಾರ್ಥಿಗಳು ಗೆಲುವಿನಿಂದಲೂ, ಸುಸಂಬದ್ಧವಾಗಿಯೂ ಮಾತನಾಡಿದ್ದುದು, ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದುದು, ತಾವು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿ ಸರಳ ಜೀವನ ನಡೆಸಲು ಆತುರತೆಯನ್ನು ತೋರಿಸಿದ್ದುದು, ವಿದ್ಯಾರ್ಥಿಗಳಿಗೂ ಜ್ಞಾನಾನುಭವದ ಲಾಭವಾದದ್ದು – ಇವೆಲ್ಲವನ್ನೂ ಕಂಡು, ಕೇಳಿ, ಡಾಕ್ಟರರಿಗೆ ಪರಮಾನಂದವಾಯಿತು. ಅವರೂ, ಸಮಾಜಕಾರ್ಯ ವಿಭಾಗದ ಮುಖ್ಯಸ್ಥ ಡಾ. ಚಂದ್ರಶೇಖರಯ್ಯನವರೂ ಶಿಬಿರದ ನಾಲ್ಕನೆಯ ದಿನ ಸಲಕಿನಕೊಪ್ಪಕ್ಕೆ ಬಂದು ಅಲ್ಲಿನ ವಾತಾವರಣವನ್ನೂ, ಚಟುವಟಿಕೆಗಳನ್ನೂ ಪರಿಶೀಲಿಸಿದುದನ್ನು ಜ್ಞಾಪಿಸಿಕೊಂಡರು.



ಸಲಕಿನಕೊಪ್ಪ : ಯೋಜನಾಭಿವೃದ್ಧಿಗೆ ದಾರಿ ತೆರೆದಿದೆ.

ಈ ಸಂದರ್ಭದಲ್ಲಿಯೇ ಮನೋಚಿಕಿತ್ಸಾರ್ಥಿಗಳು ಗಿಡಗಳಿಂದ ಬಿಡಿಸಿಕೊಂಡು ಬಂದ ಹೂಗಳನ್ನು ವಿದ್ಯಾರ್ಥಿಯೊಬ್ಬಾತನ ಮಡದಿಯಿಂದ ಮಾಲೆಯನ್ನು ತಯಾರಿಸಿಟ್ಟುಕೊಂಡಿದ್ದುದು ಗೊತ್ತಾಯಿತು. ಆ ಮಾಲೆಯನ್ನು ಕೃತಜ್ಞತಾಪೂರ್ವಕವಾಗಿ ಅವರು ಶಿಬಿರದ ಪ್ರತ್ಯೇಕ ವಿದ್ಯಾರ್ಥಿನಿಗೆ ಡಾಕ್ಟರರ ಮೂಲಕ ನೀಡಿದರು. ಅದೊಂದು ಹೃದಯಸ್ಪರ್ಶಿ ದೃಶ್ಯವಾಗಿತ್ತು.

ಡಾಕ್ಟರರು ಅನಂತರ ನನ್ನ ಅಭಿಪ್ರಾಯವನ್ನು ತಿಳಿಯುವ ಕುತೂಹಲವನ್ನು ವ್ಯಕ್ತಪಡಿಸಿದರು. ಇಂಥ ವಿಶಿಷ್ಟವಾದ ಶಿಬಿರ ನಡೆಯಲು ಸಾಧ್ಯವಾದದ್ದು ಡಾಕ್ಟರ್ ಮತ್ತು ಅವರ ಸಹೋದ್ಯೋಗಿಗಳ ನೆರವಿನಿಂದ ಎಂಬುದು ನನ್ನ ಮನದಲ್ಲಿ ತುಂಬಿಕೊಂಡಿತ್ತು.

"ಈ ಶಿಬಿರ ವೈಶಿಷ್ಟ್ಯಪೂರ್ಣವಾದುದಾಗಿತ್ತು. ಭಾರತದಲ್ಲಿನ ಸಮಾಜಕಾರ್ಯ ವೃತ್ತಿಶಿಕ್ಷಣವನ್ನು ನೀಡುವ ಯಾವ ಶಾಲೆಯೂ ಇದುವರೆಗೆ ಇಂಥ ಶಿಬಿರವನ್ನು ನಡೆಸಿದ್ದಿಲ್ಲ. ಎಂಬುದು ನನ್ನ ತಿಳುವಳಿಕೆ. ಇಂಥ ಶಿಬಿರವನ್ನು ನಡೆಸಿದ್ದರಿಂದ ನಮಗೆ ನಿಜವಾಗಿಯೂ ಅಮಿತಾನಂದವಾಗಿದೆ. ಈ ರೀತಿಯ ಚಿಕಿತ್ಸೆಯಿಂದ ಮನೋರೋಗವನ್ನು ಪರಿಹರಿಸಲು ಸಾಧ್ಯವೆಂಬುದು ಖಚಿತವಾದುದು ನಮಗೆ ಮತ್ತಷ್ಟು ಗೆಲುವನ್ನು ತಂದುಕೊಟ್ಟಿದೆ.

ಚಿಕಿತ್ಸಾರ್ಥಿಗಳೊಡನೆ ನಮ್ಮ ವಿದ್ಯಾರ್ಥಿಗಳು ಹೇಗೆ ವರ್ತಿಸುತ್ತಾರೋ ಎಂಬ ಶಂಕೆ–ಮಿಶ್ರಿತ ಕುತೂಹಲ. ಅವರು ಈ ಶಿಬಿರದಿಂದ ಎಂಥ ಲಾಭವನ್ನು ಪಡೆಯುತ್ತಾರೋ ಎಂಬ ನಿರೀಕ್ಷೆ, ಹತ್ತು ದಿನಗಳಲ್ಲಿ ಎಂತೆಂತಹ ವಿಪತ್ತುಗಳು ಬರುತ್ತವೋ ಎಂಬ ಭಯ. ಶಿಬಿರದ ಸಂಘಟನೆಯಲ್ಲಿ ಯಾವ ಕೊರತೆಯಾಗುತ್ತದೋ ಎಂಬ ಸಂದೇಹ ನನ್ನಲ್ಲಿದ್ದವು. ಆದರೆ ನಮ್ಮೆಲ್ಲ ಕೆಲಸಗಳ ಹಿಂದೆ ಶಕ್ತಿಯ ಕೈವಾಡವಿತ್ತೋ ಎಂಬಂತೆ ಕಾರ್ಯಕ್ರಮಗಳು ಫಲದಾಯಕವಾಗಿ ಕೊನೆಗೊಂಡುದಲ್ಲದೆ ಇಡಿಯ ಶಿಬಿರವು ಅದ್ಭುತ ಯಶಸ್ಸನ್ನು ಪಡೆಯಿತು.

ಕೆಲವು ಕಾರಣಗಳಿಂದ ವಿದ್ಯಾರ್ಥಿಗಳೂ, ನಿರ್ದೇಶಕನಾದ ನಾನೂ, ಒಂದು ಕೋಣೆಯಲ್ಲಿಯೂ, ಚಿಕಿತ್ಸಾರ್ಥಿಗಳೂ, ಅವರ ಹಿಂದೆ ಬಂದ ಸಿಪಾಯಿಗಳೂ, ಮಾನಸೋಪಚಾರದ ವಿದ್ಯಾರ್ಥಿಯೂ ಒಂದು ಕೋಣೆಯಲ್ಲಿಯೂ, ಅಡುಗೆಯವನೂ, ಸಮಾಜಕಾರ್ಯ ವಿಭಾಗದ ಸಿಪಾಯಿಯೂ ಅಡುಗೆ ಮನೆಯಲ್ಲಿಯೂ ಉಳಿದುಕೊಂಡಿದ್ದೆವು. ಉಪಾಹಾರ ಹಾಗೂ ಊಟವನ್ನು ಮಾಡುತ್ತಿದ್ದುದು ವಿದ್ಯಾರ್ಥಿಗಳು ಉಳಿದುಕೊಂಡ ಕೋಣೆಯಲ್ಲಿ. ಮೊದಲೆರಡು ದಿನಗಳು ವಿದ್ಯಾರ್ಥಿಗಳು ಒಂದು ಕಡೆ, ಚಿಕಿತ್ಸಾರ್ಥಿಗಳು ಇನ್ನೊಂದು ಕಡೆ ಸಾಲಾಗಿ ಊಟಕ್ಕೆ ಕೂಡುತ್ತಿದ್ದರು. ಚಿಕಿತ್ಸಾರ್ಥಿಗಳು ಆಹಾರವನ್ನು ಬಡಿಸುವುದನ್ನೇ ಆತುರ–ಆತಂಕದ ಕಣ್ಣುಗಳಿಂದ ಕಾಯುತ್ತಿದ್ದರು: ಬಡಿಸಿದೊಡನೆಯೇ ಊಟ ಮಾಡಲು ಆತುರರಾಗಿರುತ್ತಿದ್ದರು. "ಓಂ ಸಹನಾವವತು. ಸಹನೌ ಭುನಕ್ತು ..." ಹೇಳುವವರೆಗೂ ಯಾರೂ ಉಣ್ಣತೊಡಗಕೂಡದೆಂಬ ನಿಯಮ ಅವರಿಗೆ ಹೊಸ

ಮೊದಲು ಹಿಡಿಸಿದಂತೆ ಕಾಣಲಿಲ್ಲ. ನೀಡಿದಷ್ಟನ್ನು ಮುಗಿಸಿಬಿಡುತ್ತಿದ್ದರು; ಇನ್ನಷ್ಟು ನೀಡಿದರೂ ಉಣ್ಣುತ್ತಿದ್ದರು. ಆದರೆ ನಾಲ್ಕನೆಯ ದಿನದಿಂದ ಅವರಲ್ಲಿ ತೃಪ್ತಿಯ, ಸಮಾಧಾನದ, ನಿರಾತಂಕದ ಭಾವ ಮೂಡಿದುದು ಕಾಣಿಸಿತು. ಒಂದಿಬ್ಬರು ತಮಗಿನ್ನು ಸಾಕು ಎಂದೂ ಹೇಳತೊಡಗಿದರು. ವಿದ್ಯಾರ್ಥಿಗಳೂ, ಚಿಕಿತ್ಸಾರ್ಥಿಗಳೂ, ಬಂದ ಅತಿಥಿಗಳೂ ಯಾವ ಭೇದವಿಲ್ಲದೇ ಊಟಕ್ಕಾಗಿ ಬೆರೆತು ಅಕ್ಕಪಕ್ಕದಲ್ಲಿಯೇ ಕುಳಿತು ಕೊಳ್ಳತೊಡಗಿದರು. ಇದರಿಂದ ಚಿಕಿತ್ಸಾರ್ಥಿಗಳಲ್ಲಿ ತಾವು ಬೇರೆಯಲ್ಲ, ಕೀಳಲ್ಲ ಎಂಬ ಭಾವ ಸ್ಫುರಿಸಿತು ಎಂದು ಕಾಣುತ್ತದೆ.

ಪ್ರಾರ್ಥನೆಯನ್ನೂ, ಚರ್ಚಾಗೋಷ್ಠಿಯನ್ನೂ, ದಿನದ ಕಾರ್ಯಕ್ರಮಗಳ ಸಮೀಕ್ಷೆ – ವಿವೇಚನೆ ಹಾಗೂ ಮರುದಿನದ ಕಾರ್ಯ ನಿಯೋಜನೆಯನ್ನೂ, ಮನರಂಜನೆಯನ್ನೂ ಚಿಕಿತ್ಸಾರ್ಥಿಗಳು ಉಳಿದುಕೊಂಡ ಕೋಣೆಯಲ್ಲಿಯೇ ನಡೆಸುತ್ತಿದ್ದೆವು. ಅದೂ ಅಲ್ಲದೆ ಹಗಲಿನಲ್ಲಿ ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳಲ್ಲಿ ಕೆಲವರು ಚಿಕಿತ್ಸಾರ್ಥಿಗಳ ಕೋಣೆಯಲ್ಲಿ ಕುಳಿತು ಮಾತುಕತೆಗಳನ್ನಾಡುವುದೂ, ವಿಶ್ರಾಂತಿಯನ್ನು ತೆಗೆದುಕೊಳ್ಳುವುದೂ ಮಾಡುತ್ತಿದ್ದರು. ಇದೆಲ್ಲದರಿಂದ ಬಹುಶಃ ಚಿಕಿತ್ಸಾರ್ಥಿಗಳಿಗೆ ಹಿಗ್ಗಿನ ವಾತಾವರಣವನ್ನು ನಿರ್ಮಿಸಿದಂತಾಯಿತು. ಅವರು ಒಳಹೊರಗಿನ ಕಾರ್ಯ-ಗಳಲ್ಲೆಲ್ಲಾ ಹಲವೊಮ್ಮೆ ಸ್ವಯಂಸ್ಫೂರ್ತಿಯಿಂದ ಭಾಗವಹಿಸತೊಡಗಿದರು; ಪ್ರಾರ್ಥನೆಯ ಸಮಯದಲ್ಲಿ ಹಾಡುಗಳನ್ನು ಹಾಡಿದರು; ಒಬ್ಬಾತ ಶಿಬಿರದ ಬಗ್ಗೆ ಹಾಡನ್ನೂ ಕಟ್ಟಿ ಹಾಡಿದ; ಚರ್ಚೆಯಲ್ಲಿ ಪ್ರಶ್ನೆ ಕೇಳಿದರು; ಕಾರ್ಯಕ್ರಮ ವಿವೇಚನೆಯಲ್ಲಿ ಸಲಹೆಗಳನ್ನು ನೀಡಿದರು; ಅತಿಥಿಗಳಿಗೆ ವಂದನಾರ್ಪಣೆ ಮಾಡಿದರು: ಕವಾಯತು ಮಾಡಿಸಿದರು; ಮನರಂಜನೆಯಲ್ಲಿ ಪಾಲ್ಗೊಂಡರು; ಊರಿನವರಿಂದ ಕೊಡಗಳನ್ನು ಇಸಿದುಕೊಂಡು ಬಂದು ನೀರು ತಂದ ಮೇಲಿ ಹಿಂದಿರುಗಿಸಿದರು; ಶಿಬಿರದ ಆವರಣವನ್ನು ಶುಚಿಯಾಗಿಡಲು ತೊಡಗಿದರು.

ನಾವು ಕೈಕೊಂಡ ದೈಹಿಕ ಶ್ರಮದ ಕಾರ್ಯವೆಂದರೆ ಗ್ರಾಮದ ಮುಖ್ಯ ರಸ್ತೆಯನ್ನು ಸರಿಮಾಡುವುದು. ಕೆರೆಯ ಉತ್ತರದ ಕಡೆಯಿಂದ ಹಿಡಿದು ಶಾಲೆಯ ವರೆಗಿನ ಒಂದು ಫರ್ಲಾಂಗ್ ರಸ್ತೆ ರಿಪೇರಿ ಮಾಡುವುದು ನಮ್ಮ ನಿರೀಕ್ಷಿತ ಗುರಿ. ಇದು ಇಮ್ಮಡಿಯಾಗಿ, ಗುಡ್ಡದ ತಪ್ಪಲಿನವರೆಗೂ ಬೆಳೆದು ಪೂರೈಸಲ್ಪಟ್ಟಿತು. ಅಲ್ಲದೆ ಒಳಗಿನ ಕಲ್ಲವ್ವನ ಗುಡಿಯ ಮುಂದಿನ ಓಣಿಯನ್ನೂ ಸರಿಮಾಡಿ ಅದಕ್ಕೆ 'ಸಮಾಜಕಾರ್ಯ ರಸ್ತೆ' ಎಂದು ನಾಮಕರಣ ಮಾಡಲಾಯಿತು. ಇಷ್ಟೆಲ್ಲ ಸಾಧ್ಯವಾದದ್ದು ಚಿಕಿತ್ಸಾರ್ಥಿಗಳ, ಅವರ ರಕ್ಷಣೆಗೆ ಬಂದ ಸಿಪಾಯಿಗಳ, ಊರವರ ಸಹಕಾರದಿಂದ.

ದೈಹಿಕ ಶ್ರಮ ಮತ್ತಿತರ ವೈವಿಧ್ಯಮಯ ಕಾರ್ಯಕ್ರಮಗಳಿಂದ ಚಿಕಿತ್ಸಾರ್ಥಿಗಳ ಮನದಲ್ಲಿನ ವಿಪರೀತ ಭಾವನೆಗಳು ರಚನಾತ್ಮಕವಾಗಿ ಪರಿವರ್ತನೆಗೊಳ್ಳಲು ಸಾಧ್ಯವಾಯಿತು ಎಂದು ತೋರುತ್ತದೆ. ಬೆಳಗಿನ ೫–೩೦ ಕ್ಕೆ ಆರಂಭವಾಗಿ ರಾತ್ರಿ ೧೦ ಗಂಟೆಗೆ ಮುಗಿವ ವ್ಯವಸ್ಥೆ ಆದರೂ ನಮ್ಯ (Flexible)ವಾದ ಕಾರ್ಯಕ್ರಮಗಳಿಂದಾಗಿ ಅವರಲ್ಲಿ



ಮುಖ್ಯ ರಸ್ತೆಯನ್ನೊಳಗೊಂಡ ಹಳ್ಳಿಯ ವಿಹಂಗಮ ನೋಟ

ಶಿಸ್ತು, ಸಹಕಾರ ಹಾಗೂ ಸಹನೆ ಮುಪ್ಪುರಿಗೊಂಡು ಮೂರ್ತಸ್ವರೂಪವನ್ನು ಪಡೆದಿರಬೇಕೆಂದು ಅನ್ನಿಸುತ್ತದೆ.

ಇನ್ನೊಂದು ಬಹು ಮುಖ್ಯವಾದ ಅಂಶವೆಂದರೆ ವಿದ್ಯಾರ್ಥಿಗಳೂ, ಊರಿನವರೂ ಚಿಕಿತ್ಸಾರ್ಥಿಗಳನ್ನು ಕಂಡುಕೊಂಡು ವ್ಯವಹರಿಸಿದ ರೀತಿ. ಅವರನ್ನು ಹುಚ್ಚರ ಆಸ್ಪತ್ರೆಯಿಂದ ಬಂದ ಹುಚ್ಚರು ಎನ್ನುವುದು ಸಾಮಾನ್ಯವಷ್ಟೆ, ಸಹಜವೂ ಆದ ಮಾತಾಗಿದ್ದರೂ ಹಾಗೆಂದೂ ಯಾರೂ ಕರೆಯತೊಡಗಲಿಲ್ಲ. ಬಂದಿದ್ದರು ಊರಿನವರು. ಸುತ್ತಮುತ್ತಲ ಹಳ್ಳಿಯ ಕೆಲವರು 'ಹುಚ್ಚರು' ಎಂಬ ಶಬ್ದವನ್ನು ಉಪಯೋಗಿಸಿರಬಹುದು.

ಈ ಪ್ರಸಂಗದಲ್ಲಿ ನಮಗೊಂದು ಸಮಸ್ಯೆ ಹುಟ್ಟಿಕೊಂಡಿತು. ಅವರನ್ನು ಏನೆಂದು ಕರೆಯುವುದು? 'ಹುಚ್ಚರು' ಎನ್ನುವುದಂತೂ ನಿಷಿದ್ಧವಾದ ಶಬ್ದ. 'ಮನೋರೋಗಿಗಳು' ಎನ್ನಲೂ ಮನಸ್ಸಿಲ್ಲ. ಇಂಗ್ಲೀಷಿನಲ್ಲಾದರೆ "ಇನ್‌ಮೇಟ್ಸ್" ಎನ್ನಬಹುದು. ಆದರೆ ಕನ್ನಡದಲ್ಲಿ "ಬಂಧುಗಳು" ಎಂದು ಕರೆಯಲು ಆರಂಭಿಸಿದ್ದುಂಟು. ಆದರೆ ಅದು ಸಮಂಜಸವಾದ ಶಬ್ದವಲ್ಲ. 'ಚಿಕಿತ್ಸಾರ್ಥಿಗಳು' ಎಂದರೆ ಹೇಗೆ? ಅದು ಒಪ್ಪಿಗೆಯ ಶಬ್ದವಾಯಿತು. ಸಮಾಜಕಾರ್ಯ ಪರಿಭಾಷೆಯಲ್ಲಿ ಸಹಾಯವನ್ನು ಬಯಸುವವನಿಗೆ ಇಂಗ್ಲಿಷಿನಲ್ಲಿ "ಕ್ಲಯಂಟ್" ಎನ್ನಲಾಗುವುದು. ಕನ್ನಡದಲ್ಲಿ "ಅರ್ಥಿ" ಎಂದೆನ್ನಬಹುದು. ಮನೋವಿಕಲರು ಈಗ ಚಿಕಿತ್ಸೆಯನ್ನು ಪಡೆಯುತ್ತಿರುವುದರಿಂದ ಚಿಕಿತ್ಸಾರ್ಥಿಗಳು ಎನ್ನುವ ಶಬ್ದ ಉಚಿತವಾದುದೆಂದೆನಿಸಿ ಅದನ್ನೇ ಬಳಸತೊಡಗಿದೆವು. ಚರ್ಚೆಯ ಸಂದರ್ಭದಲ್ಲಿ ಈ ಶಬ್ದ ಹೆಚ್ಚಾಗಿ ಬಳಕೆಯಾಗುತ್ತಿತ್ತು.

ಆದರೆ ದೈನಂದಿನ ವ್ಯವಹಾರದಲ್ಲಿ ಅವರನ್ನು ಅವರವರ ಹೆಸರಿನಿಂದಲೇ, ಗೌರವ ವಾಚಕದಿಂದಲೇ ಸಂಬೋಧಿಸಲಾಗುತ್ತಿತ್ತು. ಮನೋರೋಗಿಗಳಲ್ಲದ ಹಿರಿಯರನ್ನು ಹೇಗೋ ಹಾಗೆ ಅವರಲ್ಲಿ ಕೆಲವರನ್ನು ಸಂಬೋಧಿಸಿ, ಅವರಿಗೆ ಅಭಿಮಾನದ ಸ್ಥಾನವನ್ನು ನೀಡುತ್ತಿದ್ದುದು, ಅವರು ಮಾಡುತ್ತಿದ್ದ ಕಾರ್ಯವನ್ನು ಮೆಚ್ಚಿ ನುಡಿಯುತ್ತಿದ್ದುದೂ ಅವರಿಗೆ ಹಿತವಾಗಿರುತ್ತಿತ್ತೆಂಬುದು ಅವರ ವರ್ತನೆಯಲ್ಲಿ ಕಾಣಬಹುದಾಗಿತ್ತು."

ನಾನು ಇಷ್ಟೆಲ್ಲವನ್ನೂ ಹೇಳಿ ನಮ್ಮ ಕೃತಜ್ಞತೆಯನ್ನು ಡಾಕ್ಟರರಿಗೂ, ಅವರ ಸಿಬ್ಬಂದಿಯವರಿಗೂ ಸೂಚಿಸಿದೆ. ಡಾ. ಸರೋಜಾ ಬಾಯಿಯವರು ತುಂಬು ಹೃದಯದಿಂದ "ನಾವು ನಿಮಗೆ ಋಣಿಗಳು (Grateful)" ಎಂದರು. ಚಹಾಪಾನದೊಡನೆ ಸಭೆ ಮುಕ್ತಾಯವಾಯಿತು.

ಶಿಬಿರದ ಹಿನ್ನೆಲೆ, ಉದ್ದೇಶಗಳು

ಸಮಾಜಕಾರ್ಯದಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳು ಸಮಾಜ ಸೇವಾ ಶಿಬಿರದಲ್ಲಿ ಹತ್ತು ದಿನ ಕಳೆಯಬೇಕೆಂಬುದು ನಿಯಮ. ಸಾಮಾನ್ಯವಾಗಿ ಒಂದು ಹಳ್ಳಿಯಲ್ಲಿ ಶಿಬಿರವನ್ನು ವಿದ್ಯಾರ್ಥಿಗಳು ತಮ್ಮ ಮಟ್ಟದಲ್ಲಿಯೇ ನಡೆಸಬೇಕಾಗುತ್ತದೆ.

ಅವರ ಮಾರ್ಗದರ್ಶನಕ್ಕಾಗಿ ಹೋಗಿರುವ ಪ್ರಾಧ್ಯಾಪಕ(ನಿರ್ದೇಶಕ)ನ ಹಾಗೂ ಆ ಈ ಕಾರ್ಯಗಳಲ್ಲಿ ನೆರವಾಗುವ ವಿಭಾಗದ ಸಿಪಾಯಿಯ ಖರ್ಚನ್ನು. ಶಿಬಿರ ನಡೆಯುವ ಸ್ಥಳವು ಧಾರವಾಡಕ್ಕೆ ಆರು ಮೈಲುಗಳ ಒಳಗಿರದಿದ್ದರೆ, ವಿಶ್ವವಿದ್ಯಾಲಯವೇ ವಹಿಸಿ ಕೊಳ್ಳುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯವು ಸ್ನಾತಕೋತ್ತರ ಮಟ್ಟದಲ್ಲಿ ಸಮಾಜಕಾರ್ಯದ ಅಧ್ಯಯನವನ್ನು ಆರಂಭಿಸಿದ್ದುದು ೧೯೬೨ ರಲ್ಲಿ. ಮೊದಲಿನ ವಿದ್ಯಾರ್ಥಿಗಳ ಗುಂಪು ೧೯೬೪ ರಲ್ಲಿ ಪದವಿ ಪಡೆದು ಹೊರಹೋಯಿತು. ಇದುವರೆಗೂ ಎಂಟು ಗುಂಪುಗಳು, ಅಂದರೆ ಅಂದಾಜು ೭೫ ವಿದ್ಯಾರ್ಥಿಗಳು ಸಮಾಜಕಾರ್ಯದಲ್ಲಿ ವೃತ್ತಿ ಶಿಕ್ಷಣವನ್ನು ಪಡೆದು ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ವಿವಿಧ ಕಲ್ಯಾಣ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದಾರೆ. ಇವರೆಲ್ಲರೂ ಸಮಾಜಸೇವಾ ಶಿಬಿರಗಳಲ್ಲಿ ಪಾಲ್ಗೊಂಡವರೇ ಆಗಿದ್ದಾರೆ. ಇದುವರೆಗೂ ಧಾರವಾಡದ ಸುತ್ತು ಮುತ್ತಲಲ್ಲಿರುವ ಮನಸೂರು, ಹೆಬ್ಬಳ್ಳಿ, ಅಮ್ಮಿನಭಾವಿ ಹಾಗೂ ಸಲಕಿನಕೊಪ್ಪ ಗ್ರಾಮಗಳಲ್ಲಿ ಏಳು ಶಿಬಿರಗಳು ನಡೆದಿದ್ದವು. ಈ ಸಲದ ಶಿಬಿರವು ಸಮಾಜಕಾರ್ಯ ವಿಭಾಗವು ನಡೆಸಿದ ಎಂಟನೆಯ ಶಿಬಿರ; ಸಲಕಿನಕೊಪ್ಪದಲ್ಲಿಯೇ ನಡೆಸಿದ ಮೂರನೆಯ ಶಿಬಿರ.

ಶಿಬಿರವನ್ನು ಸಾಮಾನ್ಯವಾಗಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೇ ನಡೆಸಲಾಗು ತ್ತದೆ. ಒಮ್ಮೊಮ್ಮೆ ಕಾರಣಾಂತರಗಳಿಂದ ಶಿಬಿರವನ್ನು ಮುಂದಕ್ಕೆ ಹಾಕಿ ಎರಡು ವರ್ಷಗಳ ವಿದ್ಯಾರ್ಥಿಗಳನ್ನೂ ಒಂದೇ ಶಿಬಿರದಲ್ಲಿ ಒಗ್ಗೂಡಿಸುವುದುಂಟು. ಅಂಥ ಒಂದು ಶಿಬಿರವು ಈ ಒಂಬತ್ತು ವರ್ಷಗಳ ಅವಧಿಯಲ್ಲಿ ನಡೆಯಿತು.

ಶಿಬಿರಕ್ಕೆ ಹಲವಾರು ಉದ್ದೇಶಗಳಿರುತ್ತವೆ. ಅವುಗಳಲ್ಲಿ ಐದು ಮುಖ್ಯವಾದವು ಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು :

೧. ಸಮಾಜಕಾರ್ಯಕರ್ತರು ಪರಸ್ಪರರನ್ನು ಸರಿಯಾಗಿ ತಿಳಿದುಕೊಳ್ಳಬೇಕು. ವ್ಯಕ್ತಿಯು ಗುಂಪಿನಲ್ಲಿ ಹೇಗೆ ವರ್ತಿಸುತ್ತಾನೆ ಎಂಬುದನ್ನು ಅರಿತುಕೊಳ್ಳಬೇಕು. ಅದಕ್ಕೆಂದೇ ಅವರು ತರಬೇತಿಯನ್ನು ಪಡೆಯುವಾಗಲೇ ಪರಸ್ಪರರನ್ನು ಅರಿತು ಕೊಳ್ಳುವಂಥ ಅವಕಾಶ ಅವರಿಗೆ ಬೇಕಾಗುತ್ತದೆ. ಅದು ಶಿಬಿರದಲ್ಲಿ ದೊರೆಯು ವುದು. ಶಿಬಿರದಲ್ಲಿರುವಾಗ ತಮ್ಮ ಮತ್ತು ಇತರರ ಗುಣದೋಷಗಳನ್ನು ಕಂಡುಕೊಂಡು ದೋಷಗಳನ್ನು ಹೋಗಲಾಡಿಸಿಕೊಳ್ಳುತ್ತಾ ಗುಣಗಳನ್ನು ವರ್ಧಿಸಿಕೊಳ್ಳುವಂಥ ಉಪಾಯಗಳನ್ನು ಹುಡುಕಿಕೊಳ್ಳುವುದು.

೨. ವೃಂದ ಜೀವನದ ಮಹತ್ವವನ್ನೂ, ಉಪಯುಕ್ತತೆಯನ್ನೂ ತಿಳಿದು ಕೊಳ್ಳುವುದು : ವೃಂದನಿಷ್ಠೆಯನ್ನು (Group morale) ಬೆಳೆಸಿಕೊಳ್ಳುವುದು.

೩. ವ್ಯಕ್ತಿಯಲ್ಲಿರುವ ಸುಪ್ತಶಕ್ತಿಗೆ ಚಾಲನೆಯನ್ನು ಕೊಡುವುದು : ಅವನ ಆಸಕ್ತಿಗಳನ್ನು ಕಂಡುಕೊಳ್ಳುವುದು.

೪. ನಾಯಕತ್ವದ ಲಕ್ಷಣಗಳನ್ನು ಕಂಡುಹಿಡಿದು, ಅವುಗಳನ್ನು ವೃದ್ಧಿಪಡಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುವುದು.

೫. ಯಾವ ಕಾರ್ಯವನ್ನಾದರೂ ಶಾಸ್ತ್ರೀಯವಾಗಿ, ವ್ಯವಸ್ಥಿತವಾಗಿ ಮಾಡುವ ಅಗತ್ಯವನ್ನು ಬಿಂಬಿಸುವುದು; ವ್ಯವಸ್ಥಿತ ಕಾರ್ಯವನ್ನು ಹೇಗೆ ಯೋಜಿಸಬೇಕು ಮತ್ತು ಅದನ್ನು ಹೇಗೆ ಅನುಷ್ಠಾನಕ್ಕೆ ತರಬೇಕು ಎಂಬುದನ್ನು ಪ್ರತ್ಯಕ್ಷವಾಗಿ ಅನುಭವಪೂರ್ಣದಿಂದ ಕಂಡುಕೊಳ್ಳುವಂಥ ಅವಕಾಶವನ್ನು ನೀಡುವುದು.

೬. ತಮಗೆ ಬೇಕಾದ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಅಗತ್ಯವಾದ ಸಂಪನ್ಮೂಲಗಳನ್ನು ಹುಡುಕಿ ಹದಗೊಳಿಸಿಕೊಳ್ಳಲು ಬೇಕಾದ ಅವಕಾಶವನ್ನು ಒದಗಿಸುವುದು.

೭. ಗ್ರಾಮಸ್ಥರ ಆವಶ್ಯಕತೆಗಳನ್ನೂ, ಸಮಸ್ಯೆಗಳನ್ನೂ, ಗ್ರಾಮದಲ್ಲಿ ಲಭ್ಯವಾಗುವ ಸಂಪನ್ಮೂಲಗಳನ್ನೂ, ಸ್ಥೂಲವಾಗಿಯಾದರೂ, ತಿಳಿದುಕೊಳ್ಳಲು ತಕ್ಕ ಅನುಕೂಲವನ್ನು ಕಲ್ಪಿಸುವದು.

೮. ಗ್ರಾಮಸ್ಥರನ್ನು ಸಮುದಾಯ ಸಂಘಟನೆಯಲ್ಲಿ ಪಾಲ್ಗೊಳ್ಳಲು ಹೇಗೆ ಪ್ರಚೋದಿಸಬಹುದು ಎಂಬುದನ್ನು ಅರಿತುಕೊಳ್ಳುವುದು.

೯. ಯಾವುದಾದರೂ ಭೌತ ಕಾರ್ಯವನ್ನು (Physical Project) ಕೈಕೊಂಡು ಕಾಯಶ್ರಮದಿಂದ ಅದನ್ನು ಪೂರೈಸುವುದು; ಪೂರೈಸಲು ಸಾಧ್ಯವಾಗುವದಿಲ್ಲವೆಂದು ಗೊತ್ತಿದ್ದರೂ (ಅಂದರೆ ಶಿಬಿರದ ವೇಳೆಯಲ್ಲಿ) ಅಂಥ ಕಾರ್ಯಕ್ಕೆ ಚಾಲನೆಯನ್ನು ಕೊಡುವುದು.

೧೦. ಚರ್ಚಾಗೋಷ್ಠಿ, ಮನೋರಂಜನೆ, ಸಹಕಾರ, ಮೈತ್ರಿ ಸಂಬಂಧದ ಕಾರ್ಯ ಚಟುವಟಿಕೆ ಇವುಗಳ ಮೂಲಕ ಮನೋವಿಕಾಸಕ್ಕೆ ಅವಕಾಶವನ್ನು ಒದಗಿಸುವುದು.

ಈ ಮೊದಲೇ ಹೇಳಿದಂತೆ ಇವು ಮುಖ್ಯೋದ್ದೇಶಗಳು. ಇವುಗಳ ಜೊತೆಗೆ ಕೆಲವು ಉಪಉದ್ದೇಶಗಳೂ ಇರುತ್ತವೆ. ಸಮಯ, ಸಂದರ್ಭ, ಸಮುದಾಯ, ಶಿಬಿರಾರ್ಥಿಗಳು ಇತ್ಯಾದಿಗಳಿಗೆ ಅನುಗುಣವಾದ ವಿಶಿಷ್ಟ ಉದ್ದೇಶಗಳನ್ನು ಶಿಬಿರವು ಸ್ವೀಕರಿಸಬೇಕಾಗುತ್ತದೆ.

ಈ ಶಿಬಿರದ ವಿಶಿಷ್ಟ ಉದ್ದೇಶಗಳು

ಇದುವರೆಗೆ ನಮೂದಿಸಿದ ಉದ್ದೇಶಗಳು ಸಮಾಜ ಸೇವಾ ಶಿಬಿರಗಳಿಗೆ ಸಾಮಾನ್ಯವಾದವುಗಳು. ಆದರೆ ಈ ಶಿಬಿರಕ್ಕೆ, ಇವುಗಳ ಜೊತೆಗೆ, ಕೆಲವು ಬಹು ಮುಖ್ಯವಾದ ಉದ್ದೇಶಗಳನ್ನು ಇರಿಸಿಕೊಳ್ಳಲಾಗಿತ್ತು. ಅವನ್ನು ಈ ರೀತಿಯಲ್ಲಿ ಪಟ್ಟಿ ಮಾಡಬಹುದು :

೧. ಸಮಾಜಕಾರ್ಯ ವಿದ್ಯಾರ್ಥಿಗಳಿಗೆ ಮನೋಚಿಕಿತ್ಸಾರ್ಥಿಗಳ ವರ್ತನೆಯನ್ನು ಬಹು ಹತ್ತಿರದಲ್ಲಿ ವೀಕ್ಷಿಸಿ, ಪರಿಶೀಲಿಸಿ ಅಭ್ಯಾಸ ಮಾಡುವ ಅವಕಾಶವನ್ನು ಕಲ್ಪಿಸುವುದು.

೨. ಮನೋಚಿಕಿತ್ಸಾರ್ಥಿಗಳೊಡನೆ ಹೇಗೆ ಹೊಂದಿಕೊಂಡು ನಡೆಯಬೇಕಾಗುತ್ತದೆ ಎಂಬುದನ್ನು ಅರಿತುಕೊಳ್ಳುವುದು.

೩. ಸಾಮಾನ್ಯರಿಗೂ, ಮನೋವಿಕಲರಿಗೂ ಇರುವ ಅಥವಾ ಇದ್ದಿರದ ಸೂಕ್ಷ್ಮತರ ಭೇದವನ್ನು ಕಂಡುಕೊಳ್ಳುವುದು.

೪. ಮನೋಚಿಕಿತ್ಸಾರ್ಥಿಗಳು ಆಸ್ಪತ್ರೆಯ ನಿರ್ಬಂಧಿತ ವಾತಾವರಣದಿಂದ ಸ್ವಚ್ಛಂದದ ವಾತಾವರಣಕ್ಕೆ ಬಂದಾಗ ಹೇಗೆ ಬದಲಾವಣೆ ಹೊಂದುತ್ತಾರೆ, ಶಿಬಿರದಂಥ ವಾತಾವರಣವು ರೋಗ ನಿವಾರಣೆಗೆ ನೆರವಾಗುತ್ತದೆಯೇ ಹೇಗೆ ಎಂಬುದನ್ನು ಕಂಡುಕೊಳ್ಳುವುದು.

೫. ಮನೋವಿಕಲರೂ ಉತ್ಪಾದನಾ ಕಾರ್ಯದಲ್ಲಿ ಸಮರ್ಥವಾಗಿ ಭಾಗವಹಿಸಲು ಶಕ್ಯವೆ ಎಂಬುದನ್ನು ಪರಿಶೀಲಿಸಲು.

೬. ಗ್ರಾಮಸ್ಥರು ಮನೋಚಿಕಿತ್ಸಾರ್ಥಿಗಳನ್ನು ಯಾವ ರೀತಿಯಲ್ಲಿ ಕಂಡು ವರ್ತಿಸುತ್ತಾರೆ; ಪಶ್ಚಾದ್ಯೋಗಕ್ಷೇಮದ (After care) ಕಾರ್ಯ ಯೋಜನೆಗೆ ಏನಾದರೂ ಬೆಳಕು ದೊರೆಯಬಹುದೆ, ಎಂಬುದನ್ನು ತಿಳಿದುಕೊಳ್ಳಲು.

೭. ಸಮಾಜ ಕಲ್ಯಾಣ ಕೇಂದ್ರಗಳೊಡನೆ ಸಮಾಜಕಾರ್ಯ ವಿದ್ಯಾರ್ಥಿಗಳು ಹೇಗೆ ವ್ಯವಹರಿಸಬೇಕು, ಅವುಗಳೊಡನೆ ಯಾವಂಥ ರೀತಿಯಲ್ಲಿ ಸಂಯೋಜನಾ ಕಾರ್ಯವನ್ನು ಕೈಕೊಳ್ಳಬಹುದು, ಇಂಥ ಕಾರ್ಯ ಪ್ರಕ್ರಿಯೆಯಲ್ಲಿ ಬರುವ ಅಡೆತಡೆಗಳೇನು, ಆ ಅಡೆತಡೆಗಳಿಗೆ ಯಾವ್ಯಾವ ಉಪಾಯಗಳನ್ನು ನಿಯೋಜಿಸಿಕೊಳ್ಳಬೇಕು ಎಂಬಿತ್ಯಾದಿಗಳನ್ನು ಅನುಭವ ಪೂರ್ವಕ ಅರಿತುಕೊಳ್ಳುವುದು.

ಸಲಕಿನಕೊಪ್ಪ

ಶಿಬಿರ ನಡೆದದ್ದು ಧಾರವಾಡ ನಗರಕ್ಕೆ ಐದು ಮೈಲು ದೂರದಲ್ಲಿ ಪಶ್ಚಿಮದಲ್ಲಿ, ಧಾರವಾಡ-ಹಳಿಯಾಳ ರಸ್ತೆಯ ಉತ್ತರ ಭಾಗಕ್ಕೆ ಇರುವ ಚಿಕ್ಕ ಹಳ್ಳಿ ಸಲಕಿನ ಕೊಪ್ಪದಲ್ಲಿ. ಮಲೆನಾಡಿನ ಸೆರಗಿನ ಕುಸುರಿನ ಹಸುರಿನ ಮುದ್ದಾದ ಹಳ್ಳಿ. ಧಾರವಾಡ-ಹಳಿಯಾಳ ರಸ್ತೆಯಲ್ಲಿ ನಂತರೆ ಹತ್ತಿರದಲ್ಲೇ ಕಾಣುತ್ತದೆ. ಧಾರವಾಡದಿಂದ ನಿಗದಿ, ಬಾಡ ಹಳ್ಳಿಗಳಿಗೆ ಹೋಗುವ ಬಸ್ಸುಗಳಲ್ಲಿ ಹೋಗಿ ಸಲಕಿನಕೊಪ್ಪದ ಕತ್ತರಿಗೆ ಇಳಿದು ಎರಡು ಫರ್ಲಾಂಗ್ ನಡೆದರೆ ಹಳ್ಳಿಯ ಮೊದಲ ಮನೆ ಸಿಗುತ್ತದೆ. ಊರಿನಭಿಮುಖವಾಗಿ ಸಾಗಿದಾಗ ಒಂದು ಫರ್ಲಾಂಗು ಕ್ರಮಿಸಿದರೆ ಊರ ಕೆರೆಯ ಏರಿಯ ಮೇಲೆ ಇರುತ್ತೇವೆ. ಬಲಗಡೆಗೆ ಕೆರೆಯ ನೀರು, ಎಡಗಡೆಗೆ ಹಸುರುಗುವ ಭತ್ತದ ಗದ್ದೆಗಳು. ಕೆರೆ ಏರಿಯನ್ನು ಕ್ರಮಿಸಿದ ನಂತರ ಊರ ಸೇರಲು ಏರಿರುವ ಹಾದಿಯನ್ನು ಕ್ರಮಿಸ

ಬೇಕು. ಇದು ಊರಿನ ಮುಖ್ಯ ರಸ್ತೆ; ಇದು ಎರಡು ಫರ್ಲಾಂಗ್ ಉದ್ದವಿದ್ದು ಊರಿನ ಉತ್ತರಕ್ಕಿರುವ ಗುಡ್ಡದ ತಪ್ಪಲನ್ನು ತಲಪುತ್ತದೆ.

ಈ ರಸ್ತೆಯು ಬಲಗಡೆ, ಅಂತೆಯೇ ಎಡಗಡೆ ಕವಲೊಡೆದಿದೆ. ಬಲಗಡೆಯಲ್ಲಿ ಉದ್ದಕ್ಕೂ ನಾಲ್ಕು ಕವಲುಬೀದಿಗಳಿವೆ. ಮೊದಲ ಕವಲಿನಲ್ಲಿ (ಕೆರಿ ಓಣಿ) ಮೂರು ಮನೆಗಳು. ಎರಡನೆಯ ಕವಲು ಬೀದಿಗೆ ಮುನ್ನವೇ ಎಡಗಡೆಯ ಮೊದಲ ಕವಲು ಬೀದಿಗೆ ಹೊಂದಿಕೊಂಡಂತೆ ಊರಿನ ಶಾಲೆಯು,ಅದರ ಮುಂದೆ ಆಟದ ಬಯಲು ಇವೆ. ಎರಡನೆಯ ಬಲದ ಕವಲುಬೀದಿ(ಮನಗುಂಡಿಯವರ ಓಣಿ)ಯ ಅಕ್ಕಪಕ್ಕದಲ್ಲಿ ಹೆಚ್ಚು ಮನೆಗಳು ತುರುಗಿದಂತಿವೆ. ಮೂರನೆಯ ಕವಲು ಬೀದಿಯೂ (ಕುಂದರಗಿಯವರ ಓಣಿ) ಇಂಥದೇ. ಬಲಗಡೆಯ ಕೊನೆಯ ಕವಲು ದಾರಿಯ ಉತ್ತರಕ್ಕೆ ನಾಲ್ಕಾರು ಮನೆಗಳೂ, ದಕ್ಷಿಣಕ್ಕೆ ಒಂದು ಗುಡಿಸಲೂ ಇವೆ. ಈ ಭಾಗಕ್ಕೆ ಹೊಸೂರು ಎನ್ನುತ್ತಾರೆ. ಆ ಗುಡಿಸಲಿನ ಹಿಂದೆ ಹೊಲ. ಅದೇ ದಾರಿಯ ಕೊನೆಗೆ ಊರಿನ (ಹೊಸದಾಗಿ ಕಟ್ಟಿಸಿದ) ಬಾವಿಯಿದೆ.

ಮುಖ್ಯ ರಸ್ತೆಯ ಎಡಭಾಗದಲ್ಲಿಯೇ ಹೆಚ್ಚು ಮನೆಗಳು ಇರುವುದು. ಮೊದಲ ಎಡ ಕವಲುಬೀದಿಯನ್ನು ಕೆಳಗಿನ ಓಣಿಯೆಂದು ಕರೆಯಲಾಗುವುದು. ಈ ಓಣಿಯಲ್ಲಿಯೇ ಊರ ಪ್ರಮುಖರಾದ ಗೌಡರ ಮನೆಗಳಿರುವುದು. ಈ ಓಣಿಯ ಮೊದಲಿಗೆ, ಉತ್ತರಕ್ಕೆ, ದ್ಯಾಮವ್ವನ ಗುಡಿ; ನಾಲ್ಕಾರು ಮನೆಗಳ ನಂತರ ಉತ್ತರ ದಿಕ್ಕಿನಲ್ಲಿಯೇ ಮಹಾದೇವಯ್ಯನೊಳಗೊಂಡ ಮನೆ ಇದೆ. ಇದೇ ಓಣಿಯಲ್ಲಿಯೇ ಊರ ಜಟ್ಟು ಸಾಗಿದರೆ ಹೊರಗಿನ ಕಲ್ಲಪ್ಪನ ಗುಡಿಯೂ ಅದನ್ನೂ ದಾಟಿ ಮುಂದುವರಿದರೆ. ಕಾಲುಹಾದಿಯೋಪಾದಿಯಾಗಿರುವ ದಾರಿಗುಂಟ ಸಾಗಿದರೆ, ಊರಿನ ಹೊಂಡಗಳೆರಡು ಸಿಗುತ್ತವೆ. ಈ ಎರಡು ಹೊಂಡಗಳು ಒಂದಕ್ಕೊಂದು ಹೊಂದಿಕೊಂಡಿವೆ; ಉತ್ತರದ ಹೊಂಡವನ್ನು ಕುಡಿಯುವ ನೀರಿಗಾಗಿಯೂ, ದಕ್ಷಿಣದ ಹೊಂಡವನ್ನು ಸ್ನಾನಾದಿಗಳಿಗಾಗಿಯೂ ಊರವರು (ಹರಿಜನರನ್ನು ಹೊರತು) ಉಪಯೋಗಿಸುತ್ತಾರೆ. ಈ ಹೊಂಡಗಳು ಛತ್ರದ ಗದ್ದೆಗಳ ಮಧ್ಯದಲ್ಲಿವೆ: ಇವು ಖಾಸಗಿಯ ಹೊಂಡಗಳು. ಊರಿನ ಈಶಾನ್ಯಕ್ಕಿರುವ ಬಾವಿಯನ್ನು ತೋಡುವ ಮೊದಲು (ಮತ್ತು ಹೆಚ್ಚಿನವರೆಲ್ಲಾ ಈಗಲೂ) ಈ ಹೊಂಡಗಳನ್ನೇ ಉಪಯೋಗಿಸುತ್ತಾರೆ. ಅಲ್ಲಿ ಬಾವಿಯಿಂದ ನೀರನ್ನು ಸೇದಿ ಮೇಲೆತ್ತುವರೆ. ಇಲ್ಲಿಂದ ಹೊತ್ತು ನೀರು ತರುತ್ತಾರೆ. ಮಳೆಗಾಲದಲ್ಲಿ ಲಲನೆಯರ ಕಾಲುಗಳು ಉಳುಕುವುದೇನೂ ಅಪರೂಪವಲ್ಲ.

ಎರಡನೆಯ ಎಡಗಡೆಯ ಕವಲುಓಣಿಯನ್ನು ನಡುವಿನ ಓಣಿಯೆಂದೂ ಮೂರನೆಯ ಕವಲುಓಣಿಯನ್ನು ಮೇಗಳ ಓಣಿಯೆಂದೂ ಕರೆಯುತ್ತಾರೆ. ಈ ಎರಡು ಕವಲುಓಣಿಗಳು ಒಳಗಿನ ಕಲ್ಲಪ್ಪನ ಗುಡಿಯ ಮುಂದಣ ಓಣಿಯನ್ನು ಸೇರುತ್ತವೆ. ಕಲ್ಲಪ್ಪನ ಗುಡಿ ಓಣಿ (ಇದಕ್ಕೇ ಈ ಶಿಬಿರದಲ್ಲಿ ಹೊಸ ಹೆಸರು ಬಂದಿತು) ಹರಿಜನ ಕೇರಿಯಲ್ಲಿ ಮುಕ್ತಾಯವಾಗುತ್ತದೆ: ಮುಂದುವರಿದರೆ ಗುಡ್ಡದ ನೈಋತ್ಯ ದಿಕ್ಕಿನ ತಪ್ಪ

ಲನ್ನು ಸೇರುತ್ತದೆ. ನಾಲ್ಕನೆಯದೂ, ಕೊನೆಯದೂ ಆದ ಈ ಕವಲುದಾರಿಯು ಹೊಲಗದ್ದೆಗಳ ಕಡೆ ಹೋಗುತ್ತದೆ. ಅದೇ ದಾರಿಯಲ್ಲಿ ಉತ್ತರಕ್ಕೆ ಹನುಮಪ್ಪನ ಗುಡಿಯೂ, ಮುಂದುವರಿದು ಎಡಕ್ಕೆ ಹೊರಳಿದರೆ ಹರಿಜನರು ಉಪಯೋಗಿಸುವ ಹೊಂಡವೂ ಸಿಗುತ್ತವೆ.

ಸಲಕಿನಕೊಪ್ಪದ ಮನೆಗಳು ಸಾಮಾನ್ಯವಾಗಿ ಹಿತ್ತಿಲನ್ನು ಪಡೆದಿವೆ. ಊರ ಮಧ್ಯದಲ್ಲಿಯೇ ಕಾಯಿಪಲ್ಲೆ, ಕೆಲವೊಮ್ಮೆ ಜೋಳ ಮುಂತಾದ ಪೈರುಗಳನ್ನು ನಾವು ಕಾಣಬಹುದು. ಉತ್ತರದಿಂದ ಕೆರೆಯವರೆಗೂ ಇಳಿಜಾರಾಗಿರುವ ಈ ಊರು ಹಳಿಯಾಳ ರಸ್ತೆಗೆ ಏರಿನಲ್ಲಿ ಕಾಣುತ್ತದೆ. ಮುಖ್ಯ ರಸ್ತೆಯ ಬಲಗಡೆ (ಪೂರ್ವಕ್ಕೆ) ಏರಿದ್ದರೆ, ಎಡಗಡೆಗೆ ತಗ್ಗಾಗುತ್ತದೆ. ಆದುದರಿಂದ ಗುಡ್ಡದ ಕಡೆಯಿಂದ ಹರಿದು ಬರುವ ನೀರು ದಕ್ಷಿಣಕ್ಕೂ, ಪಶ್ಚಿಮಕ್ಕೂ ಹರಿಯುತ್ತದೆ. ಆದರೂ ಪೂರ್ವದ ಕಡೆ ನೂರು ಮಾರುಗಳಾನಂತರ ತಗ್ಗು ಇರುವುದರಿಂದ ಈಶಾನ್ಯದ ನೀರು ದಕ್ಷಿಣ-ಪೂರ್ವಾಭಿ-ಮುಖವಾಗಿಯೇ ಹರಿಯುತ್ತದೆ.

ಊರ ಗುಡ್ಡದ ಉತ್ತರಕ್ಕೆ ಕಾಡು ಇದೆ. ಅಲ್ಲಿ ವನ್ಯ ಮೃಗಗಳು, ಮೊಲ, ಹಂದಿ ಮುಂತಾದವುಗಳು ಇವೆ. ಗುಡ್ಡದ ಕಲ್ಲನ್ನು ಅನ್ಯ ಊರಿನವರೂ ರಸ್ತೆಗೂ, ಮನೆ ಕಟ್ಟಲೋ ಉಪಯೋಗಿಸಲು ಕೊಂಡೊಯ್ಯುತ್ತಾರೆ. ಹಳಿಯಾಳ ರಸ್ತೆಗೆ ದಕ್ಷಿಣದಲ್ಲಿ ಮತ್ತೆ ದಿನ್ನೆಯಿದೆ. ಇದು ಪಂಚಾಯತಿಗೆ ಸೇರಿದೆ.

ಊರಿನ ಮುಖ್ಯ ಬೆಳೆ ಭತ್ತ. ಹಕ್ಕಲಿನಲ್ಲಿ (ಖುಷ್ಕಿ) ಜೋಳವನ್ನು, ಕೆಲವು ಬೇಳೆಕಾಳುಗಳನ್ನು ಬೆಳೆಯಲಾಗುವುದು. ಸಾಮಾನ್ಯವಾದ ಕಾಯಿಪಲ್ಲೆಗ-ಳನ್ನೂ ಬೆಳೆಯಲಾಗುವುದು.

ಹಳ್ಳಿಯಲ್ಲಿ ಸುಮಾರು ನೂರು ಮನೆಗಳಿದ್ದು, ಜನ ಸಂಖ್ಯೆ ಆರು ನೂರು. ಬ್ರಾಹ್ಮಣರು, ಲಿಂಗಾಯತರು, ಕ್ಷತ್ರಿಯರು, ವಾಲ್ಮೀಕಿ, ಮುಸಲ್ಮಾನ, ಪಂಚಾಳ, ಮರಾಠಿ, ಬಜಂತ್ರಿ, ಹರಿಜನ ಇತ್ಯಾದಿ ಜಾತಿಯವರಿದ್ದಾರೆ. ನಾಲ್ಕೆಂಟು ಮನೆಯ-ವರನ್ನು ಹೊರತು ಎಲ್ಲರೂ ಬಡವರು. ದಿನಗೂಲಿಯೇ ಅವರ ಜೀವನೋಪಾಯ. ಕೃಷಿಕರಲ್ಲಿ ದುಡಿಯುವವರು ಇದ್ದರೂ ಪರ ಊರಿಗೇ ಅವರು ಹೋಗಬೇಕಾಗುತ್ತದೆ. ಕರ್ನಾಟಕ ವಿಶ್ವವಿದ್ಯಾಲಯವು ಅನ್ಯ ಹಳ್ಳಿಗರಿಗೆಂತೋ ಅಂತೆಯೇ ಈ ಹಳ್ಳಿಗರಿಗೂ ಉದ್ಯೋಗದ ಅವಕಾಶವನ್ನು ಒದಗಿಸಿದೆ. ಇತ್ತೀಚಿನ ಲೆಕ್ಕದ ಪ್ರಕಾರ ಐವತ್ತೆಂವರೂ ನಾಲ್ವತ್ತು ತರುಣ ತರುಣಿಯರು ದಿನವೂ ವಿಶ್ವವಿದ್ಯಾಲಯದಲ್ಲಿ ಶಿಪಾಯಿಗಳಾ-ಗಿಯೋ, ತೋಟಗಾರಿಕೆ, ಇಂಜಿನಿಯರಿಂಗ್ ವಿಭಾಗಗಳಲ್ಲಿ ಕೂಲಿಗಳಾಗಿಯೊ ದುಡಿ-ಯುತ್ತಿದ್ದಾರೆ. ಬೇರೆಯವರು ಧಾರವಾಡದಲ್ಲಿನ ಕೃಷಿ ವಿಜ್ಞಾನ ಕಾಲೇಜಿನಲ್ಲಿ, ಆಸು ಪಾಸಿನ ಖಾಸಗೀ ಹೊಲಗದ್ದೆಗಳಲ್ಲಿ, ಧಾರವಾಡ ನಗರದ ಮನೆಗಳಲ್ಲಿ, ಕಟ್ಟೋಣ ಕಾರ್ಯಗಳಲ್ಲಿ ಕೂಲಿಗಾರರಾಗಿ ದುಡಿಯುತ್ತಿದ್ದಾರೆ.

ಈ ಹಳ್ಳಿಯು ಮನಸೂರ ಗ್ರಾಮದೊಂದಿಗೆ ಸೇರಿದ ಪ್ರಂದ ಪಂಚಾಯತಿಯ ಕಕ್ಷೆಗೆ ಬರುತ್ತದೆ; ಪಂಚಾಯತಿಯ ಕಚೇರಿ ಮನಸೂರಿನಲ್ಲಿದೆ. ಪಂಚಾಯತಿಯ ಅಧ್ಯಕ್ಷ (ಅಥವಾ ಸರಪಂಚ) ಈ ಊರಿನವರು, ಶ್ರೀ ರಾಮನಗೌಡ. ಕಿರು ವಯಸ್ಸಿನವರಾದ ಅಧ್ಯಕ್ಷರಲ್ಲಿ ಊರಿನೆಲ್ಲರ ಗೌರವವಿದೆ. ಈ ಹಳ್ಳಿಯಲ್ಲಿ ಪಕ್ಷ ಪಂಗಡಗಳ ರಾಜಕೀಯ ಕಂಡುಬಂದಿಲ್ಲ. ಕೋರ್ಟುಗಳಿಗೆ ನ್ಯಾಯಗಳು ಹೋಗುವುದು ಬಹು ಕಡಮೆ ಎಂದು ತಿಳಿದುಬರುತ್ತದೆ. ಈ ಊರಿನಲ್ಲಿರುವ ಸಹಕಾರ, ಸ್ನೇಹಮಯ ವಾತಾವರಣ ಬಹು ಮುಖ್ಯ ಸಂಪನ್ಮೂಲವೆಂದು ತಿಳಿಯಬಹುದು. ಇದರ ಸರಿಯಾದ ಉಪಯೋಗ ವಾಗಬೇಕಾಗಿದೆ.

ಹಿಂದಿನ ಶಿಬಿರಗಳು

ಗಾಂಧೀ ಶತಮಾನೋತ್ಸವದ ಸಮಾರಂಭದ ಅಂಗವಾಗಿ ಕರ್ನಾಟಕ ವಿಶ್ವ ವಿದ್ಯಾಲಯವು ಹಳ್ಳಿಯೊಂದರಲ್ಲಿ ಏನಾದರೊಂದು ಸಾರ್ಥಕ ಕೆಲಸಮಾಡಬೇಕೆಂದು ಯೋಜಿಸಿ, ಸುತ್ತು ಮುತ್ತಲ ಕೆಲವು ಗ್ರಾಮಗಳನ್ನು ಪರಿಶೀಲಿಸಿ, ಕೊನೆಗೆ ಈ ಊರನ್ನು ಆರಿಸಿಕೊಳ್ಳಲಾಯಿತು. ಆಯ್ದುಕೊಂಡುದಕ್ಕೆ ಇಂಥವೇ ಕಾರಣಗಳೆಂದು ಖಚಿತವಾಗಿ ಹೇಳುವುದು ಕಷ್ಟವಾದರೂ ಈ ಮುಂದಿನ ಕಾರಣಗಳನ್ನು ನೀಡ-ಬಹುದು :

೧. ಮಲೆನಾಡಿನ ಸೆರಗಿನಲ್ಲಿರುವ ಹಳ್ಳಿ ಪ್ರಕೃತಿ ಸೌಂದರ್ಯದ ನೆಲೆಯಾಗಿ ಕಂಡಿತು.

೨. ವಿಶ್ವವಿದ್ಯಾಲಯಕ್ಕೆ ಬಹು ದೂರದಲ್ಲಿರಲಿಲ್ಲ.

೩. ಈ ಹಳ್ಳಿಯ ಅನೇಕರು ವಿಶ್ವವಿದ್ಯಾಲಯದಲ್ಲಿ ಕೆಲಸಗಾರರಾಗಿ ದುಡಿ-ಯುತ್ತಿದ್ದುದರಿಂದ ಔಪಚಾರಿಕ-ಅನೌಪಚಾರಿಕ ಸಂಬಂಧಗಳು ಉಂಟಾಗಿದ್ದವು.

೪. ಹಳ್ಳಿಯ ಶಾಲೆಗೆ ಕೇವಲ ಒಂದೇ ಒಂದು ಕೋಣೆ ಇದ್ದು, ಇನ್ನೊಂ-ದಾದರೂ ಬೇಕಾಗಿತ್ತು ; ಗಾಂಧೀಜಿಯ ಮಕ್ಕಳ ಪ್ರೇಮ, ಹಳ್ಳಿಗರ ಮೇಲಾದ ಮಮತೆಗಳನ್ನು ಶಾಲಾ ಕೋಣೆಯು ಪ್ರತಿನಿಧಿಸುತ್ತದೆ ಎಂಬ ನಂಬುಗೆ.

೫. ಪಂಚಾಯತಿಯ ಅಧ್ಯಕ್ಷ ಹಾಗೂ ಊರವರು ಸಹಕಾರ ನೀಡುವ ಭರವಸೆಯನ್ನು ಕೊಟ್ಟದ್ದು.

ಹೀಗೆ ಸಲಕಿನಕೊಪ್ಪದೊಡನೆ ವಿಶ್ವವಿದ್ಯಾಲಯದ ಸಂಬಂಧ ೧೯೬೮ ರಲ್ಲಿ ಪ್ರಕಟವಾಯಿತು. ಆ ವರ್ಷದ ಅಕ್ಟೋಬರಿನಲ್ಲಿ ತಾಲೂಕಾ ಅಭಿವೃದ್ಧಿ ಮಂಡಳಿ, ಅಖಿಲ ಭಾರತ ತರಬೇತಿ ಹೊಂದಿದ ಸಮಾಜಕಾರ್ಯಕರ್ತರ ಸಂಘದ ಧಾರವಾಡದ ಶಾಖೆ, ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿ ಸಂಘ, ಇತರ ಸಿಬ್ಬಂದಿ ವರ್ಗಗಳು — ಇವರೆಲ್ಲರ ಸಹಕಾರದಿಂದ ಒಂದು ಶಿಬಿರವನ್ನು ನಡೆಸಿ ಶಾಲಾ

ಕೋಣೆಯೊಂದನ್ನು ಹತ್ತು ದಿನಗಳಲ್ಲಿ ನಿರ್ಮಿಸಲಾಯಿತು (ಇದೇ ಕೋಣೆಯಲ್ಲಿಯೇ ಮನೋಚಿಕಿತ್ಸಾರ್ಥಿಗಳು ಇಳಿದುಕೊಂಡದ್ದು.)

ಆ ಶಿಬಿರದಾನಂತರ ಸಮಾಜಕಾರ್ಯ ವಿಭಾಗವು ಸಲಕಿನಕೊಪ್ಪವನ್ನು ಕ್ಷೇತ್ರಕಾರ್ಯಕ್ಕಾಗಿ ಖಾಯಂ ಆಗಿ ತೆಗೆದುಕೊಂಡಂತೆಯೇ ಆಯಿತು. ಸ್ನಾತಕೋತ್ತರ ಸಮಾಜಕಾರ್ಯ ವಿದ್ಯಾರ್ಥಿಯು ವಾರದಲ್ಲಿ ಎರಡು ದಿನ ಸಲಕಿನಕೊಪ್ಪವನ್ನು ಸಂದರ್ಶಿಸತೊಡಗಿದ. ಊರಿನ ಸಮಸ್ಯೆಗಳೂ, ಸಂಪನ್ಮೂಲಗಳೂ ಸ್ಪಷ್ಟವಾಗತೊಡಗಿದವು. ಅಧಿಕೃತವಲ್ಲದಿದ್ದರೂ ಹಳ್ಳಿಯ ಅಭಿವೃದ್ಧಿಯು ನಡೆಯಲು ಬೇಕಾದಂಥ ಕೆಲಸಗಳು ಆಗೀಗ ಅಲ್ಪಸ್ವಲ್ಪ ನೆರವೇರುತ್ತಲೇ ಇದ್ದವು. ಧಾರವಾಡದಲ್ಲಿ ಸ್ಥಾಪಿತವಾಗಿರುವ ಸಮಾಜ ಕಲ್ಯಾಣ ಸಂಘ ಹಾಗೂ ಅ. ಭಾ. ತ. ಸ. ಸಂಘಗಳ ಸಹಕಾರದಿಂದ ವಯಸ್ಕರಿಗೆ ರಾತ್ರಿಶಾಲೆಯನ್ನು ಕೆಲವು ತಿಂಗಳು ನಡೆಸಲಾಯಿತು. ಸಮಾಜಕಾರ್ಯ ವಿಭಾಗದ ಸಮಾಜಸೇವಾ ಶಿಬಿರಗಳೆರಡು ೧೯೭೦ ರಲ್ಲಿ ನಡೆದವು. ಆ ಶಿಬಿರಗಳಲ್ಲಿ ನೀರಿನ ಹೊಂಡಗಳ ಕಡೆಗೆ ಹೋಗುವ ಹಾದಿಯನ್ನು ಸರಿಪಡಿಸಿ ಗಟ್ಟಿ ಮಾಡಲಾಯಿತು. ಗಾಂಧೀ ಸ್ಮಾರಕ ಪ್ರತಿಷ್ಠಾನ ಹಾಗೂ ವಿಶ್ವವಿದ್ಯಾಲಯಗಳು ಕೂಡಿ ನಡೆಸಿದ ಶಿಬಿರವು ಕೆರೆಯ ಏರಿಯ ಕೆಲ ಭಾಗವನ್ನು ಸರಿಮಾಡುವ ಕಾರ್ಯವನ್ನು ಕೈಗೊಂಡಿತ್ತು. ಧಾರವಾಡದ ವನಿತಾ ಸೇವಾ ಸಮಾಜದ ಶಿಕ್ಷಣ ಕಾಲೇಜಿನ ವಿದ್ಯಾರ್ಥಿನಿಯರ ಶಿಬಿರವನ್ನು ಈ ಹಳ್ಳಿಯಲ್ಲಿ ನಡೆಸುವಂತೆ ಏರ್ಪಡಿಸಿ ಶಾಲೆಯ ಆಟದ ಬಯಲನ್ನು ಸಮಗೊಳಿಸಲಾಯಿತು.

ಹೀಗೆ ಈ ಹಿಂದೆ ಐದು ಶಿಬಿರಗಳು ಊರಿನಲ್ಲಿ ನಡೆದಿದ್ದವು. ಇದರಿಂದಲೂ, ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳೂ, ಪ್ರಾಧ್ಯಾಪಕರೂ ನಿಕಟ ಪರಿಚಯವನ್ನು ಹಳ್ಳಿಗರೊಡನೆ ಬೆಳೆಸಿಕೊಳ್ಳುತ್ತಿದ್ದುದರಿಂದಲೂ ಈ ಶಿಬಿರಕ್ಕೆ ಹೆಚ್ಚಿನ ಕಳೆ ಬರಲು ಸಾಧ್ಯವಾಯಿತು ಎಂದೇ ಹೇಳಬೇಕಾಗುತ್ತದೆ.

(ಮುಂದುವರಿಯುವದು)

★ ಎಚ್. ಎಂ. ಮರುಳಸಿದ್ಧಯ್ಯ

ಧಾರವಾಡ ಮುಖ್ಯ ಅಂಚೆಕಚೇರಿಯ ಇತಿಹಾಸ

ಇಂದಿಗೆ ೧೧೭ ವರ್ಷ ಜನತೆಗೆ ಸೇವೆ ನೀಡಿದ ಧಾರವಾಡ ಮುಖ್ಯ ಅಂಚೆ ಕಚೇರಿಯು ೪—೧೦—೧೯೭೧ ರಂದು "ಕಿತ್ತೂರ ಚೆನ್ನಮ್ಮ ಪಾರ್ಕ" ಅಂಚೆ ಕಚೇರಿ ಯೆಂದು ಹೆಸರನ್ನು ಪಡೆದುಕೊಂಡಿತು.

ಈ ಮೊದಲು ಈ ಕಚೇರಿಯು, ಕಿತ್ತೂರ ದೊರೆಗಳ ದೇವಸ್ಥಾನ. ದೇವರ ಪೂಜೆಯ ಪವಿತ್ರ ಗೃಹವಾಗಿದ್ದಿತು.

ಧರ್ಮರಕ್ಷಕರಾದ ಹಿರೇಮಲ್ಲಸೆಟ್ಟರು ೩೦೦ ವರ್ಷಗಳ ಹಿಂದೆ ಬೆಳಗಾಂವಿಯ ಅಸದಖಾನನ ಕೋಟೆ ಕಟ್ಟಿಸಿ, ಶುಭ ಮುಹೂರ್ತದಲ್ಲಿ, ದೇವರ ಧ್ಯಾನ, ಪೂಜೆಗೆಂದು ಧಾರವಾಡದಲ್ಲಿ ಈ ಮನೆಯನ್ನು ಕಟ್ಟಿಸಿದರು. ಶುಭಮುಹೂರ್ತದಲ್ಲಿ ಅಡಿಗಲ್ಲನ್ನಿಟ್ಟು ಕಟ್ಟಿದ ಈ ಮನೆ, ಉಪಯೋಗಿಸಿದ ಕಲ್ಲು, ಹಂಚುಗಳು ಮುಕ್ಕಾಗದೆ ಮೂರು ಶತಮಾನಗಳವರೆಗೆ ಭದ್ರವಾಗಿ ನಿಂತಿದೆ. ಅಂಚೆ ಕಚೇರಿಯವರು ಎಷ್ಟೋ ಸಲ ಈ ಮನೆಗೆ ಹಾಕಿದ ಮಂಗದ ಹಂಚನ್ನು ತೆಗೆದು, ಮಂಗಳೂರ ಹಂಚನ್ನು ಹಾಕುವ, ಅಲ್ಲದೆ ಹಂಚನ್ನೇ ತೆಗೆದು ಕಾಂಕ್ರೀಟ ಮೇಲ್ಮನೆ ಮಾಡುವ ಯೋಜನೆ ತಂದು ಮತ್ತೆ ಕೈ ಬಿಟ್ಟರು. ಹಿರೇಮಲ್ಲಸೆಟ್ಟರ ಇಚ್ಛೆ ಏನಿತ್ತೋ ಯಾರು ಬಲ್ಲರು.

ಪೂಜೆಗೆ ಬೇಕಾಗುವ ಅಲ್ಲಿಯ ಬಾವಿಯ ನೀರು ಮೇಲೆಯೇ ಇದ್ದು, ಇಡೀ ಧಾರವಾಡದಲ್ಲಿಯೇ ಆರೋಗ್ಯಕರ ನೀರೆಂದು ಪ್ರತೀತಿಯಿದೆ. ಬ್ರಿಟಿಶ ಅಧಿಕಾರಿಗಳಿಗೆ ಈ ಬಾವಿಯ ನೀರನ್ನೇ ಉಪಯೋಗಿಸಬೇಕೆಂಬ ನಿಯಮವಿತ್ತು. ನೀರು ಕೆಲಗೇರಿ ಕೆರೆಯಿಂದ ನೀರು ಪೂರೈಕೆಯಾಗುವದಕ್ಕೆ ಮುಂಚೆ ಅಂದರೆ ೩೦ ವರ್ಷಗಳ ಹಿಂದೆ ಜನರಿಗೆ ಈ ಬಾವಿಯ ನೀರೇ ಸಿಗುತ್ತಿತ್ತು.

ಕಿತ್ತೂರ ಹಿರೇಮಲ್ಲಸೆಟ್ಟರ ದೇವರ ಪೂಜೆಯ ಕೋಣೆಯು ಈಗ ಅಂಚೆ ಕಚೇರಿಯ ಖಜಾನೆ ಕೋಣೆ ಇರುವಲ್ಲಿ ಇತ್ತು. ಶಿವಭಕ್ತರಾದ ಅವರು ಪರಮೇಶ್ವರನನ್ನು ಪೂರ್ವದಪ್ರಥಮ ಗೋಡೆಗೆ ಇಟ್ಟು ಆರಾಧಿಸುತ್ತಿದ್ದರು. ಈ ಗೋಡೆಯಲ್ಲಿ ೧೯೪೭ ಜುಲೈರಂದು ಇಟ್ಟಿರುವ ಟ್ರೆಜರಿ ಇನ್ನೂ ಅಲ್ಲಿಯೇ ಇದೆ. ಆಗ ಇಲ್ಲಿಯ ಪೋಸ್ಟಲ್ ಸುಪರಿಂಟೆಂಡೆಂಟರಾದ ಶ್ರೀ ಕೆ. ಶಂಕರರಾವ ಅವರು ಈ ಟ್ರೆಜರಿಯನ್ನು ಸರ್ಟಿಫಿಕೇಟ್ ಪೋಸ್ಟಲ್ ಆರ್ಡರ ಇಡಲು ಈ ಗೋಡೆಯಲ್ಲಿ ಕೂಡ್ರಿಸಬೇಕೆಂದು ಆಜ್ಞೆಯಿತ್ತರು. ಒಬ್ಬ ಗೋಡೆ ಕಟ್ಟುವವನು ಗೋಡೆಯನ್ನು ಒಡೆದಾಗ, ಗೋಡೆಯಲ್ಲಿ "ಓಂ ನಮಃ ಶಿವಾಯ" ಎಂದು ಬರೆದ ಏಳು ಇಂಚಿನ ಚಚ್ಚೌಕದ ಏಳು ಕೆಂಪು ಕಲ್ಲುಗಳು ಕಂಡು ಬಂದವು. ಈ ಕೆಂಪು ಬಾದಾಮಿ ವರ್ಣದ ಕಲ್ಲುಗಳ ಮೇಲಿನ ಈ ಲಿಪಿ ಮಳಗನ್ನಡದ್ದು. ಕೊರೆದ ಅಕ್ಷರಗಳಲ್ಲಿ ಹಳದೀ ಬಣ್ಣ ತುಂಬಿತ್ತು. ಶತಮಾನ

ಗಳುರುಳಿದರೂ ಅಕ್ಷರಗಳ ಈ ಬಂಗಾರ ಬಣ್ಣ ಹಾಗೆಯೇ ಇತ್ತು. ಗೋಡೆ ಬಿಡಿಸಿದಾಗ, ಉಳಿದ ಎಲ್ಲ ವಸ್ತುಗಳು ಕೆಟ್ಟರೂ ಈ ಏಳು ಕಲ್ಲು ಸಮವಾಗಿ ಹೊರಗೆ ಬಂದವು !

ಟ್ರೇಜರಿ ಕೂಡ್ರಿಸುವಾಗ ಗೋಡೆ ಕಟ್ಟುವವನು ತಾನು ತಂದ ಆಳತೆಯ ಇಟ್ಟಂಗಿಗಳಿಂದ, ಸಿಮೆಂಟು ಕಾಂಕ್ರೀಟ ಮಾಡುವವನಿದ್ದನು. ಆ ಸಮಯದಲ್ಲಿ ಪೋಸ್ಟ್‌ಮಾಸ್ತರರಾಗಿದ್ದ ಶ್ರೀ ಆಯ್. ಬಿ. ಕಂಪ್ಲಿಯವರ ಆದೇಶದಂತೆ ಈ ಕೆಲಸದ ಮೇಲ್ವಿಚಾರಣೆಯಲ್ಲಿ ನಿಂತ ನಾನು, ಏಳು ಕೆಂಪು ಕಲ್ಲುಗಳನ್ನು ಸರಿಯಾಗಿ "ಓಂ ನಮಃ ಶಿವಾಯ" ಬರುವಂತೆ ಟ್ರೇಜರಿಯ ತಲೆಯ ಮೇಲೆ ಇಟ್ಟು, ಇಟ್ಟಂಗಿ ತುಂಡು ಗಳನ್ನು ಹಿಂದೆ ಇಡಿಸಿ, ಕಾಂಕ್ರೀಟ ಕೆಲಸ ಮಾಡಿಸಿದೆನು.

ದೇವರಿದ್ದ ಧಾರವಾಡ ಅಂಚೆ ಕಛೇರಿಯು ಸದ್ಧರ್ಮ ಸತ್ಯಪಾಲಕರ ಮನೆಯು. ಅದಕ್ಕಾಗಿ ಎಲ್ಲಿ ಎಂಥ ಮೋಸಗಳಾದರೂ ಈ ಕಛೇರಿಯಲ್ಲಿ ಮೋಸದ ಮಾತಿಲ್ಲ.

ಹಿರೇಮಲ್ಲ ಸೆಟ್ಟರ ದೇವರ ಮನೆಯನ್ನು ತರುವಾಯ ಆಳಿದ ದೊರೆ ಮಲ್ಲಸರ್ಜ, ತನ್ನ ಆಳಿಕೆಯಲ್ಲಿ (೧೭೮೨ ರಿಂದ ೧೮೧೬) ದೇವರ ಪೂಜೆ ಮತ್ತು ಪತ್ರ ವ್ಯವಹಾರ-ಗಳಿಗೆ ಉಪಯೋಗಿಸುತ್ತಿದ್ದನು. ಈ ಸ್ಥಳದಿಂದಲೇ ಅವರು ಪೇಶ್ವೆ, ಸಿಂಧೆ, ಹೋಳಕರ ಮತ್ತು ಟೀಪುಸುಲ್ತಾನ, ಅವರ ಸಂಗಡ ಪತ್ರ ವ್ಯವಹಾರ ಮಾಡುತ್ತಿದ್ದರು. ಇದಕ್ಕಾಗಿ ಅವರು ನಾಲ್ಕು ಖಾನೆಗಳಿದ್ದ ಸಾಗವಾನಿ ಪೆಟ್ಟಿಗೆ ಇಟ್ಟಿದ್ದರು. ಈ ಪೆಟ್ಟಿಗೆಯು ದೊಡ್ಡದಿದ್ದು ದಪ್ಪವಾದ ಹಲಗೆಗಳಿಂದ ಮಾಡಲ್ಪಟ್ಟಿತ್ತು. ಈ ನಾಲ್ಕು ಖಾನೆಗಳ ಪೆಟ್ಟಿಗೆಯನ್ನೇ ತರುವಾಯ ಬಂದ ಪೊಲಿಟಿಕಲ್ ಏಜೆಂಟ ಥ್ಯಾಕರೆ ತನ್ನ ಪತ್ರ ವ್ಯವಹಾರಕ್ಕೆ ಉಪಯೋಗಿಸಿ, ಖಾನೆಗಳ ಮಧ್ಯದಲ್ಲಿ ತೆಳ್ಳನ್ನ ಹಲಗೆಗಳನ್ನು ಕೂಡಿಸಿ ಎಂಟು ಖಾನೆಗಳನ್ನಾಗಿ ಮಾಡಿದನು. ಅವನು ಆ ಖಾನೆಗಳಿಗೆ ಕಬ್ಬಿಣದ ಪಟ್ಟಿಗಳನ್ನು ಕೂಡ್ರಿಸಿ, ೧) ಕರ್ನಲ್, ಬೆಳಗಾಂವಿ. ೨) ಲೆಫ್ಟಿನಂಟ ಕರ್ನಲ್. ೩) ಆಡಳಿತಾಧಿಕಾರಿ. ಬೆಳಗಾಂವಿ ೪) ಮುಖ್ಯ ಕಾರ್ಯದರ್ಶಿ, ಮುಂಬಯಿ ೫) ಕ್ಯಾಪ್ಟನ್, ಮದ್ರಾಸ್. ೬) ಪೇಶ್ವೆ, ೭) ಸಿಂಧೆ. ೮) ಹೋಳಕರ ಹೀಗೆ ಎಂಟು ಜನರ ಪತ್ರ ವ್ಯವಹಾರಕ್ಕೆ ಮೀಸಲಾಗಿರಿಸಿದನು. ಈ ಪೆಟ್ಟಿಗೆಯು ಧಾರವಾಡ ಅಂಚೆ ಕಛೇರಿಗೆ ಸಾರ್ಟಿಂಗ ಕೇಸ (Sorting Case) ಎಂದು ೧೯೬೧ ರ ವರೆಗೆ ಇದ್ದು, ಆ ಮೇಲೆ ಅದನ್ನು ಅದರ ಅಳತೆಗೆ ತಕ್ಕಂತೆ "ಮನಿ ಆರ್ಡರ ಪೇಡ ವೋಚರ" (Paid Vouchers) ಸಾರ್ಟಿಂಗ ಕೇಸ ಎಂದು ಉಪಯೋಗಿಸಲಾಯಿತು.

ಪೊಲಿಟಿಕಲ್ ಏಜಂಟ ಥ್ಯಾಕರೆ ಬಂದರೂ ಕಿತ್ತೂರ ದೊರೆಗಳು ಅವನಿಗೆ ಬೇಕಾದ ಆಶ್ರಯ ಕೊಟ್ಟು, ವಾಸಿಸಲು ತಮ್ಮ ಮನೆಗೆ ಹೊಂದಿದ ಮನೆಯನ್ನು ವಿಸ್ತರಿಸಿ ಕೊಟ್ಟರು. ಥ್ಯಾಕರೆಯ ಉದ್ದೇಶವೇನೇ ಇದ್ದರೂ, ವಿಸ್ತರಿಸಿದ ಮನೆಯು ಬಂದ ಆಂಗ್ಲರ ಪ್ರಾರ್ಥನಾ ಮಂದಿರವಾಗಿತ್ತು. ಇದರ ಸಮೀಪದಲ್ಲಿ ಹೊಸ ಆ್ಯಂಗ್ಲಿಕನ್ ಚರ್ಚ (Anglican Church) ಕಟ್ಟಿದಾಗ, ಈ ಮನೆಯನ್ನು ೧೮೬೪ ರಲ್ಲಿ ಅಂಚೆ ತಂತಿ ಕಛೇರಿಗೆ ಕೊಡಲಾಯಿತು. ಮೂರು ಶತಮಾನಗಳ ಹಿಂದೆ ಹಿರೇಮಲ್ಲಸೆಟ್ಟರ

ಈ ಮನೆಯು ಪತ್ರ ವ್ಯವಹಾರದ ಮನೆಯಾಗಿದ್ದು ಮತ್ತೆ ಪತ್ರ ವ್ಯವಹಾರಕ್ಕೆ ಉಪಯೋಗವಾದದ್ದು ದೇವನ ಇಚ್ಛೆಯು! ೧೮೬೪ ರಲ್ಲಿ ಇದು ಧಾರವಾಡ ಮುಖ್ಯ ಅಂಚೆ ಕಛೇರಿಯಾಯಿತು. ಆದರೆ ಮೂಲ ಮನೆಯು ಕಿತ್ತೂರ ರಾಜ ಮನೆತನದವರದಿದ್ದು ಪುನಃ ೪—೧೦—೧೯೬೧ ರಂದು ಆ ಮನೆತನದ ಹೆಸರನ್ನೇ ಉಳಿಸಿಕೊಂಡ ರೀತಿಯಲ್ಲಿ "ಕಿತ್ತೂರ ಚೆನ್ನಮ್ಮ ಪಾರ್ಕ" ಎಂದು ಹೆಸರು ಹೊಂದಿತು. ಇದು ಅವರು ನಂಬಿ ನಡೆದುಕೊಂಡ ಸರ್ವಶಕ್ತ ಶಿವನಲೀಲೆ!

ವಿಶ್ವಾಸ, ಪ್ರೇಮದಿಂದ ನಡೆದುಕೊಂಡರೂ ಆಂಗ್ಲ ಥ್ಯಾಕರೆ ಅವರನ್ನು ಮೋಸಗೊಳಿಸಿ, ಧಾರವಾಡದಲ್ಲಿಯೇ ಮಣ್ಣುಗೂಡಿದನು. ಆತನ ಗೋರಿ ಅಂಚೆ ಕಛೇರಿಯ ಸಮೀಪದಲ್ಲಿ ಇದ್ದು. ಅಲ್ಲಿ ಸುಂದರ ಉಪವನ ನಿರ್ಮಾಣವಾಯಿತು. ಆದರೆ ಮುಂದೆ ಅದೂ "ಕಿತ್ತೂರ ಚೆನ್ನಮ್ಮ ರಾಣಿ ಉಪವನ" ಎಂದು ಹೆಸರು ಪಡೆದುದು ಯೋಗಾಯೋಗ.

"ಕಿತ್ತೂರ ಚೆನ್ನಮ್ಮ ಪಾರ್ಕ" ಅಂಚೆ ಕಛೇರಿಯು ಜಿಲ್ಲೆಯ ಮುಖ್ಯ ಕಛೇರಿಯಾಗಿದ್ದರೂ, ಆಧುನಿಕ ಅವಶ್ಯಕತೆಗಳನ್ನು ಪೂರೈಸಲು ಅಸಮರ್ಥವಿತ್ತು. ಇದಕ್ಕೆ ಕಾರಣ ಆಗಿನ ಮುಂಬೈ ಸರ್ಕಾರಿನ ಅಲಕ್ಷ ಭಾವ. ಆದರೆ ನವ ಮೈಸೂರು ರಾಜ್ಯ ರೂಪುಗೊಂಡ ಬಳಿಕ ಮೈಸೂರು ಸರ್ಕಲ್ ಪೋಸ್ಟ್ ಮಾಸ್ತರ ಜನರಲ್ ಶ್ರೀ ಕೆ. ವಿ. ಪೈರವರು ಈ ಕಛೇರಿಗೆ ಭವ್ಯ ಕಟ್ಟಡ, ಸುಂದರ ಉಪವನ, ಸಿಮೆಂಟ್ ರಸ್ತೆ ತಕ್ಷಣ ಆಗಲೇಬೇಕೆಂದರು. ಉಪವನ, ರಸ್ತೆಗಳು ತಕ್ಷಣ ತಯಾರಾದವು. ಅದರಂತೆಯೇ ಕಟ್ಟಡವೂ ಆಗುವುದಿತ್ತು. ಆದರೆ ಬಿರೇಮಲ್ಲಶೆಟ್ಟರ ದೊರೆಗಳ ಮನೆಯನ್ನು ಮುರಿಯುವುದು ಆ ಶಿವನ ಮನಸ್ಸಿಗೆ ಬರಲಿಲ್ಲವೇನೋ. ಬಂದ ಇಂಜಿನಿಯರ ಸಿವಿಲ್ ವಿಂಗದವರು ಹೊಸ ಕಟ್ಟಡವನ್ನೇ ಶಿಫಾರಸು ಮಾಡಿ, ನಗರದ ಮಧ್ಯದಲ್ಲಿ ಸ್ಟೇಶನ್ ರಸ್ತೆಯಲ್ಲಿ, ಕಟ್ಟಡವನ್ನು ಪೂರ್ತಿಗೊಳಿಸಿದರು.

ಮೈಸೂರು ಸರ್ಕಾರದಿಂದ ಧಾರವಾಡವನ್ನು ಹಿರಿಯ ವಲಯ (Senior Division) ಮಾಡಲಾಯಿತು. ಇಲ್ಲಿಗೆ ಬಂದ ಹಿರಿಯ ಅಧಿಕಾರಿಗಳು (Senior Supdts), ವಿಶಾಲ ಮನದ, ಉದಾರ ಧೋರಣೆಯ ನುರಿತ ವ್ಯಕ್ತಿಗಳಾಗಿದ್ದರು. ಸಾಧ್ಯವಾದಷ್ಟು ಒಳಿತನ್ನೇ ಧಾರವಾಡ ವಿಭಾಗಕ್ಕೆ ಮಾಡಿದರು. ಸರ್ವಶ್ರೀ ಜಿ. ಪಿ. ಕಿಣಿ, ನರಸಿಂಹನ್, ಕೆ. ಎನ್. ಭಟ್ಟ ಅವರನ್ನು ನೆನೆಯಬೇಕು.

ಧಾರವಾಡದ ಮುಖ್ಯ ಅಂಚೆ ಕಛೇರಿಗೆ ಬಂದ ಮತ್ತು ಬರುವ ಪೋಸ್ಟಮಾಸ್ತರರಾದರೂ ಅಲ್ಲಿಯ ವಾತಾವರಣದ ಮಹಿಮೆಯೇನೋ ಎಂಬಂತೆ ದೇವರ ಧ್ಯಾನದಿಂದ ದಿನ ನಿತ್ಯದ ಕೆಲಸಗಳನ್ನು ಪ್ರಾರಂಭಿಸುವರು. ಮೊದಲು ದೇವರ ಧ್ಯಾನ, ತರುವಾಯ ಕರ್ತವ್ಯ. ಇವರಲ್ಲಿ ಭಾರತೀಯ ಖ್ಯಾತಿ ಗಳಿಸಿರುವ ಪೋಸ್ಟಮಾಸ್ತರ ಬಿರೇಮಠ. ಕೌಲಗಿಯವರನ್ನು ನೆನೆಸತಕ್ಕದ್ದು. ಅದರಂತೆಯೇ ಹೆಚ್ಚಿನ ಹುದ್ದೆಗಳಲ್ಲಿ

ಸೇವೆ ಮಾಡುತ್ತಿರುವ ಸರ್ವಶ್ರೀ ಜಿ. ಜಿ. ಗಲಗಲಿ, ಬಿ. ಆರ್. ಕಟ್ಟಿ, ಆರ್. ಎಮ್. ಜೋಶಿ ಅವರನ್ನು ಧಾರವಾಡವು ಎಂದಿಗೂ ಮರೆಯಲಾರದು.

ಗೋವಾ ಸ್ವತಂತ್ರವಾದಾಗ ಅಲ್ಲಿ ಭಾರತ ಅಂಚೆ ತಂತಿ ಪದ್ಧತಿಯನ್ನು ಸ್ಥಾಪಿಸಲಿಕ್ಕೆ ಹೆಚ್ಚಿನ ಶ್ರಮ ತೆಗೆದುಕೊಂಡುದು ಧಾರವಾಡ ವಿಭಾಗವೇ.

ಎಲ್ಲವೂ ಆ ಶಿವನ ಲೀಲೆ. ಶಿವನನ್ನು ನಂಬಿದ ಹಿರೇಮಲ್ಲಸೆಟ್ಟರ ಇಚ್ಛೆ. ಅವರ ಇಚ್ಛೆಯಂತೆ ಧಾರವಾಡ ಮುಖ್ಯ ಅಂಚೆ ಕಛೇರಿಯು ಅಕ್ಟೋಬರ ೪-೧೯೭೧ ರಂದು "ಕಿತ್ತೂರ ಚೆನ್ನಮ್ಮ ಪಾರ್ಕ, ಅಂಚೆ ತಂತಿ ಕಛೇರಿ" ಆಯಿತು. ಧರ್ಮರಕ್ಷಕರಾದ ಹಿರೇಮಲ್ಲಶೆಟ್ಟರನ್ನು ಅದೇ ಧರ್ಮವು ಅವರನ್ನು ರಕ್ಷಿಸಿ, ಅಮರರನ್ನಾಗಿ ಮಾಡಿ-ರುವುದು.

★ **ಜಿ. ಆರ್. ಶಾನಭಾಗ**

ಅರುವತ್ತು ಮೂರು ಪುರಾತನರ ಚರಿತ್ರೆ

ಕಾರೈಕ್ಕಾಲ್ ಅಮ್ಮೆ

(ಹಿಂದಿನ ಸಂಚಿಕೆಯಿಂದ)

ಶಿವಭಕ್ತಾಗ್ರಣಿಗಳಾದ ಅರುವತ್ತುಮೂರು ಪುರಾತನರ ಚರಿತ್ರೆಯನ್ನು ಹೇಳುವ ಆದಿ ಗ್ರಂಥ ತಮಿಳು ಭಾಷೆಯಲ್ಲಿರುವ "ಪೆರಿಯ ಪುರಾಣಂ" ಎಂಬ ಮಹಾ ಕಾವ್ಯ. ಶೇಕ್ಕಿಳಾರ್ ಎಂಬ ಕವಿ ಅದನ್ನು ರಚಿಸಿರುವನು. ಈ ಪುರಾತನರಲ್ಲಿ ಮೂವರು ಮಹಿಳೆಯರು : ಇಶೈಜ್ಞಾನಿಯಾರ್, ಕಾರೈಕ್ಕಾಲಮ್ಮೆ ಮತ್ತು ಮಂಗಯರ್ಕರಸಿ. ಕಾರೈಕ್ಕಾಲಮ್ಮೆಯ ಚರಿತ್ರೆಯನ್ನು ಪೆರಿಯ ಪುರಾಣದಲ್ಲಿರುವಂತೆಯೇ ಇಲ್ಲಿ ವರ್ಣಿಸಲಾಗಿದೆ.

ಚೋಳ ದೇಶದ ಕಾರೈಕ್ಕಾಲ್ ಎಂಬ ಪಟ್ಟಣದಲ್ಲಿ ಧನದತ್ತನೆಂಬ ವಣಿಕ ಶ್ರೇಷ್ಠನಿದ್ದನು. ಕಡಲು ಮಾರ್ಗದ ವ್ಯಾಪಾರದಿಂದ ಅತಿಶಯವಾಗಿ ಲಾಭಗಳಿಸುತ್ತಿದ್ದನು. ಪೂರ್ವ ಜನ್ಮದ ಸುಕೃತದಿಂದ ಅವನಿಗೆ ಒಂದು ಹೆಣ್ಣು ಮಗು ಹುಟ್ಟಿತು. ಪುನಿತವತಿ ಎಂಬ ಆ ಮಗು ಚಿಕ್ಕಂದಿನಿಂದಲೆ ಪರಶಿವನಲ್ಲಿ ಅಗಾಧ ಭಕ್ತಿಯನ್ನು ತೋರುತ್ತಿದ್ದಳು. ಶಿವಭಕ್ತರನ್ನು ಕಂಡರೆ ಅವರಿಗೆರಗಿ ಸ್ವಾಗತಿಸಿ ಅತಿಥಿ ಸತ್ಕಾರ ಮಾಡುವಳು. ಧನದತ್ತನು ತನ್ನ ಮಗಳಿಗೆ ವಿವಾಹ ಯೋಗ್ಯ ಕಾಲ ಬರುತ್ತಲೆ ಅವಳನ್ನು ನಾಗಪಟ್ಟಣದ ಪರಮದತ್ತನೆಂಬ ವರ್ತಕ ಪುತ್ರನಿಗೆ ಮದುವೆ ಮಾಡಿ ಕೊಟ್ಟನು. ತನ್ನ ಮನೆಯ ಬಳಿಯಲ್ಲೇ ರಮ್ಯವಾದ ಸೌಧವೊಂದನ್ನು ಕಟ್ಟಿಸಿ ಅದರಲ್ಲಿ ಮಗಳನ್ನೂ ಅಳಿಯನನ್ನೂ ಸಂಸಾರವಿರಿಸಿದನು. ಅಳಿಯನಿಗೆ ಬೇಕಾದ ದ್ರವ್ಯವನ್ನೂ ಕೊಟ್ಟು ಅವನು ಸ್ವತಂತ್ರವಾಗಿ ವ್ಯಾಪಾರ ಮಾಡುವಂತೆ ಅನುಮಾಡಿದನು. ಹೊಸ ದಂಪತಿಗಳು ಪರಸ್ಪರ ಪ್ರೀತಿಯಿಂದಲೂ ಅನ್ಯೋನ್ಯದಿಂದಲೂ ಸುಖಜೀವನ ನಡೆಸುತ್ತಿದ್ದರು. ಗೃಹಸ್ಥಾಶ್ರಮದಲ್ಲಿದ್ದು ದಾನ ಧರ್ಮಗಳನ್ನು ಕ್ರಮವರಿತು ಮಾಡುತ್ತಿದ್ದರು. ಹೀಗಿರುವಲ್ಲಿ ಒಂದು ದಿನ ವ್ಯಾಪಾರ ನಿಮಿತ್ತವಾಗಿ ಪರಮದತ್ತನ ಬಳಿಗೆ ಬಂದವನೋರ್ವನು ಎರಡು ಮಾವಿನ ಹಣ್ಣುಗಳನ್ನು ತಂದು ಅವನಿಗೆ ಅರ್ಪಿಸಿದನು. ಪರಮದತ್ತನು ಆಳಿನ ಕೈಯಲ್ಲಿ ಆ ಹಣ್ಣುಗಳನ್ನು ತನ್ನ ಮಡದಿಯ ಬಳಿ ಕಳುಹಿಸಿ ಕೊಟ್ಟನು. ಕೆಲ ಹೊತ್ತಿನ ಮೇಲೆ ಹಸಿದಿದ್ದ ಒಬ್ಬ ಶಿವ ಭಕ್ತನು ಅವಳ ಮನೆಯ ಬಾಗಿಲಿಗೆ ಬಂದನು. ಪುನಿತವತಿ ಶಿವಭಕ್ತನನ್ನು ಮನೆಯೊಳಗೆ ಬರಮಾಡಿಕೊಂಡು ಕೈ ಕಾಲು ತೊಳೆಯಲು ನೀರು ಕೊಟ್ಟು ಪೀಠದಲ್ಲಿ ಕುಳ್ಳಿರಿಸಿ ಅವರ ಆರೋಗಣೆಗೆ ಇಕ್ಕಿದಳು. ಅಡಿಗೆ ಇನ್ನೂ ಪೂರ್ತಿಯಾಗಿರಲಿಲ್ಲವಾದ ಕಾರಣ ವ್ಯಂಜನ ಯಾವುದೂ ಸಿದ್ಧವಿರಲಿಲ್ಲ. ತನ್ನ ಗಂಡನು ಕಳುಹಿಸಿದ್ದ ಮಾವಿನ ಹಣ್ಣುಗಳಲ್ಲಿ ಒಂದನ್ನು ಕುಯ್ದು ಶಿವಭಕ್ತನಿಗೆ ಬಡಿಸಿದಳು. ಬಂದಿದ್ದ ಶಿವಭಕ್ತನು ಬಹಳ ಹಸಿದಿದ್ದನು. ಆನಂದಿಂದ

ಅಷ್ಟೇ ಸಾಕೆಂದು ಸಂತೋಷಪಟ್ಟು ಅನ್ನವನ್ನೂ ಮಾವಿನ ಹಣ್ಣನ್ನೂ ಕಲಿಸಿ ಆರೋಗಣಿಸಿ ಪುನಿತವತಿಯನ್ನು ಹರಸಿ ಬೀಳ್ಕೊಂಡು ಹೋದನು.

ತನ್ನ ಕಾರ್ಯ ಕಲಾಪಗಳನ್ನು ಮುಗಿಸಿಕೊಂಡು ಪರಮದತ್ತನು ನಡುಹಗಲಿಗೆ ಮನೆಗೆ ಊಟಕ್ಕೆ ಬಂದನು. ಸ್ನಾನಾದಿಗಳನ್ನು ಪೂರೈಸಿ ಊಟಕ್ಕೆ ಕುಳಿತನು ಭಕ್ತಿ ಶ್ರದ್ಧೆಯಿಂದಲೂ, ಪ್ರೀತಿಯಿಂದಲೂ ಪುನಿತವತಿ ತನ್ನ ಗಂಡನಿಗೆ ಊಟಕ್ಕೆ ಬಡಿಸಿ ಊಪಚರಿಸಿದಳು. ಉಳಿದಿದ್ದ ಮತ್ತೊಂದು ಮಾವಿನ ಹಣ್ಣನ್ನು ಕುಯ್ದು ಗಂಡನಿಗೆ ಬಡಿಸಿದಳು. ಹಣ್ಣನ್ನು ತಿಂದ ಪರಮದತ್ತನು ಅದು ಬಹಳ ಸವಿಯಾಗಿರುವುದನ್ನು ಕಂಡು ಮತ್ತೊಂದು ಹಣ್ಣನ್ನೂ ತಂದು ಬಡಿಸುವಂತೆ ಹೆಂಡತಿಗೆ ಹೇಳಿದನು. ಈ ಮಾತನ್ನು ಕೇಳಿ ಪುನಿತವತಿ ದಿಗಿಲುಗೊಂಡಳು, ಈಗ ಮತ್ತೊಂದು ಮಾವಿನ ಹಣ್ಣನ್ನು ಎಲ್ಲಿಂದ ತರಲಿ ? ಗರಬಡಿದವಳಂತೆ ಹಾಗೆಯೇ ನಿಂತುಬಿಟ್ಟಳು. ಗಂಡನ ಅಪ್ಪಣೆಯಿಲ್ಲದೆ ಅವನು ಕಳುಹಿಸಿದ ಮಾವಿನ ಹಣ್ಣನ್ನು ಶಿವಭಕ್ತನಿಗೆ ಅರ್ಪಿಸಿದ್ದು ತಪ್ಪಾಯಿತೆಂದು ಎಣಿಸಿದಳು. ಕಳವಳಗೊಂಡಳು. ಗಂಡನಿಗೆ ಈಗ ಯಾವ ಉತ್ತರವನ್ನು ಹೇಳಲಿ ? ಎಂದು ಅಳುಕಿದಳು. ಶಿವನೆ ! ಮಹಾದೇವ ! ನೀನೇ ಈ ಬಿಕ್ಕಟ್ಟಿನಿಂದ ನನ್ನನ್ನು ಪಾರುಮಾಡಬೇಕೆಂದು ಉಮಾಪತಿಗೆ ಮೊರೆಯಿಟ್ಟಳು. ಭಕ್ತಿಯ ಕರೆಗೆ ಮೃಡನು ಓಗೊಟ್ಟಂತೆ ಪುನಿತವತಿಯ ಕೈಯಲ್ಲಿ ಒಂದು ಮಾವಿನ ಹಣ್ಣು ಬಿತ್ತು. ಅದನ್ನು ಕಂಡು ಪುನಿತವತಿ ಹರ್ಷದಿಂದ ಆ ಹಣ್ಣನ್ನು ತನ್ನ ಗಂಡನ ಎಡೆಯಲ್ಲಿ ಬಡಿಸಿದಳು. ಪರಮದತ್ತನು ಆ ಹಣ್ಣನ್ನು ತಿಂದನು. ಮೊದಲು ತಿಂದ ಮಾವಿನ ಹಣ್ಣಿಗಿಂತ ಇದು ಇನ್ನೂ ಹೆಚ್ಚು ರುಚಿಕರವಾಗಿತ್ತು. ದೇವಾಮೃತದಂತಿತ್ತು. ಪರಮದತ್ತನು ಬಹಳ ಅಚ್ಚರಿಗೊಂಡನು. "ಈ ಹಣ್ಣು ಸುಧೆಯಂತಿರುವುದು. ಮೊದಲು ಬಡಿಸಿದ ಹಣ್ಣಿಗಿಂತಲೂ ಬಹಳ ಸವಿಯಾಗಿರುವುದು. ಇದು ನಾವು ಕಳಿಸಿಕೊಟ್ಟ ಮಾವಿನ ಹಣ್ಣಲ್ಲ. ಮೂರು ಲೋಕದಲ್ಲೂ ಇಂಥ ಮಾವಿನ ಹಣ್ಣನ್ನು ಪಡೆಯುವುದು ದುರ್ಲಭ. ಈ ಹಣ್ಣು ಎಲ್ಲಿಯದು ? ಇದು ನಿನಗೆ ಹೇಗೆ ಸಿಕ್ಕಿತು ?" ಎಂದು ತನ್ನ ಸತಿಯನ್ನು ಬೆಸಗೊಂಡನು.

ಈ ಮಾತುಗಳನ್ನು ಕೇಳಿದ ಪುನಿತವತಿಗೆ ದೆವ್ವ ಬಡಿದಂತಾಯಿತು. ಏನು ಉತ್ತರ ಕೊಡಬೇಕೆಂದು ಅವಳಿಗೆ ಹೊಳೆಯಲಿಲ್ಲ. ಮೃಡನು ತನಗೆ ಅನುಗ್ರಹಿಸಿ ಈ ಮಾವಿನ ಹಣ್ಣನ್ನು ದಯಪಾಲಿಸಿದನು ಎಂದು ಹೇಳುವುದು ಸೂಕ್ತವಲ್ಲ. ಉತ್ತರಿಸದೆಯೇ ಇರುವದು ಸರಿಯಲ್ಲ. ಸತ್ಯವನ್ನು ಮರೆ ಮಾಚಿ ಹುಸಿಯನ್ನು ಹೇಳುವುದು ತಕ್ಕುದಲ್ಲ. ಸತ್ಯವನ್ನೇ ನುಡಿವುದು ಸರಿಯು ಕರ್ತವ್ಯವೆಂದು ತಿಳಿದು, ಪತಿಯ ಬಳಿ ಬಂದು "ನೀವು ಕಳುಹಿಸಿಕೊಟ್ಟ ಮಾವಿನ ಹಣ್ಣುಗಳಲ್ಲಿ ಒಂದನ್ನು ಹಸಿದು ಬಂದ ಓರ್ವ ಶಿವ ಭಕ್ತನಿಗೆ ಅರ್ಪಿಸಿದೆನು. ನೀವು ಆ ಹಣ್ಣನ್ನು ತರುವಂತೆ ಹೇಳಿದಾಗ, ಏನು ಮಾಡುವದೆಂದು ತೋಚದೆ ಪರಶಿವನಲ್ಲಿ ಮೊರೆಯಿಟ್ಟುಕೊಂಡೆ. ಭಕ್ತವತ್ಸಲನಾದ ಉಮಾಪತಿಯ ಅನುಗ್ರಹದಿಂದ ಈ ಹಣ್ಣು ನನ್ನ ಕೈಗೆ ಬಂತು" ಎಂದು

ಉತ್ತರಿಸಿದಳು. ಪರಮದತ್ತನು ಈ ಮಾತನ್ನು ನಂಬದಾದನು. "ಮಹೇಶ್ವರನ ಕೃಪೆಯಿಂದ ನಿನಗೆ ಮಾವಿನ ಹಣ್ಣು ದೊರೆತದ್ದು ನಿಜವಾದರೆ ಅದರಂತೆಯೇ ಮತ್ತೊಂದು ಹಣ್ಣನ್ನು ಈಗ ತರಿಸು, ನೋಡುವ!" ಎಂದನು. ಇದನ್ನು ಕೇಳಿ ಪುನೀತವತಿ ಬಹಳವಾಗಿ ಅಳುಕಿದಳು. ಸಿಡಿಲು ಬಡಿದಂತಾದಳು. ವಿವಶಳಾಗಿ ಪರಶಿವನಲ್ಲಿ ಮತ್ತೊಮ್ಮೆ ಮೊರೆಯಿಟ್ಟಳು. "ಒಂದು ಹಣ್ಣನ್ನು ಈಗ ನನಗೆ ದಯಪಾಲಿಸದಿದ್ದರೆ ನನ್ನ ನುಡಿ ಹುಸಿಯಾಗುವುದು. ಆದುದರಿಂದ ಇನ್ನೊಂದು ಹಣ್ಣನ್ನು ನನಗೆ ಅನುಗ್ರಹಿಸಬೇಕು." ಎಂದು ಸೆರಗೊಡ್ಡಿ ಬೇಡಿದಳು. ಶಶಿಧರನು ತನ್ನ ಭಕ್ತೆಯ ಪ್ರಾರ್ಥನೆಯನ್ನು ಮನ್ನಿಸಿ ಮತ್ತೊಂದು ಮಾವಿನ ಹಣ್ಣನ್ನು ಅವಳಿಗೆ ದಯಪಾಲಿಸಿದನು. ಆ ಹಣ್ಣನ್ನು ತಂದು ಪುನೀತವತಿ ತನ್ನ ಗಂಡನ ಕೈಗೆ ಕೊಟ್ಟಳು. ಅವನು ಅದನ್ನು ತೆಗೆದುಕೊಂಡು ನೋಡಿ ಅಚ್ಚರಿಗೊಂಡನು. ಏನಾಶ್ಚರ್ಯ! ಅವನ ಕೈಯಲ್ಲಿದ್ದಂತೆಯೇ ಆ ಮಾವಿನ ಹಣ್ಣು ಮಾಯವಾಯಿತು.

ಈಗ ಪರಮದತ್ತನು ಅಂಜಿಕೆಯಿಂದ ನಡುಗಿದನು. ಅವನ ಮನಸ್ಸು ನೆಲೆಗೆಟ್ಟಿತು. "ಪರಮಶಿವನ ಅನುಗ್ರಹವನ್ನು ಪಡೆದ ಈ ಮಹಾರತ್ನವು ಮಾನವ ಕೋಟಿಗೆ ಸೇರಿದವಳಲ್ಲ. ಈಕೆಯು ದೈವವೇ ಇರಬೇಕು" ಎಂದು ಬಗೆದು ತಳಮಳಗೊಂಡನು. ಇನ್ನು ಮೇಲೆ ಈಕೆಯೊಡನೆ ಸಂಸಾರ ನಡೆಸುವುದು ತಕ್ಕುದಲ್ಲವೆಂದು ನಿರ್ಧರಿಸಿದನು. ತನ್ನ ಅಭಿಪ್ರಾಯವನ್ನು ಯಾರಿಗೂ ತಿಳಿಯಗೊಡದೆ ಪುನೀತವತಿಯ ಸಂಪರ್ಕವನ್ನು ತೊರೆದು ವರ್ತಿಸುತ್ತಿದ್ದನು.

ಪರಮದತ್ತನ ಅಗಲಿಕೆ

ಹೀಗೆ ಒಳಗೂ ಹೊರಗೂ ತನ್ನ ಸತಿಯೊಡನೆ ಸೇರದೆ ಎಷ್ಟು ಕಾಲ ಕಳೆಯಲು ಸಾಧ್ಯ? ಪರಮದತ್ತನು ಈಗ ಪುನೀತವತಿಯನ್ನು ದೇವಿಯಂತೆ ಭಾವಿಸುತ್ತಿದ್ದನು. ಅವಳ ಬಳಿ ಸಾರಲೂ ಸಹ ಹೆದರಿದನು. ದೇವಿಯ ಜತೆ ಸಹ ಬಾಳ್ವೆ ನಡೆಸುವುದೆಂತು? ತಾನು ದೂರ ಹೋಗಿ ಬಾಳಲೆಳಸಿದನು. ದೊಡ್ಡದೊಂದು ಹಡಗನ್ನು ನಿರ್ಮಿಸಿ ವ್ಯಾಪಾರಕ್ಕಾಗಿ ಸಮುದ್ರವನ್ನು ದಾಟಿ ದೇಶಾಂತರಕ್ಕೆ ಸರಕುಗಳನ್ನು ಒಯ್ದು ಲಾಭಗಳಿಸುವೆನೆಂದು ಬಂಧುಜನರಿಗೂ ಪುರಜನರಿಗೂ ತಿಳಿಸಿದನು. ಬೆಲೆ ಹೋಗುವ ಸರಕುಗಳನ್ನು ಹಡಗಿನಲ್ಲಿ ತುಂಬಿ ನಾವಿಕರನ್ನು ನಿಯಮಿಸಿಕೊಂಡು ಒಂದು ಶುಭದಿನದಲ್ಲಿ ಕಡಲ ಪ್ರಯಾಣವನ್ನು ಬೆಳೆಸಿದನು. ಕೆಲವು ದಿನಗಳ ತರುವಾಯ ತನ್ನ ಗಮ್ಯಸ್ಥಾನವನ್ನು ತಲುಪಿ ತಾನು ತಂದ ಸರಕುಗಳನ್ನು ಮಾರಿ ಅಪರಿಮಿತ ಸಂಪತ್ತನ್ನು ಗಳಿಸಿದನು. ಅಲ್ಲೇ ಕೆಲಕಾಲವಿದ್ದು, ತಿರುಗಿ ಬರುವಾಗ ಆ ದೇಶದಲ್ಲಿ ಸಿಗುವ ಬೆಲೆ ಬಾಳುವ ಸರಕುಗಳನ್ನು ಹೇರಳವಾಗಿ ಕೊಂಡು ತನ್ನ ದೇಶಕ್ಕೆ ಹಿಂದಿರುಗಿದನು. ಆದರೆ ಅವನು ಚೋಳ ದೇಶಕ್ಕೆ ಹಿಂದಿರುಗದೆ ಪಾಂಡ್ಯ ದೇಶದ ಒಂದು ಕರಾವಳಿ ಪಟ್ಟಣವನ್ನು ಸೇರಿದನು. ಹೊರನಾಡಿನಿಂದ ತಂದ ಸರಕುಗಳನ್ನು ಮಾರಾಟ ಮಾಡಿ ತನ್ನ

ದೊಂದು ವ್ಯಾಪಾರ ಸ್ಥಾನವನ್ನು ಅಲ್ಲಿ ಸ್ಥಾಪಿಸಿಕೊಂಡನು. ಅದೇ ಪಟ್ಟಣದ ವೈಶ್ಯ ಕುಲದ ಚೆಲುವೆಯೊಬ್ಬಳನ್ನು ಮದುವೆಯಾಗಿ ಸುಖದಿಂದಿರುತ್ತಿದ್ದನು. ಅವನಿಗೆ ಒಂದು ಹೆಣ್ಣು ಮಗು ಹುಟ್ಟಿತು. ಆ ಮಗುವಿಗೆ ತನ್ನ ಹಿರಿಯ ಹೆಂಡತಿಯ ಹೆಸರನ್ನಿಟ್ಟು ಮುದ್ದಾಡುತ್ತಿದ್ದನು.

ಮರುಳ್ ರೂಪ ಪಡೆದದ್ದು

ಅತ್ತ ಕಾರೈಕ್ಕಾಲಿನಲ್ಲಿ ಪುನಿತವತಿ ತನ್ನ ಪತಿಯ ಬರವನ್ನು ತವಕದಿಂದ ಇದಿರು ನೋಡುತ್ತಿದ್ದಳು. ಪರಮದತ್ತನು ದೇಶಾಂತರದಿಂದ ಹಿಂದಿರುಗಿ ಬಂದು ಪಾಂಡ್ಯ ದೇಶದ ಪಟ್ಟಣವೊಂದರಲ್ಲಿ ನೆಲೆಸಿ ವ್ಯಾಪಾರ ನಡೆಸುತ್ತಿರುವ ಸುದ್ದಿಯು ಕರ್ಣಾಕರ್ಣಿಯಾಗಿ ಪುನಿತವತಿಯ ಬಂಧು ಬಳಗದವರಿಗೆ ಮುಟ್ಟಿತು. ಅವರು ಪುನಿತವತಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪರಮದತ್ತನಿದ್ದ ಪಟ್ಟಣಕ್ಕೆ ಕೊಂಡೊಯ್ದರು. ಇವರ ಬರವನ್ನು ತಿಳಿದ ಪರಮದತ್ತನು ಬೆದರಿದನು. ಹೇಗೋ ಧೈರ್ಯವನ್ನು ತಂದುಕೊಂಡು ತನ್ನ ಕಿರಿಯ ಹೆಂಡತಿಯನ್ನೂ ಮಗಳನ್ನೂ ಕರೆದುಕೊಂಡು ಪುನಿತವತಿ ತಂಗಿದ್ದ ಸ್ಥಳಕ್ಕೆ ಬಂದನು. ಹಾಗೆ ಬಂದವನೇ ಪುನಿತವತಿಗೆ ಸಾಷ್ಟಾಂಗವೆರಗಿ ದಂಡಪ್ರಣಾಮ ಮಾಡಿದನು. "ನಾನು ತಮ್ಮ ಕೃಪೆಯಿಂದ ಇಲ್ಲಿ ನಲ್ಮೆಯಿಂದ ಬಾಳುತ್ತಲಿರುವೆನು. ಈಕೆಯು ನನ್ನ ಹೆಂಡತಿ, ಈ ಮಗು ನನ್ನ ಮಗಳು. ಇವಳಿಗೆ ತಮ್ಮ ಹೆಸರನ್ನೇ ಇಟ್ಟಿದ್ದೇನೆ" ಎಂದು ನುಡಿದನು. ಇದನ್ನು ಕಂಡು ಪುನಿತವತಿ ಅಳುಕುತ್ತ ತನ್ನ ಬಳಗದವರ ಬಳಿ ಸರಿದುನಿಂತಳು. ಅವರೆಲ್ಲರೂ ನಾಚಿಕೊಂಡರು. ಕೆಲವರು ಪರಮದತ್ತನನ್ನು ನೋಡಿ ಸಿಟ್ಟುಗೊಂಡು, "ನೀನು ನಿನ್ನ ಮಡದಿಯ ಕಾಲಿಗೆ ಎರಗುವುದು ತಗವೋ ? ಹೀಗೇಕೆ ಮಾಡುವಿ ?" ಎಂದು ಕೇಳಿದರು. ಅದಕ್ಕೆ ಪರಮದತ್ತನು "ಈಕೆ ಮಾನವ ಕೋಟಿಗೆ ಸೇರಿದವಳಲ್ಲ. ನಾನು ಒಂದು ದೊಡ್ಡ ಅದ್ಭುತವನ್ನು ಈ ವನಿತಾರತ್ನದಲ್ಲಿ ಕಂಡೆನು. ದೈವಮಾತೆಯೇ ಹೊರತು ಈಕೆ ಮಾನವ ಹೆಣ್ಣಲ್ಲ ಎಂದು ನನಗೆ ಮನದಟ್ಟಾಯಿತು. ಆದಕಾರಣ ನಾನು ಈಕೆಯನ್ನು ಅಗಲಿ ಬೇರಾದೆನು. ಈಕೆಯನ್ನು ನನ್ನ ಮನೆ ದೇವತೆಯೆಂದೇ ಭಾವಿಸುವೆನು. ಇದರಿಂದಲೇ ಈಕೆಯ ಪಾದಗಳಿಗೆ ನಾನೆರಗಿದೆನು. ಹಾಗೆಯೇ ನೀವೆಲ್ಲರೂ ಈಕೆಯನ್ನು ನಮಸ್ಕರಿಸಿರಿ" ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ಅವರೆಲ್ಲರೂ ದಿಗ್ಭ್ರಾಂತರಾದರು. ಪುನಿತವತಿ ದಿಕ್ಕು ತೋಚದೆ ತಳಮಳಿಸಿದಳು. ಮುಕ್ಕಣ್ಣನನ್ನು ಧ್ಯಾನಿಸಿ ಮೌನದಿಂದ ಆತನಲ್ಲಿ ಮೊರೆಯಿಟ್ಟುಕೊಂಡಳು. "ಎಲೈ ಭಕ್ತವತ್ಸಲನೇ ! ನನ್ನ ಪ್ರೀತಿಯ ಗಂಡನಿಗಾಗಿ ಚೆಲುವಿನ ಈ ಪಿರಿತದ ಹೊರೆಯನ್ನು ಇಷ್ಟು ದಿನ ಹೊತ್ತಿದ್ದೆನು. ನನ್ನ ಪತಿಯು ಎಣಿಕೆ ಹೀಗಾದರೆ ಇನ್ನು ನನಗೆ ಈ ಹೊರೆಬೇಡ. ನಿನ್ನ ಅಡಿದಾವರೆಗಳನ್ನು ಸೇವಿಸುವ ಮರುಳ್ ರೂಪವನ್ನು ನನಗೆ ದಯಪಾಲಿಸಬೇಕು."

ಅಚ್ಚರಿಯೋ ಅಚ್ಚರಿ ! ಭಕ್ತರು ಬೇಡಿದ್ದನ್ನು ನೀಡುವ ಕರುಣಾನಿಧಿಯಾದ ಮಹೇಶನ ಕೃಪೆಯಿಂದ ಪುನಿತವತಿ ತನ್ನ ಮಾಂಸ ತುಂಬಿದ ದೇಹ ತೊರೆದು

ಎಲುಬಿನ ಗೂಡಾದಳು. ಬಂಧು ಬಳಗದವರು ಅವಳ ರೂಪವನ್ನು ನೋಡಿ ಭೀತಿಗೊಂಡು ಅವಳಿಗೆ ನಮಸ್ಕರಿಸಿ ಅಲ್ಲಿಂದ ಹೊರಟುಹೋದರು. ಅಂದಿನಿಂದ ಆಕೆಯನ್ನು ಕಾರೈಕ್ಕಾಲಮ್ಮೆ ಎಂದು ಕರೆಯತೊಡಗಿದರು.

ಕಾರೈಕ್ಕಾಲಮ್ಮೆ ಕೈಲಾಸವನ್ನು ತಲುಪಿದ್ದು

ಪಿಶಾಚಿ ರೂಪವನ್ನು ತಳೆದ ಕಾರೈಕ್ಕಾಲ್ ಅಮ್ಮೆ ಮಹಾದೇವನ ಅನುಗ್ರಹದಿಂದ ಹೊಸ ಜ್ಞಾನವನ್ನು ಪಡೆದಳು. ತಿರುಪಾಡುಗಳನ್ನು ಹಾಡುತ್ತ ಕೈಲಾಸ ಪರ್ವತವನ್ನು ತಲುಪಬೇಕೆಂಬ ಹೆಬ್ಬಯಕೆಯಿಂದ ದೂಡಲ್ಪಟ್ಟು ತೀವ್ರಗತಿಯಿಂದ ನಡೆದು ಕೈಲಾಸ ಪರ್ವತವನ್ನು ಐದಿದಳು. ಆ ಪವಿತ್ರ ಸ್ಥಳದಲ್ಲಿ ಕಾಲಿಂದ ನಡೆಯುವುದು ಅಪರಾಧ ವೆಂದೆಣಿಸಿ ತಲೆಯಿಂದ ನಡೆದು ಮುಂದೆ ಹೋಗುತ್ತಿದ್ದಳು. ಇವಳ ಬರವನ್ನು ಕಂಡ ಗಿರಿಜಾತೆ ಅಚ್ಚರಿಗೊಂಡು ಮಹಾದೇವನಿಗೆ ವಂದಿಸಿ, " ತಲೆಯಿಂದ ಇಲ್ಲಿ ನಡೆದು ಬರುತ್ತಿರುವ ಈ ಮರುಳು ಯಾವುದು, ಎಲ್ಲಿಂದ ಬರುತ್ತಿರುವುದು " ಎಂದು ಪ್ರಶ್ನಿಸಿದಳು. ಶಂಕರನು " ಈಕೆಯು ನಮ್ಮನ್ನು ಸೇವಿಸುವ ಕಾರೈಕ್ಕಾಲ್ ಅಮ್ಮೆಯರು. ನಮ್ಮನ್ನು ಬೇಡಿ ಈ ಹಿರಿಯ ರೂಪವನ್ನು ಪಡೆದಳು " ಎಂದು ಉತ್ತರಿಸಿದನು. ಕಾರೈಕ್ಕಾಲ್ ಅಮ್ಮೆಯು ಬರುತ್ತಲೇ, " ಎನ್ನಮ್ಮೆ " ಎಂದು ಬಲು ಪ್ರೀತಿಯಿಂದ ಕರೆದನು, ಅಮ್ಮೆಯರೂ ಸಹ " ಎನ್ನಪ್ಪ ! " ಎಂದು ಕರೆಯುತ್ತ ಮುಂದೆ ಹೋಗಿ ಸದಾಶಿವನ ಪಾದಗಳಿಗೆ ಎರಗಿದಳು.

ಕಾರೈಕ್ಕಾಲಮ್ಮೆಯನ್ನು ವಿರೂಪಾಕ್ಷನು ನೋಡಿ. " ನೀನು ಬೇಡುವ ವರ ವಾವುದು ?" ಎಂದು ಕೇಳಿದನು. ಅಮ್ಮೆಯರು ಸಾಷ್ಟಾಂಗವೆರಗಿ ಭಕ್ತಿಪುಳಕಿತೆಯಾಗಿ ಎದ್ದು ನಿಂತು ಹೀಗೆಂದು ಬಿನ್ನವಿಸಿದಳು. " ದಯಾಪರನಾದ ಶಶಿಧರನೇ ! ಅಮರವಾದ ನಿನ್ನ ಅನುಗ್ರಹ ಬೇಕು. ಇನ್ನು ಮುಂದೆ ಹುಟ್ಟು ಇಲ್ಲದಿರಬೇಕು. ಒಂದು ವೇಳೆ ಹುಟ್ಟಿದರೂ ಎಂದೂ ನಿನ್ನನ್ನು ಮರೆಯದಿರುವಂತೆ ದಯೆಗೈಯಬೇಕು." ಅಮ್ಮೆಯರ ಪ್ರಾರ್ಥನೆಗೆ ಕಿವಿಗೊಟ್ಟ ಜಟಾಧರನು. " ಹಾಗೆಯೇ ಆಗಲಿ : ತೆಂಕಣದಲ್ಲಿರುವ ತಿರು ಆಲಂಗಾಡು ಎಂಬ ಪವಿತ್ರ ಕ್ಷೇತ್ರದಲ್ಲಿ ನಮ್ಮ ತಾಂಡವನ್ನು ವೀಕ್ಷಿಸುತ್ತ ಪೇರಾನಂದ ಗೊಂಡು ನಮ್ಮನ್ನು ಹಾಡುತ್ತಲಿರು " ಎಂದು ಅನುಗ್ರಹಿಸಿದನು.

ಇವನ್ನು ಕೇಳಿ ಅಮ್ಮೆಯರು ವೃಷಭನ್ನು ನಮಸ್ಕರಿಸಿ ಬೀಳ್ಕೊಂಡು ತಿರು ಆಲಂಗಾಡನ್ನು ತಲುಪಿದಳು. ಆ ಕ್ಷೇತ್ರದ ಸಮೀಪಕ್ಕೆ ಬರುತ್ತಲೆ ಮತ್ತೆ ತಲೆಯಿಂದಲೇ ನಡೆದು ಬಂದು ಶಿವಲಿಂಗ ನಿಲಯವನ್ನು ಸಾರಿದಳು. ನಟರಾಜನ ವಿಶ್ವತಾಂಡವವನ್ನು ನೋಡಿ ಆನಂದಿಸುತ್ತ ಮಹೇಶನ ಪಾದದಡಿಯಲ್ಲಿ ಕುಳಿತು ತಿರುಪಾಡುಗಳನ್ನು ಪಠಿಸುತ್ತಲಿದ್ದಳು. ಹೀಗೆ ಸದಾಕಾಲವೂ ಶಿವಾನಂದವನ್ನು ಅನುಭವಿಸುತ್ತಿರುವಳು.

(ಮುಂದುವರಿಯುವುದು)

★ ಎಂ. ವಿ. ಜಂಬುನಾಥನ್

ಒಂದಿಷ್ಟು ಸಮಾಧಾನ

ಒಮ್ಮೊಮ್ಮೆ
ಜತೆ, ಜೊತೆಯವರ ಪರಿವೆಗಳ
ಮರುಳಾಟ, ನರಳಾಟಗಳಿಳದ
ಉಚ್ಛ್ವಾಸ – ನಿಶ್ವಾಸಗಳ ರಭಸಕ್ಕೆ
ಗರಗರಿಸುವ ಸಂವೇದನೆಯ ಸಾಣೆಗೆ
ಸಿಕ್ಕಿದ – ಕುಕ್ಕಿದ ಮನಸ್ಸು – ಸೂಜಿಮೊನೆ.
– ಮೊರೆಗಿಳಿಯುವಾಸೆ ಸತ್ತು
ಏಕಾಕಿತನದ ದೆವ್ವ ಹಿಡಿದಾಗ
ಹುಟ್ಟುತ್ತದೆ –
ನನ್ನಲ್ಲೇ ನಾ ಇಳಿಯುವಾಸೆ;
ಹಿಂದೆಯೇ ಕಾದಿರುತ್ತದೆ –
ಘಟ ಘಟನೆರಗುವ,
ಇನ್ನೂ ಒಳಗೊಳಗೇ ಉಸಿರಾಡುತ್ತಿರುವ –
ಸತ್ತವೆಂದು ನಂಬಿದ್ದ ನೆನಪುಗಳ ಬರಲೇಟು:
ದೆವ್ವ ಬಿಡಿಸಿಕೊಳ್ಳುವ ನೆಪದ ಚಾಟು.

ಹೀಗೆ ಅಲ್ಲಿ ತೇಲಿ, ಇಲ್ಲಿ ಮುಳುಗಿದ
ಅರೆ ತೆರೆದ ಬಾಗಿಲಲಿ ನಿಂತು
ಹೊರಗೊಮ್ಮೆ, ಒಳಗೊಮ್ಮೆ ಇಣುಕುವ
ನನ್ನ ಅಂತರ್ಪಿಶಾಚಿ ಅವಸ್ಥೆಯನ್ನ
ನೋಡೀ ನೋಡದಂಥಹ ನೀವು –
ಹಾದಿ ಹಾಯುವ ಜನ,
ಸ್ಥಿತಿ – ಗತಿಯರಿತು,
ಕೃಪೆ ಮಾಡಿ – ನಿಮಗೆ ಬಂದಂತೆ
ಅತ್ತೋ, ನಕ್ಕೋ ಮುಂದೆ ಹೋದರೆ
ನನಗೊಂದಿಷ್ಟು ಸಮಾಧಾನ.

★ ಡಿ. ಎಸ್. ನಾಗಭೂಷಣ

ಕರ್ನಾಟಕದ ಅಗ್ರಹಾರಗಳು

ಅಗ್ರಹಾರ ಪಾವಿಟ್ಟಗೆ

ಕ್ರಿ. ಶ. ೮-೯ನೆಯ ಶತಮಾನದಲ್ಲಿ ಕರ್ನಾಟಕವನ್ನು ವೈಭವದಿಂದ ಆಳುತ್ತಿದ್ದ ರಾಷ್ಟ್ರಕೂಟರು ತಮ್ಮ ಯಶಸ್ಸಿನ ಶಿಖರವನ್ನೇರಿದ್ದ ಕಾಲ. ಆಹೊತ್ತಿಗೆ

ಅಸ್ತಿ ಕಸ್ಚಿಜ ನಪದ ಸ್ತರ್ದವಾಡೀತಿ ವಿಶ್ರುತಃ
ಯದ್ಗ್ರಾಮೋಬಹಿರಂತಶ್ಚ ನಾನಾರಾಮೋಪ ಶೋಭಿತಃ
ತತ್ರ ಧರ್ಮಸ್ಯ ವಿದ್ಯಾನಾಂ ಸ್ಥಾನಂ ಪೌಠಗೆ ಇತ್ಯಭೂತ್
ಅಗ್ರಹಾರಸ್ಫೂರಿ ಕೀರ್ತಿಸ್ಸದಾ ರಾಮೋಮನೋಹರಃ ॥ [೧]

ಹೀಗೆಂದು ವರ್ಣಿಸಲ್ಪಟ್ಟಿರುವ ಪೌಠಗೆಯು ಒಂದು ಹೆಸರಾಂತ ಅಗ್ರಹಾರವಾಗಿದ್ದಿತು. ಇದು ಪಾವಿಟ್ಟಗೆ ಎಂತಲೂ ಕರೆಯಲ್ಪಡುತ್ತಿದ್ದಿತು. ಈಗಿನ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿರುವ ಸಾಲೋಟಗಿ ಎನ್ನುವುದೇ ಈ ಪಾವಿಟ್ಟಗೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವರು.[೨] ಇಲ್ಲಿದ್ದ ಒಂದು ಶಾಲೆಯ ನಿಮಿತ್ತವಾಗಿ (ಶಾಲಾ+ಪಾವಿಟ್ಟಗೆ) ಇದಕ್ಕೆ ಈ ಹೆಸರು ಬಂದಿತೆಂದೂ ಕಾಲಕ್ರಮದಲ್ಲಿ ಇದು ಸಾಲೋಟಗಿ ಎಂದಾಯಿತೆಂದೂ ನಂಬಲಾಗಿದೆ.

ಹಿಂದೆ ಈ ಪಾವಿಟ್ಟಗೆ ಅಗ್ರಹಾರವು ಈಗಿನ ಅಗ್ರಹಾರವು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳನ್ನೊಳಗೊಂಡಿದ್ದ ತರ್ದವಾಡಿ ಸಾಸಿರ ಎಂಬ ಪ್ರಾಂತದಲ್ಲೇ ಅತಿ ಶ್ರೇಷ್ಠವಾದುದು ಎನ್ನಿಸಿಕೊಂಡಿದ್ದ ಕರ್ಣಪುರಿ ವಿಷಯ ಎಂಬ ವಿಭಾಗದಲ್ಲಿ ನೆಲೆಗೊಂಡಿದ್ದಿತು.[೨] ಇಲ್ಲಿ ದೊರೆತಿರುವ ಹಲವು ಶಾಸನಗಳಿಂದ ಇದು ಒಂದು ಪ್ರಸಿದ್ಧವಾದ ವಿದ್ಯಾಕೇಂದ್ರವಾಗಿದ್ದಿತು ಎಂದು ತಿಳಿದು ಬರುತ್ತದೆ. ಇದರ ಕೀರ್ತಿ ಎಷ್ಟಿತ್ತೆಂದರೆ ನಾನಾ ಕಡೆಗಳ ವಿದ್ಯಾರ್ಥಿಗಳು ಇದರಿಂದ ಪ್ರಭಾವಿತರಾಗಿ ತಮ್ಮ ಜ್ಞಾನಾರ್ಜನೆಯ ಸಲುವಾಗಿ ಇಲ್ಲಿಗೆ ಬರುತ್ತಿದ್ದರು. ಶಾಸನಗಳು ಇದರ ಪ್ರತಿಭೆಯ ಬಗ್ಗೆ ಹೇರಳವಾಗಿ ತಿಳಿಸುತ್ತವಾದರೂ ಉಳಿದ ವಿವರಗಳು ಅಂದರೆ ವಿದ್ಯಾಭ್ಯಾಸಕ್ರಮ, ವಿದ್ಯಾರ್ಥಿಗಳು, ಪಂಡಿತರು ಮುಂತಾದ ವಿಚಾರಗಳ ಬಗೆಗೆ, ಸಂಪೂರ್ಣವಾದ ಮಾಹಿತಿಯು ದೊರಕುವದಿಲ್ಲ. ಆದರೂ ಇಲ್ಲಿಯ ವಿದ್ಯಾರ್ಥಿಗಳ ಹಾಗೂ ನಾಗರಿಕರ ಸಂಬಂಧದ ಬಗೆಗೆ ಸ್ವಾರಸ್ಯಪೂರ್ಣವಾದ ವಿವರಗಳನ್ನು ಶಾಸನಗಳು ತಿಳಿಸುತ್ತವೆ.

---

1. B. K. 153-54
2. E. I. Vol, IV, p-60

ಕಾಂಚನ ಮುದುವೊಳಲ್ ಎನ್ನುವದು ಒಂದು ಪ್ರಸಿದ್ಧವಾದ ಗ್ರಾಮವಾಗಿದ್ದಿತು. ಅಲ್ಲಿಯ ನಿವಾಸಿಯಾದ, ಕೌಂಡಿನ್ಯಗೋತ್ರಕ್ಕೆ ಸೇರಿದವನೆನ್ನಲಾದ ದಾನಪಾರ್ಯ ಎಂಬವನ ಮಗ ನಾರಾಯಣನು ರಾಷ್ಟ್ರಕೂಟರ ಮೂರನೆಯ ಕೃಷ್ಣನ ಮಂತ್ರಿಯಾಗಿದ್ದನು. ಇವನನ್ನು ಸಭ್ಯನೆಂದೂ, ಸಂಪನ್ನನೆಂದೂ ಶಾಸನಗಳು ವರ್ಣಿಸುತ್ತವೆ. ಇವನು ವಾಜಸನೇಯ ವೇದದ ಕಣ್ವಶಾಖೆಯನ್ನು ಅಭ್ಯಸಿಸುತ್ತಿದ್ದನು. ಇವನು ಧರ್ಮವೇ ಮೂರ್ತಿವೆತ್ತಂತಿದ್ದನು. ಒಂದು ಶಾಸನವು ಈ ರೀತಿ ಇವನನ್ನು ವರ್ಣಿಸುತ್ತದೆ.

...ಪ್ರಧಾನಃ ಕೃಷ್ಣರಾಜ್ಯಸ್ಯ ಮಂತ್ರಿ
ಸ್ಸನ್ ಸಂಧಿವಿಗ್ರಹೀ ತಸ್ಯಯಃ ಪ್ರತಿಹಸ್ತೋಽಭೂತ್।
ಪ್ರಿಯೋದಕ್ಷಿಣ ಹಸ್ತವತ್ ನಿಯುಕ್ತ ಸ್ತೇನ
ತೇಜಸ್ವೀ ಸಂಧಿವಿಗ್ರಹ ಕರ್ಮಣಿ॥
ಪಾರಗೋರಾಜ ವಿದ್ಯಾನಾಂ ಕಲಿಮುಖ್ಯಃ ಪ್ರಿಯಂವದಃ।
ಯಸ್ತು ಧರ್ಮರತೋಽಭಾತಿ ಧರ್ಮೋವಿಗ್ರಹವಾನ್ ಇವ॥[೩]

ಅಲ್ಲದೆ ಅವನ ಸದ್ಗುಣಗಳಿಂದಾಗಿಯೂ, ಪ್ರಬಲತೆಗಾಗಿಯೂ, ಅವನು ವಿಷ್ಣುವಿಗೆ ಹೋಲಿಸಲ್ಪಟ್ಟವನಾಗಿ ೨ನೆಯ ನಾರಾಯಣನೆಂದು ಕರೆಯಲ್ಪಡುತ್ತಿದ್ದನು. ಇವನ ವಿದ್ವತ್ತು ಅಪಾರವಾಗಿದ್ದುದರಿಂದ ಇವನನ್ನು ಗಜಾಂಕುಶನೆಂದೂ ಕರೆಯುತ್ತಿದ್ದರು. ಅತ್ಯುತ್ತಮ ಕವಿ ಎನಿಸಿಕೊಂಡಿದ್ದ ಇವನು ರಾಜನೀತಿ ನಿಪುಣನೂ ಆಗಿದ್ದು ನ್ಯಾಯವೇ ಮೂರ್ತಿವೆತ್ತಂತೆ ಕಾಣುತ್ತಿದ್ದನು. ಹೀಗಿದ್ದ ಈ ಗಜಾಂಕುಶ ನಾರಾಯಣನು ಕೃಷ್ಣರಾಜನ ಬಲಗೈಯಂತಿದ್ದನೆಂದು ಶಾಸನಗಳು ಕರೆಯುವುದಲ್ಲಿ ಆಶ್ಚರ್ಯವಿಲ್ಲವೆನ್ನಬಹುದು.

ಈ ಗಜಾಂಕುಶ ನಾರಾಯಣನು ವಿದ್ಯಾಭ್ಯಾಸದ ಸಲುವಾಗಿ ಒಂದು ಶಾಲೆಯನ್ನು ನಿರ್ಮಿಸಬೇಕೆಂದು ಆಲೋಚಿಸಿದನು. ಕ್ರಿ. ಶ. ೯೪೫ ರ ಹೊತ್ತಿಗೆ ಇವನು ಪಾವಿಟ್ಟಗೆಯಲ್ಲಿ ಒಂದು ದೊಡ್ಡದಾದ ಶಾಲೆಯನ್ನು ಕಟ್ಟಿಸಿ ಅಲ್ಲಿ ಆದಿಸುರತ್ರಯರನ್ನು ಪ್ರತಿಷ್ಠಾಪಿಸಿದನೆಂದು ಒಂದು ಶಾಸನವು ಸೂಚಿಸುತ್ತದೆ.[೪]

ಇಲ್ಲಿ ಪ್ರತಿಷ್ಠಾಪಿಸಲ್ಪಟ್ಟ ತ್ರಿಮೂರ್ತಿಗಳ ಪಾತ್ರ ಅಲ್ಪವಾಗಿರಲಿಲ್ಲ. ಈ ತ್ರಿಮೂರ್ತಿಗಳ ಬಗ್ಗೆ ಹೇಳುತ್ತಾ ಒಂದು ಶಾಸನವು ಮೇರುವಿನಲ್ಲಿ ತಮ್ಮ ಪ್ರೀತಿಯನ್ನು ಕಳೆದುಕೊಂಡ ತ್ರಿಮೂರ್ತಿಗಳು ಇಲ್ಲಿ ಬಂದು ನೆಲೆಸಿದರೇನೋ ಎನ್ನುವಂತ್ತಿತ್ತು ಎಂದು ವರ್ಣಿಸುತ್ತದೆ.[೫] ಚಕ್ರಾಯುಧನು ನಿರ್ಮಿಸಿದ ಈ

೩ ಅದೇ P. 60
೪. ಅದೇ V. I6
೫. ಅದೇ

ಶಾಲೆಯು ವಿಶಾಲವಾಗಿಯೂ ಮನೋಹರವಾಗಿಯೂ ಇದ್ದು ಇದನ್ನು ಸೃಷ್ಟಿ ಕರ್ತನು ತನ್ನಿಚ್ಛೆಯಂತೆ ಕಟ್ಟಿಸಿದನೇನೋ ಎನ್ನುವಂತಿದ್ದಿತೆಂದು ಶಾಸನದಿಂದ ತಿಳಿದುಬರುತ್ತದೆ.[೬] ಬ್ರಹ್ಮನೊಡಗೂಡಿದ್ದ ಮನೋದೇವತೆಯಂತೆ ಇದು ವಿರಾಜಿಸುತ್ತಿತ್ತೆಂದು ಇದರ ವರ್ಣನೆ ಇದೆ.[೭] ಮತ್ತು ಮೇಲೆ ಹೇಳಿದಂತೆ ಇದರ ಕೀರ್ತಿ ವಿಸ್ತೃತವಾಗಿದ್ದಿತ್ತು. ಇಲ್ಲಿ ಅಧ್ಯಯನ ಮಾಡಲು ನಾನಾಕಡೆಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರೆಂದು ನಮಗೆ ತಿಳಿದು ಬರುತ್ತದೆ.[೮] ಇಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ತ್ರಿಪುರುಷ ಹಾಗೂ ಶಾಲೆಯ ಸಂರಕ್ಷಣೆಗಾಗಿ ವೃತ್ತಿಗಳನ್ನು ಬಿಟ್ಟುಕೊಡಲಾಗಿದ್ದಿತು. ಅದರ ವಿವರ ಹೀಗಿದೆ.—

ಚಕ್ರಾಯುಧನೆಂಬುವನು ಈ ಪಾವಿಟ್ಟಿಗೆ ಗ್ರಾಮದ ಪಿತನೆನ್ನಿಸಿಕೊಂಡಿದ್ದನು. ಇವನನ್ನು ಚಕ್ರಾಯುಧ ಬುಧನೆಂದೂ ಒಂದು ಶಾಸನವು ಕರೆಯುತ್ತದೆ.[೯]

ಕಶ್ಯಪ ಗೋತ್ರಕ್ಕೆ ಸೇರಿದ ಇವನು ವಾಜಸನೇಯ ವೇದದ ಅನುವರ್ತಿಯಾಗಿದ್ದನು. ಇವನು ಧಾರ್ಮಿಕ ಪ್ರವೃತ್ತಿಯುಳ್ಳವನೂ, ಪ್ರಾಮಾಣಿಕನೂ, ದೈವಿಕ ಜ್ಞಾನ ಉಳ್ಳವನೂ ಆಗಿ ಸಾಕ್ಷಾತ್ ಪರಾಶರನಂತೆ ಶೋಭಿಸುತ್ತಿದ್ದನೆಂದು ಇವನ ವರ್ಣನೆ ಇದೆ.[೧೦]

ಈ ಚಕ್ರಾಯುಧನು ಊರಿನ ಮುಖ್ಯರಾದ ೭೦೦ ಜನ ಬ್ರಾಹ್ಮಣರೊಡಗೂಡಿ ಇಲ್ಲಿನ ಶಾಲೆಯ ವಿದಾರ್ಥಿ ಸಂಘಕ್ಕೆ ಫಲವತ್ತಾದ ೫೦೦ ನಿವರ್ತನ ಭೂಮಿಯನ್ನು, ಮತ್ತು ೨೭ ಸುಸಜ್ಜಿತ ನಿವೇಶನಗಳನ್ನು ಸರ್ವಮಾನ್ಯವಾಗಿ ಬಿಟ್ಟುಕೊಟ್ಟನು.[೧೧]

ಇದರ ಜೊತೆಗೆ ನಾಲ್ಕು (೪) ನಿವರ್ತನ ಭೂಮಿಯನ್ನು ಹೂವಿನ ತೋಟದ ಸಲುವಾಗಿಯೂ ಮತ್ತು ೧೨ ನಿವರ್ತನ ಭೂಮಿಯನ್ನು ದೀಪದ ನಿಮಿತ್ತವಾಗಿಯೂ, ಸರ್ವಮಾನ್ಯವಾಗಿ ಕೊಟ್ಟನು.[೧೨]

ಅಷ್ಟೇಅಲ್ಲದೆ, ಊರಿನ ನಾಗರಿಕರು ಈ ಶಾಲೆಯ ಬಗೆಗೆ ಆಸ್ಥೆಯನ್ನಿಟ್ಟುಕೊಂಡಿದ್ದುದು ಒಂದು ಗಮನಾರ್ಹ ವಿಷಯ. ಈ ಶಾಲೆಗೆ ಅವರೂ ತಮ್ಮ

---

೬. ಅದೇ V. 17

೭. ಅತ್ರ ವಿದ್ಯಾರ್ಥಿನಃ ಸಂತಿ ನಾನಾ ಜನಪದೊದ್ಭವಾಃ (V. 17)

೮. ಬ್ರಹ್ಮವಿಷ್ಣು ಮಹೇಷಾನಾಂ ಶಾಲಾ ತತ್ರಾತಿ ಶಾಲಿನೀ ಮೇರೋಃ ಸ್ರೀತಂ ಪರಿತ್ಯಜ್ಯಯತ್ರ ಸಾಕ್ಷಾದ್ವಾಸಂತಿತೆ (B. K. 153-54)

೯. E, I. Vol. IV, P. 61. U. 20.

೧೦. ಅದೇ V. 21.

೧೧. ಅದೇ VV. 26-27.

೧೨. ಅದೇ V. 28.

ಯಥಾಶಕ್ತಿ ಪ್ರೋತ್ಸಾಹವನ್ನು ನೀಡುತ್ತಿದ್ದರು. ಹಲವು ಸಂದರ್ಭಗಳಲ್ಲಿ ಅವರು ವಿದ್ಯಾರ್ಥಿಗಳ ಬಗೆಗೆ ತೋರಿಸುತ್ತಿದ್ದ ಆಸಕ್ತಿ ಸ್ವಾರಸ್ಯಪೂರ್ಣವಾಗಿದೆ. ಮದುವೆಯ ಹೊತ್ತಿಗೆ ಸುದ್ರವ್ಯದ ಪಂಚ ಪುಷ್ಪಗಳನ್ನು ಅಂದರೆ ೫ ನಾಣ್ಯಗಳನ್ನು ಈ ಸಂಘಕ್ಕೆ ಕೊಡಬೇಕೆಂದು ನಿಗದಿಯಾಗಿದ್ದಿತು. ಹಾಗೆಯೇ ಉಪನಯನ ಕಾಲಕ್ಕೆ ೫ ಪುಷ್ಪಗಳ ಅರ್ಧಭಾಗ ಅಂದರೆ ೨½ ಪುಷ್ಪ ಅಥವಾ ನಾಣ್ಯಗಳನ್ನು ಸಲ್ಲಿಸಬೇಕೆಂದಿದ್ದಲ್ಲಿ ಚೂಡಾ ಕರ್ಮದ ಹೊತ್ತಿಗೆ ಅವರು ಈ ಸಂಘಕ್ಕೆ ಕೊಡಬೇಕಾದ ನಾಣ್ಯ ೨½ ಪುಷ್ಪದ ಅರ್ಧಭಾಗ ಅಂದರೆ ೧¼ ನಾಣ್ಯ. ಅಷ್ಟೇ ಅಲ್ಲದೆ ಯಾವ ಕಾರಣದಿಂದಲೇ ಆಗಲಿ ಊರಿನ ವಿಪ್ರರ ಭೋಜನದ ಏರ್ಪಾಡು ನಡೆದಲ್ಲಿ ಈ ಸಂಘದವರೂ ಆಹ್ವಾನಿತರಾಗಬೇಕೆಂಬ ನಿಯಮವಿದ್ದಿತು.[೧೩] ಹೀಗೆ ನಾಗರಿಕರ ಹಾಗೂ ಇತರ ಅಧಿಕಾರಿಗಳ ಗೌರವಕ್ಕೆ, ಮನ್ನಣೆಗೆ ಪಾತ್ರವಾಗಿದ್ದ ಈ ಶಾಲೆಯು ೧೦-೧೧ ನೆಯ ಶತಮಾನದ ಹೊತ್ತಿಗೆ ಬಹಳ ಪ್ರಸಿದ್ಧಿಯನ್ನು ಪಡೆದಿದ್ದಿತೆಂದೂ ಹೇಳಬಹುದು.

ಹೀಗೆ ಸರ್ವರ ಮನ್ನಣೆಗೆ ಪಾತ್ರವಾಗಿದ್ದ ಈ ಶಾಲೆಯು ಸ್ವಲ್ಪ ಕಾಲದಲ್ಲೇ ಹಾಳು ಬಿದ್ದಿರಬಹುದೆಂದು ಕಾಣುತ್ತದೆ. ಯಾಕಂದರೆ ಕೊಪಣಪುರ (ಈಗಿನ ಕೊಪ್ಪಳ)ದ ನಿವಾಸಿಯಾದ ಕಂಚಿಗನೆಂಬುವನು ಅವನೀಶದಂತಿ ಪ್ರಿಯನು ಮಾಡಿಸಿದಂತೆಯೇ ಈ ಶಾಲೆಯನ್ನು ತಾನು ಮಾಡಿಸಿದುದಾಗಿ ಹೇಳುವದು ಒಂದು ಶಾಸನದಿಂದ ನಮಗೆ ತಿಳಿದುಬರುತ್ತದೆ.[೧೪] ಆದರೆ ಮೇಲೆ ನಮೂದಿಸಿರುವ ಗಜಾಂಕುಶನಾರಾಯಣನು ಕಟ್ಟಿಸಿದನೆಂದು ಹೇಳುವ ಶಾಸನ ಮತ್ತು ಕಂಚಿಗನು ದಂತಿಗನು ಕಟ್ಟಿಸಿದಂತೆ ತಾನು ಕಟ್ಟಿಸಿದೆನೆಂದೂ ಹೇಳುವ ಶಾಸನವೂ! ಈ ಎರಡು ಶಾಸನಗಳೂ ಹೆಚ್ಚು ಕಡಿಮೆ ಒಂದೇ ಕಾಲಕ್ಕೆ ಸೇರಿದವುಗಳೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[೧೫]

ಹೀಗಿರುವಲ್ಲಿ ಆ ಅಲ್ಪ ಸಮಯದಲ್ಲೇ ಈ ಶಾಲೆಯನ್ನು ಪುನಃ ನಿರ್ಮಾಣ ಮಾಡಬೇಕಾದ ಅವಶ್ಯಕತೆಯಾದರೂ ಏನೆಂಬುದಕ್ಕೆ ಕಾರಣ ತಿಳಿದು ಬರುವುದಿಲ್ಲ. ಆದರೆ ಕಂಚಿಗನು ಕೊಟ್ಟುದದನು ಪಾಲಿಸುವ ಫಲವು ದಾನ ಮಾಡಿದವನ

---

೧೩. ಶಾಲಾ ವಿದ್ಯಾರ್ಥಿ ಸಂಘಾಯ ಸುದ್ರವ್ಯಾಣಿ ದ್ವಿಜಾತಿಭಿಃ ।
ಪಂಚ ಪುಷ್ಪಾಣಿ ದೇಯಾನಿ ವಿವಾಹೇ ಸತಿ ತಜ್ಜನೈಃ ॥
ದೇಯಂ ತಥೋಪನಯನೇ ವಿವಾಹೇ ಯತ್ಪುರೋದಿತಂ ।
ತದರ್ಧಂಚ......... ಚೂಡಾಕರ್ಮಣಿ ತಜ್ಜನೈಃ ॥
ಕೇನ ಚಿತ್ಕಾರಣೇನೇಹ ಕರ್ತವ್ಯೇವಿಪ್ರಭೋಜನೇ ।
ಭೋಜಯೇತು ಯಥಾಶಕ್ತಿ ಪರಿಷತ್ಪರಿಷಜ್ಜನಂ ॥ (V. 31)

೧೪. ಅದೇ P. 64.

೧೫. ಅದೇ P. 59.

ಪುಣ್ಯಕ್ಕಿಂತ ಮಿಗಿಲೆಂದು ಯೋಚಿಸಿ ಈ ಶಾಲೆಯನ್ನು ನಿರ್ಮಿಸಿದನೆಂದು ಮಾತ್ರ ಶಾಸನದಿಂದ ತಿಳಿದು ಬರುತ್ತದೆ.[೧೬]

ಕಂಚಿಗನು ಸೆಳರ ಕುಲಕ್ಕೆ ತಿಲಕಪ್ರಾಯನೆಂದೂ, ಭೀಮಪರಾಕ್ರಮಿ ಎಂದೂ, ರಣಭೀರುವೆಂದೂ, ಶಾಸನಗಳು ಬಣ್ಣಿಸುತ್ತವೆ.[೧೭] ಇವನು ಜಂಭನ ವೈರಿಯಾದ ಇಂದ್ರನಂತಿದ್ದನೆಂದು ಕವಿಯ ವರ್ಣನೆ ಇದೆ.[೧೮] ಇಂತಹ ಕಂಚಿಗನು ಪೂರ್ವಜರು ಮಾಡಿರುವ ದಾನವನ್ನು ಕಾಯುವಾತನೂ, ಮಾಡಿಸಿದವನಷ್ಟೇ ಪುಣ್ಯವನ್ನು ಪಡೆಯುತ್ತಾನೆಂದು ಬಗೆದು ಅವನೀಶದಂತಿಪ್ರಿಯನು[೧೯] ಕಟ್ಟಿಸಿದಂತೆ ಈ ಶಾಲೆಯನ್ನು ಕಟ್ಟಿಸಿದುದಾಗಿ ತಾನೆ ಹೇಳಿಕೊಂಡಿದ್ದಾನೆ[೨೦]. ಅಷ್ಟೇ ಅಲ್ಲದೆ, ಈ ಶಾಲೆಯ ಸ್ತಂಭಗಳನ್ನು ನಿಲ್ಲಿಸುವಂದು ಕಂಚಿಗನು ಒಂದೆರಡು ಕಂಭಗಳನ್ನು ಆರಿಸಿಕೊಂಡು ಧರ್ಮವನ್ನು ಈ ಕಂಭಗಳ ರೂಪದಲ್ಲಿ ನಿಲ್ಲಿಸುತ್ತಿದ್ದಾನೇನೋ ಎನ್ನುವಂತೆ ತನ್ನ ಸ್ವಹಸ್ತದಿಂದ ನಿಲ್ಲಿಸಿದ ವರ್ಣನೆ ಶಾಸನದಲ್ಲಿ ಬರುತ್ತದೆ.[೨೧]

ಅಲ್ಲದೆ ಈ ಕಂಭಗಳು ತನ್ನ ಕೀರ್ತಿಯನ್ನು ಸಾರುವ ಕಂಭಗಳೇನೋ ಎನ್ನುವಂತಿದ್ದುವೆಂದೂ ಶಾಸನವು ಬಣ್ಣಿಸುತ್ತದೆ.[೨೨]

ಇದನ್ನು ನಿಲ್ಲಿಸಿದ ತರುವಾಯ ಕಂಚಿಗನು ಪ್ರಸಿದ್ಧವಾದ ಈ ಶಾಸನವನ್ನು ಬರೆಯಿಸಿದನೆಂದು ನಮಗೆ ತಿಳಿದು ಬರುತ್ತದೆ.

ಹೀಗೆ ಈ ಶಾಲೆಯನ್ನು ಪುನಃ ನಿರ್ಮಾಣ ಮಾಡಿದ ಮೇಲೆ ದಸವಂದದ ಭೂಮಿಯಲ್ಲಿನ ನಿವೇಶನಗಳಲ್ಲಿ ಹಲವನ್ನು ಇದಕ್ಕಾಗಿ ಬಿಟ್ಟುಕೊಟ್ಟನು. ಹೀಗೆ ದುರಸ್ತುಗೊಂಡ ಈ ಶಾಲೆಯು ತನ್ನ ಯಥಾ ಸ್ಥಿತಿಗೆ ಬಂದಿರಬಹುದೆಂದು ಹೇಳಬಹುದು. ಸ್ವಲ್ಪ ಕಾಲಾನಂತರ ಅಂದರೆ ೧೧–೧೨ ನೆಯ ಶತಮಾನದ ಹೊತ್ತಿಗೆ ಗೋವುಣರಸನೆಂಬುವನು ಇಲ್ಲಿನ ತ್ರೈಪುರುಷ ದೇವಾಲಯಕ್ಕಾಗಿ ಭೂಮಿಯನ್ನು ದಾನವಾಗಿ ಕೊಟ್ಟನೆಂದು ಆ ಕಾಲದ ಒಂದು ಶಾಸನದಿಂದ ತಿಳಿದು ಬರುತ್ತದೆ.[೨೩]

---

೧೬. ಅದೇ P. 64.

೧೭. ಅದೇ.

೧೮. ಅದೇ.

೧೯. ದಂತಿಪ್ರಿಯನು ಮೇಲೆ ಹೇಳಿರುವ ಗಜಾಂಕುಶನಾರಾಯಣನೆಂದು ವಿದ್ವಾಂಸರ ಅಭಿಪ್ರಾಯವಿದೆ. I bid P. 56.

೨೦. ಅದೇ V. 3 ಮಾಡಿಸಿದೆ ನಾನೆ ಶಾಲೆಯ। ನೀಡಿತದಂತಿ ಪ್ರಿಯಾವನೀಶನಪ್ರೋಲ್ ಮುಂ॥ ಮಾಡಿಸಿದೋಂ ಮಾಡಿಸಿದನೆ। ಮಾಡಿಸಿದೋಂ ಮಾಡಿದುದನೆ ಸಲಿಕಾವಾತಂ॥

೨೧. ಅದೇ V. 4.

೨೨. ಅದೇ. P. 64

೨೩. ಅದೇ. P. 65

ಈ ಅಗ್ರಹಾರವು ಧರ್ಮದ ಮತ್ತು ವಿದ್ಯೆಯ ಆವಾಸಸ್ಥಾನವಾಗಿದ್ದಿತೆಂದು ೧೧೨೯ರ ಶಾಸನದಿಂದ ನಮಗೆ ತಿಳಿದು ಬರುತ್ತದೆ. ಇದು ವಿದ್ವಾಂಸರಿಂದ (ಸೂರಿ ಕೀರ್ಣಃ) ತುಂಬಿದ್ದಿತು. ಹೀಗೆ ಪ್ರಸಿದ್ಧಿಯನ್ನು ಪಡೆದ ಈ ಪಾವಿಟ್ಟಿಗೆ ಅಗ್ರಹಾರವು ೯ ನೆಯ ಶತಮಾನದದಿಂದ ೧೩ ನೆಯ ಶತಮಾನದ ವರೆಗೆ ಹೆಸರಾಂತ ಅಗ್ರಹಾರವಾಗಿದ್ದಿತು. ಆದರೆ ೧೩ ನೆಯ ಶತಮಾನದ ನಂತರ ಇದನ್ನು ಹೆಸರಿಸುವ ಶಾಸನಗಳು ದೊರೆತಿಲ್ಲ. ಆದರೂ ಇದು ಅನಂತರವೂ ಅತ್ಯಂತ ಹೆಸರುವಾಸಿಯಾದ ಅಗ್ರಹಾರವಾಗಿತ್ತೆಂದು ಹೇಳಲಡ್ಡಿಯಿಲ್ಲ.)

★ **ಎಸ್. ಎಲ್. ಶಾಂತಕುಮಾರಿ**

ಚೀರವ್ವ-ಚನ್ನವ್ವನ ಪರೀಕ್ಷೆ

(ಡೊಳ್ಳಿನ ಪದ)

ಅಯ್ಯನೇಳೋ ಶಿವರಾಯಾನೋ
ಯಾವ್ಯಾವ ರೂಪಾ ತೋರ್‍ಯಾನೋ.......
ಯಾವ್ಯಾವ ರೂಪಾ ತೋರ್‍ಯಾನೆಂವರ ‖ ಪಲ್ಲ ‖

ಕುಲುಮಿ ಕಂತಿಗಳ ಉಟ್ವಾನೋ
ಕುಲಮಿಯ ಕಂತಿಗಳ ಉಟ್ವಾನೇನ
ಕಾಲಾಗ ಗೆಜ್ಜಿಯ ಕಟ್ಯಾನೋ
ಕಾಲಾಗ ಗೆಜ್ಜಿಯ ಕಟ್ಯಾನೇನಂವ
ಮುರಗಿ ಬೆತ್ತವಂದ ಹಿಡದಾನೋ
ಮುರಗಿ ಬೆತ್ತವಂದ ಹಿಡದಾನೇನಂವ
ಮುಂಗೈ ಜೋಳಗೆ ಹಾಕ್ಯಾನೋ
ಮುಂಗೈ ಜೋಳಗೆ ಹಾಕ್ಯಾನೇನಂವ
ಮುಂದಿನ ಓಣಿಗೆ ಹೋದಾನೋ
ಮುಂದಿನ ಓಣಿಗೆ ಹೋದಾನೇನಂವ
ಕೋರ್‍ಯಾನ ಬಿಕ್ಷಾ ಎಂದಾನೋ.... ‖ ೧ ‖

ಶಿವನ ಮಗಳ ಚೀರವ್ವ ಚೆನ್ನವ್ವ
ಹಿಟ್ಟಿನ ಬಿಕ್ಷಾ ತಂದಾಳೋ
ಹಿಟ್ಟಿನ ಬಿಕ್ಷಾ ತಂದಾರೇನವರ ಸ್ವಾಮಿ
ಒಲ್ಲೆ ಒಲ್ಲೆನ್ಹೇಳ ಎಂದಾನೋ
ಒಲ್ಲೆ ಒಲ್ಲೆನ್ಹೇಳ ಎಂದಾನಂವ
ಹೊಳ್ಳಿ ಮನಿಗ್ಹೆ ಓದಿದಾಳೋ
ಹೊಳ್ಳಿ ಮಾನಿಗೆ ಓದಿದಳಾಕೆ
ಕಾಳ ಧಾನ್ಯಗಳ ತಂದಿವಳೋ
ಕಾಳ ಧಾನ್ಯಗಳ ತಂದಾರ ಸ್ವಾಮಿ
ಒಲ್ಲೆ ಒಲ್ಲೆನೇಳ ಎಂದಿದಾನೋ
ಒಲ್ಲೆ ಒಲ್ಲೆನೇಳ ಎಂದಿದರಾಗ
ರೊಕ್ಕ ಧಾನ್ಯಗಳ ತಂದಿದಳೋ
ರೊಕ್ಕ ಧಾನ್ಯಗಳ ತಂದಿದ ಸ್ವಾಮಿ

ಒಲ್ಲೆ ಒಲ್ಲೆನ್ಹೇಳ ಎಂದಿದನೋ
ಒಲ್ಲೆ ಒಲ್ಲೆನ್ಹೇಳ ಅಂದರ–ಸ್ವಾಮಿ
ಹೊಳ್ಳಿ ಮನಿಗೆ ಓದಿದಳೋ
ಹೊನ್ನ ಧಾನ್ಯಗಳ ತಂದಿದಳೋ
ಹೊನ್ನ ಧಾನ್ಯಗಳ ತಂದರ-ಸ್ವಾಮಿ
ಒಲ್ಲೆ ಒಲ್ಲೆನ್ಹೇಳಂದಿದನೋ
ಒಲ್ಲೆ ಒಲ್ಲೆನ್ಹೇಳಂದರ–ಸ್ವಾಮಿ
ಹೊಳ್ಳಿ ಮನಿಗೆ ಒಯ್ದಿದಳೋ
ಮುತ್ತು ಧಾನ್ಯಗಳ ತಂದಿದಳೋ
ಮುತ್ತು ಧಾನ್ಯಗಳ ತಂದರ-ಸ್ವಾಮಿ
ಒಲ್ಲೆ ಒಲ್ಲೆನ್ಹೇಳಂದಿದನೋ... ‖ ೨ ‖

ಏನು ಬೇಡತಿರಿ ಬೇಡರಿ ಸ್ವಾಮಿ
ಬೇಡಿದ ಕೊಡುವೆನು ನಾನಿಂದು
ನಿನ್ನ ಮಗನ ನೋಡವ್ವಾ
ಕಡಿದು ಅಡಿಗೆಯ ಮಾಡವ್ವಾ
ಶಿವನ ಮಗಳು ಚೀರವ್ವ ಚನ್ನವ್ವ
ಕೂಗ್ಯಾಡಿ ಮಗನ ಕರದಾಳೋ
ರೊಕ್ಕದ ಹೆಜ್ಜಿ ಲಂಕನ ಕಟ್ಟಿ
ಗಲ್ ಗಲ್ ಮಗ ಬಂದಿದನೋ
ಗಲ್ ಗಲ್ ಮಗ ಬಂದಿದರೇನ
ದೇವರ ಕೋಲಿಗೆ ಕರಿದಿದಾಳೋ
ದೇವರ ಕಾಲಿಗೆ ಎರಗಿದನವನು
ಕಾಲ್ಮೆಟ್ಟಿ ಕೊರಳ ಕೊಯ್ದಿದಳೋ
ಕಡಿದು ಅಡುಗೆಯ ಮಾಡಿದಳೋ.... ‖ ೩ ‖

ಕಡಿದು ಅಡುಗೆಯ ಮಾಡಿದಳೇನಾಕಿ
ಗುರುವನ ಊಟಕ ಕರಿದಿದಾಳೋ
ಗುರುವನ ಊಟಕ ಕರಿದಿದಾಳೇನಕಿ
ಒಲ್ಲೆ ಒಲ್ಲೆನ್ಹೇಳಂದಿದಾನೋ
ಏನು ಬೇಡತಿರಿ ಬೇಡರಿ ಸ್ವಾಮಿ
ಬೇಡಿದ್ದು ಕೊಡುವೆನು ಅಂದಿದಾಳೊ
ನಿನ್ನ ಮಗನ ನೋಡವ್ವ ಅಲ್ಲಿ

ನನ್ನ ಬದಿಯಲಿ ಕೂಡ್ರಿಸು ಇಲ್ಲಿ
ಶಿವನ ಮಗಳ ಚೀರವ್ವ ಚನ್ನವ್ವ
ಕೂಗಾಡಿ ಮಗನ ಕರಿದಿದಾಳೋ
ರೊಕ್ಕದ ಗೆಜ್ಜಿಯು ಲಂಕನಕಟ್ಟಿ
ಗಲ್ ಗಲ್ ಮಗ ಬಂದಿದಾನೋ
ಗಲ್ ಗಲ್ ಬಂದ ಮಗನ
ಗುರುವಿನ ಬದಿಯಲಿ ಕೂಡ್ರಿಸಿದಳೋ
ಗುರುವಿನ ಬದಿಯಲಿ ಕೂಡ್ರಿಸಿದಳೇನಕಿ
ಕರೆದು ಊಟಕೆ ಹಾಕಿದಳೋ.... || ೪ ||

ಅಲ್ಲಿಗಿಲ್ಲಿಗೋ ಇದು ಒಂದು ಸಂಧಿ
ಸಂಧಿಗೇಳ ಪದ ಮುಂದೇಳೋ
ಸಂಧಿಗೇಳ ಪದ ಮುಂದೇಳೋ....ಮಾಳಗಿರಾಯಾ।

ಸಂಗ್ರಹ: **ನಿಂಗಣ್ಣ ಸಣ್ಣಕ್ಕಿ**

ಕನ್ನಡದಲ್ಲಿ ಸಮಾಸ

ಒಂದು ವಾಕ್ಯದ ಅರ್ಥವತ್ತಾದ ಅತ್ಯಲ್ಪ ಘಟಕಗಳ ಅರ್ಥಾತ್ ಆಕೃತಿಮಾಗಳ ಸಂಯೋಜನೆಯನ್ನು ವರ್ಣಿಸುವ ಶಾಸ್ತ್ರವೇ **ವ್ಯಾಕರಣ** (Grammar). ಈ ಸಂಯೋಜನೆಯ ವೈವಿಧ್ಯವನ್ನನುಸರಿಸಿ ವ್ಯಾಕರಣವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಒಂದು **ಆಕೃತಿಮಾಶಾಸ್ತ್ರ** (Morphology); ಇನ್ನೊಂದು **ವಾಕ್ಯಶಾಸ್ತ್ರ** (Syntax).

ಆಕೃತಿಮಾ ಶಾಸ್ತ್ರವು ಆಕೃತಿಮಾಗಳ **ಸಾಂದ್ರ ಸಂಯೋಜನೆ** (Tight Construction)ಯನ್ನು ವರ್ಣಿಸುವುದಾದರೆ ವಾಕ್ಯಶಾಸ್ತ್ರವು ಅವುಗಳ **ಅಸಾಂದ್ರ ಸಂಯೋಜನೆ** (non-tight construction)ಯನ್ನು ವರ್ಣಿಸುತ್ತದೆ. ಆಕೃತಿಮಾ ಸಂಯೋಜನೆಯಲ್ಲಿ **ಆಂತರಿಕ ಬೆಳವಣಿಗೆ** (intra-expansion), ಅಸಾಧ್ಯವಾದರೆ ಅದು ಸಾಂದ್ರ ಸಂಯೋಜನೆ; ಸಾಧ್ಯವಾದರೆ ಅದು ಅಸಾಂದ್ರ ಸಂಯೋಜನೆ.

/ ನಾಯಿಗಳು / ಇದು ಸಾಂದ್ರ ಸಂಯೋಜನೆ. / ನಾಯಿಬಾಲ / ಇದು ಅಸಾಂದ್ರ ಸಂಯೋಜನೆ. ಈ ರಚನೆಯನ್ನು / ನಾಯಿಯ ಬಾಲ / ಎಂದೂ / ನಾಯಿಯ ಉದ್ದ ಬಾಲ / ಎಂದೂ ಇತ್ಯಾದಿಯಾಗಿ ಆಂತರಿಕವಾಗಿ ಬೆಳೆಯಿಸಬಹುದು; ಆದರೆ / ನಾಯಿಗಳು / ಎಂಬ ರಚನೆಯನ್ನು ಆಂತರಿಕವಾಗಿ ಬೆಳೆಯಿಸುವುದು ಅಸಾಧ್ಯ.

ಒಂದು **ರಚನೆಯೊಳಗೆ** ಆಕೃತಿಮಾ ಅಥವಾ ಆಕೃತಿಮಾಗಳನ್ನು ಸೇರಿಸುವುದೇ **ಆಂತರಿಕ ಬೆಳವಣಿಗೆ.** ಸಾಂದ್ರ ಸಂಯೋಜನೆಯನ್ನು **ಆಕೃತಿಮಾಬದ್ಧ ರಚನೆ** (morphological construction) ಎಂದೂ ಅ-ಸಾಂದ್ರ ಸಂಯೋಜನೆಯನ್ನು **ವಾಕ್ಯಬದ್ಧ ರಚನೆ** (Syntactical construction) ಎಂದೂ ಕರೆಯುವರು. { ನಾಯಿಗಳು } ಎಂಬುದು ಆಕೃತಿಮಾಬದ್ಧ ರಚನೆ. { ನಾಯಿಬಾಲ } ಎಂಬುದು ವಾಕ್ಯಬದ್ಧ ರಚನೆ.

ಕನ್ನಡ ವಾಕ್ಯಬದ್ಧ ರಚನೆಗಳಲ್ಲಿ ಕೆಲವು ರೂಪ (form)ದಲ್ಲಿ ಸಮಸ್ತವಾದರೆ ಅರ್ಥಾತ್ ವಿವೃತವಿರಾಮವನ್ನು[೧] (Open juncture) ಒಳಗೊಳ್ಳದೆ ಇದ್ದರೆ ಉಳಿದವು ವಿವೃತ ವಿರಾಮವನ್ನು ಒಳಗೊಂಡು ಅಸಮಸ್ತವಾಗಿವೆ. ಸಮಸ್ತ ವಾಕ್ಯ

---

೧. ಉಚ್ಚಾರ ಮಾಡುವಲ್ಲಿ ನಿಲ್ಲುವುದೇ ವಿರಾಮ. ಎರಡು ಮುಕ್ತಾಕೃತಿಮಾಗಳ ನಡುವಿನ ವಿರಾಮವೇ ವಿವೃತ ವಿರಾಮ. ಪ್ರಸ್ತುತ ಲೇಖದಲ್ಲಿ + ವಿವೃತ ವಿರಾಮ ಚಿಹ್ನೆ. ವಿರಾಮ ಕನ್ನಡದಲ್ಲಿ ಧ್ವನಿಮಾವಾಗಿದೆ. ನೋಡಿ: ವಿಲ್ಯಮ್ ಮಾಡ್ತಾ, "ಕನ್ನಡದ ಧ್ವನಿಮಾಗಳು: ಅಂದು ಇಂದು" ಕರ್ನಾಟಕ ಭಾರತಿ ೪:೨ (೧೯೭೧) ಪು. ೭೯-೮೦.

ಬದ್ಧ ರಚನೆಗಳಿಂದಾಗಿ ಒಂದು ಭಾಷೆಯ ಆಕೃತಿಮಾಗಳನ್ನು ಬೆಳೆಯಿಸಲು ಸಾಧ್ಯವಾಗುತ್ತದೆ.

ಹಲವು ಮುಕ್ತಾಕೃತಿಮಾಗಳನ್ನು ಸಂಯೋಜಿಸಿ ಒಂದೇ ಬೃಹದಾಕೃತಿಮಾವನ್ನು ರಚಿಸುವುದೇ ಸಮಾಸದ ಕಾರ್ಯ. ಈ ಸಂಯೋಜನೆಯಲ್ಲಿ ಉಂಟಾಗುವ **ಧ್ವನಿಮಾತ್ಮಕ ವ್ಯತ್ಯಾಸವೇ (Phonemic change)** ಸಂಧಿ.[೨]

ಪ್ರಸ್ತುತ ಲೇಖನದಲ್ಲಿ ಕನ್ನಡ ವಾಕ್ಯಬದ್ಧ ರಚನೆಗಳ ಕುರಿತು ವಿವೇಚನೆ ಮಾಡಲಾಗಿದೆ. ಈ ದೆಸೆಯಲ್ಲಿ ಕನ್ನಡ ವೈಯಾಕರಣಿಗಳು ಮಾಡಿದ ವಿವೇಚನೆಯ ಫಲವಾಗಿ "ಸಮಾಸ" ಎಂಬ ಪದ ಕನ್ನಡ ವ್ಯಾಕರಣದಲ್ಲಿ ಬಳಸಲಾಗಿದೆ.

ಈ ಲೇಖನದಲ್ಲಿ ಮೂರು ವಿಭಾಗಗಳು :

೧ ಕನ್ನಡ ವ್ಯಾಕರಣದಲ್ಲಿರುವ ಸಾಂಪ್ರದಾಯಿಕ ಸಮಾಸ ವ್ಯಾಖ್ಯೆ ಹಾಗೂ ವಿಭಜನೆ.

೨ ಸಾಂಪ್ರದಾಯಿಕ ಸಮಾಸ ವಿವರಣೆ ಹಾಗೂ ಅದರ ವಿಮರ್ಶೆ.

೩. ಕನ್ನಡ ಸಮಾಸದ ಶಾಸ್ತ್ರೀಯವ್ಯಾಖ್ಯೆ ಹಾಗೂ ವಿಭಜನೆ.

ವಿಭಾಗ ೧. ಕನ್ನಡ ವ್ಯಾಕರಣದಲ್ಲಿರುವ ಸಾಂಪ್ರದಾಯಿಕ ಸಮಾಸ ವ್ಯಾಖ್ಯೆ ಹಾಗೂ ವಿಭಜನೆ.

ಸಮಾಸ ವ್ಯಾಖ್ಯೆ :

ಸಧ್ಯದಲ್ಲಿ ಕೇಶಿರಾಜನ ಶಬ್ದಮಣಿದರ್ಪಣವನ್ನು ಮಾತ್ರ ಸಾಂಪ್ರದಾಯಿಕ ಕನ್ನಡ ವ್ಯಾಕರಣಕ್ಕೆ ಪ್ರತಿನಿಧಿಯಾಗಿ ಸ್ವೀಕರಿಸಿದ್ದೇನೆ. ಆದರೂ ಅಲ್ಲಲ್ಲಿ ನಾಗವರ್ಮನನ್ನೂ ಇತರ ವ್ಯಾಕರಣ ಬರಹ, ಬರಹಗಾರರನ್ನೂ ಸಂದರ್ಭೋಚಿತವಾಗಿ ಉದಾಹರಿಸಿದ್ದೇನೆ.

ಕಱುತಾಯ ಬೞಿಯನುೞಿಯದ
ತೆಱದಿಂದಂ ನಾಮಪದಮುಪರ್ಥಾನುಗಮಾ
ಗೆಱಗೆ ಸಮಾಸಂ ನೆಗೞ್ಗುಂ
ನೆಱೆ ಪೋಕುಂ ಮಧ್ಯಗತ ವಿಭಕ್ತಿಗಳವಱೊಳ್[೩]

---

೨. ಕನ್ನಡ ಸಂಧಿಯ ವೈವಿಧ್ಯತೆ ಹಾಗೂ ನಿಯಮಗಳ ಕುರಿತು ನೋಡಿ: ವಿಲ್ಯಮ್ ಮಾಡ್ತಾ, "ಗ್ರಂಥಸ್ಥ ಕನ್ನಡದ ಸಂಧಿ ನಿಯಮಗಳು", ಕರ್ನಾಟಕ ಭಾರತಿ ೪ : ೪ (೧೯೭೧.) ಪು. ೧೨೩-೧೨೮.

೩. ಡಿ. ಎಲ್. ನರಸಿಂಹಾಚಾರ್, (ಸಂ). ಶಬ್ದಮಣಿ ದರ್ಪಣ ಸೂ. ೧೬೩. ಪು. ೧೭೯. ವಿ. ಸೂ. ಸೂತ್ರಗಳನ್ನು ನೋಡುವಲ್ಲಿ ಅಲ್ಲಿಯ ವೃತ್ತಿ ಹಾಗೂ ಪ್ರಯೋಗಗಳನ್ನೂ ಅವಲೋಕಿಸುವುದು ಒಳಿತು.

ಸಮಾಸ ಲಕ್ಷಣವನ್ನು ಸೂಚಿಸುವ ಈ ಸೂತ್ರಕ್ಕೆ ವೃತ್ತಿ ಹೀಗಿದೆ :

“ತಾಯುಂಬೞಿಯುಂ ನುಡಿಯುವ ಕಱಿವಿಸಂತೆ ನಾಮ ಪದಂಗಳ
ರ್ಥ ದೊಳನುಗತಂಗಳಾಗೆ ಸಮಾಸಂ ಘಟಿಯಿಸುಗುಂ; ಅಂತರಾಳ
ದೊಳಿರ್ದ ವಿಭಕ್ತಿಯೆಲ್ಲಂ ಪೋಕುಂ ”[೪]

ನಾಗವರ್ಮನು ತನ್ನ **ಕಾವ್ಯಾವಲೋಕನದ** “ಶಬ್ದಸ್ಮೃತಿ” ಎಂಬ ವ್ಯಾಕರಣ ವಿಭಾಗದಲ್ಲಿ—

ಸಂಗತಿಯಿಂದಂ ನಾಮಪ
ದಂಗಳವೇಕಾರ್ಥಗತಿಯೊಳಾಗೆ ಸಮಾಸಂ
ಸಂಗಳಿಸುಗುಂ......[೫].

ಎಂದು ಸಮಾಸ ಲಕ್ಷಣವನ್ನು ವ್ಯಾಖ್ಯಾನಿಸಿದ್ದಾನೆ.

ನಾಮಪದಗಳು ಏಕಾರ್ಥಗತಿಯಲ್ಲಿರಬೇಕು ಎಂದು ನಾಗವರ್ಮ ಹೇಳಿದರೆ ಕೇಶಿರಾಜ, ನಾಮಪದ ಅರ್ಥಾನುಗತವಾಗಿರಬೇಕೆಂದಿದ್ದಾನೆ. “ಇಬ್ಬರೂ ಹೇಳಿದುದು ‘ಸಮರ್ಥಃ ಪದವಿಧಿಃ’ ಎಂಬುದನ್ನೇ”[೬] ಎಂದು ಪಂಡಿತರು ಹೇಳಿದುದನ್ನು ಒಪ್ಪಬೇಕಾದುದು.

ಕನ್ನಡ ವ್ಯಾಕರಣಗಾರರು ಸಮಾಸದ ವ್ಯಾಖ್ಯೆಯನ್ನು ಹೇಳುವಲ್ಲಿ ಅರ್ಥಕ್ಕೆ ಪ್ರಾಧಾನ್ಯತೆಯನ್ನಿತ್ತಿದ್ದಾರೆ.[೭] ಆದರೆ ಅವುಗಳಲ್ಲಿ ಅರ್ಥದ ವಿವೇಚನೆ ಕಂಡು ಬರು

---

೪. ಅದೇ.

೫. ಸೂತ್ರ. ೧೭೩.

೬. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಕನ್ನಡ ಸಮಾಸಗಳು, ಪ್ರ. ೪, (೧೯೬೦).

೭. “......ಅರ್ಥದಲ್ಲಿ ಪರಸ್ಪರ ಸಂಬಂಧವುಳ್ಳ ಪದಗಳು ಒಟ್ಟು ಸೇರಿ ಒಂದು ಪದವಾಗುವುದಕ್ಕೆ ಸಮಾಸವೆಂದು ಹೆಸರು........ ಸಮಾಸದಲ್ಲಿ ಅರ್ಥಕ್ಕೆ ಮಹತ್ವ ಹೆಚ್ಚು...... ಎರಡು ಅಥವಾ ಹೆಚ್ಚು ಪದಗಳು ಒಟ್ಟುಗೂಡಿ ಒಂದು ಪ್ರಾತಿಪದಿಕವಾದಾಗ ಅವುಗಳ ನಡುವೆ ಇರುವ ವಿಭಕ್ತಿಗಳಿಗೆ ಲೋಪ ಬರುತ್ತದೆ......” ನೋಡಿ: ಕೆ. ಕಾಂತ ರೈ, ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರಸಾರ ಪು. ೬೦ (೧೯೫೪).

ವುದಿಲ್ಲ.[೮] ಕೈಪಿಡಿಗಾರನು ಮಾತ್ರ ಸಮಾಸದ ವ್ಯಾಖ್ಯೆಯಲ್ಲಿ ಅರ್ಥವನ್ನು ತರಲೇ ಇಲ್ಲ. "ಎರಡು ಅಥವಾ ಹೆಚ್ಚು ಪ್ರಕೃತಿಗಳು ಕೂಡಿ ಒಂದು ಶಬ್ದವಾದಾಗ ಸಮಾಸವಾಗುತ್ತದೆ" ಎಂದು ಆತ ಸಮಾಸವನ್ನು ವ್ಯಾಖ್ಯಾನಿಸಿದ್ದಾನೆ.[೯] ಈ ವ್ಯಾಖ್ಯೆಯಲ್ಲಿ ರೂಪ (Form) ಕ್ಕೆ ಮಾತ್ರ ಪ್ರಾಧಾನ್ಯತೆಯಿತ್ತು ಕಾರ್ಯ (Function) ಕ್ಕೆ ಅರ್ಥಾತ್ ವ್ಯಾಕರಣಾರ್ಥಕ್ಕೆ ಯಾವ ಸ್ಥಾನವೂ ಇಲ್ಲ.

ಕನ್ನಡ ವೈಯಾಕರಣಿಗಳೂ ಸಾಂಪ್ರದಾಯಿಕ ಪಂಡಿತರು ಕೊಟ್ಟ ಹಾಗು ವಿವರಿಸಿದ ಸಮಾಸ ವ್ಯಾಖ್ಯೆಗಳನ್ನು ವಿಶ್ಲೇಷಿಸಿದಾಗ ಅವರ ಮತದಂತೆ ಕನ್ನಡದಲ್ಲಿ ಬಳಸುವ ಸಮಾಸಕ್ಕೆ ಮೂರು ಲಕ್ಷಣಗಳೆಂದು ಹೇಳಬಹುದು.

---

೮. ಅರ್ಥ : ಭಾಷಾವಿಜ್ಞಾನದ ಪ್ರಕಾರ ಅರ್ಥದಲ್ಲಿ ಮೂರು ವಿಧ :

ಅ) ಶಬ್ದಾರ್ಥ (Lexical or, Dictionary meaning)

ಆ) ನಿರ್ದೇಶನಾತ್ಮಕಾರ್ಥ (Denotational or referential meaning).

ಇ) ವ್ಯಾಕರಣಾರ್ಥ (Grammatical or functional meaning).

ಶಬ್ದಾರ್ಥ : ಈ ಶಬ್ದಕ್ಕೆ ಈ ಅರ್ಥವೆಂದು ನಿಘಂಟಿನಲ್ಲಿ ಸೂಚಿಸಿದ ಅರ್ಥ. ಉದಾಹರಣಾರ್ಥವಾಗಿ { ಬೆಕ್ಕು } ಎಂಬುದರ ಶಬ್ದಾರ್ಥ 'ನಾಲ್ಕು ಕಾಲುಳ್ಳ ಮಾರ್ಜಾಲ ಜಾತಿಗೆ ಸೇರಿದ ಒಂದು ಸಾಕು ಪ್ರಾಣಿ.' ಶಬ್ದಾರ್ಥವು ಒಂದು ಸಮಾಜದಿಂದ ಕಲ್ಪಿತವಾದದ್ದು. ಕಾರಣ ಇಲ್ಲಿ ಶಬ್ದ ಮತ್ತು ವಸ್ತುವಿನ ಸಂಬಂಧ ಸಾಂಕೇತಿಕ. ಸಮಾಜ ಸಮಾಜಕ್ಕೆ ಈ ಅರ್ಥ ಬದಲಾಗುವುದರಿಂದ ಶಬ್ದಾರ್ಥ ವ್ಯಕ್ತಿಗತವಾಗಿದೆ.

ದರ್ಶನಾತ್ಮಕಾರ್ಥ : { ಬೆಕ್ಕು } ಎನ್ನುವಾಗ ಆ ಶಬ್ದ ಸೂಚಿಸುವ ಪ್ರಾಣಿ ವಿಶೇಷವನ್ನು ತೋರಿಸಿದರೆ, ಅದು ನಿರ್ದೇಶನಾತ್ಮಕಾರ್ಥ. ಇಲ್ಲಿ ಶಬ್ದಕ್ಕೂ ವಸ್ತುವಿಗೂ ನೇರ ಸಂಬಂಧ. ಆದರೆ ಭಾಷೆಯು ಸಾಂಕೇತಿಕ. ಅದು ಕಾರಣ ಭಾಷಾ ವಿಶ್ಲೇಷಣೆಯಲ್ಲಿ ದರ್ಶನಾತ್ಮಕಾರ್ಥವು ನಿಷ್ಪ್ರಯೋಜಕ.

ವ್ಯಾಕರಣಾರ್ಥ : ಒಂದು ಭಾಷಾ ಘಟಕವು ಭಾಷೆಯಲ್ಲಿ ನಡೆಯಿಸುವ ಕ್ರಿಯೆ (function) ಅರ್ಥಾತ್ ಭಾಷೆಯಲ್ಲಿ ಅದರ ವರ್ತನೆಯೇ ಆ ಘಟಕದ ವ್ಯಾಕರಣಾರ್ಥ. ಒಂದು ಘಟಕವು ಕರ್ತೃ, ಕರ್ಮ, ಕ್ರಿಯಾಪದ, ವಿಶೇಷಣ, ಲಿಂಗ ಪ್ರತ್ಯಯ, ವಚನ ಪ್ರತ್ಯಯ, ಕಾಲ ಪ್ರತ್ಯಯ ಆಗಿ ಅಥವಾ ಇನ್ನಿತರ ರೀತಿಯಲ್ಲಿ ವರ್ತಿಸಬಹುದು. ಇದೇ ವ್ಯಾಕರಣಾರ್ಥ. ಈ ಕ್ರಿಯೆ ಭಾಷೆಯಲ್ಲಿಯೇ ಜರುಗುವುದರಿಂದ ವ್ಯಾಕರಣಾರ್ಥವು ವಸ್ತುನಿಷ್ಠ. ಕಾರಣ ವಸ್ತುನಿಷ್ಠ ಭಾಷಾ ವಿಶ್ಲೇಷಣೆಯಲ್ಲಿ ವ್ಯಾಕರಣಾರ್ಥಕ್ಕೆ ಮಾತ್ರ ಪ್ರಾಧಾನ್ಯತೆ ಕೊಡಲಾಗುವುದು.

೯. ಟಿ. ಶ್ರೀನಿವಾಸ, ರಾಘವಾಚಾರ್ಯ ಮತ್ತು ಬಿ. ಕೃಷ್ಣಪ್ಪ "ಹಳಗನ್ನಡದ ವ್ಯಾಕರಣ", ಕನ್ನಡದ ಕೈಪಿಡಿ – ೧. ಪು. ೧೯. (೧೯೩೯).

ಅವು ಯಾವುವೆಂದರೆ ಸಮಾಸದಲ್ಲಿ–

ಕ) ಕನಿಷ್ಠ ಎರಡು ಪದಗಳಾದರೂ ಸೇರಬೇಕು;

ಖ) ಅಸಮಸ್ತ ಪದಗಳು ಸಮಸ್ತಪದವಾಗಬೇಕು;

ಗ) ತತ್ಪರಿಣಾಮವಾಗಿ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯಗಳೆಲ್ಲವೂ ಲೋಪವಾಗಬೇಕು.

ಸಮಾಸ ವಿಭಜನೆ:

ಶಬ್ದಮಣಿ ದರ್ಪಣದ ಕರ್ತೃ ಅರ್ಥವನ್ನವಲಂಬಿಸಿ ಕನ್ನಡದಲ್ಲಿ ಬಳಕೆಯಲ್ಲಿರುವ ಸಮಾಸಗಳ ಲಕ್ಷಣವನ್ನು ಹೇಳುತ್ತಿರುವಾಗ ೮ ಸಮಾಸಗಳನ್ನು ಸೂಚಿಸಿದ್ದಾನೆ;

ಪರಪದದೊಳರ್ಥವರ್ತನ
ಮಿರೆ ತತ್ಪುರುಷಂ ಸಮಾಂತದೇಕಾಶ್ರಯಮಾ
ಗಿರೆ ಕರ್ಮಧಾರಯಂ ನೆಲ
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ

ಪದನೆರಡು ಪಲವು ಮೇಣ್ ಪರ
ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ
ರ್ಥದ ಗಡಣಂ ದ್ವಂದ್ವಮೆನಿ
ಪ್ಪುದವ್ಯಯಿಭಾವಮಾದಿಪದ ಮುಖ್ಯತೆಯಿಂ

ವಿದಿತಂ ಕ್ರಿಯಾ ಸಮಾಸಂ
ಮೊದಲೊಳ್ ಕಾರಕ ಮುಮಗ್ರದೊಳ್ ಕ್ರಿಯೆಯುಂ ಸ
ನ್ನಿದಮಾಗೆ ಬಿಂದು ಸಕ್ಕದ
ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ

ಜನಿಯಿಸುಗುಂ ಸಂಖ್ಯಾ ಸ
ರ್ವನಾಮ ಗುಣ ವಚನ ಕೃತ್ಪ್ರ ಪೂರ್ವಂ ಗಮಕಂ
ತನಗತ್ವಂ ಪೆಱಗಿತ್ವಂ
ತನಗರಿಪದನಿಲ್ಲ ಕರ್ಮಧಾರಯಮುದುವುಂ ೧೦

ಕೇಶಿರಾಜನ ಪ್ರಕಾರ ತತ್ಪುರುಷ, ಕರ್ಮಧಾರಯ, ದ್ವಿಗು, ದ್ವಂದ್ವ, ಬಹುವ್ರೀಹಿ, ಅವ್ಯಯಿಭಾವ, ಕ್ರಿಯಾ, ಮತ್ತು ಗಮಕವೆಂದು ಕನ್ನಡದಲ್ಲಿ ಸಮಾಸ ಎಂಟು ರೀತಿಯವು. ಕ್ರಿಯಾ ಸಮಾಸವನ್ನು ಕೇಶಿರಾಜನ ಹಿಂದೆ ನಾಗವರ್ಮ ಗುರುತಿಸಿದ್ದರೂ

---

೧೦. ಡಿ. ಎಲ್. ಎನ್: ಆದೇ. ಸೂ. ೧೭೫, ೧೭೬, ೧೭೮, ೧೭೯.

ಭಟ್ಟಾಕಳಂಕನು ತನ್ನ ಶಬ್ದಾನುಶಾಸನದ ಸೂತ್ರಗಳಲ್ಲಿ ಇವರ ಪ್ರಸ್ತಾಪ ಮಾಡಲಿಲ್ಲ[೧೧]. ಕನ್ನಡ ವೈಯಾಕರಣಿಗಳಲ್ಲಿ ಗಮಕ ಸಮಾಸದ ಪ್ರಸ್ತಾಪವನ್ನು ಮಾಡಿದವನು ಕೇಶಿರಾಜನೊಬ್ಬನೆ.

ವಿಭಾಗ ೨: ಸಾಂಪ್ರದಾಯಿಕ ಸಮಾಸ ವಿವರಣೆ ಹಾಗೂ ಅದರ ವಿಮರ್ಶೆ

ಅ) ತತ್ಪುರುಷ:

ಪರಪದದೊಳರ್ಥವರ್ತನ
ಮಿರೆ ತತ್ಪುರುಷಂ[೧೨]

ಪರಪದವು ಅರ್ಥ ಪ್ರಧಾನವಾಗಿ[೧೩]. ಪೂರ್ವ ಪದದೊಡನೆ ಕೂಡಿ ಆಗುವ ಸಮಾಸವೇ ತತ್ಪುರುಷ. ಮಲ್ಲಿಗೆನನೆ, ಮೆಯ್ಗಲಿ, ನಾಯಿಬಾಲ, ಅರಮನೆ — ಈ ಪದ ಪುಂಜಗಳಲ್ಲಿ ಪರ ಪದಗಳಾದ ನನೆ, ಕಲಿ, ಬಾಲ, ಮನೆ ಎಂಬೀ ಪದಗಳು ಅರ್ಥ ಪ್ರಧಾನಗಳಾಗಿ ಪ್ರಥಮಾ ವಿಭಕ್ತಿಯಲ್ಲಿವೆ. ಕಾರಣ ಅವು ತತ್ಪುರುಷ. ಪೂರ್ವ ಪದಗಳಾದ* ಮಲ್ಲಿಗೆಯು, ಮೆಯ್ಯು, ಮತ್ತು ನಾಯಿಯು ಎಂಬೀ ಪದಗಳು ಸಮಾಸದ ಉಪಾಂಗಗಳಾಗಿವೆ. ಯಾವ ಪದವು ಕ್ರಿಯೆಗೆ ಆಶ್ರಯವನ್ನು ಕೊಡುತ್ತದೆ, ಅದೇ ಪ್ರಧಾನಾಂಗ ಅರ್ಥಾತ್ ಅರ್ಥ ಪ್ರಧಾನ ಪದ[೧೪]

ಆ) ಕರ್ಮಧಾರಯ:

.... ಸಮಂತಮೇಕಾರ್ಥ್ಯಮಾ
ಗಿರೆ ಕರ್ಮಧಾರಯಂ ....[೧೫].

---

೧೧. "ಭಟ್ಟಾಕಳಂಕನು ಕ್ರಿಯಾ ಸಮಾಸವನ್ನು ತತ್ಪುರುಷದೊಳಗೆ ಸೇರಿಸಿ ಹೇಳುತ್ತಾನೆನ್ನುವಂತಿದೆ ಅವನು ತನ್ನ ಶಬ್ದಾನುಶಾಸನದ ಸೂತ್ರಗಳಲ್ಲಿ ಬಹುವ್ರೀಹಿ ಮತ್ತು ದ್ವಂದ್ವ ಎಂಬ ಎರಡು ಸಮಾಸಗಳ ಹೆಸರನ್ನು ಮಾತ್ರ ಹೇಳುತ್ತಾನೆ. ಅಂಶಿ ಸಮಾಸದ ಹೆಸರನ್ನು ವ್ಯಾಖ್ಯಾನದಲ್ಲಿ ಹೇಳಿದ್ದರೂ ಸೂತ್ರವೃತ್ತಿಗಳಲ್ಲಿ ಆ ಹೆಸರಿಲ್ಲ." ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ. ಪು. ೧೯.

೧೨. ಡಿ. ಎಲ್. ಎಸ್. ಅದೇ. ಸೂ. ೧೭೫

೧೩. "ಪ್ರಧಾನ" ಎಂಬ ಪದಕ್ಕೆ ನೇರವಾದ ಅರ್ಥವಲ್ಲದೆ ಇನ್ನೊಂದು ಅರ್ಥವಿದೆ ಅರ್ಥಾತ್ ಅದು ಪ್ರಥಮಾ ವಿಭಕ್ತಿಯನ್ನು ಸೂಚಿಸುತ್ತದೆಂಬುದು ಸೇಡಿಯಾಪು ಕೃಷ್ಣಭಟ್ಟರ ಅಭಿಪ್ರಾಯ. ನೋಡಿ: ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ, ಪು. ೬. ಮತ್ತು ಅಲ್ಲಿಯ ಅ. ಟಿ. ೧. ವಿ. ಸೂ. ಆದರೆ ಈ ಅಭಿಪ್ರಾಯ ಸರಿಯಲ್ಲ. ಉದಾ: ಕರ್ಮಧಾರಯ ಸಮಾಸ.

* ಪೂರ್ವಪದ ಪದಗಳನ್ನು ಸಮಾಸ ಪದವನ್ನು ಗಮನಿಸಿ ಹೇಳುತ್ತೇವೆಯಲ್ಲದೆ ವಿಗ್ರಹ ವಾಕ್ಯವನ್ನು ನೋಡಿಯಲ್ಲ.

೧೪. ಅದೇ. ಪು. ೨೧.

೧೫. ಅದೇ.

— ಎಂದು ಕೇಶಿರಾಜನು ಹೇಳುವಲ್ಲಿ ಪೂರ್ವಪರ ಪದಗಳು ಅನ್ಯೋನ್ಯ ಆಶ್ರಯ ಪಡೆಯಬೇಕೆಂದರ್ಥ ಹೊರಡುತ್ತದೆ. ಕಾರಣ ಈ ಸಮಾಸದಲ್ಲಿ ಪೂರ್ವೋತ್ತರ ಪದಗಳು ಪ್ರಧಾನವಾಗಿರಬೇಕು ; ಅಂತೆಯೇ ಅವು ಪ್ರಥಮಾ ವಿಭಕ್ತಿಯಲ್ಲಿರಬೇಕು.

ಕೇಶಿರಾಜನಿತ್ತ ಪೆಳ್ಗದಂಪು, ಒಳ್ಗನ್ನಡಂ, ಮೆಲ್ನುಡಿ ಮುಂತಾದ ಲಕ್ಷ್ಯಗಳನ್ನು ಗಮನಿಸಿದಾಗ ಮೊದಲನೆಯದಾಗಿ ಉತ್ತರ ಪದಗಳೆಲ್ಲವೂ (ಕದಂಪು, ಕನ್ನಡಂ, ನುಡಿ...) ನಾಮಪದಗಳು (nouns) ಪೂರ್ವಪದಗಳೆಲ್ಲವೂ (ತೆಳ್, ಒಳ್, ಮೆಲ್) ನಾಮ ವಿಶೇಶಣಗಳು (noun-qualitis) ಆಗಿವೆ.

ಎರಡನೆಯದಾಗಿ, ನಾಮ ವಿಶೇಷಣಗಳು ಸಂಖ್ಯಾವಾಚಿ (numeral) ಗಳಾಗಿಲ್ಲ. ಈ ಗುಣಗಳು(qualities) ಕರ್ಮಧಾರಯ ಸಮಾಸಕ್ಕಿತ್ತ ಎಲ್ಲಾ ಲಕ್ಷ್ಯಗಳಿಗೆ ಹೊಂದು ತ್ತವೆಯಾದುದರಿಂದ ಅವು ಕರ್ಮಧಾರಯ ಸಮಾಸದ ಲಕ್ಷಣಗಳಾಗಿರಬೇಕೆಂದೆನಿಸು ತ್ತದೆ. ಅದರ ಬದಲು ಪೂರ್ವೋತ್ತರ ಪದಗಳು ಅನ್ಯೋನ್ಯ ಆಶ್ರಯ ಪಡೆಯಬೇ ಕೆಂದಿದ್ದಾನೆ. ಇದರ ಸ್ಪಷ್ಟ ಅರ್ಥವೇನು ? ಇದನ್ನು ಕೇಶಿರಾಜ ತನ್ನ ಸೂತ್ರ,ಟೀಕು, ವೃತ್ತಿಗಳಲ್ಲಿ ಎಲ್ಲಿಯೂ ಸ್ಪಷ್ಟಪಡಿಸಲಿಲ್ಲ.

ಪೂರ್ವೋತ್ತರಪದಗಳು ಅನ್ಯೋನ್ಯ ಆಶ್ರಯ ಪಡೆಯುವುದು ಎನ್ನುವಾಗ ನನಗಂತೂ ಮೂರು ಅರ್ಥಗಳು ಹೊಳೆಯುತ್ತವೆ:

೧. ಪೂರ್ವಪರಪದಗಳು ಸೇರಿ ಸಮಸ್ತಪದವಾಗುವುದು.
೨. ಈ ಎರಡೂ ಪದಗಳ ಅರ್ಥ ಪ್ರಧಾನವಾಗಿದ್ದು ಎರಡೂ ಪ್ರಥಮಾ ವಿಭಕ್ತಿಯಲ್ಲಿರುವುದು.
೩. ಉತ್ತರಪದ ಮಾತ್ರ ಅರ್ಥಪ್ರಧಾನವಾಗಿದ್ದು ಎರಡೂ ಪದಗಳು ಪ್ರಥಮಾ ವಿಭಕ್ತಿಯಲ್ಲಿರುವುದು.

ಮೊದಲನೆಯ ಅರ್ಥವು ಸಮಂಜಸವಲ್ಲ. ಯಾಕೆಂದರೆ ಅದು ಸಮಾಸವನ್ನೇ ಹೊಂದಿಕೊಂಡು ಹೋಗುತ್ತದೆಯೇ ಹೊರತು ಅದರ ಪ್ರಭೇದವೊಂದಕ್ಕೆ ಸೀಮಿತ ವಾಗಿಲ್ಲ. ಎರಡನೆಯ ಅರ್ಥವೂ ಹಿತವೆನಿಸುವದಿಲ್ಲ. ಏಕೆಂದರೆ ಕೇಶಿರಾಜನೇ ಪದಾ ರ್ಥದ ಗಡಣಂ ದ್ವಂದ್ವಮೆನಿಪ್ಪುದು".[೧೬] ಎಂದು ಮುಂದೆ ಹೇಳಿದ್ದಾನೆ. "ಅದು ಏಕಾಶ್ರಯಮಾಗಿರೆ ಕರ್ಮಧಾರಯಂ" ಎಂದು ಹೇಳುವಲ್ಲಿ ತತ್ಪುರುಷ ಸಮಾಸವೇ ಅನ್ಯೋನ್ಯಾಶ್ರಯವಾಗಿದ್ದರೆ ಕರ್ಮಧಾರಯ ಸಮಾಸವಾಗುತ್ತದೆಂಬ ಅರ್ಥ ಸೂತ್ರ ಹಾಗೂ ಟೀಕು[೧೭]–ಇವುಗಳಿಂದ ಹೊರಡುತ್ತದೆ. ತತ್ಪುರುಷದಲ್ಲಿ ಪೂರ್ವ ಪದಾರ್ಥ ಪ್ರಧಾನವಾಗಿಲ್ಲ ಹಾಗೂ ಪ್ರಥಮಾ ವಿಭಕ್ತಿಯಲ್ಲಿಲ್ಲ: ಈ ವಸ್ತುಸ್ಥಿತಿ

೧೬. ಅದೇ.
೧೭. ಅದೇ. ಪು. ೧೮೦-೧.

ಬದಲಾಗಿಕೊಂಡು, ಉತ್ತರ ಪದಾರ್ಥವು ಮಾತ್ರ ಪ್ರಧಾನವಾಗಿ ಉತ್ತರ ಹಾಗೂ ಪೂರ್ವಪದಗಳೆರಡೂ ಪ್ರಥಮಾ ವಿಭಕ್ತಿಯಲ್ಲಿದ್ದರೆ—ಆ ತತ್ಪುರುಷವೇ ಕರ್ಮಧಾರಯ ವೆನಿಸಿಕೊಳ್ಳುವುದು.

ಉದಾಹರಣೆಗೆ. ಬೆಳ್ಗೊಡೆ ಎಂಬ ಸಮಾಸ ಪದದ ಉಪಾಂಗಗಳು ಬಿಳಿಯ+ ಕೊಡೆ ಎಂದು ತಿಳಿದುಕೊಂಡರೆ {ಬೆಳ್ಗೊಡೆ} ಯೆಂಬುದು ತತ್ಪುರುಷ ಸಮಾಸ. ಯಾಕೆಂದರೆ ಉತ್ತರ ಪದವಾದ {ಕೊಡೆ} ಇಲ್ಲಿ ಅರ್ಥಪ್ರಧಾನವಾಗಿದ್ದು, ಪ್ರಥಮಾ ವಿಭಕ್ತಿಯಲ್ಲಿದೆ. ಪೂರ್ವಪದವಾದ {ಬಿಳಿಯ} ಅರ್ಥಪ್ರಧಾನವೂ ಅಲ್ಲ, ಪ್ರಥಮಾ ವಿಭಕ್ತಿಯಲ್ಲೂ ಇಲ್ಲ.

ಬಿಳಿದು + ಕೊಡೆ — ಎಂಬುವು ಆ ಸಮಾಸ ಪದದ ಉಪಾಂಗಗಳೆಂದು ತಿಳಿದು ಕೊಂಡರೆ ಉತ್ತರ ಪದವಾದ {ಕೊಡೆ} ಮಾತ್ರ ಅರ್ಥ ಪ್ರಧಾನವಾಗಿದ್ದು ಪೂರ್ವೋತ್ತರ ಪದಗಳೆರಡೂ ಪ್ರಥಮಾ ವಿಭಕ್ತಿಯಲ್ಲಿವೆ, ಆದು ಕಾರಣ {ಬೆಳ್ಗೊಡೆ} ಯೆಂಬುದು ಕರ್ಮಧಾರಯವೆನಿಸುತ್ತದೆ.

ಒಟ್ಟಿನಲ್ಲಿ ವಿಗ್ರಹವಾಕ್ಯವನ್ನವಲಂಬಿಸಿ ಬೆಳ್ಗೊಡೆ, ಮಾಮರ, ಪೆರ್ದಲೆ ಮೊದ ಲಾದವುಗಳು ತತ್ಪುರುಷವೂ ಆಗಬಹುದು. ಕರ್ಮಧಾರಯವೂ ಆಗಬಹುದು. ವಿಗ್ರಹ ವಾಕ್ಯ ಮಾಡುವ ಶಕ್ತಿ ಓದುಗನ, ಬರಹಗಾರನ, ವೈಯಾಕರಣಿಯ ಜ್ಞಾನ ವನ್ನವಲಂಬಿಸಿ ಭಿನ್ನಭಿನ್ನವಾಗಿರುವುದು ಸಹಜ. ಈ ಕಾರಣದಿಂದಾಗಿ ಕನ್ನಡವ್ಯಾಕ ರಣ ಸಂಪ್ರದಾಯದಲ್ಲಿ ಸಮಾಸ ಲಕ್ಷಣವನ್ನು ನಿಶ್ಚಯಿಸುವ ಮಾನದಂಡ (criterion) ವಸ್ತುಗತ (objective) ಆಗಿರುವ ಬದಲು ಹೆಚ್ಚಾಗಿ ವ್ಯಕ್ತಿಗತ (Sudjective) ವಾಗಿ ದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ದ್ವಿಗು

........................ಸೆಲ
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ[೧೮]

ಉತ್ತರ ಪದ ಪ್ರಧಾನವಾಗಿದ್ದು ಪೂರ್ವಪದವು ಸಂಖ್ಯಾವಾಚಿಯಾದರೆ ಆ ತತ್ಪುರು- ಷವು ದ್ವಿಗುವೆನಿಸುವುದು.

ಕೇಶಿರಾಜನು ದ್ವಿಗು. ಕರ್ಮಧಾರಯ ಮತ್ತು ತತ್ಪುರುಷಕ್ಕೆ ಕೊಟ್ಟ ಉದಾಹರಣೆ ಗಳನ್ನು ಗಮನಿಸಿದರೆ ಅವೆಲ್ಲವೂ ಮೂಲತಃ ಒಂದೇ ಸಮಾಸಕ್ಕೆ ಸೇರಿದವುಗಳೆಂದು ತಿಳಿದುಕೊಳ್ಳಬಹುದು.

ಉದಾಹರಣೆಗಳು :

ಅ) ದ್ವಿಗುವಿಗೆ :

ಎರಡು+ಮಾತು —> ಎರಟ್ಮಾತು

---

೧೮. ಅದೇ. ಸೂ. ೧೭೫.

ಇರ್ವರ್ + ಪೆಂಡಿರ್ —> ಇರ್ಪೆಂಡಿರ್

ಮೂಱು + ಬಾಳ್ —> ಮೂವಾಳ್

ಆ) **ಕರ್ಮಧಾರಯಕ್ಕೆ :**

ತೆಳ್ಳಿತು[೧೯] + ಕದಂಪು —> ತೆಳ್ಗದಂಪು

ಒಳ್ಳಿತು + ಕನ್ನಡಂ —> ಒಳ್ಗನ್ನಡಂ

ಮೆಲ್ಲಿತು + ನುಡಿ —> ಮೆಲ್ನುಡಿ

ಇ) **ತತ್ಪುರುಷಕ್ಕೆ :**

ಮಲ್ಲಿಗೆಯ + ನನೆ —> ಮಲ್ಲಿಗೆನನೆ

ಮಾಣಿಕದ + ಕೆಂಪು —> ಮಾಣಿಕಗೆಂಪು

ಮೇಲೆ ತೋರಿಸಿದ ಎಲ್ಲಾ ಉದಾಹರಣೆಗಳಲ್ಲಿ ಉತ್ತರ ಪದಗಳು ಅರ್ಥ ಪ್ರಧಾನವಾಗಿದ್ದ ಪೂರ್ವಪದಗಳು ಅವಕ್ಕೆ ವಿಶೇಷಣಗಳಾಗಿವೆ.[೨೧] ಕಾರಣ ಅವೆಲ್ಲವುಗಳನ್ನು **ಉತ್ತರ ಪದಾರ್ಥ ಪ್ರಧಾನ ಸಮಾಸ**ವೆಂದು ಕರೆಯುವದು ವ್ಯಾಕರಣ ಕ್ರಿಯಾ (grammatical function) ದೃಷ್ಟಿಯಿಂದ ಉಚಿತ.

೧೯.

ತೆಳ್ಳಿತು ಒಳ್ಳಿತು ಮೆಲ್ಲಿತು	——> O.P.T.	ತೆಳ್ ಒಳ್ ಮೆಲ್

೨೦. ದ್ವಿಗುವಿನಲ್ಲಿ ಪೂರ್ವಪದಗಳು ಸಂಖ್ಯಾವಾಚಿಯಾಗಿದ್ದರೂ ತತ್ಪುರುಷದಲ್ಲಿ ಅವು ನಾಮಪದಗಳಾದರೂ ಗುಣವಚನಗಳಾಗಿ ವರ್ತಿಸುವುದರಿಂದ ಅವು ವಿಶೇಷಣ (qualifier) ಗಳೇ. ಮಲ್ಲಿಗೆ + ಅ ——> ಮಲ್ಲಿಗೆಯ ಎಂಬಲ್ಲಿ ಕೂಡಿ ಬಂದ ಷಷ್ಠಿ ವಿಭಕ್ತಿ ಸಂಬಂಧ ಸೂಚಕವಾಗಿದೆ. **ನೋಡಿ.** (Herold spencer, **A Kanarese Grammar,** P. 259–60, (h)
ಕನ್ನಡದಲ್ಲಿ ಒಂದುನಾಮಪದ ಇನ್ನೊಂದು ನಾಮಪದದ ಪೂರ್ವದಲ್ಲಿ ಬಂದರೆ ಅದು ವಿಶೇಷಣವಾಗುವುದು. ಇಂಗ್ಲೀಷಿನಲ್ಲಿಯೂ ಕೆಲವು ಉದಾಹರಣೆಗಳನ್ನು ಕೊಡಬಹುದು : Lord-God, Mother Church, God-father ಇತ್ಯಾದಿಗಳಲ್ಲಿ ಪೂರ್ವಪದಗಳಾದ Lord, Mother ಮತ್ತು God ಎಂಬವು ಇಲ್ಲಿ ವಿಶೇಷಣಗಳು.

ಉದಾಹರಣೆಗೆ :-

ಪಿರಿದು + ಮರಂ —> ಪೆರ್ಮರಂ

ಪಟಿದು + ಕನ್ನಡಂ —> ಪಟಿಗನ್ನಡಂ

ನಿಡಿದು + ನಾಲಗೆ —> ನಿಡುನಾಲಗೆ

ತೂಗುವದು + ತೊಟ್ಟಿಲ್ —> ತೂಗುಂದೊಟ್ಟಿಲ್

ಅವ್ಯಯೀಭಾವ :

" ಅವ್ಯಯೀಭಾವಮಾದಿಪದ ಮುಖ್ಯತೆಯಿಂ "[21]

ಪೂರ್ವಪದವು ಪ್ರಧಾನವಾದರೆ ಅವ್ಯಯೀಭಾವವೆಂದು ಸೂತ್ರದ ಅರ್ಥ. ಆದ್ದರಿಂದ ಅವ್ಯಯೀಭಾವವು **ಪೂರ್ವಪದಾರ್ಥ ಪ್ರಧಾನ ಸಮಾಸ.** ಕನ್ನಡ ಕೈಪಿಡಿಗಾರನು "ಪೂರ್ವಪದವು ಅಂಶವಾಚಕವಾಗಿಯೂ ಉತ್ತರ ಪದವು ಅಂಶಿವಾಚಕವಾಗಿಯೂ ಇದ್ದು ಆಗುವ ಸಮಾಸವು ಅಂಶಿ ಸಮಾಸ" ಎಂದು ಹೇಳಿದ್ದಾನೆ.[22]

ನಾಗವರ್ಮ ಕೇಶಿರಾಜರು ಈ ಸಮಾಸವನ್ನು ಅವ್ಯಯೀಭಾವ ಎಂದು ಕರೆದರೂ ಭಟ್ಟಾಕಳಂಕನು ಮಾತ್ರ ಅಂಶೀ ಸಮಾಸವೆಂದು ಅದನ್ನು ಕರೆದಿದ್ದಾನೆ. ಹೀಗೆ ಕರೆಯುವುದೇ ಸಮಂಜಸ.[23]

ಕೇಶಿರಾಜ ಹಾಗೂ ಕೈಪಿಡಿಗಾರರು ಕೊಟ್ಟ **ಅಂಶೀ ಸಮಾಸದ** ವ್ಯಾಖ್ಯೆಗಳನ್ನು ಕೂಡಿಸಿದರೆ ಒಂದು **ಸಮಗ್ರವ್ಯಾಖ್ಯೆ** ಹೊರಡುವುದು—**ಪೂರ್ವಪದ ಪ್ರಧಾನವಾಗಿದ್ದು ಅದು ಅಂಶವಾಚಕವಾಗಿಯೂ ಉತ್ತರಪದವು ಅಂಶಿವಾಚಕವಾಗಿಯೂ ಇದ್ದರೆ ಅದು ಅಂಶಿ ಸಮಾಸವೆನಿಸುವುದು.** ಪ್ರಸ್ತುತ ವ್ಯಾಖ್ಯೆಯಲ್ಲಿ ಅಂಶಿ ಸಮಾಸದ ಎಲ್ಲ ಲಕ್ಷಣಗಳು ಹೇಳಲಾಗಿವೆ.

---

೨೧. ಡಿ. ಎಲ್. ಎನ್. ಅದೇ. ಸೂ. ೧೭೯.

೨೨. ಕನ್ನಡ ಕೈಪಿಡಿ - ೧. ಪು. ೨೨ (೧೯೬೯). ನೋಡಿ: Herold Spencer, **Ibid, P. 359—60 M, S. Andronov, The Kannada Language,**

೨೩. " ಸಂಸ್ಕೃತದಲ್ಲಿ ಅವ್ಯಯೀಭಾವ ಸಮಾಸವಾದಾಗ ನಿಷ್ಪನ್ನವಾದ ಸಮಸ್ತ ಪದವು ಅವ್ಯಯವಾಗಿ ನಿಲ್ಲುತ್ತದೆ. ಕನ್ನಡದಲ್ಲಿ ಅವ್ಯಯವಾಗಿ ನಿಲ್ಲುವುದಿಲ್ಲ ; ನಾಮ ಪದವಾಗಿ ಉಳಿಯುತ್ತದೆ. ಈ ಕಾರಣದಿಂದ ಸಂಸ್ಕೃತದ ಅವ್ಯಯೀಭಾವವೆಂಬ ಹೆಸರು ಕನ್ನಡದ ಮಟ್ಟಿಗೆ ಸಮುಚಿತವೆನಿಸಲಾರದು. " ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ. ಪು. ೪೦.

ಉದಾಹರಣೆಗಳು :

ಪೊಡೆಯು + ಕೆಳಗು —> ಕಿಟ್ಬೊಡೆ[೨೪]
ಕಯ್ಯ + ಅಡಿ —> ಅಂಗಯ್
ಇಲ್ಲಿನ[೨೫] + ಪಿಂತು —> ಪಿಂತಿಲ್

ಈ ಸಮಾಸ ಪದಗಳಲ್ಲಿ ಪೂರ್ವ ಪದಗಳಾದ ಕೆಳಗು, ಅಡಿ, ಪಿಂತು ಅರ್ಥ ಪ್ರಧಾನಗಳಾಗಿ ಪ್ರಥಮಾ ವಿಭಕ್ತಿಯಲ್ಲಿವೆ.[೨೬]

ಅಂಗಾಲ್, ಪಿಂಗಾಲ್, ಬೆಂಬಿಸಿಲ್—ಈ ಉದಾಹರಣೆಗಳನ್ನು ನೋಡಿದಾಗ ಅವು ವಿಗ್ರಹ ವಾಕ್ಯವನ್ನು ಹೊಂದಿಕೊಂಡು ಬೇರೆ ಬೇರೆ ಪದದ ಸಮಾಸಗಳಾಗುತ್ತವೆ!

ಬೆಂಬಿಸಿಲ್	—>	ಬೆಚ್ಚನೆ + ಬಿಸಿಲ್	ಕರ್ಮಧಾರಯ	ಸಮಾಸ
		ಬಿಸಿಲ + ಬೆನ್ನ್	ಅಂಶೀ	
ಮುಂಗಾಲ್		ಮುಂದಣ + ಕಾಲ್	ತತ್ಪುರುಷ	
		ಕಾಲ + ಮುಂದು	ಅಂಶೀ	
ಪಿಂಗಾಲ್		ಪೆಱಗಣ + ಕಾಲ್	ತತ್ಪುರುಷ	
		ಕಾಲ + ಪೆಱಗು	ಅಂಶೀ	

೨೪. ಕೆಲವರು ಕೆಳಗು + ಪೊಡೆಯು, ಅಡಿ + ಕಯ್ಯ.... ಎಂದೂ ವಿಗ್ರಹಿಸುವುದುಂಟು. ಉದಾಹರಣಾರ್ಥವಾಗಿ **ನೋಡಿ :** ಕೆ. ಶಾಂತ ರೈ, **ಅದೇ.** ಪು. ೬೪–೫.

"ಸ್ವಲ್ಪ ವಿಚಾರ **ಮಾಡಿದರೆ ಪೊಡೆಯು + ಕೆಳಗು** ಮತ್ತು ಕಯ್ಯ + ಅಡಿ ಎಂದೇ ವಿಗ್ರಹಿಸುವುದು ಸರಿಯೆಂದು **ಗೊತ್ತಾದೀತು.** 'ವಿಗ್ರಹ ವಾಕ್ಯ' ವೆಂಬುದರಲ್ಲಿರುವ ವಾಕ್ಯವೆಂಬ ಪದವೇ ಇವಕ್ಕೆ ದಾರಿದೀಪವಾಗುತ್ತದೆ. ಕನ್ನಡದಲ್ಲಿ ಅನ್ವಯಾನುಸಾರವಾಗಿ ಪದವ್ಯವಸ್ಥೆಯಿರಬೇಕಾದುದು ಈ ಭಾಷೆಯ ಪ್ರಕೃತಿಗುಣ. ಅಡಿ + ಕಯ್ಯ ಮುಂತಾಗಿದ್ದರೆ ಪದಗಳು ಅನ್ವಯಾನುಸಾರವಾಗಿಲ್ಲದೆ ವಿಗ್ರಹ ವಾಕ್ಯವೆಂಬ ಹೆಸರಿಗೆ ಸರಿಯಾದ ಸಾರ್ಥಕತೆಯನ್ನು ಕೊಡುವಂತಿಲ್ಲ. ಆದರೆ ಪೂರ್ವ ಪದಾರ್ಥ ಪ್ರಧಾನವಾಗಿರಬೇಕಾದ ಸಮಾಸವನ್ನು ವಿಗ್ರಹಿಸುವಾಗ ಪೂರ್ವ ಪದವನ್ನು ಉತ್ತರ ಪದವನ್ನಾಗಿ ಇರಿಸಬಹುದೇ ಎಂಬ ಶಂಕೆಯುಂಟಾಗುತ್ತದೆ. ಇದಕ್ಕೆ ಸಮಾಧಾನ ಸುಲಭ; **ನಿಷ್ಪನ್ನ ಪದದಲ್ಲಿ ಪೂರ್ವಪದವಾವುದು, ಉತ್ತರಪದವಾವುದು, ಎಂಬುದನ್ನು ಮಾತ್ರ ಗಮನಿಸಿದರೆ ಈ ಶಂಕೆ ಪರಿಹಾರವಾಗುತ್ತದೆ......**" ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, **ಅದೇ.** ಪು. ೪೦. ವಿ. ಸೂ. ದಪ್ಪಾಕ್ಷರಗಳು ಮೂಲದಲ್ಲಿರಲಿಲ್ಲ.

೨೫. ಇಲ್ + ಅ —> ಇಲ್ಲಿನ 'ಮನೆಯು'

೨೬. **ನೋಡಿ :** ಅ. ಟಿ. ೨೪ ರಲ್ಲಿಯ ದಪ್ಪಾಕ್ಷರಗಳು.

ಇಲ್ಲಿ ಸಮಾಸವನ್ನು ಗುರುತಿಸುವಲ್ಲಿ ಸಂದರ್ಭ, ವಿಗ್ರಹವಾಕ್ಯದ ರೀತಿ, ಮೊದಲಾದ ಅನೇಕ ಒರೆಗಲ್ಲುಗಳ ಸಹಾಯ ಪಡೆಯಬೇಕಾಗುತ್ತದೆ. ಕಾರಣ ವೈಜ್ಞಾನಿಕ ಸರಳತೆ ಇಲ್ಲಿ ಕಂಡುಬರುವುದಿಲ್ಲ. ಒಂದೇ ಒರೆಗಲ್ಲಿನಿಂದ ಎಲ್ಲ ಸಮಾಸಗಳನ್ನು ವರ್ಗೀಕರಿಸುವುದು ವೈಜ್ಞಾನಿಕ ದೃಷ್ಟಿಯಿಂದ ಉತ್ತಮ.

ದ್ವಂದ್ವ :

"ಪದಾರ್ಥದ ಗಡಣಂ ದ್ವಂದ್ವಮೆನಿಪ್ಪುದು" ೨೭.
ಅನೇಕ ಪದಗಳು ಸೇರಿ ಆಗುವ ಸಮಾಸವೇ ದ್ವಂದ್ವ ೨೮.
"ದ್ವಂದ್ವ ಸಮಾಸದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು
ಪದಾರ್ಥಗಳು ಸೇರಿ ಸಮಾಸವಾಗುವುದು ... ..." ೨೯

ಎಂದು ಪಂಡಿತರು ಹೇಳಿ ಬಂದಿದ್ದಾರೆ.

ಅನೇಕ ಪದಗಳು ಸೇರಿ ಸಮಾಸವಾಗುವುದು ದ್ವಂದ್ವಕ್ಕೆ ಸೀಮಿತವಾದುದೆ? ಅನೇಕವೆಂದರೆ ಒಂದಕ್ಕಿಂತ ಹೆಚ್ಚು ಇದು ಪ್ರತಿ ಸಮಾಸದ ಲಕ್ಷಣವಾದುದರಿಂದ ದ್ವಂದ್ವ ಸಮಾಸದ ವಿಶಿಷ್ಟ ಲಕ್ಷಣ ಕೇಶಿರಾಜನಿತ್ತ ದ್ವಂದ್ವ ಸಮಾಸದದ ವ್ಯಾಪ್ತಿಯಲ್ಲಿ ಕಂಡುಬರುವುದಿಲ್ಲ.

ದ್ವಂದ್ವಕ್ಕೆ ಉದಾಹರಣೆಗಳು : [೩೦]

ಅ) ಆಟಮುಂ + ಪಾಟಮುಂ + ಕೂಟಮುಂ —> ಆಟಪಾಟಕೂಟಂಗಳ್

ಆ) ಮರಮುಂ + ಗಿಡಮುಂ + ಬಳ್ಳಿಯುಂ + ಪುಲ್ಲುಂ + ಪೊದರುಂ + ಪಕ್ಕಿಯುಂ ಮಿಗಮುಂ —> ಮರಗಿಡಬಳ್ಳಿಪುಲ್ಪೊದರ್ಪಕ್ಕಿಮಿಗಂಗಳ್.

ಈ ಉದಾಹರಣೆಗಳನ್ನು ಪರಿಶೀಲಿಸಿದಾಗ ಮುಖ್ಯವಾಗಿ ಮೂರು ವಿಶಿಷ್ಟ ಗುಣಗಳು ಕಂಡುಬರುತ್ತವೆ. ಮೊದಲನೆಯದಾಗಿ ಪ್ರತಿ ಪದಾರ್ಥವೂ ಪ್ರಧಾನವಾಗಿದೆ. ಎರಡನೆಯದಾಗಿ ಪ್ರಥಮಾ ವಿಭಕ್ತಿಯಲ್ಲಿದೆ. ಮೂರನೆಯದಾಗಿ ಅದು ಸಮುಚ್ಚಯದಿಂದ ಕೂಡಿದೆ. ಕಾರಣ, —

ಸಮುಚ್ಚಯದಿಂದ ಕೂಡಿ ಸರ್ವ ಪದಾರ್ಥ ಪ್ರಧಾನವಾಗಿ, ಪ್ರಥಮಾ ವಿಭಕ್ತಿಯನ್ನೊಳಗೊಂಡ ಪದಗಳು ಸೇರಿ ಆಗುವ ಸಮಾಸವೇ ದ್ವಂದ್ವವೆಂದು ಅದನ್ನು ವ್ಯಾಖ್ಯಾನಿಸಬಹುದು.

---

೨೭. ಡಿ. ಎಲ್. ಎನ್. ಅದೇ. ಸೂ. ೧೭೯.

೨೮. "ಪದಾರ್ಥಂಗಳ ಸಮುಚ್ಚಯಂ ದ್ವಂದ್ವಮಕ್ಕುಂ" ಅದೇ. ವೃತ್ತಿ: ಪು. ೧೮೨,

೨೯. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ. ಪು. ೩೩.

೩೦. ತಾಯ್ತಂದೆಗಳ್, ಅಣ್ಣತಮ್ಮಂದಿರು, ರಾಮಲಕ್ಷ್ಮಣರು, ಆನೆಕುದುರೆಗಳು. ಹಣ್ಣುಕಾಯಿ, ಕೈಕಾಲು......

ಕೇಶಿರಾಜನಿತ್ತ ದ್ವಂದ್ವ ಸಮಾಸದ ವ್ಯಾಖ್ಯೆಯಂತೂ ಅಸ್ಪಷ್ಟವೆಂದು ಪುನಃ ಇಲ್ಲಿ ಹೇಳಬೇಕಾಗುತ್ತದೆ.

ಬಹುವ್ರೀಹಿ :

ಪದನೆರಡು ಪಲವು ಮೇಣ್ ಪರ
ಪದಾರ್ಥಮಂ ಬಯಸುತಿರೆ ಬಹುವ್ರೀಹಿ ....[೨೧].

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಕೂಡಿಕೊಂಡ ಸಮಾಸಪದವು ಬೇರೊಂದೇ ಅರ್ಥವನ್ನು ಸೂಚಿಸುವುದಾದರೆ ಅದು ಬಹುವ್ರೀಹಿ ಸಮಾಸ. ಇದು **ಅನ್ಯ ಪದಾರ್ಥ ಪ್ರಧಾನ ಸಮಾಸ.** ಕಡುಚಾಗಿ, ಜಲವಾದಿ, ಕಡುಗೇಡಿ, ನಿಡುಮೂಗಿ ಇತ್ಯಾದಿಗಳು ಈ ಸಮಾಸಕ್ಕೆ ಉದಾಹರಣೆಗಳು.

ಕ್ರಿಯಾ :

ವಿದಿತಂ ಕ್ರಿಯಾ ಸಮಾಸಂ
ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸ
ನ್ನಿದಮಾಗೆ ಬಿಂದು ಸಕ್ಕದ
ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ[೨೨].

ಪೂರ್ವ ಪದದಲ್ಲಿ ಕಾರಕ ಬಂದು ಪರಪದದಲ್ಲಿ ಕ್ರಿಯಾರ್ಥ ಅಭಿವ್ಯಕ್ತಿಗೊಂಡರೆ ಅದು ಕ್ರಿಯಾ ಸಮಾಸವೆಂದು ಸೂತ್ರದ ಅರ್ಥ, ಪರಪದವು ಕ್ರಿಯಾಪದವಾಗಬೇಕಾಗಿಲ್ಲ; ಕೃದಂತವೂ ಆಗಬಹುದೆಂದು ಉದಾಹರಣೆಗಳನ್ನು[೨೩] ಗಮನಿಸಿದಾಗ ತಿಳಿಯುತ್ತದೆ.

ಬಳೆಯಂ + ತೊಟ್ಟಂ —> ಬಳೆದೊಟ್ಟಂ 'ಬಳೆದೊಟ್ಟವನು'
ರಂಗಮಂ + ಪೊಕ್ಕಂ —> ರಂಗಬೊಕ್ಕಂ 'ರಂಗವನ್ನು ಹೊಕ್ಕವನು'
ಧನಮಂ + ಪಡೆದಂ —> ಧನಂಬಡೆದಂ 'ಧನವನ್ನು ಪಡೆದವನು'

ಕೇಶಿರಾಜನ ಕ್ರಿಯಾಸಮಾಸಕ್ಕೆ ಉದಾಹರಣೆಗಳನ್ನು ಪರಿಶೀಲಿಸಿದರೆ ಕ್ರಿಯಾರ್ಥ ಸೂಚಿತವಾಗಿರುವ ಪರಪದ ಕನ್ನಡವಾಗಿದೆ. ಅಲ್ಲದೆ. ಅದು ಅರ್ಥ ಪ್ರಧಾನ ವಾಗಿದ್ದು, ಪ್ರಥಮಾ ವಿಭಕ್ತಿಯಲ್ಲಿದೆ. ಇದು ಕ್ರಿಯಾ ಸಮಾಸದ ಲಕ್ಷಣವೆನಿಸುತ್ತದೆ. ಇದು ಸರಿಯಾದರೆ ಕೇಶಿರಾಜ ತನ್ನ ವ್ಯಾಖ್ಯೆಯಲ್ಲಿ ಈ ಲಕ್ಷಣಗಳನ್ನು ಸೇರಿಸದೆ

---

೨೧. ಡಿ. ಎಲ್. ಎನ್. ಅದೇ. ಸೂ. ೧೭೬.

೨೨. ಅದೇ. ಸೂ. ೧೭೮.

೨೩. ಮಜ್ಜಿಪೊಕ್ಕಂ, ಗುಣಂಗೊಂಡಂ, ಪ್ರಿಯಂನುಡಿದಂ....

ಇರುವುದಂ ದೋಷಮೇ ಸರಿ. **ಉತ್ತರ ಪದಾರ್ಥ ಪ್ರಧಾನವಾದ ಈ ಸಮಾಸದಲ್ಲಿ** ಅರಿ ಸಮಾಸ ದೋಷವಿಲ್ಲ [೨೪].

ಗಮಕ:

ಜನಿಯಿಸುಗುಂ ಸಂಖ್ಯಾಸ
ರ್ವನಾಮ ಗುಣವಚನ ಕೃತ್ಪ್ರ ಪೂರ್ವಂ ಗಮಕಂ
ತನಗತ್ತಂ ಪೆಱಗಿತ್ತಂ
ತನಗರಿಪದನಿಲ್ಲ ಕರ್ಮಧಾರಯಮದುಪ್ಪಂ [೨೫]

ಈ ಸೂತ್ರಕ್ಕೆ ಕೊಟ್ಟ ವೃತ್ತಿ ಹೀಗಿದೆ:

ಪರಪದದೊಳ್ ಕಾರಕಮುಂ ಪೂರ್ವಪದದೊಳ್ ಸಂಖ್ಯೆ, ಸರ್ವನಾಮ ಗುಣವಚನ ಕೃದಂತಂಗಳೊಳಪ್ಪುವಿದೊರ್ಡದು ಗಮಕಸಮಾಸಮಕ್ಕುಂ; ಗುಣವಚನದ ಅಂತರಾಳದೊಳೊಂದಕಾರಂ ಪಿಂತಣಮೆಯ್ಯೊಳ್ ಇಕಾರಮಕ್ಕುಂ; ಇದಱೊಳರಿ ಸಮಾಸದೋಷಮಿಲ್ಲ; ಅದು ಕರ್ಮಧಾರಯದ ಭೇದಮೆತ್ತಾನುಂ ತತ್ಪುರುಷ ಮಪ್ಪುದು. [೨೬]

ಸಂಖ್ಯಾ, ಸರ್ವನಾಮ, ಗುಣವಚನ ಕೃದಂತಗಳು ಪೂರ್ವಪದವಾಗಿದ್ದು ಉತ್ತರ ಪದವು ಕಾರಕವಾಗಿದ್ದರೆ ಗಮಕ ಸಮಾಸವೆಂದು ಸೂತ್ರದ ಪೂರ್ವಾರ್ಧ ವ್ಯಾಖ್ಯಾನಿಸಿದರೆ ಅದು ಕರ್ಮಧಾರಯವು ಹೌದು, ಕೆಲವು ಸಲ ತತ್ಪುರುಷವೂ ಸರಿಯೆಂದು ಉತ್ತರಾ-ರ್ಧವು ಹೇಳುತ್ತದೆ.

ಕೇಶಿರಾಜ ಗಮಕ ಸಮಾಸವನ್ನು ಕನ್ನಡದ ವೈಶಿಷ್ಟ್ಯಗಳಲ್ಲೊಂದು ಎಂದು ಘಂಟಾಘೋಷವಾಗಿ ಸಾರಿದ್ದಾನೆ. [೨೭] ಆದರೂ ಇದು ಸಮಾಸವು ಹೌದೋ

---

೨೪. ಇದಱೊಳರಿಪದಂ ನಿರ್ದೋಷಂ
ಸವಣಂ ಬಳಪಂಗೊಳೆಗಾಂ
ಡಿವಿ ಬಿಲ್ಗೊಳೆ ಬಲ ವಿರೋಧಿ ವಜ್ರಂಗೊಳೆ ದಾ
ನವರಿಪು ಚಕ್ರಂಗೊಳೆ ಕೌ
ರವಾರಿಗದೆಗೊಳೆ ಪೊಣರ್ಕೆಗಾವಂ ನಿಲ್ವಂ
ಅದೇ. ಪು. ೧೮೪-೫.

೨೫. ಅದೇ. ಸೂ. ೧೭೬.

೨೬. ಅದೇ. ಪು. ೧೮೫.

೨೭. ಗಮಕ ಸಮಾಸದಿಂ ಜಟಿ ಕುಳಕ್ಷಳದಿಂ ಶ್ರುತಿಸಸ್ಯ ಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿ ಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ವಮುಪಪ ಭೇದದಿಂ ವಿರಚಿತಾನ್ವಯ ಸಂಸ್ಕೃತ ಲಿಂಗ ಪದೋ
ತ್ತಮ ಶಿಥಿಲತ್ವದಿಂ ಯತಿ ವಿಲಂಘನದಿಂದರಿಪಲ್ಕೆ ಕನ್ನಡಂ
ಅದೇ. ಸೂ. ೨೪೭

ಅಲ್ಲವೋ ಎಂಬ ಪ್ರಶ್ನೆ ಎದ್ದೇಳಿರುವುದು ಕುತೂಹಲಕರ.[೩೮] ಕನ್ನಡ ಪಂಡಿತರೆಲ್ಲರೂ ಹಿಂದಿನಿಂದ ಇಂದಿನವರೆಗೂ ಪಾಂಡಿತ್ಯ, ಶೈಲಿ, ವೈಖರಿಗಳನ್ನೊಳಗೊಂಡ ವ್ಯಾಕರಣ ಪಾಠ, ಲೇಖನ ಹಾಗೂ ಪುಸ್ತಕಗಳಲ್ಲಿ ಸದಾ ಕೇಶಿರಾಜನ ಕಾಣ್ಕೆಯಾದ (ಆದರೆ ದುರಾದೃಷ್ಟವಶಾತ್ ಕನ್ನಡದಲ್ಲಿರದ!) ಗಮಕ ಸಮಾಸದ ಬಗ್ಗೆ ಪ್ರಸ್ತಾಪಿಸಿದ್ದಾರೆ.[೩೯]

ಇಂಥ ಗೊಂದಲಮಯ ಹಿನ್ನೆಲೆಯಲ್ಲಿ ಸಾವಧಾನ ಹಾಗೂ ತಾಳ್ಮೆಯಿಂದ ವಸ್ತುಗತವಾಗಿ ಗಮಕ ಸಮಾಸವು ಸಮಾಸವೇ ಎಂಬ ಪ್ರಶ್ನೆಯನ್ನು ಉತ್ತರಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

ಮೊದಲನೆಯದಾಗಿ ವೈಯಾಕರಣಿಗಳು ಕೊಟ್ಟ ಹಾಗೂ ಪಂಡಿತರಿಂದ ಅಂಗೀಕರಿಸಲ್ಪಟ್ಟ ಸಮಾಸದ ವ್ಯಾಖ್ಯೆ ಗಮಕಕ್ಕೆ ಅನ್ವಯಿಸುವುದಾದರೆ ಮಾತ್ರ ಗಮಕವನ್ನು ಸಮಾಸವೆಂದು ಕರೆಯಬೇಕು.

ಎರಡನೆಯದಾಗಿ ಗಮಕ ಸಮಾಸವನ್ನು ಇತರ ಸಮಾಸ ಪ್ರಭೇದಗಳೊಂದಿಗೆ ಸೇರಿಸಲಾಗದಿದ್ದರೆ ಮಾತ್ರ ಅದಕ್ಕೆ ವಿಶಿಷ್ಟ ಅಸ್ತಿತ್ವ: ವಸ್ತುಸ್ಥಿತಿ ಹೀಗೆ ಇಲ್ಲದಿದ್ದಲ್ಲಿ ಅದನ್ನು ಪ್ರತ್ಯೇಕ ಸಮಾಸವೆಂದು ಹೇಳುವುದು ಪಾಂಡಿತ್ಯಕ್ಕಿಂತಲೂ ಸತ್ಯಕ್ಕೆ ಚ್ಯುತಿ ತಂದಂತೆ.

ಗಮಕ ಸಮಾಸದ ಪ್ರಸ್ತುತ ವಿವೇಚನೆಯಲ್ಲಿ ವ್ಯಕ್ತಿನಿಷ್ಠತೆಗೆ ಸ್ಥಾನವನ್ನೀಯದೇ ವಸ್ತುನಿಷ್ಠತೆಗೆಸ್ಥಾನವನ್ನಿತ್ತು ಮುಂದುವರಿಯಬೇಕಾಗುತ್ತದೆ.

ಗಮಕಸಮಾಸಕ್ಕೆ ಕೇಶಿರಾಜನಿತ್ತ ಪ್ರಯೋಗಗಳನ್ನು ನೋಡುವ.[೪೦] ಈ ಪ್ರಯೋಗಗಳನ್ನು ಎರಡು ಪಂಗಡಗಳನ್ನಾಗಿ ವಿಭಜಿಸಬಹುದು.

೧) ಪೂರ್ವಪದದ ಪ್ರತ್ಯಯಗಳು ಲೋಪ ಆಗದೆ ನಿವೃತವಿರಾಮವನ್ನೊಳಗೊಂಡವುಗಳು.

೨) ಇತರ ಪದಗಳು.

---

೩೮. ವಿ. ಕೃಷ್ಣಸ್ವಾಮಿ ಅಯ್ಯಂಗಾರ, "ಗಮಕ ಸಮಾಸ" **ಕನ್ನಡ ನುಡಿ** ೨೮ : ೪ (೧೯೬೫).

೩೯. ಅ) ಮು. ಪ್ರ. ಪೂಜಾರ, **ಕೆಲವು ಕನ್ನಡ ವ್ಯಾಕರಣ ವಿಚಾರಗಳು**, (1952).
ಆ) ಟಿ. ಶ್ರೀನಿವಾಸ ರಾಘವಾಚಾರ್ಯರು ಮತ್ತು ಬಿ. ಕೃಷ್ಣಪ್ಪನವರು, "ಹಳಗನ್ನಡದ ವ್ಯಾಕರಣ" **ಕನ್ನಡ ಕೈಪಿಡಿ** – ೧. (೧೯೩೯)
ಇ) ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, **ಕನ್ನಡ ಸಮಾಸಗಳು** (೧೯೭೦). ಶಾಲಾ ವ್ಯಾಕರಣ ಪಠ್ಯ ಪುಸ್ತಕಗಳಲ್ಲಿಯೂ ಗಮಕ ಪ್ರಸ್ತಾಪ ಕಾಣಬಹುದು. ಉದಾಹರಣೆಗೆ **ನೋಡಿ**. ಕೆ. ಕಾಂತ ರೈ, **ಅದೇ**. ಇತ್ಯಾದಿ.

೪೦. ಡಿ. ಎಲ್. ಎನ್. ಅದೇ. ೧೮೫...

ಮೊದಲನೆಯ ವರ್ಗಕ್ಕೆ ಉದಾಹರಣೆಗಳು.

ಸೂಜಿ ಪತ್ತು, ಅವ ಮಾತು, ಅವ ಕಾಂತೆ, ಅಸಿಯ ನಡು, ಪಾಡುವ ತುಂಬಿ, ಬೀಸುವ ಚಾಮರ....... ಇವು "ಕಱುತಾಯುಬೞಿಯನುಬೀಯದ ತೆಱದಿಂದಂ...... ಎಱಗಿ" ಇಲ್ಲವಾದುದರಿಂದ ಅವು ಬಿಡಿಪದಗಳೇ ಹೊರತು ಸಮಸ್ತ ಪದಗಳು — ಸಮಾಸಗಳು — ಅಲ್ಲ.

ಎರಡನೆಯದಾಗಿ ಪೂರ್ವಪರ ಪದಗಳ ನಡುವೆ ವಿರಾಮ ಸೇರಿಕೊಂಡಿರುವುದರಿಂದ ಅವು ಎಂದೆಂದಿಗೂ ಸಮಸ್ತ ಪದಗಳಲ್ಲ.

ಮೂರನೆಯದಾಗಿ ಮಧ್ಯದಲ್ಲಿ ಬರುವ ಪ್ರತ್ಯಯಗಳು ಅಲ್ಲಿ ಲೋಪವಾಗುವುದಿಲ್ಲ.[೪೧] ಈ ಕಾರಣಗಳಿಂದಾಗಿ ಅವು ಸಮಾಸಗಳೇ ಅಲ್ಲವೆಂದು ಖಚಿತವಾಗಿ ಹೇಳಬಹುದು.

ಇತರ ಪದಗಳಿಗೆ ಉದಾಹರಣೆಗಳು:

ಇರ್ಪತ್ತೈದು. ಮೂವತ್ತಾಱು.—ಇವು ಸಮಸ್ತ ಪದಗಳು. ಪೂರ್ವಪದಗಳಾದ (ಇರ್ಪತ್ತ). (ಮೂವತ್ತ) ಇವು ಪರಪದಗಳಾದ (ಐದು) ಮತ್ತು (ಆಱು)ಗಳ ವಿಶೇಷಣಗಳು. ಇರ್ಪತ್ತು + ಅ > ಇರ್ಪತ್ತ. ಇಲ್ಲಿಯ (—ಅ) ಷಷ್ಠೀ ವಿಭಕ್ತಿ, ಅದು ಸಂಬಂಧ ಸೂಚಕ.[೪೨] ಪೂರ್ವಪದಗಳು ವಿಶೇಷಣವಾಗಿ ಪರಪದವು ಪ್ರಥಮಾ ವಿಭಕ್ತಿಯಲ್ಲಿರುವುದರಿಂದ ಇವು ತತ್ಪುರುಷಗಳು. ಕಾರಣ ಅವುಗಳನ್ನು ಗಮಕ ಸಮಾಸಗಳೆಂದು ಯಾಕೆ ಕರೆಯಬೇಕು?

ಇರ್ಪತ್ತು + ಐದು —> ಇರ್ಪತ್ತೈದು
ಮೂವತ್ತು + ಐದು —> ಮೂವತ್ತೈದು

— ಈ ರೀತಿಯಲ್ಲಿ ವಿಂಗಡಿಸಿದರೆ ಅವು ದ್ವಂದ್ವಗಳಾಗುತ್ತವೆ. ಒಂದೇ ಪದಪುಂಜ ಒಂದು ದೃಷ್ಟಿಯಿಂದ ತತ್ಪುರುಷ ಇನ್ನೊಂದು ದೃಷ್ಟಿಯಿಂದ ದ್ವಂದ್ವ! ಒಟ್ಟಿನಲ್ಲಿ ಸಾಂಪ್ರದಾಯಿಕ ಸಮಾಸ ವ್ಯಾಖ್ಯೆ ಹಾಗೂ ವಿಭಜನೆಗಳಲ್ಲಿ ವ್ಯಕ್ತಿನಿಷ್ಠತೆಯೇ ಹೊರತು ವಸ್ತುನಿಷ್ಠತೆ ಹಾಗೂ ಶಾಸ್ತ್ರೀಯತೆ (Scientificness) ಇಲ್ಲವೆನ್ನುವುದು ಕ್ವಚಿತ್.

ಕೇಶಿರಾಜನು ಗಮಕ ಸಮಾಸದ ವ್ಯಾಖ್ಯೆಯಲ್ಲಿ "ತನಗತ್ವಂಪೆಱಗಿತ್ತಂ" ಎಂಬ ಲಕ್ಷಣವನ್ನು ಹೇಳಿದ್ದಾನೆ. ವೃತ್ತಿಯಲ್ಲಿ "ಗುಣವಚನದ ಅಂತರಾಳದೊಳೊಂದಕಾರಂ ಪಿಂತಣ ವ್ಯಂಜನದೊಳ್ ಇಕಾರಮುಕ್ಕುಂ" ಎಂದು ಸ್ಪಷ್ಟಪಡಿಸಿದ್ದಾನೆ. ಆದರೆ ಆತನು ಕೊಟ್ಟ ಎಲ್ಲ ಉದಾಹರಣೆಗಳಲ್ಲಿ "ಪೆಱಗಿತ್ತಂ" ಬರುವುದಿಲ್ಲ.

---

೪೧. 'ನೆಱೆ ಪೋಕುಂ ಮಧ್ಯಗತ ವಿಭಕ್ತಿಗಳವಱೊಳ್' ಅದೇ. ಸೂ. ೧೭೩ ವೃತ್ತಿಯಲ್ಲಿ ಯಲ್ಲಿಯೂ "ಅಂತರಾಳದೊಳಿರ್ದ ವಿಭಕ್ತಿಯೆಲ್ಲಂ ಪೋಕುಂ ಎಂದು ಸ್ಪಷ್ಟವಾಗಿ ಹೇಳಿರುವದನ್ನು ಇಲ್ಲಿ ಗಮನಿಸಬೇಕು

೪೨ Herold Spencer. ಅದೇ.

"ಇತ್ವಂ ಇಲ್ಲದವುಗಳು :

ಪಾಡುವ ತುಂಬಿ, ಕೋಡುವ ಪುಟಿಲ್, ತೂಗುವ ತೊಟ್ಟಿಲ್....

"ಇತ್ವಂ" ಉಳ್ಳವುಗಳು : ಬಿಳಿಯ ಕರ್ಬು. ನಿಡಿಯ ನಾಲಗೆ, ಕಿಱಿಯ ಮಗಂ, ಆಡಿದ ಪೊಲಂ, ಪಿಡಿವ ಕಹಳೆ....

ಕೆಲವೆಡೆಗಳಲ್ಲಿ "ತನಗತ್ವಂ ಪೆಱಗಿತ್ವಂ" ಇಲ್ಲದಿದ್ದರೂ ಅವುಗಳನ್ನೂ ಗಮಕ ಸಮಾಸವೆಂದು ಕರೆಯುವಲ್ಲಿ ಕೇಶಿರಾಜನ ವ್ಯಾಖ್ಯೆಯಲ್ಲಿರುವ ಅನಿರ್ದಿಷ್ಟತೆ ಹಾಗೂ ಅಶಾಸ್ತ್ರೀಯತೆ ಕಣ್ಣು ಕುಕ್ಕುವಂತಿದೆ.

ಸಮಾಸಪದಗಳನ್ನು ವೀಕ್ಷಿಸುವಾಗ ಅದರ ಉಪಾಂಗಗಳ (constituents) ಸ್ವರೂಪ ತಟ್ಟನೆ ತಿಳಿಯುವುದಿಲ್ಲ: ಸಮಸ್ತ ಪದ, ರೂಪದಲ್ಲಿ ಕ್ಲಿಷ್ಟ. ಅಸಮಸ್ತ ಪದಗಳು ಕೂಡುವಲ್ಲಿ ಉಂಟಾಗುವ ಧ್ವನಿಮಾ ಬದಲಾವಣೆ (Phonemic change)ಯೇ ಇದಕ್ಕೆ ಕಾರಣ ಉದಾಹರಣೆಗೆ :–

ಪಿರಿದು + ಮರಂ—→ಪೆರ್ಮರಂ

ಪಟಿದು + ಕನ್ನಡಂ—→ಪಟಿಗನ್ನಡಂ

ನಿಡಿದು + ನಾಲಗೆ—→ನಿಡುನಾಲಗೆ

ತೂಗುಂವದು + ತೊಟ್ಟಿಲ್ ತೂಗುಂದೊಟ್ಟಿಲ್

ಮೇಲಣ ಸಮಾಸ ಪದಗಳಲ್ಲಿ ಬರುವಂತಹ ಸ್ವರೂಪ ಕ್ಲಿಷ್ಟತೆ ಈ ಕೆಳಗಿನ ಉದಾಹರಣೆಗಳಲ್ಲಿಲ್ಲ : ಪಿರಿಯ ಮರಂ, ಪಟಿಯ ಕನ್ನಡಂ, ನಿಡಿಯ ನಾಲಗೆ, ತೂಗುವ ತೊಟ್ಟಿಲು.

ಎರಡನೆಯದಾಗಿ ಸಮಸ್ತ ಪದಗಳಲ್ಲಿ ಪರಪದದ ಆದಿಯ ಅಘೋಷಗಳು ಘೋಷಗಳಾಗುವುದು ಕನ್ನಡದ ಜಾಯಮಾನ[೪೩] ಆದರೆ ಕೇಶಿರಾಜನು ಗಮಕ ಸಮಾಸಕ್ಕೆ ಕೊಟ್ಟ ಉದಾಹರಣೆಗಳಲ್ಲಿ ಈ ಸಂಧಿಕಾರ್ಯ ನಡೆಯುವದಿಲ್ಲ.[೪೪] ಯಾಕೆಂದರೆ ಅಸಮಸ್ತ ಪದಗಳು ಇಲ್ಲಿ ಕೂಡಿಕೊಂಡು **ಸಮಸ್ತ ಪದಗಳಾಗಲೇ** ಇಲ್ಲ. ಕಾರಣ ಗಮಕ **ಸಮಾಸಕ್ಕೆ** ಆಸ್ಪದವೆಲ್ಲಿ ?

" ಗಮಕ ಸಮಾಸವೆಂಬ ಬೇರೊಂದು ವರ್ಗವಿಲ್ಲದಿದ್ದಲ್ಲಿ, ಕನ್ನಡದಲ್ಲಿ ಪ್ರಯೋಗದಲ್ಲಿರುವ ಆ ಮನೆ, ಹಿರಿಯ ಮಗ, ತೂಗುವ ತೊಟ್ಟಿಲು, ಮೂವತ್ತನಾಲ್ಕು ಮುಂತಾದವುಗಳಿಗೆ ಗತಿ ಕಲ್ಪಿಸಲು ಸಾಧ್ಯವಾಗದು " ಎಂಬ ನಿರಾಶೆ ಅಲ್ಲಲ್ಲಿ ಆಗಾಗ ಕೇಳಿಬರು

---

೪೩. ವಿಲ್ಯಮ್ ಮಾಡ್ತಾ, " ಗ್ರಂಥಸ್ಥ ಕನ್ನಡದ ಸಂಧಿ ನಿಯಮಗಳು " ಅದೇ.

೪೪. " ಗಮಕ ಸಮಾಸದಲ್ಲಿ ಉತ್ತರ ಪದಾದಿಗೆ ಯಾವ ಆದೇಶವೂ ಇರಕೂಡದು " ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ. ಪು. ೫೯. ಇಲ್ಲಿ ಇರಕೂಡದು ಎಂಬ ನಿಯಮ ಹೊರಿಸುವ ಬದಲು 'ಇರಲಸಾಧ್ಯ' ವೆಂದರೆ ವಸ್ತುಸ್ಥಿತಿ ವಿವರಿಸಿದಂತಾಗುತ್ತಿತ್ತು.

ತ್ತದೆ.[೪೫] ಆದರೆ ಕನ್ನಡದ ಎಲ್ಲ ರಚನೆಗಳು ಸಮಾಸವೇ ಆಗಬೇಕೆಂಬ ನಿಯಮ ವೆಲ್ಲಿದೆ? ಬಳಕೆಯ ಮಾತಿನಂತೆ ಅರ್ಥಸ್ಪಷ್ಟತೆ ಇರುವ ಆದರೆ ಸಮಾಸ ಲಕ್ಷಣಗಳನ್ನು ಸೇರಿಸಿಕೊಳ್ಳದ ಪದಪುಂಜಗಳು ಇರಬಾರದೆ? ನಿಡಿಯ ನಾಲಗೆ, ತೂಗುವತೊಟ್ಟಿಲು ಮುಂತಾದವುಗಳು ಕಾಫಿಯ ರುಚಿ, ಕುಡಿಯುವ ನೀರು ಮೊದಲಾದವುಗಳಂತೆ ಪದ ಪುಂಜಗಳು (Phrases)ಮಾತ್ರ; ಸಮಾಸಗಳು (compound) ಅಲ್ಲ, ಯಾಕೆಂದರೆ ಅವುಗಳಲ್ಲಿ ಸಮಾಸ ಲಕ್ಷಣಗಳಿಲ್ಲ.

ಕೇಶಿರಾಜನು ಗಮಕ ಸಮಾಸಕ್ಕಿತ್ತ ಉದಾಹರಣೆಗಳನ್ನು ವಿಶ್ಲೇಷಿದಲ್ಲಿ ಕೆಲವು ಸಮಾಸಗಳು ಇವೆ. ಅವು ತತ್ಪುರುಷವೋ ದ್ವಂದ್ವವೋ ಆಗುತ್ತವೆ. ಉಳಿದವುಗಳು ಸಮಾಸಗಳೇ ಅಲ್ಲವೆಂದು ಸಕಾರಣಗಳನ್ನು ಕೊಟ್ಟು ವಸ್ತುನಿಷ್ಠವಾಗಿ ವಿವರಿಸಿದ ಮೇಲೆ

> ಗಮಕ ಸಮಾಸದಲ್ಲಿ ಪೂರ್ವ ಪದವಾಗಿ ಬರುವುವುಗಳನ್ನು ನಾಮ, ಆಖ್ಯಾತ ಮತ್ತು ಅವ್ಯಯವೆಂಬ ಕನ್ನಡದಲ್ಲಿರುವ ಮೂರು ವರ್ಗ ಗಳಿಂದ ಭಿನ್ನವಾದ ವರ್ಗಗಳಲ್ಲಿ ಸೇರಿಸಲು ಸಾಧ್ಯವಾದರೆ ಗಮಕ ಸಮಾಸವು ಸಮಾಸವೇ ಅಲ್ಲ ಎಂದು ಸಾಧಿಸಬಹುದು. ಅದುವರೆಗೆ ಗಮಕ ಸಮಾಸವೆಂಬುದುದಿದೆ; ಇದು ಕನ್ನಡದ ಅಸಾಧಾರಣ ಲಕ್ಷಣ ಗಳಲ್ಲೊಂದು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.[೪೬]

ಎಂಬ ಮಾತು ಸತ್ಯವನ್ನು ಕಳೆದುಕೊಳ್ಳುತ್ತದೆಂದು ಒತ್ತಿ ಹೇಳಬೇಕಾಗಿಲ್ಲ. ಒಂದು ಪದ ಪುಂಜದಲ್ಲಿ ಸಮಾಸ ಲಕ್ಷಣಗಳಿದ್ದರೆ ಮಾತ್ರ ಅದು ಸಮಾಸವಾಗಬಲ್ಲುದೆ ವಿನಹ, ಅವು "ನಾಮ, ಆಖ್ಯಾತ ಮತ್ತು ಅವ್ಯಯ"[೪೭]ವೆಂಬ ವರ್ಗಗಳಲ್ಲಿ ಸೇರು ವುದರಿಂದ ಅಲ್ಲ!

"ಗಮಕ ಸಮಾಸದಿಂ............ಅರಿವರ್ತ್ತಿ[೪೮] ಕನ್ನಡಂ"

ಎಂದು ಕನ್ನಡದ ಅಸಾಧಾರಣ ಲಕ್ಷಣವನ್ನು ಹೇಳಿದ ವೈಯಾಕರಣ ಕೇಶಿರಾಜನೊಬ್ಬನೆ

---

೪೫. ಅದೇ.

೪೬. ಅದೇ. ಪು. ೫೯-೬೦.

೪೭. ಕೇಶಿರಾಜನಿತ್ತ 'ಗಮಕ ಸಮಾಸ' ಉದಾಹರಣೆಗಳಲ್ಲಿ ಯಾವ ಪೂರ್ವಪದ ಅವ್ಯಯಗಳಲ್ಲಿ ಸೇರುತ್ತದೆ? - ಎಂಬ ಪ್ರಶ್ನೆ ಏಳುತ್ತದೆ. ಪೂರ್ವಪದಗಳೆಲ್ಲವೂ ಷಷ್ಠೀ ವಿಭಕ್ತಿ ಪ್ರತ್ಯಯವನ್ನು ಕೂಡಿಕೊಂಡಿವೆ. ಅವುಗಳನ್ನು "ಅವ್ಯಯ ವರ್ಗಕ್ಕೆ ಸೇರಿಸುವಂತಿಲ್ಲ" ಎಂದು ಭಟ್ಟರೇ ಹೇಳಿದ ಮೇಲೆ ಪುನಃ ಅವ್ಯಯದ ಮಾತು ಬಂದದ್ದು ಗೊಂದಲಕ್ಕೆ ಕಾರಣವಾಗುತ್ತದೆ. ಭಟ್ಟರ ಕನ್ನಡ ಸಮಾಸಗಳು ಪುಸ್ತಕದ ೫೯-೬೦ ನೇ ಪುಟಗಳನ್ನು ಓದಿರಿ.

೪೮. "ಅರಿ = ಕತ್ತರಿಸು, ಅಱಿ = ತಿಳಿ" ನೋಡಿ. ಕನ್ನಡ ಕೈಪಿಡಿ. ಪು. ೪ ಈ ಸಂದ ರ್ಭದಲ್ಲಿ 'ತಿಳಿ' ಎಂಬ ಅರ್ಥ ಸಮಂಜಸವಾದುದರಿಂದ /ಅಱಿವರ್ತ್ತಿ/ ಎಂಬುದೇ ಉಚಿತ!

ಈತನಿಗೆ **ಪ್ರಾಚೀನನಾದ ಕವಿರಾಜ ಮಾರ್ಗಗಾರನಾಗಲೀ ಅರ್ವಾಚೀನನಾದ ಭಟ್ಟಾಕಳಂಕನಾಗಲೀ ಗಮಕ ಸಮಾಸವನ್ನು ಹೆಸರಿಸಿಲ್ಲ.** ಇದು ಇವರ ವಸ್ತುನಿಷ್ಠತೆಗೆ ನಿದರ್ಶನವೇ ಹೊರತು ಅವರ ಕುಂದು ಕೊರತೆಯಲ್ಲ. ಕೇಶಿರಾಜನು ಗಮಕ ಸಮಾಸವನ್ನು ಹೆಸರಿಸಿ ಕನ್ನಡದ ಅಸಾಧಾರಣ ಲಕ್ಷಣ ಹೇಳುವ ಬದಲು ತನ್ನ ಅ-ಶಾಸ್ತ್ರೀಯತೆಯನ್ನೇ ತೋರಿಸಿದಂತಾಗಿದೆ.

ವಿಭಾಗ ೩ : ಕನ್ನಡ ಸಮಾಸದ ಶಾಸ್ತ್ರೀಯ ವ್ಯಾಖ್ಯೆ ಹಾಗೂ ವಿಭಜನೆ

ವಿವೃತ ವಿರಾಮವನ್ನು ಕಳಕೊಂಡ ವಾಕ್ಯಬದ್ಧ ರಚನೆಯೇ **ಸಮಾಸ** (compound morpheme).[೨೯] ಸಮಾಸದ ಪರಿಣಾಮವಾಗಿ ಧ್ವನಿಮಾ ವ್ಯವಸ್ಥೆಯು ಪುನರ್ ವ್ಯವಸ್ಥಿತಗೊಳ್ಳುತ್ತದೆ.[೩೦]

ಕನ್ನಡವಲ್ಲಿಸಮಾಸಗಳು ಜರುಗಿರುವ ಭಾಷಾ ಕ್ರಿಯೆ(Linguistic Funtion)[೩೧] ಅರ್ಥಾತ್ ಸಮಾಸಗಳ ವ್ಯಾಕರಣಾರ್ಥ (Grammatical/Functional Meaning) ವನ್ನು ಗಮನಿಸಿದಾಗ ಕನ್ನಡವಲ್ಲಿ ಎರಡೇ ಎರಡು ಸಮಾಸಗಳನ್ನು ಗುರುತಿಸುತ್ತೇವೆ. ಭಾಷಾಭ್ಯಾಸವಲ್ಲಿ, ಭಾಷೆಯ ವಸ್ತುಗತ ವಿವೇಚನೆಯಲ್ಲಿ, ಭಾಷಾ ಕ್ರಿಯೆಯನ್ನು ಅವಲಂಬಿಸದಿದ್ದರೆ ಅದು ವೈಜ್ಞಾನಿಕವಾಗಲಾರದು. ಅಂತೆಯೇ ಸಮಾಸ ವಿವೇಚನೆಯಲ್ಲಿ ವ್ಯಾಕರಣಾರ್ಥವಾದವನ್ನು ಅವಲಂಬಿಸದಿದ್ದರೆ ವಿಗ್ರಹವಾಕ್ಯ ಮಾಡುವ ಚಮತ್ಕಾರವನ್ನೋ ಸಂದರ್ಭ ಸನ್ನಿವೇಶಗಳನ್ನೋ[೩೨] ಅಥವಾ ಇತರ ವೈಯಕ್ತಿಕ ಮಾನದಂಡಗಳನ್ನೋ ಗಮನಕ್ಕೆ ತೆಗೆದುಕೊಳ್ಳಬೇಕಾಗುವದು. ಕಾರಣ ಸಮಾಸದ ವಸ್ತುಗತ ವಿವೇಚನೆಯಲ್ಲಿ ಭಾಷಾ ಕ್ರಿಯೆಯನ್ನು ಅವಲಂಬಿಸುವುದು ಅನಿವಾರ್ಯ ಹಾಗೂ ಸಮಂಜಸ.

ವಸ್ತುಗತ ದೃಷ್ಟಿಯಿಂದ ಕನ್ನಡವಲ್ಲಿ ಬಳಕೆಯಲ್ಲಿರುವ ಸಮಾಸಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು :

---

೨೯. ಕನ್ನಡ ಅಕೃತಿಮಾ ಪುಂಜಗಳನ್ನು ವೀಕ್ಷಿಸಿದ ಬಳಿಕ ಸಮಾಸದ ಪ್ರಸ್ತುತ ವ್ಯಾಖ್ಯೆಯನ್ನು ಕೊಟ್ಟುದುದರಿಂದ ಸಮಾಸದ ಈ ವ್ಯಾಖ್ಯೆಯು ಕನ್ನಡಕ್ಕೆ ಸೀಮಿತ. ಅದು ಇತರ ಭಾಷಾ ಸಮಾಸಗಳಿಗೆ ಅನ್ವಯಿಸಬಹುದು ಅಥವಾ ಅನ್ವಯಿಸದಿರಬಹುದು.

೩೦. Phonemic re-arrangement takes place as a consequence of the compounding of two or more morphemes.

೩೧. ಸಮಾಸವು ಭಾಷೆಯಲ್ಲಿ ನಾಮಪದವಾಗಿಯೋ, ಕ್ರಿಯಾಪದವಾಗಿಯೋ, ವಿಶೇಷಣವಾಗಿಯೋ ಅಥವಾ ಇನ್ನಾವ ರೀತಿಯಲ್ಲಿ ವರ್ತಿಸುವುದನ್ನೇ ಇಲ್ಲಿ ಭಾಷಾಕ್ರಿಯೆಯೆಂದು ಕರೆಯುತ್ತೇವೆ

೩೨. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅದೇ. ಪು. ೪೨.

೧) ಅಂತಃ ಕೇಂದ್ರಿಯ (Endocentric) ಸಮಾಸ

ಕ್ರಿಯಾ ಕೇಂದ್ರ[೫೩]ವನ್ನೊಳಗೊಂಡ ಸಮಾಸವೇ ಅಂತಃಕೇಂದ್ರೀಯ ಸಮಾಸ.[೫೪]

೨) ಬಹಿಃಕೇಂದ್ರೀಯ (Exo-centric) ಸಮಾಸ

ಕ್ರಿಯಾ-ಕೇಂದ್ರವನ್ನೊಳಗೊಳ್ಳದ ಸಮಾಸವೇ ಬಹಿಃಕೇಂದ್ರೀಯ ಸಮಾಸ.[೫೫]

ಉದಾಹರಣೆಗಳು :

ಅಂತಃಕೇಂದ್ರಿಯ ಸಮಾಸಕ್ಕೆ

	ಕ್ರಿಯೆ		ಕ್ರಿಯಾಕೇಂದ್ರ
೧)	**ವಿಶೇಷಣ + ನಾಮಪದ**	——>	**ನಾಮಪದ**
ಅ)	ಅರಸನ + ಮನೆ	——>	ಅರಮನೆ
ಆ)	ಬಿಳಿದು + ಕೊಡೆ	——>	ಬೆಳ್ಗೊಡೆ
ಇ)	ಒಂದು + ಪಿಡಿ	——>	ಒರ್ಪಿಡಿ
೨)	**ನಾಮಪದ + ನಾಮಪದ**	——>	**ನಾಮಪದ**
	ತಾಯಿಯೂ + ತಂದೆಯೂ	——>	ತಾಯ್ತಂದೆಯರು
	ಅಣ್ಣನೂ + ತಮ್ಮನೂ	——>	ಅಣ್ಣತಮ್ಮಂದಿರು
	ಗಿಡವೂ + ಮರವೂ + ಬಳ್ಳಿಯೂ	——>	ಗಿಡಮರಬಳ್ಳಿಗಳು
೩)	**ಕರ್ಮಪದ + ಕೃದಂತ**	——>	**ಕೃದಂತ**
	ಬಳೆಯಂ + ತೊಟ್ಟಂ	——>	ಬಳೆದೊಟ್ಟಂ
	ಮೊಗಮಂ + ನೋಡಿದಂ	——>	ಮೊಗನೋಡಿದಂ
	ಬೆಸಂ + ಪಡೆದಂ	——>	ಬೆಸವಡೆದಂ

---

೫೩. ಕ್ರಿಯಾ-ಕೇಂದ್ರವೆಂದರೆ ಭಾಷಾಕ್ರಿಯೆಯನ್ನು ನಿರ್ವಹಿಸುವ ಭಾಷಾರಚನಾಂಗ. ಭಾಷೆಯೆಂಬುದೊಂದು ರಚನೆ. ಆ ರಚನೆಯಲ್ಲಿ ಯಾವ ರಚನಾಂಗವು ಕ್ರಿಯೆಯನ್ನು ನಿರ್ವಹಿಸುತ್ತದೆಯೋ ಅದೇ ಕ್ರಿಯಾ-ಕೇಂದ್ರ (centre of function). ನೋಡಿ, Robert Hall. OP. cit PP. 170-2.

೫೪. ಸಾಂಪ್ರದಾಯಿಕ ವೈಯಾಕರಣರ ತತ್ಪುರುಷ, ಕರ್ಮಧಾರಯ, ದ್ವಿಗು, ದ್ವಂದ್ವ ಕ್ರಿಯಾ ಮತ್ತು ಅಂಶೀ ಸಮಾಸಗಳು ಅಂತಃಕೇಂದ್ರೀಯ ಸಮಾಸದಲ್ಲಿ ಅಂತರ್ಗತಗೊಳ್ಳುತ್ತವೆ.

೫೫. ಬಹುವ್ರೀಹಿ ಬಹಿಃಕೇಂದ್ರೀಯ ಸಮಾಸವಾಗಿದೆ.

ಸಂಬಂಧವಾಚಕ

೪) **ಗುಣವಚನ + ನಾಮಪದ**[೫೬] —> **ನಾಮಪದ**

ತಲೆಯು + ಪಿಂದು	——>	ಪಿಂದಲೆ
ಪಗಲ + ಮುಂದು	——>	ಮುಂಬಗಲ್
ಕಯ್ಯ + ಅಡಿ	——>	ಅಂಗೈ

ಗ) **ಬಹಿಃ ಕೇಂದ್ರೀಯ ಸಮಾಸಕ್ಕೆ**

ವಿಶೇಷಣ + ಅಮಹತ್ + ಕೃದಂತ ——> ಮಹತ್
ನಾಮಪದ ನಾಮಪದ

ನಿಡಿದು + ಮೂಗು + ಇ	——>	ನಿಡುಮೂಗಿ[೫೭]
ಕರಿಯು + ಕೊರಳು + ಅ		ಕರಿಗೊರಳ
ಮೂರು + ಕಣ್ಣು + ಅ		ಮುಕ್ಕಣ್ಣ

ಸಂಕ್ಷಿಪ್ತದಲ್ಲಿ ಹೇಳುವದಾದರೆ, ಕನ್ನಡದಲ್ಲಿ ಮುಖ್ಯವಾಗಿ ಎರಡು ಭಾಷಾ ರಚನೆ: ಒಂದು ಆಕೃತಿಮುಂಬದ್ಧ ರಚನೆ; ಮತ್ತೊಂದು ವಾಕ್ಯಬದ್ಧ ರಚನೆ. ವಾಕ್ಯಬದ್ಧ ರಚನೆಯಲ್ಲಿ ಎರಡು ತೆರ : **ಒಂದು ಸಮಾಸ** (compound) **ಇನ್ನೊಂದು ಪದಪುಂಜ** (phrase). ಸಮಾಸದಲ್ಲಿ ಅಂತಃ ಕೇಂದ್ರೀಯ ಮತ್ತು ಬಹಿಃ ಕೇಂದ್ರೀಯವೆಂದು ಎರಡು ರೀತಿ. ವ್ಯಾಕರಣವು ಒಂದು ರೀತಿಯಲ್ಲಿ ಭಾಷಾಘಟಕಗಳ ಕ್ರಿಯೆಯನ್ನು ನಿರೂಪಿಸುವ ಶಾಸ್ತ್ರವಾದುದರಿಂದ ಕ್ರಿಯೆಯನ್ನೇ ಒರೆಗಲ್ಲನ್ನಾಗಿಟ್ಟುಕೊಂಡ ಪ್ರಸ್ತುತ ಸಮಾಸವ್ಯಾಖ್ಯೆ ಹಾಗೂ ವಿಭಜನೆ ಶಾಸ್ತ್ರೀಯ ಹಾಗೂ ಸಮಂಜಸವೆಂದು ಹೇಳಬೇಕಾಗುತ್ತದೆ.

---

೫೬. ಪಿಂದು, ಮುಂದು, ಅಡಿ—ಈ ಅಂಶವಾಚಕಗಳಿಗೆ ವಿಭಕ್ತಿಗಳನ್ನು ಸೇರಿಸಲು ಸಾಧ್ಯವಿದೆ; ಅಲ್ಲದೆ, ಅವು ತಲೆ, ಪಗಲ್, ಕಯ್ಯ್—ಈ ನಾಮ ಪದಗಳ ಅಂಶಗಳು. ಕಾರಣ ಆ ಅಂಶವಾಚಕಗಳು ನಾಮ ಪದಗಳು.

೫೭. ಈ ಸಮಾಸ ಪದಗಳು ಮಹತ್ ಗುಣವಾಚಕ ನಾಮಪದ (Superior / ratianal qualified noun) ಗಳಾಗಿವೆ. ಈ ಕ್ರಿಯೆಯು ಸಮಾಸಾಂಗಗಳಲ್ಲಿ ಕಂಡು ಬರುವುದಿಲ್ಲ.

ಕನ್ನಡದ ಭಾಷಾ ರಚನೆಯು ರೇಖಾ ಚಿತ್ರ

- ರಚನೆ (Structure)
  - ಆಕೃತಿಮಾಬದ್ಧ (Morphological) (ಸಾಂದ್ರ) (tight)
  - ವಾಕ್ಯಬದ್ಧ (Syntactical) (ಅ-ಸಾಂದ್ರ) (non-tight)
    - ಸಮಾಸ (Compound morphemes)
      - ಅಂತಃಕೇಂದ್ರೀಯ (Endo-centric)
      - ಬಹಿಃಕೇಂದ್ರೀಯ (Exo-centric)
    - ಪದಪುಂಜ (Phrases)

ಗ್ರಂಥಋಣ

ಪೂಜಾರ, ಮ. ಪ್ರ.

ಕೆಲವು ಕನ್ನಡ ವ್ಯಾಕರಣ ವಿಚಾರಗಳು Kannada Research Institute, Dharwar 1952.

ಭಟ್ಟ, ತೆಕ್ಕುಂಜ ಗೋಪಾಲಕೃಷ್ಣ

ಕನ್ನಡ ಸಮಾಸಗಳು, ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು ೧೯೭೦.

ನರಸಿಂಹಾಚಾರ್, ಡಿ. ಎಲ್. (ಸಂ).

ಶಬ್ದಮಣಿದರ್ಪಣ, ಶಾರದಾ ಮಂದಿರ ರಾಮಯ್ಯರ್ ರಸ್ತೆ, ಮೈಸೂರು–೧೯೬೪

ಶ್ರೀನಿವಾಸ ರಾಘವಾಚಾರ್ಯ, ಟಿ. ಮತ್ತು ಕೃಷ್ಣಪ್ಪ ಬಿ.

" ಹಳಗನ್ನಡದ ವ್ಯಾಕರಣ " **ಕನ್ನಡ ಕೈಪಿಡಿ–೧**

ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ೧೯೭೯.

ರೈ. ಕೆ. ಕಾಂತ
ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ, ಮೂಡಬಿದ್ರಿ, ೧೯೫೪.

Andronov. M. S.
The Kannada Language, 'NAUKA' Publishing House, Moscow. 1969.

Hiremath R. C.
The Structure of Kannada, Karnatak University, Dharwar 1961

Hall, Robert A. (Jri).
Introductory Linguistics, Motilal Banarsidass, Delhi, 1969.

★ ವಿಲ್ಯಮ್ ಮಾಡ್ತಾ.

ಮೈಸೂರು ರಾಜ್ಯದ ಶಿಕ್ಷಕ ಬೋಧಕರ ಐದನೆಯ ಸಭೆಯ ಪ್ರಾರಂಭೋತ್ಸವ ಭಾಷಣ

ಸನ್ಮಾನ್ಯರಾದ ಪ್ರೊ. ದೇವೇಗೌಡರೇ, ಪ್ರೊ. ಮರಿಯಪ್ಪನವರೇ ಪ್ರಿನ್ಸಿಪಾಲ ಗಂಗಪ್ಪನವರೇ, ಶಿಕ್ಷಕರೇ ಹಾಗೂ ಸ್ನೇಹಿತರೇ,

ನನ್ನ ಸ್ನೇಹಿತರು ಸಂಘಟಿಸಿದ, ಮೈಸೂರು ರಾಜ್ಯದ ಬೋಧಕರ ೫ ನೆಯ ಸಭೆಯಲ್ಲಿ, ಆರೋಗ್ಯದ ಕಾರಣಗಳಿಂದಾಗಿ, ಭಾಗವಹಿಸಲು ಹಿಂದು ಮುಂದೆ ನೋಡುತ್ತಿದ್ದ ನಾನು, ಅವರ ಉತ್ಸಾಹ ಮತ್ತು ಶಿಕ್ಷಕರನ್ನು ಔದ್ಯೋಗಿಕ ಶಿಕ್ಷಣಕ್ಕೆ ತರಬೇತುಗೊಳಿಸುವ ಮಹತ್ವದ ಕಾರ್ಯಕ್ರಮ—ಇವುಗಳ ಮಹತಿಯನ್ನು ತಿಳಿದು, ಸಂತೋಷದಿಂದ ಭಾಗವಹಿಸಲು ನಿರ್ಧರಿಸಿದೆನು. ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆದ ಮೇಲೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ನಾವು ಸಾಕಷ್ಟು ಪ್ರಗತಿಯತ್ತ ರಭಸದಿಂದ ನಡೆದಿದ್ದೇವೆ. ಭವಿಷ್ಯದಲ್ಲಿ ಶಿಕ್ಷಕರ ಬೆಳವಣಿಗೆಗೆ ಅಡಿಗಲ್ಲಾಗುವಂತಹ, ಮತ್ತು ಬೋಧನೆಯಲ್ಲಿ ಕ್ರಾಂತಿಯನ್ನು ಮಾಡುವಂತಹ ವಿಚಾರಗಳನ್ನು ತುಂಬುವ ಪರಿಣಾಮಕಾರೀ ಔದ್ಯೋಗಿಕ ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಒದಗಿಸುವುದರಲ್ಲಿ ತೀವ್ರತರವಾದ ಪ್ರಯತ್ನಗಳನ್ನು ಮಾಡುತ್ತಲಿದ್ದೇವೆ. ಸಹಜವಾಗಿಯೇ, ಈ ಕಾರ್ಯದಲ್ಲಿ ವಿಶ್ವವಿದ್ಯಾಲಯಗಳು ನಿರ್ಣಯಾತ್ಮಕ ಪಾತ್ರಗಳನ್ನು ವಹಿಸಬೇಕಾಗುತ್ತದೆ. ವಿಶ್ವವಿದ್ಯಾಲಯವು ವಿದ್ಯಾರ್ಥಿ ಹಾಗೂ ಶಿಕ್ಷಕರಿಂದೊಡಗೂಡಿದ ಸಂಸ್ಥೆಯಾಗಿದೆ; ಅಲ್ಲಿ ಪರಸ್ಪರರು ಕಲಿಯಲು ಇಲ್ಲವೆ ಕಲಿಯಲು—ಪ್ರಯತ್ನಿಸಲು ಅವಕಾಶವಿದೆ; ಕಾಯಾ ವಾಚಾ ಮನಸಾ ತನ್ನ, ವಿಶ್ವದ ಹಾಗೂ ಮಾನವನ ಜ್ಞಾನ—ಇವುಗಳ ಬಗೆಗೆ ತಿಳುವಳಿಕೆಯನ್ನು ಅಧಿಕಗೊಳಿಸಿಕೊಂಡು ಅದನ್ನು ಸಮಾಜದ ತುಂಬೆಲ್ಲ ಹಂಚುವದು ಮತ್ತು ಮಾನವರ ಸೇವೆಗೆ ಬಳಸುವುದು ಇವೇ ಅವರ ಮೂಲ ಉದ್ದೇಶಗಳಾಗಿವೆ. ೧೯೪೭ರಲ್ಲಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ೧೯ ರಷ್ಟಿದ್ದು ಇಂದು ೮೫ ಕ್ಕೇರಿದೆ; ವಿಶ್ವವಿದ್ಯಾಲಯವೆಂದು ಕರೆಯಲು ಯೋಗ್ಯವಾದ ಸಂಸ್ಥೆಗಳನ್ನೂ ಸೇರಿಸಿದರೆ ಈ ಸಂಖ್ಯೆ ೯೪ಕ್ಕೇರುವುದು. ವಿದ್ಯಾರ್ಥಿಗಳ ಸಂಖ್ಯೆಯೂ ಬೆರಗುಗೊಳಿಸುವಷ್ಟು ಹೆಚ್ಚಾಗಿದೆ. ೧೯೫೦–೫೧ ರಲ್ಲಿ ೬೯೫ ಕಾಲೇಜು ಮತ್ತು ೩,೯೬.೭೪೫ ವಿದ್ಯಾರ್ಥಿಗಳಿದ್ದರೆ, ೧೯೭೦ ೭೧ ರಲ್ಲಿ ೩,೬೦೪ ಕಾಲೇಜು ಹಾಗೂ ೩೧,೧೨,೪೦೪ ವಿದ್ಯಾರ್ಥಿಗಳಿದ್ದು ಈ ಸಂಖ್ಯೆಗಳು ಇನ್ನೂ ಹೆಚ್ಚುತ್ತಲೇ ಇವೆ. ಈ ರೀತಿ ಅಧಿಕವಾಗಿ ಬೆಳೆಯುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ ಸೂಕ್ತವಾದ ಶಿಕ್ಷಣವನ್ನೊದಗಿಸುವುದು ಬಹು ಮಹತ್ವವಾದ ಕೆಲಸವಾಗಿದೆ; ಆದುದರಿಂದ ಇಂತಹ ಸಭೆಗಳು ಈ ಸಮಸ್ಯೆಗಳ ಗಹನತನವನ್ನು ಅರಿತು ಅವುಗಳನ್ನು ಬಿಡಿಸಲು ವ್ಯಾವಹಾರಿಕ ಉತ್ತರಗಳನ್ನು ಕಂಡುಹಿಡಿಯಲು ಸಹಾಯ ಮಾಡಬಹುದು. ವಿಶ್ವವಿದ್ಯಾಲಯ ಶಿಕ್ಷಣ ಮೂಲ ಗುರಿಗಳೆಂದರೆ : ೧) ಹೊಸ

ಹೊಸ ಜ್ಞಾನವನ್ನು ಕಂಡುಹಿಡಿಯುವುದು, ಇಲ್ಲವೆ ಕೃಷಿಗೆಯ್ಯುವುದು, ೨) ಎಲ್ಲ ರಂಗಗಳಿಗೂ ಯೋಗ್ಯ ರೀತಿಯ ಮುಂದಾಳುತನವನ್ನು ಒದಗಿಸುವುದು. ೩) ವಿವಿಧ ಉದ್ಯೋಗಗಳಲ್ಲಿ ತರಬೇತಿಗೊಂಡ ಶಿಕ್ಷಕರನ್ನು ಸಮಾಜಕ್ಕೆ ಒದಗಿಸುವುದು. ೪) ಸಮಾನತೆ ಮತ್ತು ನ್ಯಾಯ ಇವುಗಳನ್ನು ಬೆಳೆಸಲು ಪ್ರಯತ್ನಿಸುವುದು ಮತ್ತು ೫) ಶಿಕ್ಷಕ ಹಾಗೂ ವಿದ್ಯಾರ್ಥಿಗಳಲ್ಲಿ ಸರಿಯಾದ ಮನೋಭಾವ ಹಾಗೂ ಜೀವನ ಮೌಲ್ಯಗಳನ್ನು ರೂಪಿಸುವುದು—ಇವೇ ಆಗಿವೆ. ಆದುದರಿಂದ ಶಿಕ್ಷಕರ ಶಿಕ್ಷಣಕ್ಕೆ ವಿಶ್ವ ವಿದ್ಯಾಲಯಗಳು ಹೆಚ್ಚಿನ ಪ್ರಾಮುಖ್ಯತೆಯನ್ನಿತ್ತುದನ್ನು ನೀವು ಕಾಣಬಹುದಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಔದ್ಯೋಗಿಕ ಶಿಕ್ಷಣದ ಬೆಳವಣಿಗೆಗೆ ಹೊಸ ಮತ್ತು ವೈವಿಧ್ಯ ಮಯ ಪದ್ಧತಿಗಳನ್ನು ಕಂಡುಹಿಡಿಯಬೇಕಾಗಿದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಪ್ರತ್ಯೇಕವಾಗಿರುವುದನ್ನು ಬಿಡಿಸಿ, ವಿಶ್ವವಿದ್ಯಾನಿಲಯಗಳ ವಿದ್ವತ್–ಪ್ರಪಂಚದ ನೇರ ಸಂಪರ್ಕದಲ್ಲಿ ತರುವುದರಿಂದಲೂ, ಶಾಲೆ ಮೊದಲಾದವುಗಳೊಡನೆ ಸಮೀಪದ ಸಂಬಂಧ ಗಳನ್ನು ಬೆಳೆಸುವದರಿಂದಲೂ ಮತ್ತು ಇಂತಹ ಸಂಸ್ಥೆಗಳಲ್ಲಿ ಕೊಡುವ ತರಬೇತಿಯ ಕಾರ್ಯಕ್ರಮಗಳ ಗುಣಮಟ್ಟ ಹಾಗೂ ಸಂಸ್ಥೆಗಳ ಗುಣಮಟ್ಟವನ್ನು ಸುಧಾರಿಸುವು ದರಿಂದಲೂ ಇದನ್ನು ಸಾಧಿಸಬಹುದಾಗಿದೆ. ತರಬೇತಿಯ ಸೌಕರ್ಯಗಳನ್ನು ಅಧಿಕ ಗೊಳಿಸಲು ಪ್ರಯತ್ನಿಸಲಾಗುತ್ತದೆ. ವಿಚಾರಸಂಕಿರಣ, ಸಭೆ ಮೊದಲಾದವುಗಳ ಮೂಲಕ, ಸಾಧ್ಯವಾದಷ್ಟು ಶಿಕ್ಷಕರಿಗೆ, ಅವಿರತ ಶಿಕ್ಷಣವನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತದೆ. ಆದುದರಿಂದ ನಾವು ಇಂತಹ ಸಂದರ್ಭಗಳಲ್ಲಿ ಔದ್ಯೋಗಿಕ ಶಿಕ್ಷಣದ ಸಮಸ್ಯೆಗಳನ್ನೂ ಚರ್ಚಿಸುವುದು, ಚಿಂತನ ಮಾಡುವುದು ಅಲ್ಲದೆ ಇಂದಿನ ಶಿಕ್ಷಣ ಪದ್ಧತಿಯನ್ನು ಸಜೀವಗೊಳಿಸುವಂತೆ ಸುಧಾರಣೆ ಮಾಡುವ ವಿಧಾನಗಳನ್ನು ಕಂಡುಹಿಡಿಯುವುದು ಅವಶ್ಯವಾಗಿದೆ.

ಒಂದು ದೇಶದ ಸಂಪತ್ತೆಂದರೆ ಜನಾಂಗ ಎಂಬುದನ್ನು ಸರಿಯಾಗಿಯೇ ಹೇಳ ಲಾಗಿದೆ. ಒಂದು ಗುಂಪಿನ ಹಿರಿಮೆಯೆಂದರೆ ಆ ಗುಂಪಿನ ಜನರ ಹಿರಿಮೆ ಇಲ್ಲವೆ ಅವರ ಸತ್ವ. ಇದರಂತೆಯೇ ಆ ಜನರ ಹಿರಿಮೆ ಅಲ್ಲಿ ಪ್ರಚಲಿತವಿರುವ ಶಿಕ್ಷಣ ಪದ್ಧತಿ ಹಾಗೂ ಆ ಶಿಕ್ಷಣವನ್ನು ಬೋಧಿಸುವ ಶಿಕ್ಷಕರ ಗುಣವನ್ನವಲಂಬಿಸಿದೆ.

ವಿಸ್ತೃತವಾದ ನಮ್ಮ ದೇಶದಲ್ಲಿ ಶಿಕ್ಷಣ ಪ್ರಸಾರವು ಭರದಿಂದ ಸಾಗುತ್ತಿದೆ ಯೆಂದು ನಾನು ಆಗಲೇ ಹೇಳಿದ್ದೇನೆ. ಅದೇ ವೇಳೆಯಲ್ಲಿ ಜನಸಂಖ್ಯೆಯೂ ಹೆಚ್ಚುತ್ತಿದೆ. ಆದುದರಿಂದ ಶಿಕ್ಷಣವೂ ಭರದಿಂದ ಪ್ರಸಾರವಾಗುತ್ತಿದೆಯೆಂದು ನಾವು ಹೇಳಲಾರೆವು. ನಮ್ಮ ದೇಶದ ನಿರಕ್ಷರತೆಯ ಸಂಖ್ಯೆಯನ್ನು ನೋಡಿದರೆ ನಾವು ಶಿಕ್ಷಣ ಪ್ರಸಾರದ ಪ್ರಯತ್ನದಲ್ಲಿ ನಿರಾಶೆಗೊಂಡಿದ್ದೇವೆಂದು ಎನಿಸುತ್ತದೆ. ನಿಜವಾಗಿಯೂ ನಿರಕ್ಷರತೆಯು ಮುಂದುವರಿಯುತ್ತ ಬೆಳೆಯುತ್ತ ಅಧಿಕವಾಗುತ್ತಿದೆ. ಭಾರತವು ೧೯೭೧ ರಲ್ಲಿ ೧೯೬೧ ಕ್ಕಿಂತಲೂ ಹೆಚ್ಚು ನಿರಕ್ಷರತೆಯನ್ನು ಪಡೆದಿದೆ: ಯಾಕೆಂದರೆ ೧೯೬೧ ರಲ್ಲಿ ೩೩೩ ದಶಲಕ್ಷ ಜನರು ನಿರಕ್ಷರಿಗಳಾಗಿದ್ದರೆ, ೧೯೭೧ ರಲ್ಲಿ ೩೮೭ ದಶಲಕ್ಷ ಜನರು ನಿರಕ್ಷರಿಗಳಾಗಿದ್ದಾರೆ.

ಅಲ್ಲದೆ ನೂರಕ್ಕೆ ೫೦ ರಷ್ಟು ಹುಡುಗರು ೬೦ ರಷ್ಟು ಹುಡುಗಿಯರು ಪ್ರಾಥಮಿಕ ಅಭ್ಯಾಸದ ಮೊದಲನೆಯ ವರುಷದಲ್ಲಿದ್ದು ಕನಿಷ್ಠ ಮಟ್ಟಿಗೆ ಬೇಕಾಗಿರುವ ಶಿಕ್ಷಣವನ್ನು ಪಡೆವಹೊತ್ತಿಗೆ – ಎಂದರೆ ೫ ನೆಯ ವರ್ಷದಷ್ಟೊತ್ತಿಗೇ ವಿದ್ಯಾಭ್ಯಾಸವನ್ನು ಬಿಟ್ಟು ಬಿಡುತ್ತಾರೆ. ಇದೊಂದು, ಶಿಕ್ಷಣವಿಹೀನರ ಸಮಸ್ಯೆಯಾಗಿದೆ. ಮತ್ತೊಂದೆಡೆಗೆ ವ್ಯಾಪಕ ಶಿಕ್ಷಣ ಪದ್ಧತಿಯ ಪರಿಣಾಮವಾಗಿ ಹೊರಬಂದವರಿಗೆ ಉದ್ಯೋಗಗಳು ದೊರೆಯದಿರುವುದರಿಂದ ನಿರಾಶೆಯಾಗುತ್ತದೆ ; ಹೀಗಾಗಿ ಶಿಕ್ಷಣವು ಗುರಿಯಿಲ್ಲದ್ದೂ ಭವಿಷ್ಯವಿಲ್ಲದ್ದೂ ಆಗಿದೆ. ಇಂದಿನ ಶಿಕ್ಷಣ ಪದ್ಧತಿ ಹಾಗೂ ವಿದ್ಯುತ್ ಸಲಕರಣೆ, ಪದವಿ, ಡಿಪ್ಲೋಮಾ ಮೊದಲಾದವುಗಳು "ಕ್ರೂರವ್ಯಂಗ್ಯ" ಗಳೆಂದು ಹೇಳುವಷ್ಟರಮಟ್ಟಿಗೆ, ಶೈಕ್ಷಣಿಕ ನಿರುದ್ಯೋಗವು ಒಂದು ಹಂತವನ್ನೇ ತಲುಪಿದೆ. ಆದುದರಿಂದ ನಾವು ನಮ್ಮ ತರುಣರಿಗೆ (ಉಪಯುಕ್ತ) ಗುರಿಯುಳ್ಳ ಶಿಕ್ಷಣವನ್ನು ಕೊಡುವ ಸಮಯವು ಇದೀಗ ಪ್ರಾಪ್ತವಾಗಿದೆ. ನಮ್ಮ ಶಿಕ್ಷಣವು ನಮ್ಮ ಜೀವನದ ಸಮಸ್ಯೆಗಳಿಗೆ ಸಂಬಂಧ ಪಡೆದುದಾಗಿರಬೇಕು. ನಾವು ನಮ್ಮ ರಾಷ್ಟ್ರದ ಸಂಪತ್ತನ್ನು ಅದರ ಅಭ್ಯುದಯ ಹಾಗೂ ಬೆಳವಣಿಗೆಯ ಸಲುವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇವೆ. ಅದೇ ವೇಳೆಯಲ್ಲಿ ನಮ್ಮ ತರುಣರು ಅವರು ವಹಿಸಬೇಕಾದ ಜವಾಬ್ದಾರಿಗೆ ತಕ್ಕಂತೆ ಯೋಗ್ಯವಾದ ಶಿಕ್ಷಣವನ್ನು ಕೊಡುತ್ತಿಲ್ಲ. ನಮ್ಮ ಡಿಪ್ಲೋಮಾ ಹಾಗೂ ಪದವಿಗಳ ಪರಿಣಾಮಗಳೇನೇ ಇರಲಿ, ಶಿಕ್ಷಣವು ತರುಣರಿಗೆ ಅವರನ್ನು ಎದುರಿಸುತ್ತಿರುವ ಜೀವನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಧೈರ್ಯವನ್ನುಂಟುಮಾಡುತ್ತಿರಬೇಕು.

ಈ ಸಂದರ್ಭದಲ್ಲಿ, ಈ ಸಭೆಯು ನಡೆದ ಸ್ಥಳದ ಸಮೀಪದ ತೋರಣಗಲ್ಲಿನಲ್ಲಿ ವಿಜಯನಗರ ಉಕ್ಕಿನ ಕಾರಖಾನೆಯ ಯೋಜನೆಯನ್ನು ನಮ್ಮ ದೇಶವು ಹಾಕಿಕೊಂಡಿರುವುದನ್ನು ಈ ಸಂದರ್ಭದಲ್ಲಿ ನಮ್ಮ ಗಮನಕ್ಕೆ ನಾನು ತರಬಹುದಾಗಿದೆ. ಈ ಯೋಜನೆಯ ಕಾರ್ಯಾಚರಣೆಗೆ ಅವಶ್ಯಕವಿರುವ ಮಾನವ ಶಕ್ತಿ ಎಷ್ಟೆಂಬುದನ್ನು ವಿಚಾರಿಸಿ, ಈ ಯೋಜನೆಯನ್ನು ನಡೆಸಿಕೊಂಡು ಬರುವುದಕ್ಕೆ ಬೇಕಾಗುವ ದಕ್ಷತೆ ಮತ್ತು ಜಾಣ್ಮೆಯ ಶಿಕ್ಷಣವನ್ನು ತರುಣರಿಗೆ ಒದಗಿಸಿ ಕೊಡುವದಕ್ಕೆ ಮಹತ್ತರವಾದ ಸಮಯವಿದು. ನಮ್ಮ ಪ್ರದೇಶದ ತರುಣರು ಈ ಕಾರ್ಯವನ್ನು ಉತ್ಸಾಹ ಮತ್ತು ಶಕ್ತಿಗಳಿಂದ ಕೈಕೊಂಡರೆ ಈ ಯೋಜನೆಯ ಸ್ಥಾಪನೆಯು ತ್ವರಿತ ಗತಿಯಲ್ಲಿ ಸಾಗುವುದಲ್ಲದೆ ಮಿತವ್ಯಯವೂ ಸಾಧ್ಯವಾಗುತ್ತದೆ. ಇದು ಮುಂದಿನ ಪೀಳಿಗೆಯಲ್ಲಿ ಹೊಸ ಆಸೆ ಹಾಗೂ ಹೊಸ ಬದುಕನ್ನೇ ಸೃಷ್ಟಿಸುತ್ತದೆ. ಈ ಯೋಜನೆಯ ಅವಶ್ಯಕತೆಗಳನ್ನು ಕುರಿತು ಕೆಲವು ಮಾತುಗಳನ್ನು ಇಲ್ಲಿ ಆಡಬಹುದು.

ಮೈಸೂರು ಸರಕಾರದ ವರದಿಯ ಮೇರೆಗೆ ಈ ಯೋಜನೆಗೆ ಬೇಕಾಗಿರುವ ಮಾನವ ಶಕ್ತಿಯ ಪ್ರಮಾಣವು ಪ್ರತಿವರುಷಕ್ಕೆ :

ತಾಂತ್ರಿಕ ಕೌಶಲವುಳ್ಳವರು ಮತ್ತು ವೀಕ್ಷಕರು	140
ಅತ್ಯುಚ್ಚ ಅರ್ಹತೆಯುಳ್ಳ ಸೀನಿಯರ್ (ಹಿರಿಯ) ಎಂಜಿನೀಯರರು	129
ಜ್ಯೂನಿಯರ (ಕಿರಿಯ) ಎಂಜಿನೀಯರರು	336
ಜಾಣ್ಮೆಯುಳ್ಳ ಕೆಲಸಗಾರರು	19,400
ಡಿಪ್ಲೋಮಾ ಪರೀಕ್ಷೆ ಪಾಸಾದವರು ಮತ್ತು ಅನುಭವಸ್ಥ (ಯಂತ್ರ) ಚಾಲಕರು	1,244
ತಕ್ಕಮಟ್ಟಿಗೆ ಜಾಣ್ಮೆಯುಳ್ಳ ಕೆಲಸಗಾರರು	1,136
ಸಾಮಾನ್ಯ ಕೆಲಸಗಾರರು, ಬಡಿಗರು, ಕುಶಲ ಕಲೆಗಾರರು, ಗೌಂಡಿಗಳು ಇತ್ಯಾದಿ	45,000
	67,500

ಇದಲ್ಲದೆ ಬಹುದೊಡ್ಡ ಸಂಖ್ಯೆಯಲ್ಲಿ ಗುಮಾಸ್ತರೂ ಮತ್ತು ಆಡಳಿತಗಾರರೂ, ಈ ಯೋಜನೆಯ ಆಡಳಿತವನ್ನು ನೋಡಿಕೊಳ್ಳಲು ಬೇಕಾಗುತ್ತಾರೆ. ಮಾರಾಟ ಮಾಡುವ ಹಾಗೂ ಕೊಳ್ಳುವ ಸಂಸ್ಥೆಗಳೂ ಬೇಕಾಗುತ್ತವೆ. ಇದಲ್ಲದೆ ಈ ಯೋಜನೆಗೆ ಪೂರಕವಾಗುವಂತೆ ಈ ಪ್ರದೇಶದ ನೆರೆಹೊರೆಯಲ್ಲಿ ಹಲವು ಸಣ್ಣ ಸಣ್ಣ ಉದ್ಯಮಗಳೂ ಉದ್ಭವಿಸುತ್ತವೆ. ಆದುದರಿಂದ ನಾವು ಈ ಕಾರ್ಯಕ್ಕೆ ಬೇಕಾಗುವ ಅರ್ಹ ಕೆಲಸಗಾರರನ್ನು ಒದಗಿಸಬಲ್ಲೆವೋ ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುತ್ತದೆ. ಈ ಯೋಜನೆಯ ಕಾರ್ಯದ ಹೊಣೆ ಹೊರಲು ಯೋಗ್ಯರಾದವರನ್ನು ನಿರ್ಮಿಸುವುದು ನಮ್ಮ ಕರ್ತವ್ಯವಲ್ಲವೇ ? ಈ ಯೋಜನೆಗೆ ಸಂಬಂಧಿಸಿ ಹೇಳುವದಾದರೆ ನಮ್ಮ ಕೆಲಸಗಾರರು ಪಡೆದಿರುವ ಶಿಕ್ಷಣ ನಿರುಪಯುಕ್ತವಾದುದು. ಈ ಅವಕಾಶಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಮುಂಘೋರಣೆಯಿಂದ ಅರಿತು ಈ ಯೋಜನೆಗೆ ಬೇಕಾಗುವ ಕೆಲಸಗಾರರಿಗೆ ಸರಿಯಾದ ಶಿಕ್ಷಣವನ್ನೊದಗಿಸುವ ಸಂಸ್ಥೆಯನ್ನು ಪ್ರಾರಂಭಿಸಬೇಕಾಗಿದೆ. ಇಂತಹ ಒಂದು ಸಂಸ್ಥೆಯನ್ನು ಸ್ಥಾಪಿಸುವದಕ್ಕೆ ಸುಮಾರು ೨೦ ಲಕ್ಷ ರೂಪಾಯಿಗಳು ಬೇಕಾಗುತ್ತವೆ ; ಅಲ್ಲದೆ ಈ ಸಂಸ್ಥೆಗೆ ನುರಿತ ಅನುಭವಸ್ಥ ತಾಂತ್ರಿಕರನ್ನು ಒದಗಿಸಬೇಕಾಗುತ್ತದೆ ; ಈ ಕಾರ್ಯ ಮಾಡಲೇಬೇಕಾದುದು. ಬೇರೆ ಮಾತು ಹೇಳಬೇಕೆಂದರೆ : ನಮ್ಮ ಶಿಕ್ಷಣ ಪದ್ಧತಿಯು ನಮ್ಮ ಜೀವನದ ನಿಜ ಸಮಸ್ಯೆಗಳನ್ನು ಎದುರಿಸುವಂತೆ ಪರಿವರ್ತನೆ ಹೊಂದಬೇಕಾಗಿದೆ. ಆದುದರಿಂದ ನಮ್ಮ ಶಿಕ್ಷಣ ಪದ್ಧತಿಯು ಪುರುಷ, ಸ್ತ್ರೀ ಮತ್ತು ಹುಡುಗರು ಇವರಿಗೆಲ್ಲ ಜೀವನದ ಸಮಸ್ಯೆಯನ್ನೆದುರಿಸಲು ಯೋಗ್ಯವಾಗುವಂತೆ ಸಮಾನತತ್ವವನ್ನಾಧರಿಸಿದುದಾಗಿರಬೇಕು. ಶಿಕ್ಷಣವನ್ನು ಉಪಯುಕ್ತ ಸಾಮಾಜಿಕ ಸೇವೆಯೆಂದು ಸ್ವೀಕರಿಸಬೇಕಲ್ಲದೆ. ಅದು ಬಹುಜನ ಸಮಾಜಕ್ಕೆ ಸಾಮಾಜಿಕ ನ್ಯಾಯವನ್ನೊದಗಿಸುವ ಶಕ್ತಿಯೆಂದೂ ತಿಳಿಯಬೇಕು. ಭಾರತದಂತಹ ದೇಶದಲ್ಲಿ ಶಿಕ್ಷಣ ಪದ್ಧತಿಯು ದೇಶದ ಆವಶ್ಯಕತೆಯನ್ನನುಸರಿಸಿ ವೃತ್ತಿ ಶಿಕ್ಷಣದ ಕಡೆಗೆ ತಿಳಿಯಬೇಕಾಗಿದೆ.

ನಾನು ಒತ್ತಿ ಹೇಳಬೇಕಾದ ಮುಂದಿನ ಅಂಶವೆಂದರೆ ಶಿಕ್ಷಕರ ಸತ್ವವನ್ನು ಕುರಿತು ತಾದುದು. ಶಿಕ್ಷಕರ ಸತ್ವವೆಲ್ಲ ಹೆಚ್ಚಾಗಿ ಆ ಶಿಕ್ಷಕರಿಗೆ ಕೊಡುವ ಶಿಕ್ಷಣವನ್ನೇ ಅವ

ಲಂಬಿಸಿದೆ. ಶಿಕ್ಷಕರಿಗೆ ಸಧ್ಯದಲ್ಲಿ ಕೊಡುವ ಶಿಕ್ಷಣ ಹಾಗೂ ರೂಢಿಗಳು ಸಂತೋಷಕರವಾಗಿಲ್ಲ; ಅಲ್ಲದೆ ಅವು ಇನ್ನೂ ಬಹು ಸುಧಾರಣೆ ಹೊಂದಬೇಕಾಗಿದೆ. ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಮಾಡಲು ಚುರುಕಾದ ಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಇಂದು ಶಿಕ್ಷಣ ಬೋಧೆಗೆ ಹೋಗುವ ಶಿಕ್ಷಕರು, ಹೆಚ್ಚಾಗಿ ಸಾಕಷ್ಟು ಅರ್ಹತೆಯನ್ನು ಪಡೆದವರಿರುವುದಿಲ್ಲ. ಮೇಧಾವಿಗಳು ಈ ಉದ್ಯೋಗಕ್ಕೆ ಹೋಗುವುದು ಅತ್ಯವಶ್ಯ, ಎಂದರೆ ಮಾತ್ರ ಶಿಕ್ಷಣ ಪದ್ಧತಿಯು ಚೈತನ್ಯದಾಯಕವಾಗುವುದು ಮಾತ್ರವಲ್ಲದೆ ಎಲ್ಲಂದದ ಸುಧಾರಣೆಯನ್ನೂ ಪಡೆಯುತ್ತದೆ. ಈ ರೀತಿ ಶಿಕ್ಷಣ ಪದ್ಧತಿಯನ್ನು ಚುರುಕುಗೊಳಿಸಬೇಕಾದರೆ, ಅದು ವಿಷಯಜ್ಞಾನದ ಕಡೆಗೆ ಗಮನವಿರಿಸುವುದೂ, ಬೋಧನ ಮತ್ತು ಮೌಲ್ಯಮಾಪಗಳಲ್ಲಿ ಸುಧಾರಣೆ ಹೊಂದಿದುದೂ, ವಿಶಿಷ್ಟ ಅಧ್ಯಯನಗಳಲ್ಲಿ ಸುಧಾರಣೆ ಹೊಂದಿದುದೂ ಅಲ್ಲದೆ ಪಠ್ಯಕ್ರಮ ರೀತಿಗಳಲ್ಲಿ ಪುನರ್ನಿರ್ಮಿತವಾದುದೂ ಆಗಿರಬೇಕು. ಶಿಕ್ಷಕ ಬೋಧಕರಿಗೆ ಅವರ ಅಭ್ಯಾಸದ ಕಾಲದಲ್ಲಿಯೇ ಸಾಕಷ್ಟು ಸೌಕರ್ಯಗಳನ್ನೊದಗಿಸುವುದು ಅತ್ಯವಶ್ಯ: ಹಾಗೆ ಮಾಡುವುದರಿಂದ ಶಾಲೆಯ ಶಿಕ್ಷಣ ಬೋಧನ ಪದ್ಧತಿಯಲ್ಲಿ ವಿಸ್ತೃತ ವಿಜ್ಞಾನವು ಹಲವು ಹೊಸ ಹೊಸ ತಂತ್ರ ಹಾಗೂ ಪದ್ಧತಿಗಳು ರೂಪುಗೊಳ್ಳುತ್ತಲಿವೆ: ಉದಾಹರಣೆಗೆ ಬೋಧನದಲ್ಲಿ ರೇಡಿಯೋ, ಟೆಲಿವಿಜನ್ ಬಳಸುವುದು ಮತ್ತು ಚಿತ್ರಗಳ ಮೂಲಕ ವರ್ಗಗಳಲ್ಲಿ ಪಾಠ ಮಾಡುವುದು ಅಲ್ಲದೆ ಭಾಷೆಗೆ ಸಂಬಂಧಿಸಿದ ಪ್ರಯೋಗಶಾಲೆ, ಕಾರ್ಯಕ್ರಮದಂತೆ ಬೋಧನೆ ನೀಡುವುದು – ಇಂತಹವು ಕೆಲವನ್ನು ಇಲ್ಲಿ ಹೇಳಬಹುದು. ಸದ್ಯೋ ಭವಿಷ್ಯತ್ತಿನಲ್ಲಿ ಭಾರತದಲ್ಲಿ ಇಂತಹ ಸೌಕರ್ಯಗಳು ದೊರೆಯದಿರಬಹುದು; ಸಮಯ ಸರಿದಂತೆ ಅಧಿಕವಾಗುತ್ತ ಅವು ಬಳಕೆಯಲ್ಲಿ ಬರಬಹುದಾಗಿದೆ. ನಾವು ಸಹ, ಅಧಿಕ ತೊಂದರೆಯಿಲ್ಲದಂತೆ ಬೋಧೆ ಮಾಡಲು ಸಾಕಷ್ಟು ಸಾಮಗ್ರಿಯನ್ನು ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಹೆಚ್ಚಿನ ವಿಷಯ ಜ್ಞಾನವನ್ನು ನೀಡಬೇಕಾಗುತ್ತದೆ.

ಪ್ರತಿಯೊಂದು ವಿಷಯದಲ್ಲಿಯೂ ಜ್ಞಾನವು ಅತಿ ರಭಸದಿಂದ ವರ್ಧಿಸುತ್ತಲಿದೆ. ಬೆಳೆಯುತ್ತಿರುವ ಈ ಜ್ಞಾನದೊಡನೆ ನಾವು ಹೆಜ್ಜೆ ಹಾಕಬೇಕಾದರೆ–ಶಿಕ್ಷಣವು ಪ್ರವಾಹ ರೂಪದಲ್ಲಿದ್ದು, ಒಂದೇ ಸಮನೆ ಬರುವಂತಹ ಪದ್ಧತಿಗಳನ್ನು ಅನುಸರಿಸಬೇಕು. ಇದನ್ನು ವಿವರಿಸಿ ಹೇಳಬೇಕೆಂದರೆ, ನಾವು ಆಗಾಗ ವಿಚಾರ ಸಂಕಿರಣ ಮತ್ತು ಶಿಕ್ಷಕರಿಗೆ ಹೊಸ ಹೊಸ ವಿಷಯಗಳನ್ನು ತಿಳಿಸಲು ವ್ಯವಸ್ಥೆ. ಇವನ್ನು ಏರ್ಪಡಿಸಿ ವಿಷಯವು ಅವರಿಗೆ ಅತಿ ನವೀನವೂ ಅಲ್ಲದೆ ಅಲ್ಲಿಯವರೆಗೆ ನಡೆದ ಸಂಶೋಧನೆಗಳನ್ನೊಳಗೊಂಡುದೂ ಆಗಿರುವಂತೆ ವ್ಯವಸ್ಥೆ ಮಾಡಬೇಕು. ಇಂತಹ ಪ್ರಯತ್ನಗಳನ್ನು ಮೇಲಿಂದ ಮೇಲೆ ಮಾಡುತ್ತಿದ್ದರೆ, ಮಾತ್ರ ಬೆಳೆಯುತ್ತಿರುವ ಜ್ಞಾನದೊಡನೆ ಅವರು ಹೆಜ್ಜೆ ಹಾಕಬಹುದಾಗಿದೆ.

ಮಾಧ್ಯಮಿಕ ಶಾಲೆಯ ಶಿಕ್ಷಕರಿಗೆ ಶಿಕ್ಷಣವನ್ನೊದಗಿಸಲು ನಮ್ಮಲ್ಲಿ ಶಿಕ್ಷಕ ತರಬೇತಿ ಕಾಲೇಜುಗಳಿವೆ. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಬೋಧೆ ಮಾಡುವ ಶಿಕ್ಷಕ

ರಿಗೆ ನಮ್ಮ ಅಪೇಕ್ಷೆಗನುಗುಣವಾಗಿ ಸಿದ್ಧತೆಗಳಿರುವಂತೆ ತರಬೇತಿಯ ವ್ಯವಸ್ಥೆಯಿರುವದೂ ಅತ್ಯವಶ್ಯವಿರುತ್ತದೆ. ಆಗ ಹೊಸದಾಗಿ ಪದವೀ ಪಡೆದವರು ನೇರವಾಗಿ ವರ್ಗಗಳಿಗೆ ಹೋಗುವದನ್ನು ಮತ್ತು ವಿದ್ಯಾರ್ಥಿಗಳು ಸಾಕಷ್ಟು ಕೆಲಸದ ಭಾರದೊಂದಿಗೆ ಹೋಗುವದನ್ನೂ ಅಪೇಕ್ಷಿಸಬಹುದಾಗಿದೆ. ಈ ಸಾಹಸದಲ್ಲಿ ಕೆಲವೊಂದು ಶಿಕ್ಷಕರು ಯಶಸ್ಸನ್ನು ಪಡೆದಿದ್ದರೂ ಕಾಲೇಜ ಶಿಕ್ಷಕರಿಗೆ ಅವರು ಪದ್ಧತಿಯ ಪ್ರಕಾರ ಪಠ್ಯಕ್ರಮವನ್ನು ಅಭ್ಯಸಿಸಲಿಕ್ಕೆ ಮತ್ತು ವೈಜ್ಞಾನಿಕವಾಗಿ ತಮ್ಮ ಉಪನ್ಯಾಸಗಳನ್ನು ಯೋಚಿಸಿಕೊಳ್ಳಲಿಕ್ಕೆ ಅನುಗುಣವಾಗುವಂತೆ ಕೆಲವೊಂದು ತರಬೇತಿ ವರ್ಗಗಳನ್ನು ತೆರೆಯಬೇಕಾಗಿದೆ. ತಮಗಿಂತಲೂ ಹಿರಿಯ ಪ್ರಾಧ್ಯಾಪಕರು ಬೋಧಿಸುತ್ತಿರುವದನ್ನು ನೋಡಲು ಅವರಿಗೆ ಅವಕಾಶಗಳನ್ನೊದಗಿಸಬೇಕು; ಅಲ್ಲದೆ ತಮ್ಮ ಉಪನ್ಯಾಸಗಳನ್ನು ಹೇಗೆ ಸಿದ್ಧಗೊಳಿಸಿಕೊಳ್ಳಬೇಕೆಂಬುವದರ ಬಗೆಗೆ ಆಸಕ್ತಿ ಕುದುರುವಂತೆ, ವಿದ್ಯಾರ್ಥಿಗಳ ಮನಸ್ಸನ್ನು ಅಭ್ಯಾಸದ ಕಡೆಗೊಯ್ಯುವಂತೆ ಅಲ್ಲದೆ ಪರಿಣಾಮಕಾರಕವಾಗಿ ಬೋಧೆ ಮಾಡಿ. ತಾವು ಉತ್ತಮ ಶಿಕ್ಷಕರಾಗುವುದರ ಜೊತೆಗೆ ವಿದ್ಯಾರ್ಥಿಗಳಿಗೂ ಈ ಪದ್ಧತಿಯಿಂದ ಬಹಳಷ್ಟು ಲಾಭವಾಗುವಂತೆ ಮಾಡಲು ಶಿಕ್ಷಕರಿಗೆ ಸಾಕಷ್ಟು ಪ್ರೋತ್ಸಾಹ ನೀಡಬೇಕು. ನಾನಿದ್ದ ಕಾಲೇಜಿನಲ್ಲಿ ನಾನು ಹಿರಿಯ ಅಧ್ಯಾಪಕರಿಗೆ ಕಿರಿಯ ಅಧ್ಯಾಪಕರು ಹೇಗೆ ಶಿಕ್ಷಣ ಕೊಡಬೇಕೆಂಬುದನ್ನು ಸಾಕಷ್ಟು ತಿಳಿಸುವಂತೆಯೂ ಮತ್ತು ವರ್ಗಗಳಿಗೆ ಹೋಗುವಾಗ ಅಂದಿನ ಬೋಧೆಗೆ ಉಪಯುಕ್ತವಿರುವ ಚಿತ್ರ, ನಕ್ಷೆ, ಮಾದರಿಯ ರೂಪರೇಷೆ ಮೊದಲಾದವುಗಳೊಂದಿಗೆ ಸಿದ್ಧಪಡಿಸಿಕೊಂಡೇ ಉಪನ್ಯಾಸಕ್ಕೆ ಹೋಗಬೇಕೆಂದು ತಿಳಿಸುತ್ತಿದ್ದೆನು. ನನ್ನ ಕಾಲೇಜಿನಲ್ಲಿದ್ದ ಪ್ರಾಧ್ಯಾಪಕರು ಎಲ್ಲ ವರ್ಗಗಳಿಗೂ ಹೋಗಿ ಹೊಸದಾಗಿ ಆಗಮಿಸಿದ್ದ ಅಧ್ಯಾಪಕರಿಗೆ ಹೇಗೆ ತಿಳಿಸಿದರೆ ವಿದ್ಯಾರ್ಥಿಗಳಿಗೆ ವಿಷಯವು ಹೆಚ್ಚಾಗಿಯೂ ಮತ್ತು ಸರಿಯಾಗಿ ತಿಳಿಯುತ್ತದೆಯೆಂದೂ ಸ್ಪಷ್ಟವಾಗಿ ತೋರಿಸುತ್ತಿದ್ದರು. ಹೊಸದಾಗಿ ಆಗಮಿಸಿದ ಅಧ್ಯಾಪಕರ ಸಲುವಾಗಿ ಇಂತಹ ಪ್ರಯತ್ನಗಳನ್ನು ಮಾಡುವದರಿಂದ ಕಾಲೇಜ ಶಿಕ್ಷಣವು ಅತ್ಯಂತ ಉಪಯುಕ್ತವೂ, ಅರ್ಥಪೂರ್ಣವೂ ಆಗುತ್ತದೆ ಎಂದು ನನಗೆನಿಸುತ್ತದೆ.

ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಕಾಲೇಜ ಶಿಕ್ಷಕರಿಗಾಗಿ, ತಾವು ಹೇಗೆ ಕಲಿಸಬೇಕೆಂಬುವದರ ಬಗೆಗೆ ಪೂರ್ವ ಪರಿಚಯ ಕೊಡುವಂತೆ ಕೆಲವೊಂದು ‘ಅಭಿಮುಖೀಕರಣ ಯೋಜನೆ’ಗಳನ್ನು ತೆರೆಯಬೇಕೆಂದು ಯೋಚಿಸಿದ್ದೆವು. ಅಧ್ಯಾಪಕರಿಗೂ ತಮ್ಮದೇ ಆದ ಮಾನವಿಕ, ವಿಜ್ಞಾನ, ಎಂಜಿನೀಯರಿಂಗ್ ಎಂಬ ವಿಷಯಗಳಿರುವುದೂ ಸತ್ಯ. ಇಂತಹ ತರಬೇತಿ ವರ್ಗಗಳಲ್ಲಿ, ಅಧ್ಯಾಪಕರಿಗಿಂತ ಅಧ್ಯಾಪಕ ಬೋಧಕರಿಗೆ ವಿಷಯಗಳಲ್ಲಿ ಹೆಚ್ಚಿನ ಜ್ಞಾನವು ಇರಬೇಕೆಂಬುದನ್ನು ಯಾರೂ ಅಪೇಕ್ಷಿಸಲಾಗದು. ಆದರೆ ಅಧ್ಯಾಪಕರು ಕಲಿಸುವ ಪದ್ಧತಿ ಹಾಗೂ ಪರಿಣಾಮಕಾರಕ ನಿರೂಪಣಾಕ್ರಮ ಇವುಗಳ ಮೂಲಕ ಶಿಕ್ಷಕರು ತಮ್ಮ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತೊಂದರೆಯಿಲ್ಲದೆ ಧಾರೆಯೆರೆಯಬೇಕಾಗಿರುವುದರಿಂದ ಅವುಗಳ ಕಡೆಗೆ ನಮ್ಮ ಗಮನವಿದೆ.

ಸಧ್ಯದ ಕಾಲದಲ್ಲಿ ಎಷ್ಟೋ ವಿಷಯಗಳನ್ನು ಒಂದಕ್ಕೊಂದು ಸಹಕಾರಿಯಾಗುವಂತೆ ತಿಳಿದುಕೊಳ್ಳಲು ಹೆಚ್ಚು ಗಮನ ಕೊಡಲಾಗುತ್ತದೆ. ನಮ್ಮ ಎಷ್ಟೋ ವಿಷಯಗಳು ನಿಕಟ ಸಂಬಂಧವನ್ನು ಹೊಂದಿವೆ. ಆದುದರಿಂದ ವಿಷಯಗಳನ್ನು ಒಂದೊಂದಾಗಿ ಪ್ರತ್ಯೇಕಿಸಿ ತಿಳಿದುಕೊಳ್ಳುವುದಕ್ಕಿಂತ ಸಂಬಂಧಿಸಿದ ವಿಷಯಗಳ ಬಗೆಗೆ ಸರಿಯಾದ ತಿಳುವಳಿಕೆ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಭಿನ್ನ ಭಿನ್ನ ವಿಷಯಗಳಲ್ಲಿ ದಿನನಿತ್ಯದ ಉಪಯುಕ್ತ ವಿಷಯಗಳ ಬಗೆಗೆ ಹೆಚ್ಚಿನ ಗಮನ ಕೊಡಬೇಕು. ಉದಾಹರಣೆಗೆ ರಸಾಯನಶಾಸ್ತ್ರ ಕಲಿಸುವಾಗ ಮದ್ದುಗಳನ್ನು ಆಯ್ದುಕೊಂಡು ಅವುಗಳನ್ನು ಬೇರ್ಪಡಿಸಿದರೆ ಒಕ್ಕಲುತನವನ್ನು ಕೈಕೊಳ್ಳುವ ವಿದ್ಯಾರ್ಥಿಗೆ, ತನ್ನ ಜೀವನದಲ್ಲಿ ಉಪಯೋಗವಾಗಬಹುದು. ಇಂಗ್ಲೀಷ ಅಥವಾ ಕನ್ನಡ ಕಲಿಸುತ್ತಿದ್ದರೆ, ಅಲ್ಲಿ Short hand and Steno typing ವಿಷಯಗಳ ಬಗೆಗೆ ಪ್ರಾಯೋಗಿಕವಾಗಿ ಕಲಿಸಲು ಪ್ರಯತ್ನಿಸಿದರೆ. ಕಲಿತ ವಿದ್ಯೆಯ ಸಂಗ್ರಹವು, ಅವರು ಅಂತಹ ಉಪಯುಕ್ತ ಉದ್ಯೋಗಗಳನ್ನಾಯ್ದುಕೊಂಡಾಗ ಉಪಯೋಗಕ್ಕೆ ಬರುತ್ತದೆ. ಲಲಿತ ಕಲೆಗಳನ್ನು ಕಲಿಸುವಾಗ ಮನೆಯ ಸೌಂದರ್ಯದ ವಿಷಯವನ್ನು ಕಲಿಸಿದರೆ ಅವರು ಅದನ್ನು ನಿತ್ಯದ ಬದುಕಿನಲ್ಲಿ ಉಪಯೋಗಿಸಬಹುದು. ಎಂಜಿನೀಯರಿಂಗ್ ವಿಷಯ ಕಲಿಯುತ್ತಿದ್ದರೆ, ಅವರು ವರ್ಕಶಾಪ್‌ದಲ್ಲಿ ತಮಗುಳಿದ ಹೆಚ್ಚಿನ ವೇಳೆಯನ್ನು ಕಳೆದರೆ ಅದು ಅವರ ನಿತ್ಯದ ಬದುಕಿನ ಸಮಸ್ಯೆಗಳನ್ನೆದುರಿಸುವಲ್ಲಿ ಉಪಯುಕ್ತವೂ, ಪ್ರಯೋಗಾತ್ಮವೂ ಆಗುತ್ತದೆ. ಶಿಕ್ಷಕರು ನಾಡಿನ (ಪ್ರಗತಿಯ) ಸುಧಾರಣೆಯ ಯೋಜನೆಗಳನ್ನು ಅರಿತಿರುವುದು ಅತ್ಯವಶ್ಯ. ಅದರಿಂದ ಅವರು ರಾಷ್ಟ್ರಾಭಿಮಾನ ಮತ್ತು ರಾಷ್ಟ್ರೀಯತೆಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳುತ್ತಾರೆ.

ನಾವು ನಮ್ಮ ಸಂಪ್ರದಾಯಗಳಿಗೆ ಕುರುಡರಾಗಬೇಕಿಲ್ಲವೆಂಬುದನ್ನು ನಾನು ಎತ್ತಿ ತೋರಿಸಬಹುದಾಗಿದೆ. ನಮ್ಮ ಪಠ್ಯಕ್ರಮದಲ್ಲಿ ನೈತಿಕ ಶಿಕ್ಷಣದ ವಿಷಯಗಳಿಲ್ಲದಿದ್ದರೂ ಈ ವಿಷಯಗಳ ಕಡೆಗೆ (ಉದ್ದೇಶವಿಲ್ಲದೆಯೆಂದಲ್ಲ) ಉದ್ದೇಶಪೂರ್ವಕವಾಗಿಯೇ ಲಕ್ಷ್ಯ ತಿರುಗಿಸಬೇಕಾಗಿದೆ. ಇಂದಿನ ನಿರ್ಣಾಯಾತ್ಮಕ ಪರಿಸ್ಥಿತಿಯಲ್ಲಿ ಭಾರತದ ನಿಶ್ಚಿತ ಧೋರಣೆ ಮತ್ತು ಅದರ ವಿವೇಚನಾಪರ ಘೋಷಣೆಗಳಿಂದಾಗಿ ಜಗತ್ತು ಭಾರತದ ಮಹತ್ವವನ್ನರಿತಿದೆ. ನಮ್ಮ ಘೋಷಣೆಗಳ ಸತ್ಯಪರತೆಯನ್ನು ಯಾರೂ ಶಂಕಿಸಲಾರರು. ಇದು ನಮ್ಮ ಆನುವಂಶಿಕ ಗುಣವನ್ನವಲಂಬಿಸಿದೆ. ಅನೇಕ ಭಯಾನಕ ಸಮಸ್ಯೆಗಳ ಇಂದಿನ ಜಗತ್ತಿನಲ್ಲಿ ಸತ್ಯವೇ ಕೊನೆಗೆ ಜಯ ಸಂಪಾದಿಸುವುದೆಂಬುದಲ್ಲಿ ನನಗೆ ಸಂಪೂರ್ಣ ಭರವಸೆಯಿರುವುದರಿಂದ ನಮ್ಮ ಶಿಕ್ಷಕರು ತಮ್ಮ ಬೋಧನೆಯ ಕಾಲದಲ್ಲಿ ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳನ್ನು ತಿಳಿಸಿದರೆ ಜಗತ್ತಿನಲ್ಲಿ ಭಾರತದ ಸ್ಥಾನಮಾನವನ್ನು ಹೆಚ್ಚಿಸುವುದಕ್ಕೆ ಅಧಿಕ ಸಹಾಯವಾಗುತ್ತದೆ. ಏನೇ ಆದರೂ ನಮ್ಮ ದೇಶದ ಮರ್ಯಾದೆಯು ನಮ್ಮ ಜನತೆಯ ಗುಣ(ಸತ್ವ)ಹಾಗೂ ಶೀಲಗಳನ್ನವಲಂಬಿಸಿದೆ. ಆದುದರಿಂದ ಸಮಯ ಹಾಗೂ ಸ್ಥಳ ದೊರಕಿದಾಗೆಲ್ಲ ನಮ್ಮ ಶಿಕ್ಷಕರು ವಿಷಯ ಜ್ಞಾನದ

ನ್ನಲ್ಲದೆ ನೈತಿಕ ಬೋಧೆಗಳನ್ನೂ ವಿದ್ಯಾರ್ಥಿಗಳಿಗೆ ಕೊಡಬೇಕಾಗುತ್ತದೆ. ಶಿಕ್ಷಕರೇ ತಮ್ಮ ವಿದ್ಯಾರ್ಥಿಗಳಿಗೆ ಅನುಕರಣೆಗೆ ಮಾದರಿಯಾಗಬೇಕೆಂದು ನಾನು ಹೇಳಬಯಸುತ್ತೇನೆ. ಆದುದರಿಂದ ನಾನು, ಈ ಸಮಯದಲ್ಲಿ ಶಿಕ್ಷಕರು ಸರಳ ಹಾಗೂ ಕಠಿಣ ಜೀವನ ನಡೆಸಿ ತಮ್ಮ ವಿದ್ಯಾರ್ಥಿಗಳ ಮೇಲೆ ಆ ಗುಣಗಳು ಪ್ರಭಾವ ಮಾಡುವಂತೆ ಇರಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಹಾಗೆ ಮಾಡುವದರಿಂದ ನಮ್ಮ ವಿದ್ಯಾರ್ಥಿಗಳು ಕೊನೆಗೆ ಭಾರತದ ರಚನೆಗೆ ಸಹಾಯ ಮಾಡುತ್ತಾರೆಂದು ತಿಳಿಸುತ್ತೇನೆ.

ಕೊನೆಯದಾಗಿ, ಈ ಪ್ರಸಂಗದಲ್ಲಿ ಭಾಗವಹಿಸಿ ಮಾತಾಡಲು ನನಗೆ ಅವಕಾಶ ಇತ್ತುದಕ್ಕಾಗಿ ಶ್ರೀ ತಿಪ್ಪಣ್ಣಾ ಅವರಿಗೂ ಅಲ್ಲದೆ ಇತರ ನನ್ನ ಮಿತ್ರರಿಗೂ ಉಪಕೃತನಾಗಿದ್ದೇನೆ. ಅಲ್ಲದೆ ನಮ್ಮ ಪ್ರಾಂತದ ಸುತ್ತೂಕಡೆಯಿಂದಲೂ ಅಧಿಕ ಸಂಖ್ಯೆಯಲ್ಲಿ ಶಿಕ್ಷಕ ಬೋಧಕರು ಬಂದಿರುವುದನ್ನು ನೋಡಿ ಸಂತೋಷವೆನಿಸಿದೆ; ಅವರು ಮುಂದಿನ ೨–೩ ದಿನಗಳಲ್ಲಿ ನಮ್ಮ ದೇಶದ ಔದ್ಯೋಗಿಕ ಶಿಕ್ಷಣದ ಸಮಸ್ಯೆಗಳನ್ನು ಅರಿತುಕೊಂಡು ಅವುಗಳನ್ನು ಪರಿಣಾಮಕಾರಿಯಾಗಿ ಹೇಗೆ ಎದುರಿಸಬೇಕೆಂಬುದನ್ನು ವಿಚಾರಿಸುವುದರಲ್ಲಿ ಕಾಲ ಕಳೆಯುತ್ತಾರೆಂದು ನನಗೆ ಭರವಸೆಯಿದೆ. ನಮ್ಮ ವಿಶ್ವ ವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ, ಒಬ್ಬರು ಪ್ರೊಫೆಸರ್. ಇಬ್ಬರು ರೀಡರ್ ಮತ್ತು ಕೆಲವು ಲೆಕ್ಚರರ್ ಇವರನ್ನು ನೇಮಿಸಿ, ಸೂಕ್ತವಾದ ರೀತಿಯಲ್ಲಿ ಆ ವಿಭಾಗವನ್ನು ಸಂಶೋಧನಾತ್ಮಕ ಕೇಂದ್ರವಾಗಿ ಬಲಶಾಲಿಯಾಗುವಂತೆ ಮಾಡಬೇಕೆಂದು ನಿಶ್ಚಯಿಸಿದ್ದೇವೆ.ನಮಗೆ ಒಳ್ಳೆಯ ಗ್ರಂಥಾಲಯವಿದೆ; ಒಳ್ಳೆಯ ಉಪಕರಣಗಳಿವೆ; ಅಲ್ಲದೆ ಧಾರವಾಡದ ಹಿತಕಾರಿಯಾದ ವಾತಾವರಣದಲ್ಲಿ ಸಂಶೋಧನೆ ನಡೆಸಲು ಅನುಕೂಲವಾಗುವಂತೆ ಇನ್ನೂ ಅನೇಕ ಸಾಮಗ್ರಿಗಳನ್ನು ಜೋಡಿಸಬಹುದಾಗಿದೆ. ಈ ಸಂಶೋಧನಾ ಕೇಂದ್ರವು ವಿಜ್ಞಾನ, ಮಾನವಿಕ ಇಂತಹ ಎಲ್ಲ ವಿಷಯಗಳಲ್ಲಿಯೂ ಮೇಧಾವಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದಲ್ಲದೆ ಆ ವಿದ್ಯಾರ್ಥಿಗಳು ಪರಸ್ಪರ ವಿಷಯ ಸಮಾಲೋಚನೆಯ ಸಹಕಾರದೊಂದಿಗೆ ಹೊರಬರುತ್ತಾರೆಂದು ನನಗೆ ಎನಿಸುತ್ತದೆ. ಅಲ್ಲದೆ ನಮ್ಮ ವಿಶ್ವವಿದ್ಯಾಲಯದಲ್ಲಿ, ತತ್ವಜ್ಞಾನ. ಅರ್ಥಶಾಸ್ತ್ರ, ವಿಜ್ಞಾನ, ಗಣಿತ. ಮೊದಲಾದ ವಿಭಾಗಗಳು ಶಕ್ತಿಯುತವಾಗಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಲು ಬಹು ಸಹಾಯಕಾರಿಯಾಗುತ್ತವೆ. ನಮ್ಮ ಶೈಕ್ಷಣಿಕ ಕ್ಷೇತ್ರವು, ನಿಜವಾಗಿಯೂ, ಎಲ್ಲ ವಿಷಯಗಳನ್ನೂ ಒಳಗೊಂಡಿರುವುದರಿಂದ ಸಮಗ್ರ ಶೈಕ್ಷಣಿಕ ಸಂಶೋಧನಾ ಕೇಂದ್ರವೊಂದು ಧಾರವಾಡದಲ್ಲಿದ್ದು ಅದು ನಮ್ಮ ಪ್ರಾಂತದ ಎಲ್ಲ ಅವಶ್ಯಕತೆಗಳನ್ನೂ ಪೂರೈಸುವುದಲ್ಲದೆ, ದಕ್ಷಿಣ ಭಾರತದ ಅವಶ್ಯಕತೆಗಳನ್ನೂ ಪೂರೈಸಬಲ್ಲುದು. 'ಯುಜಿಸಿ'ಯವರು ನಮ್ಮ ಈ ಸಾಹಸಕಾರ್ಯಕ್ಕೆ ಕೃಪೆಯಿಟ್ಟು, ಸಾಕಷ್ಟು ಧನಸಹಾಯ ಸಲ್ಲಿಸಿದ್ದಾರೆ: ಶಿಕ್ಷಕ ಬೋಧಕರು ತಮ್ಮ ಈ ಕೇಂದ್ರವನ್ನು ಬೆಳೆಸಲು ತಮ್ಮ ಶಕ್ತಿಯನ್ನು ನೀಡುತ್ತಾರೆಂದು ನಾನು ಆಶಿಸುತ್ತೇನೆ.

ನಾನು ನಿಮ್ಮೆಲ್ಲರಿಗೆ ಮತ್ತೊಂದು ಬಾರಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮತ್ತು ಈ ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸಲು ನನಗೆ ಸಂತೋಷವೆನಿಸುತ್ತದೆಯೆಂದು ತಿಳಿಸುತ್ತೇನೆ. ಈ ಸಭೆಯು ಔದ್ಯೋಗಿಕ ಶಿಕ್ಷಣ ಪ್ರಗತಿಯ ಮಾರ್ಗದರ್ಶನದ ಒಂದು ಮೈಲುಗಲ್ಲಾಗಬಹುದೆಂದು ಆಶಿಸುತ್ತೇನೆ.

★ ಎ. ಎಸ್. ಅಡಕೆ

ವೈದಿಕ ಅಪ್ರಕಟಿತ ಗ್ರಂಥಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
205	ಗಜಗೌರೀ ವ್ರತಕಥೆ	ವೆಂಕಟರಾಮ ಶಾಸ್ತ್ರಿ	1823	?	III. 182
206	ಗಜೇಂದ್ರಮೋಕ್ಷ	ಕಾಖಂಡಿಕಿ ಕೃಷ್ಣರಾಯ	18 ಶ.	?	ಹಕ., 198
207	ಗಜೇಂದ್ರಮೋಕ್ಷ	ಸುಬ್ರಹ್ಮಣ್ಯ	?	ಯ	KB. 138/1
208	ಗಜೇಂದ್ರಮೋಕ್ಷ	ಹೆ. ಗಿರಿಯಮ್ಮ	1750	ಹಾ	ಹಕ., 169
209	ಗಜೇಂದ್ರಮೋಕ್ಷ ಟೀಕೆ	ಗರಣಿ ಕೃಷ್ಣಾಚಾರ್ಯ	19 ಶ.	ಟೀ	III. 468
210	ಗಣಿತ ವಿಳಾಸ ಟೀಕೆ	?	?	ಟೀ	III. 421
211	ಗರ್ಭಗೀತೆ	ಗುರುನಾಥ ?	?	ಭಾ.ಷ., 72	O U.L. ಸಂ. 205-06
212	ಗಯ ಚರಿತ್ರೆ	ಅಂ/ 'ಉಡುಪಿಯ ಕೃಷ್ಣ'	1750	ಯ	III. 320
213	ಗಯ ಚರಿತ್ರೆ	ಅಂ/ 'ಕಾರ್ಕಳದ ವೆಂಕಟೇಶ'	1800	ಯ	III. 321
214	ಗಯ ಚರಿತ್ರೆ	ಗಿ. ತಮ್ಮಯ್ಯ	19 ಶ.	ಯ	ಸಿಗ್ರಂಚಕೋ. 56
215	ಗಯ ಚರಿತ್ರೆ	?	?	ಗ., ಅ. 14	K. 288

216	ಗಯ ಚರಿತ್ರೆ	?	?	ಗ	K. A. 106
217	ಗಯೋಪಾಖ್ಯಾನ	?	?	ನಾ	K. B. 107
218	ಗರುಡ ಪಂಚಾಶತ್ತಿನ ಟೀಕೆ	?	18 ಶ.	ಟೀ	III. 421
219	ಗರುಡ ಪುರಾಣ ಟೀಕೆ	?	18 ಶ.	ಟೀ	III. 421
220	ಗರುಡ ಮಂತ್ರ ಟೀಕೆ	?	18 ಶ.	ಟೀ	III. 421
221	ಗರುಡ ಹನುಮಂತರ ಕಾಳಗ	ಅಂ. 'ಭವ ಪುರಿವಾಸ'	?	ಯ	K. B. 315
222	ಗರುಡಾಚಲ	?	?	ಹಾ., 78	K. A. 344
223	ಗಾಯತ್ರೀ ವ್ಯಾಖ್ಯಾನ	?	?	ಟೀ	ಕತಾಸೂ. 260
224	ಗಾಲವ ಚಿತ್ರಸೇನ	ಶಾಂತ ಕವಿ	1865-1920	ನಾ	III. 467
225	ಗಿರಿಜಾ ಕಲ್ಯಾಣ	?	1800	ನೃ. 108	III. 321
226	ಗಿರಿಜಾ ಕಲ್ಯಾಣ	ಗಂಗ	1750	ಯ	III. 101
227	ಗಿರಿಜಾ ಕಲ್ಯಾಣ	ಗೀ. ಶಾಂತಯ್ಯ	1830	ಯ	ಪಿ ಗ್ರಂಚಕೋ. 177
228	ಗಿರಿಜಾ ಕಲ್ಯಾಣ	ರಾಮಣ್ಣ ವೆಂಕಟಸುಬ್ಬಯ್ಯ	19 ಶ.	ನಾ	ಪಿ ಗ್ರಂಚಕೋ. 121
229	ಗಿರಿಜಾ ಕಲ್ಯಾಣ	ವಿಷ್ಣು ಸಭಾಹಿತ	19 ಶ.	ಯ	ಯಕ್ಷಗಾನ., 1.1 (ಪು. 8)
230	ಗಿರಿಜಾ ಕಲ್ಯಾಣ ಕಥೆ	ದೇ. ಶ್ರೀನಿವಾಸಯ್ಯಂಗಾರ್	19 ಶ.	?	III. 226
231	ಗಿರಿಜಾ ಕಲ್ಯಾಣ ನಾಟಕ	ಶಂಕರ ಕವಿ	19 ಶ.	ನಾ	III. 230
232	ಗಿರಿಜಾ ಪರಿಣಯ	ಶ್ರೀನಿವಾಸ	1881	ಹಾ	KA. 87/3
233	ಗಿರಿಜಾ ವಿಲಾಸ	ಹ. ರಾಮಭಟ್ಟ	19 ಶ.	ಯ	ಯ ಬ. 225

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
234	ಗಿರಿ ಪಾರಿಜಾತ	ಹೆ. ಗಿರಿಯಮ್ಮ	1750	ಹಾ	ಹ ಕ. 169
235	ಗೀತ ಗೋಪಾಲ ಟೀಕೆ	ಅಪ್ರಮೇಯಶಾಸ್ತ್ರಿ	18. ಶ.	ಟೀ	III. 421
236	ಗೀತ ಗೋವಿಂದ	ಶಾಂತಕವಿ	1856-1920	?	III. 467
237	ಗೀತ ಗೋವಿಂದ ಟೀಕೆ	ಅಪ್ರಮೇಯಶಾಸ್ತ್ರಿ	1750	ಟೀ	III. 96
238	ಗೀತ ಗೋವಿಂದ ಟೀಕೆ	ಕೃಷ್ಣದಾಸ	?	ಟೀ	K. 786/1
239	ಗೀತ ರಂಗೇಶ್ವರ	ಸಿಂಗರಾರ್ಯ	1680	?	II. 503 [ಅಲಭ್ಯ]
240	ಗೀತಾ ಭಾರತ	ಸದಾನಂದ ಯೋಗಿ	17 ಶ.	?	III. 421
241	ಗೀತಿಕಾ ಲಹರಿ	ಸಿ. ಆರ್. ಚೆಲ್ಲಮ್ಮ	19 ಶ.	ಹಾ ?	III. 219
242	ಗೀತೆಗಳು	ಯಗ್ಗಮ್ಮ	19. ಶ.	ಹಾ	ಕ ನಂ., 3.6 (ಪು. 2)
243	ಗುಣಜೀವ ಮಾರ್ಗಣಾ ಸ್ಥಾನ	?	?	?	III. 421
244	ಗುರುಗೀತೆ	ಅ. ಕೃಷಪ್ಪ	19 ಶ.	ಹಾ	ಪ್ರಜಾವಾಣಿ., 18-4-1956
245	ಗುರುದಶಪದಿ ಕೀರ್ತನೆಗಳು	ನಂಜುಂಡ ಭಾಗವತ	19 ಶ.	ಹಾ	ಹರಿ. ಕ (ಪೀಠಿಕೆ)
246	ಗುರು ಪೀಳಿಗೆ	ರಘುನಾಥ ತೀರ್ಥ	?	ಗ	KB. 431
247	ಗುರುಶಿಷ್ಯ ಬೋಧೆ	ಕೃಷ್ಣಯೋಗೀಂದ್ರ	18 ಶ.	?	III 421
248	ಗುರುಶಿಷ್ಯ ಸಂಬೋಧೆ	?	17 ಶ.	?	III. 421
249	ಗೋಕರ್ಣ ಮಹಾತ್ಮ್ಯೆ	?	?	ಭಾ. ಷ, 43	I. K. S (ಜಾನಪದ)

250	ಗೋಕರ್ಣ ಮಹಾತ್ಮ್ಯ	ಗಣಪಕ್ಕ	1870	ಹಾ., ನೆ ಲಿ – 7	ಕ ಕ., 326-27
251	ಗೋತ್ರಪ್ರವರ ನಿರ್ಣಯ ಟೀಕೆ	?	19 ಶ.	ಟೀ	III. 421
252	ಗೋ ಪದ್ಮವ್ರತ ಮಹಿಮೆ (ಪದ್ಮ ಪುರಾಣ)	?	19 ಶ.	ಗ ?	III. 422
253	ಗೋಪಿಕಾ ಗೀತೆ	ಅಂ 'ವೆಂಕಟರಂಗ'	?	ಹಾ., 4 83	ಕ ಸಾ ಪ ಪ., 22.3 (155-58)
254	ಗೋಪಿಯ ಹಾಡು	?	19. ಶ.	ಹಾ	III. 422
255	ಗೋವರ್ಧನ ಗಿರಿ ಮಾಹಾತ್ಮ್ಯ	?	18. ಶ.	?	III. 422
256	ಗೋವರ್ಧನ ಗಿರಿಯ ಕಥೆ	ವಿಷ್ಣುದಾಸ	19. ಶ.	ಹಾ ?	III. 239
257	ಗೋವಿನ ಕಥೆ	?	18 ಶ.	ಷ	III. 422
258	ಗೌರಾಂಬಾ ಶತಕ	?	1720	ಕಂ+ವೃ., 3-113	ಕಸಾಪಪ., 24.4
259	ಗೌಳಿಯ ಶಕುನ	?	18 ಶ.	ಗ,	III. 422
260	ಚತುಶ್ಲೋಕಿಯ ಟೀಕೆ	?	17 ಶ.	ಟೀ	III. 422
261	ಚಂಡಕೌಶಿಕ ನಾಟಕ	ಗೋ. ರಾಮಶಾಸ್ತ್ರಿ	19 ಶ.	ನಾ	III. 227
262	ಚಂದ್ರಕಲಾ ಕಲ್ಯಾಣ	ಕೆ. ರಾಮಸ್ವಾಮಿ ಅಯ್ಯಂಗಾರ	1860-1925	ನಾ	III. 465
263	ಚಂದ್ರಕಲಾವತೀ ವಿಲಾಸ	ವೆಂಕಟ	19 ಶ.	ನಾ	III. 2\9
264	ಚಂದ್ರಮೌಳಿ ಕಾಳಗ	ಜೋಳರ ವಾಸುದೇವಯ್ಯ	19 ಶ.	ಯ	III. 396
265	ಚಂದ್ರಹಾಸ	ಜಯರಾಮಾಚಾರ್ಯ	19 ಶ.	ನಾ ?	III. 466
266	ಚಂದ್ರಹಾಸನ ಕಥೆ	ನಂಜುಂಡ ಭಾಗವತ	1847-1906	?	III. 331

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
267	ಚಂದ್ರಹಾಸ ಪ್ರಸಂಗ	ವಿಷ್ಣು ಸಭಾಹಿತ	19 ಶ.	ಯ	ಯ ಬ 254
268	ಚಂದ್ರಾವಳಿ	ಧ್ವ. ನಾಗಪ್ಪಯ್ಯ	1700	ಯ	ಯ ಬ 178
269	ಚಂದ್ರಾವಳಿ	ಬೊಮ್ಮಲಾಟಂ ವೀರಭಟ್ಟರ ಶಾಮಣ್ಣ	19 ಶ.	ನಾ	III. 239
270	ಚಂದ್ರಾವಳಿ	ವಿದ್ವಾನ್ ವೆಂಕಟಾಚಾರ್ಯರ್	19 ಶ.	?	III. 239
271	ಚಂದ್ರಾವಳೀ ಕಥೆ	ಅಂ 'ನಿತ್ಯಾತ್ಮ'	?	ಯ	K. B. 355/1
272	ಚಂದ್ರಾವಳೀ ಕಥೆ	ಭಾಸ್ಕರ ಕವಿ	?	?	?
273	ಚಂದ್ರಾಂಗದ ಚರಿತ್ರೆ	ರಾಮಣ್ಣ ವೆಂಕಟಸುಬ್ಬಯ್ಯ	19 ಶ.	ನಾ	ಸಿಗ್ರಂಚಕೋ., 121
274	ಚಂಪಕಾ ಸ್ವಯಂವರ	ಅಣ್ಣಾಜಿ ಕೃಷ್ಣ ವರ್ಣಾರು	19 ಶ.	ನಾ	ಸಿಗ್ರಂಚಕೋ., 3
275	ಚಾಯುಣ ಭಾರತ	ಸುಕುಮಾರ ಭಾರತಿ	1550	ನಾ ಷ	II. 267-68
276	ಚಿಕದೇವರಾಜ ಯಶೋಭೂಷಣ	?	17 ಶ.	ಗ	III. 422
277	ಚಿಕದೇವರಾಜ ವಂಶಪ್ರಭಾವ	?	17 ಶ.	ಗ	III. 422
278	ಚಿಕದೇವರಾಜ ಶತಕ	ತಿರುಮಲಾರ್ಯ	1645-1706	?	II. 461 [ಅಲಭ್ಯ]
279	ಚಿಕದೇವರಾಜ ಶೃಂಗಾರ ಪದಗಳು	ಚಿಕುಪಾಧ್ಯಾಯ	1672	ಹಾ	II. 467
280	ಚಿಕದೇವರಾಯ ಚೌಪದ	ಸಿಂಗರಾರ್ಯ	17 ಶ.	ಚೌ	III. 300, 422
281	ಚಿಕದೇವರಾಯ ಜನನ ಪೂರ್ವೋತ್ತರ	?	17-18 ಶ.	ಗ ?	III. 422

282	ಚಿತ್ರಕೇತು ಚರಿತೆ	ತುಂಬಿನಕಟ್ಟಿ ಗುರುರಾಯಾಚಾರ್ಯ	19 ಶ.	?	III. 229
283	ಚಿತ್ರಭಾರತ	ಗೋವಿಂದ	1581	ಸಾ. ಪ , 30-1986 ಜೀವನ., 2.2 (120-3)	
284	ಚಿತ್ರ ವಿಚಿತ್ರರ ಕಾಳಗ	ನಂಜಯ್ಯಸಾಕ	19 ಶ.	ಯ	III. 229
285	ಚಿತ್ರ ಶತಕ ಸಾಂಗತ್ಯ	ಚಿಕುಪಾಧ್ಯಾಯ	1672	ಸಾಂ., 102	II. 488
286	ಚಿತ್ರಸೇನ ಗಂಧರ್ವ	ಶಾಂತಕವಿ	1856–1920	ನಾ	III. 467
287	ಚಿದಖಂಡಾನುಭವಸಾರ	ಚಿದಾನಂದ	1725	ಛಾ. ಷ., 8–537	III. 36-7
288	ಚಿದಂಬರ ಮಂತ್ರೋದ್ಧಾರ	?	18 ಶ.	?	III. 422
289	ಚೆಲಣಿಕುಮುತ್ತ ನಾಚ್ಚಾರ್ ವಿವಾಹ	?	1700	ಯ	III. 311
290	ಚೋರಕಥೆ	ಗೋ. ರಾಮಶಾಸ್ತ್ರಿ	19. ಶ.	ಯ ?	III. 227
291	ಜಯಸಿಂಹರಾಜ ಚರಿತ್ರೆ	ಸಂ. ಸುಬ್ಬಾಶಾಸ್ತ್ರಿ	19. ಶ.	ನಾ	KB. 148
292	ಜರಾಸಂಧನ ಕಾಳಗ	ಗೇ. ಶಾಂತಯ್ಯ	1830	ಯ	III. 188
293	ಜರಾಸಂಧ ವಧ	ಶಾಂತಕವಿ	1856-1920	ನಾ	III. 467
294	ಜ್ಞಾನಸಂಯೋಗ ತರಂಗಿಣಿ	?	?	ಗ	KB. 331/2
295	ಜ್ಞಾನ ಸನ್ಯಾಸ ಪ್ರಕರಣ	?	?	ಗ	ಡಾ|| ಎಲ್. ಬಿ. ಅವರ ಸಂಗ್ರಹ
296	ಜೀವನ್ಮುಕ್ತಿ ತತ್ವಬೋಧನ ಸಾರ	?	19. ಶ.	ಹಾ	III. 423.
297	ಜೀವನ್ಮುಕ್ತಿ ಬೋಧೆ	?	17. ಶ.	ಹಾ ?	III. 423

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
298	ಜೈಮಿನಿ ಭಾರತ ಕಥಾ ಸಂಗ್ರಹ	ಕುಂಡಲಗಿರಿಯಾಚಾರ್ಯ	1865-1904.	ಗ ?	ಸಿಗ್ರಂಚಕೋ. 21
299	[ಜ್ಯೋತಿಷಾಧಿ]	ಎಣ್ಣೆಮಡಿ ವೆಂಕಟರಮಣಯ್ಯ	19. ಶ.	ಗ	III. 222; ಉ ಕ ಗ್ರಂ. 34.
300	ತತ್ವ ಚಿಂತಾಮಣಿ	ಚಿದಾನಂದಾವಧೂತ	1750	ಗ	III. 78
301	ತತ್ವತ್ರಯ ವಿವರಣ	ಶ್ರೀಶೈಲಾರ್ಯ	1700	ಗ	II. 557
302	ತತ್ವದ ಕೀರ್ತನೆಗಳು	ಗುರುಕೃಷ್ಣ	1830	ಹಾ., 1000 ಕ್ಕೂ ಮಿಗಿಲು	III. 185-186
303	ತತ್ವದ ಪದಗಳು	ಗೋಪಾಲಾರ್ಯ ಶಿಷ್ಯ	1750	ಹಾ	III. 90-1
304	ತತ್ವದ ಸೊಬಗಿನ ಸೋನೆ	ಗೋಪಾಲಾರ್ಯ ಶಿಷ್ಯ	1750	ಸಾಂ., 67	III. 90-1
305	ತತ್ವ ನಿರ್ಣಯ	?	?	ಶ್ಲೋ+ಗ-	K. 355/11
306	ತತ್ವ ಪದಗಳು	?	?	ಹಾ	KB. 417/3
307	ತತ್ವ ಬೋಧ	?	17. ಶ.	ಸಾಂ.	III. 423
308	ತತ್ವ ಮಾಲೆ	?	17. ಶ.	?	III. 423
309	ತತ್ವ ವಿವರ ಟೀಕೆ	?	18. ಶ.	ಟೀ	III. 423
310	ತತ್ವ ವಿವೇಕ	?	17. ಶ.	?	III. 423
311	ತತ್ವ ಸಾರ	ಲಕ್ಷ್ಮೀಕಾಂತ	?	ಶ್ಲೋ+ಗ	KB. 432
312	ತತ್ವ ಸಾರ ಟೀಕೆ	?	18. ಶ.	ಟೀ	III. 423

313	ತತ್ತ್ವ ಸಾರಾಮೃತ	ವಾದಿರಾಜ	1570	ಚಾ., 5.677	KRI VI ಸಂ. 57
314	ತತ್ತ್ವಾರ್ಥ ದರ್ಪಣ	?	?	ಗ	K. 261
315	ತತ್ತ್ವಾರ್ಥಾಧಿಗಮ ಮೋಕ್ಷಶಾಸ್ತ್ರ ಟೀಕೆ	ಚಿದಾನಂದ ಕವಿ	18. ಶ.	ಟೀ	III. 423
316	ತತ್ತ್ವಾಭಿನಯ ನಿಘಂಟು	ನಂಜುಂಡ ಭಾಗವತ	1847–1906	?	ಹರಿ. ಕ (ಪೀಠಿಕೆ)
317	ತತ್ತ್ವಾಭಿನಯ ನಿಘಂಟು	?	?	ಕಂ., 165	K 417/1
318	ತಂತ್ರಸಾರ ಟೀಕೆ	ರಂಗನಾಥ ದೀಕ್ಷಿತ	16. ಶ.	ಟೀ	III. 423
319	ತಾತ್ಪರ್ಯ ನಿರ್ಣಯ	ಆನಂದತೀರ್ಥ	?	ಗ	K. A. 119
320	ತಾಮ್ರಧ್ವಜನ ಕಾಳಗ	ರಾಮ	1700	ಯ	ಯ ಬ. 162, 221
321	ತಾಮ್ರಧ್ವಜನ ಕಾಳಗ	ಅಂ/ 'ಶ್ರೀ ನರಸಿಂಹ'	?	ಯ	K B. 141
322	ತಾರಕ ನಿರಂಜನ	ಚಿನ್ಮಯದಾಸ	1750 ?	ಹಾ., 7.204	III. 256
323	ತಾರಾನಾಥ	ಕೆ. ಸುಬ್ಬರಾಯ	19 ಶ.	ಗ ?	III. 470
324	ತಾರಾ ಶಶಾಂಕ ನಾಟಕ	ಸುಬ್ರಹ್ಮಣ್ಯ	1830	ನಾ	III. 185
325	ತಿರುಮಲೇಶ ಚರಿತೆ	?	?	ಭಾ. ಷ., 9.2109	K. 744 (ಅಸಮಗ್ರ)
326	ತಿರುವಾಯ್ಮೊಳಿ ಟೀಕೆ	ಚಿಕುಪಾಧ್ಯಾಯ	1672	ಟೀ	II 489–90
327	ತಿರುವೇಂಗಡಾಚಾರ್ಯ ಶತಕ	ಕೇಶವ	1750	ವಾ. ಷ., 5.597	III. 72–4
328	ತ್ರಿಪುರ ದಹನ	ನಂಜುಂಡ ಭಾಗವತ	1847–1906	?	III. 206–07
329	ತ್ರಿಮೂರ್ತ್ಯಾತ್ಮಕ ಚರಿತ್ರೆ	ನಂಜುಂಡಾಚಾರ್ಯ	?	ಷ	III. 223
330	ತುಲಸೀ ಮಾಹಾತ್ಮ್ಯ	ಅಚ್ಯುತದಾಸ	1650	ಭಾ. ಷ.	III. 411–12

ಅ ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
331	ತುಲಸೀ ಮಾಹಾತ್ಮ್ಯ	?	18 ಶ.	ಹಾ	III. 423
332	ತುಲಾ ಕಾವೇರೀ ಮಾಹಾತ್ಮ್ಯ ಟೀಕೆ	ಚೆಲುವಾಂಬೆ	1725	ಟೀ	III. 22, 25
333	ತುಳಸೀ ಮಹಾತ್ಮ್ಯ	ಗಣಪಕ್ಕ	1870	ಹಾ	ಕ. ಕ. 327
334	ತೃಣಬಿಂದು ರಾಜನ ಚರಿತ್ರೆ	?	18 ಶ.	ಯ	III. 423
335	ತೆನ್ನಾಚಾರ್ಯ ಪ್ರಭಾವ ದೀಪಿಕೆ	?	?	ಟೀ ?	III. 423
336	ತೆಂಕಲೆ ವೈಷ್ಣವೋತ್ಪತ್ತಿ	?	18 ಶ.	ಗ ?	III. 423
337	ದಕ್ಷಾಧ್ವರ ಧ್ವಂಸ ಚಾರಿತ್ರ	ದೇವ	1725	?	III. 31 (ಅಲಭ್ಯ)
338	ದಕ್ಷಿಣ ದೇಶದ ಚರಿತ್ರೆ	ಹೊಳೆಹೊನ್ನೂರು ಸುಬ್ಬಯ್ಯ	18 ಶ.	ಗ	III. 423
339	ದಶಕಂಠ ರಾಮಾಯಣ	?	1750	ಗ	III. 317
340	ದಶಾವತಾರ ಕಥೆ	?	?	ಗ	III. 423
341	ದಶಾವತಾರ ಚರಿತೆ	ಮಲ್ಲರಸ	1680	ಚಂ., 11.1179	II. 510-13
342	ದಾರಿದ್ರ್ಯ ಶತಕ	ಕೊ. ರಾಮಸ್ವಾಮಿ ಅಯ್ಯಂಗಾರ್	19 ಶ.	ವ್ಯ ?	III. 465
343	ದ್ವಾತ್ರಿಂಶದಪಚಾರಗಳು	?	17 ಶ.	ಗ ?	III 423
344	ದ್ವಾದಶ ಮಂಜರಿ	?	?	?	K A. 183/5
345	ದ್ವಾದಶ ಮಂಜರಿಕಾ ಸ್ತೋತ್ರ ಟೀಕು	ಸೊಂ. ವೆಂಕಟೇಶಶಾಸ್ತ್ರಿ	19 ಶ.	ಟೀ	III 225

346	ದ್ವಾದಶ ಮಂಜರೀ ಟೀಕೆ	?	?	ಟೀ	III. 423
347	ದ್ವಾದಶ ಮಂಜರೀ ಸ್ತೋತ್ರ	ಸಿ. ಆರ್. ಚೆಲ್ಲಮ್ಮ	19. ಶ.	?	III. 219
348	ದಿವಾಕರ ಪದ್ಧತಿ ಪ್ರದೀಪಿಕಾ	ತಿಮ್ಮರಾಯ	?	ಶ್ಲೋ+ಟೀ	K. 618
349	ದೀನಪಾಲ ಶತಕ	?	1850	ವೃ., 108	III. 326
350	ದುರ್ಗಾ ಮಾಹಾತ್ಮ್ಯ	?	18. ಶ.	ಗ	III. 423
351	ದುರ್ಗಾ ವಿಜಯ	?	18. ಶ.	ಯ	III. 423
352	ದುಂದುಭಿ ಆಖ್ಯಾನ	ಜೋಯಿಸರ ವಾಸುದೇವಯ್ಯ	19. ಶ.	ಯ	III. 396
353	ದುಂದುಮೆ ಪದ	ಶಾಂತ ಕವಿ	1865–1920	ಹಾ	III. 221
354	ದೂರ್ವಾಸ ಚರಿತ್ರೆ	ಮೋಲುಗೋಟಿ ರಾಜಮ್ಮ	19. ಶ.	ಹಾ	III. 236
355	ದೂರ್ವಾಸ ಚರಿತ್ರೆ	ರಾಮಣ್ಣ ವೆಂಕಟ ಸುಬ್ಬಯ್ಯ	19. ಶ.	ನಾ	ಸಿ ಗ್ರಂ ಚ ಕೋ. 121
356	ದೂರ್ವಾಸ ಭೋಜನ	?	?	ಯ	KB. 403/2
357	ದೃಗ್ದೃಶ್ಯ ವಿವೇಕ	ಭೋಗಾನಂದ	?	ಷ	III. 423
358	ದೇವರಾಜ ವಿಜಯ	ಚೆನ್ನಯ್ಯ	17. ಶ.	ಷ ?	III. 423
359	ದೇವಿ ಮಹಾತ್ಮ್ಯ	(ಮೋದಶೀರ್ಷನ ಶಿಷ್ಯ)	1500	ಷ.	A R K R B P. 1939-40 (ಪು. 108)
360	ದೇವಿ ಮಹಾತ್ಮೆ	?	?	ಪದ್ಯ., 360	ಯ ಬ. 168
361	ದೇವಿ ಮಹಾತ್ಮೆ	?	?	?	KB. 409
362	ದೇವಿ ಮಹಾತ್ಮೆ	ಅಂ/ 'ಮಧ್ವಪತಿ ಕೃಷ'	?	ಯ	K R I III. ಸಂ. 37

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
363	ದೇವಿಯ ಮಾಹಾತ್ಮೆ	ಶಂಕರ ?	1650 ?	ಭಾ ಷ., 9.658	ಕ ಸಾ ಪ ಪ., 24.4 (283)
364	ದೇವೀ ಮಹಾತ್ಮ್ಯ	ಎಣ್ಣೆಮುಡಿ ವೆಂಕಟರಮಣಯ್ಯ	19. ಶ.	ಯ ?	III. 396
365	ದ್ವೈತ ಸಂಪ್ರೇಕ್ಷೆ	?	17. ಶ.	ಚಂ	III. 423
366	ದ್ರೋಣ ಪರ್ವ	ಗೇ ಶಾಂತಯ್ಯ	1830	ಯ	III. 188
367	ದ್ರೌಪದಿ ಸೀರೆ ಸೆಳೆದ ಹಾಡು	ಕೆ. ಅನಂತರಾಮಯ್ಯ	19. ಶ.	ಹಾ	K. 564/2
368	ದ್ರೌಪದೀ ವಸ್ತ್ರಾಪಹರಣ	ಕನಕದಾಸ	16. ಶ.	ವಾ. ಷ., 15	KRI IV., ಸಂ. 50
369	ದ್ರೌಪದೀ ವಸ್ತ್ರಾಪಹರಣ	ಚಂದ್ರಶೇಖರಶಾಸ್ತ್ರಿ	19. ಶ.	?	III. 226
370	ದ್ರೌಪದೀ ವಸ್ತ್ರಾಪಹರಣ	ಪುರಂದರದಾಸ	16. ಶ.	?	ಕ ನು., 2.16 (255)
371	ದ್ರೌಪದೀ ವಸ್ತ್ರಾಪಹರಣ	ಶೇಷಗಿರಿದಾಸ	?	ಯ	ಯ ಸಾ. 105
372	ದ್ರೌಪದೀ ವಸ್ತ್ರಾಪಹರಣ	ಹ. ರಾಮಭಟ್ಟ	19. ಶ.	ಯ	ಯ ಬ. 225
373	ದ್ರೌಪದೀ ವಸ್ತ್ರಾಪಹರಣ ಚೌಪಾದನ	?	?	ಚೌ., 150	O U L., 222
374	ದ್ರೌಪದೀ ವಸ್ತ್ರಾಪಹಾರ	ಅಂ/ 'ಶ್ರೀ. ವೆಂಕಟೇಶಂ'	?	ಯ	K B. 362
375	ದ್ರೌಪದೀ ವಿವಾಹ	?	18. ಶ.	ಷ	III. 423
376	ದ್ರೌಪದೀ ಸ್ವಯಂವರ	ಕೃಷ್ಣಾಜಿ ಬಾಪೂರಾವ್	19. ಶ.	?	III. 230
377	ದ್ರೌಪದೀ ಸ್ವಯಂವರ	ಗಿ. ತಮ್ಮಯ್ಯ	19. ಶ.	ನಾ	III. 228
378	ದ್ರೌಪದೀ ಸ್ವಯಂವರ	'ಮಧ್ವೇಂದ್ರ ಕೃಷ್ಣ'	?	ಯ	K B. 406

379	ದ್ರೌಪದೀ ಸ್ವಯಂವರ	ಶಂಕರ	1785	ಯ	ಯ ಬ. 236
380	ಧನುರ್ಮಾಸ ಮಹಿಮೆ	ವೆಂಕಟರಾಮ ಶಾಸ್ತ್ರಿ	1823	ಟೀ ?	III. 182-83
381	ಧರ್ಮನೀತಿ	?	?	ಷ	III. 424
382	ಧರ್ಮವ್ಯಾಧೋಪಾಖ್ಯಾನ	?	1700	ಭಾ. ಷ.	III. 304
383	ಧರ್ಮಶಾಸ್ತ್ರ ಟೀಕೆ	?	18 ಶ.	ಟೀ	III 424
384	ಧಾತ್ವರ್ಥ ಪ್ರಕಾಶಿಕೆ	ಭೀಮಾಜಿ ಶ್ರೀನಿವಾಸ ಅಡಬಡ್ಡಿ	1860–94	ಗ	III. 468
385	ಧಾತುಮಂಜರಿ	ಶ್ರೀರಂಗ ಪಟ್ಟಣದ ಕೃಷ್ಣಮಾಚಾರ್ಯ	1830	ಗ	III. 188
386	ಧ್ರುವ ಚರಿತ್ರೆ	ನಂಜುಂಡ ಭಾಗವತ	1847–1906	?	ಹರಿ. ಕ. (ಪೀಠಿಕೆ)
387	ಧ್ರುವ ಚರಿತ್ರೆ	ರಾಮಣ್ಣ ವೆಂಕಟಸುಬ್ಬಯ್ಯ	19 ಶ.	ನಾ	ಸಿಗ್ರಂಚಕೋ. 121
388	ಧ್ರುವ ಚರಿತ್ರೆ	ಲೋಕನಾಥ ಕವಿ	19 ಶ.	ಯ ?	III. 227
389	ಧ್ರುವ ಚರಿತ್ರೆ	ಹ. ರಾಮಭಟ್ಟ	19 ಶ.	ಯ	III. 392–393
390	ಧ್ರುವೋಪಾಖ್ಯಾನ	ದೇ. ಶ್ರೀನಿವಾಸಯ್ಯಂಗಾರ್	19 ಶ.	ಗ ?	III. 426
391	ಧೈರ್ಯಾಮೃತ	ದೇವ	1725	?	III. 31 (ಅಲಭ್ಯ)
392	ನರಕಾಸುರನ ಕಾಳಗ	ಭಾಗವತ ಕರಿಯಪ್ಪ	19 ಶ.	ಯ	III. 228
393	ನರಹರಿ ಭಕ್ತಿಸಾರ	ಅಂ/‘ ಕರಿಗಿರಿ ನರಸಿಂಹ’	1700	ಭಾ. ಷ., 108	III. 303
394	ನವಚಕ್ರ ಕುಲರೇಖಾ ಲಕ್ಷಣ	ಚಿದಾನಂದಾವಧೂತ	1750	ಗ	III. 76. 78-9
395	ನವರಸಾಲಂಕಾರ	ತಿಮ್ಮ	1600	ಚಂ	II. 320-21

ಅ.ಸಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
396	ನಳ ಚರಿತ್ರೆ	ಧಾ. ತಿಮ್ಮಪ್ಪದಾಸ	19 ಶ.	ಯ.	ಪ್ರಸ್ತಾವನೆ- ದ್ರೌಪದೀ ವಸ್ತ್ರಾಪಹರಣ. ಸಂ. ತಿರುಮಲಾಂಬ
397	ನಳ ಚರಿತ್ರೆ	ದೇ. ಶ್ರೀನಿವಾಸಯ್ಯಂಗಾರ್	19 ಶ.	?	III. 226
398	ನಳೋಪಾಖ್ಯಾನ	ಐ. ವೆಂಕಟದಾಸ	1835–1915	ಹಾ ?	ಹ ಕ. 289
399	ನಂಜರಾಜ ವಿಲಾಸ	ರಾಮಣ್ಣ ವೆಂಕಟಸುಬ್ಬಯ್ಯ	19 ಶ.	?	ಪಿಗ್ರಂಚಕೋ. 121
400	ನಾಟಕ ಪದ ಸಂಗ್ರಹ	ಶಾಂತ ಕವಿ	1856-1920	ಹಾ	III. 221
401	ನಾನಾರ್ಥ ಗುರುಬೋಧಸಾರ	ಪೂರ್ವಾಂತರಂಗ ಯೋಗಿ	1750	ಗ., ಅ. 11	III. 257
402	ನಾರದ ಕುಚೇಷ್ಟೆ	ಶಾಂತ ಕವಿ	1856-1920	ನಾ	III. 467
403	ನಾರಾಯಣ ಸ್ತವರಾಜ	?	?	?	III. 424
404	ನಾರಾಯಣಾಕ್ಷರ ಮಾಲಿಕಾ ಸ್ತೋತ್ರ	ಪರಮದೇವ	1777		III. 140 [ಅಲಭ್ಯ]
405	ನೀತಿ ಚೂಡಾಮಣಿ	ಗಿ. ತಮ್ಮಯ್ಯ	19 ಶ.	ಕಂ	III. 468
405	ನೀತಿ ಶತಕ	ಗರಣಿ ಕೃಷ್ಣಾಚಾರ್ಯ	19 ಶ.	?	III. 221
407	ನೀತಿ ಸಾರ	ಅರಮನೆ ಮರಿಶೆಟ್ಟಿ	19 ಶ.	?	III. 236
408	ನೂತನ ಕುಶಲವರ ಕಥೆ	?	?	ಯ	III. 424
409	ನೃಸಿಂಹ ರಗಳೆ	?	?	ರ.	ಶಸಾ., 20.6 (311)
410	ನೃಸಿಂಹ ಸ್ತವ	ಕನಕದಾಸ ?	1550	ಸಾಂ., 97	II. 237

411	ನೃಸಿಂಹ ಸ್ತವ	ಶ್ರೀಶೈಲಾರ್ಯ	1700	ಸಾಂ.. 97	II. 557
412	ನೃಹರಿ ಜಿನ್ನಪ	ಗೊ. ನರಸಿಂಹಚಾರ್ಯ	19 ಶ.	?	III. 220
413	ನೈಷದ ಟೀಕೆ	?	19 ಶ.	ಟೀ	III. 424

★ ಎಸ್. ಶಿವಣ್ಣ

ಒರೆಗಲ್ಲು

ಪಂಪಭಾರತದ 'ಡಂಗ' ಪದ

ದಿ. ಡಿ. ಎಲ್. ನರಸಿಂಹಾಚಾರ್ಯರು ಈ ಪದವು ಪಂಪಭಾರತದ ಪದ್ಯ ೨-೯೦ ಹಾಗೂ ೯–೩೯ರಲ್ಲಿ ಉಪಯೋಗಿಸಲ್ಪಟ್ಟಿರುವುದನ್ನು ಗುರುತಿಸಿದ್ದಾರೆ. ಶಾಸನ ಅಥವಾ ಕಾವ್ಯಗಳಲ್ಲಿ ಈ ಪದ ಬಳಕೆಯಾಗಿರುವುದು ತೀರ ಅಪರೂಪ. ಇದರ ಅರ್ಥವಂತೂ ಪಂಪಭಾರತದ ಲಿಪಿಕಾರರಿಗೆ ಕತ್ತಲೆಯೊಳಗಿನ ಕಾಡಿಗೆ ಕಣ. ಆದುದರಿಂದ ಅವರು ತಮ್ಮ ಬುದ್ಧಿಗನುಸಾರವಾಗಿ ಈ ಪದ್ಯಗಳಿಗೆ ಅರ್ಥ ಹಚ್ಚಿ ಅವನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ. ಆದರೂ ಅವರು 'ಡಂಗ' ಪದವನ್ನು ವ್ಯತ್ಯಸ್ತಗೊಳಿಸಿಲ್ಲ. ಇದು ಲಕ್ಷಿಸತಕ್ಕ ಸಂಗತಿ.

ಪೇಶಾವರದ ವಸ್ತುಸಂಗ್ರಹಾಲಯದಲ್ಲಿರುವ ಸಂಸ್ಕೃತ ಶಾಸನವೊಂದರಲ್ಲಿ (ಕಾಲ. ಕ್ರಿ.ಶ. ೧೪೬೧) ದ್ರಂಗವೆಂಬ ಪದ ಬಳಕೆಯಾಗಿದೆ. ಈ ಪದಕ್ಕೆ ಸ್ಟೀನ, ಮಾಕ್‌ಡೊನೆಲ್ ಮುಂತಾದ ವಿದ್ವಾಂಸರು ಠಾಣ್ಯ, ಸುಂಕದಕಟ್ಟೆ ಎಂಬ ಅರ್ಥವನ್ನು ಹೇಳುತ್ತಾರಂತೆ. ಈ ವಿದ್ವಾಂಸರಿಗೆ ಹೇಮಚಂದ್ರಾಚಾರ್ಯನು (ಕ್ರಿ.ಶ. ೧೨ನೆಯ ಶತಮಾನ) ಈ ಪದಕ್ಕೆ ಹೇಳುವ ಪುರಿ, ನಗರವೆಂಬ ಅರ್ಥವಿವರಣೆಯೆ ಆಧಾರ. ಶ್ರೀ ದೊಲನರು ಪ್ರಸ್ತುತ ಶಾಸನದ 'ದ್ರಂಗ'ವೆಂಬುದನ್ನೂ ಪಂಪಭಾರತದ 'ಡಂಗ' ವನ್ನೂ ಸಮೀಕರಿಸಿದ್ದಾರೆ (ಶಬ್ದವಿಹಾರ. ಪು. ೭೧ ಹಾಗೂ Indian Antiquiry, X. P. 79 and80.) ಆದರೆ ದ್ರಂಗ ಪದಕ್ಕಾಗಲೀ ಶಾಸನದಲ್ಲಿ ಅದು ಬರುವ ಸಾಲಿಗಾಗಲೀ ಖಚಿತವಾದ ಅರ್ಥ ಹೊರಡಿಸುವದು ಅಸಾಧ್ಯವೆಂದು ಆ ಶಾಸನದ ಸಂಪಾದಕರಾದ ಶ್ರೀ ಸ್ಟೆನ್‌ಕೋನೊ ಅವರೇ ಒಪ್ಪಿಕೊಂಡಿದ್ದಾರೆ.

ಮೇಲಿನ ವಿವರಣೆಯಿಂದ ಪಂಪನ ಡಂಗ ಪದವೇ ಪ್ರಾಚೀನ; ದ್ರಂಗವೆಂಬುದು ಅನಂತರದ್ದು ಎಂಬುದು ನಿಚ್ಚಳ. ಆದುದರಿಂದ ದ್ರಂಗದಿಂದ ಡಂಗವು ಹುಟ್ಟಿದೆಯೆಂದು ಹೇಳಲು ಆಧಾರವಿಲ್ಲವೆಂಬುದು ಖಚಿತಪಡುತ್ತದೆ. 'ಡಂಗ ಹಾಕು' ಎಂಬ ಪ್ರಚಲಿತ ಪಡೆನುಡಿಗೂ ಪಂಪಭಾರತದ 'ಡಂಗ' ಪದಕ್ಕೂ ಅವರು ಕಲ್ಪಿಸಿದ ಸಂಬಂಧವೂ ಇದರಿಂದ ಖಿಲವಾಗುತ್ತದೆ. ಒಂದು ವೇಳೆ ಠಾಣ್ಯ ಸುಂಕದ ಕಟ್ಟೆ ಎಂಬರ್ಥದ ದ್ರಂಗ ಪದಕ್ಕೂ ಈ ದೇಶೀಯ ಪಡೆನುಡಿಗೂ ಸಂಬಂಧವಿದ್ದರೂ ಇದ್ದೀತು.

ಇತ್ತೀಚೆಗೆ ಬೆಳಕು ಕಂಡಿರುವ 'ನಾಂದೇಡ ಜಿಲ್ಲೆಯ ಶಾಸನಗಳು' (Inscriptions from Nanded District P. 8 and 9) ಎಂಬ ಸಂಗ್ರಹದಲ್ಲಿ ತಡಖೇಲ ಎಂಬ ಊರಿನ ಚಾಲುಕ್ಯ ೧ನೆಯ ಸೋಮೇಶ್ವರನ ಕಾಲದ ಶಾಸನವೊಂದು ಪ್ರಕಟವಾಗಿದೆ. ಶಾಸನ ಸಮಿತಿ ೧೦೪೭ A.D. ಪ್ರಸ್ತುತ ಶಾಸನದಿಂದ ಸೋಮೇಶ್ವರನ ದಂಡನಾಯಕ ನಾಗವರ್ಮನು ಮಹಾಪ್ರತಾಪಶಾಲಿಯಾಗಿದ್ದಂತೆ ತಿಳಿದುಬರುತ್ತದೆ. ಅವನ ವಿಜಯಗಳನ್ನು ಸಾರುವ ಶಾಸನದಪದ್ಯವೊಂದು ಹೀಗಿದೆ—

ಅಪಟರೆಪೆಂದು ಬೇಗಿ ಬೆಸದಿರ್ಪನಿತಲ್ಲದೆ ಪೂಣ್ದು ಪೋಗಿ ಡಂ।
ಗದ ಸವಲಕ್ಕವಿಂಜದ ವರಾಳದ ಲಂಜಿಯ ಚಕ್ರಗೊಟ್ಟದ ॥
ಗ್ಗದ ನೃಪರಂ ಪಳಂಚಲಿದು ವೀರಶಿಖಾಮಣಿ ನಾಗವರ್ಮನಂ
ಪದೆ ನೆಲನಂ ನಿಮಿರ್ಚಿದವರಾಗ್ರ್ಗಳ ಚಕ್ರಿಯ ದಂಡನಾಯಕರು ॥

ದಂಡನಾಯಕ ನಾಗವರ್ಮನು ಡಂಗ, ಸವಲಕ್ಕೆವಿಂಜ, ವರಾಳ, ಲಂಜಿ, ಚಕ್ರಗೊಟ್ಟ ಮುಂತಾದವುಗಳ ರಾಜರನ್ನು ಸೋಲಿಸಿ ಚಕ್ರಿಗೆ ನೆಲವನ್ನು ನಿಮಿರ್ಚಿದನೆಂದು ಇಲ್ಲಿ ಹೇಳಿದೆ. ಆದುದರಿಂದ ಇಲ್ಲಿ ಡಂಗವೆಂದರೆ ಸುಂಕದ ಕಡ್ಡಿ, ಠಾಣ್ಯ ಮುಂತಾದ ಅರ್ಥಗಳು ಸರ್ವಥಾ ಹೊಂದುವದಿಲ್ಲ. ಅದು ಒಂದು ಊರು ಅಥವಾ ಪ್ರದೇಶದ ಹೆಸರೆಂಬುದು ಸ್ಪಷ್ಟವಾಗಿದೆ. ಈ ದಿಸೆಯಲ್ಲಿ ಪಂಪನ ಎರಡು ಪದಗಳನ್ನು ನೋಡಬಹುದು.

ಮಲೆತಲೆದೋಱಿದೆಂದುದನೆ ಕೊಟ್ಟುದ ಡಂಗಮುಡಂಗಿ ಬಂದೊಡೊ
ಕ್ಕಲಿಗವೆಸರ್ಗ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕ ಛತ್ರಮಂ
ಡಲಿಕರೆ ಮಿತ್ರಮಂಡಲಿಕರಾದರನಾಕುಳಮಿಂದುನಾಳ್ ವಸಾ।
ರ್ಮಲೆದವನಿಕ್ಕಿ ನಮ್ಮನೆಱೆದಿಕ್ಕುಗುಮೀನೆಲೆಯುಂ ಗುಣಾರ್ಣವಂ ॥

ಈ ಪದ್ಯದ ಪಾಠದೋಷವನ್ನು ಶ್ರೀ ದೊಳನರು ಈ ರೀತಿ ತಿದ್ದಿದ್ದಾರೆ-

ಮಲೆತಲೆದೋಱಿದೆಂದುದನೆ ಕೊಟ್ಟು [ದು] ಡಂಗಮುಡಂಗಿ -ಬಂ[ದೊಡೊ]
ಕ್ಕಲಿಗವೆಸರ್ಗೆಪೂಣ್ದುದು ಕುಱುಂಬು.............."

ಇಲ್ಲಿಯ ಊಹಾಪಾಠವೇನೋ ಪೂರ್ಣಸರಿಯಾಗಿದೆ. ಆದರೆ ಅವಕ್ಕೆ ಕಲ್ಪಿಸಿದ ಅರ್ಥ ತಪ್ಪಾಗಿದೆ. ಮಲೆ ಹಾಗೂ ಕುಱುಂಬವೆಂಬ ಎರಡು ಪ್ರದೇಶಗಳ ನಡುವೆ ಡಂಗವೆಂಬ ಹೆಸರಿನ ಮತ್ತೊಂದು ಪ್ರದೇಶ (ರಾಜ್ಯ)ವನ್ನೆ ಕವಿ ಹೆಸರಿಸಿ ಹೇಳುತ್ತಿದ್ದಾನೆಂಬುದು ಇಲ್ಲಿ ಸ್ಪಷ್ಟವಾಗಿದೆ.

ಪೊಂಗುವ ಮಲೆಪರ ಮಲೆಗಳ
ಡಂಗಂ [ಕ]ಣ್ಬಲಿವ ಮಲೆವ ಮಂಡಲಿಗಳ್ ಪ್ರತ್ಯಂ ॥
ತಂಗಳೆನಲೊಳವೆ ಪಾಂಡವ
ರಂಗೆಡೆಗೊಳೆ ನಿನಗೆ ಕುರುಕುಲಾಂಬರ ಭಾನೂ ॥ ೯-೭೯

ಇದು ದೌತ್ಯ ಪ್ರಸಂಗದಲ್ಲಿ ಕೃಷ್ಣನು ದುರ್ಯೋಧನನಿಗೆ ತಿಳಿಹೇಳಿದ ಮಾತು. ಮೇಲಿನ ಪದ್ಯ ೨-೯೦ ರಲ್ಲಿಯಂತೆಯೆ ಮಲೆಪರ ಮಲೆಗಳ ಜೊತೆಗೆ ಬಂದಿರುವುದರಿಂದ ಇಲ್ಲಿಯೂ ಡಂಗವೆಂದರೆ ಒಂದು ಪ್ರದೇಶವೆಂದು ಖಚಿತವಾಗುತ್ತದೆ. ಇಷ್ಟನ್ನು ನಿರ್ಧರಿಸಿದಮೇಲೆ ಈ ಪದ್ಯಕ್ಕೆ ಶ್ರೀ ದೊಳನರು ಸೂಚಿಸುವ (ಕಾವ್ಯದ ಅಡಿ ಟಿಪ್ಪಣಿಯ 'ಗ' ಪ್ರತಿಯ), ಪಾಠಾಂತರದ ಬಗೆಗೆ ಚರ್ಚಿಸಬಹುದು.

ಪೊಂಗುವ ಮಲೆಪರ ಮಲೆಗಳ
ಡಂಗಂ[ಕ]ಣ್ಮಲೆವ ಮಂಡಲಂಗಳ್ ಪ್ರತ್ಯಂ ||
ತಿಂಗಳೆನಲೊಳವೆ... ||

ಇಲ್ಲಿ ಅವರು ಗ ಪ್ರತಿಯ 'ಗಳ್ಮ'ವನ್ನು '[ಕ]ಣ್ಮ' ವೆಂಬುವಕ್ಕೆ ಬದಲಾಗಿ ಸ್ವೀಕರಿಸಲು ಸೂಚಿಸಿದ್ದಾರೆ. ಅದರಿಂದ 'ಡಂಗ'ಗಳ ಎಂಬ ಪಾಠವುಂಟಾಗುತ್ತದೆ. "ಮಲೆಪರ ಮಲೆಗಳ ಡಂಗಂಗಳ್ ಮಲೆವ ಮಂಡಲಂಗಳ್ ಪ್ರತ್ಯಂತಂಗಳ್ ಎನಲೊಳವೆ" ಎಂಬುದರಿಂದ "ನೆರೆಹೊರೆಯ ಪರ್ವತರಾಜರ ಡಂಗಗಳೆಲ್ಲ ಕೌರವನಿಗೆ ಅಧೀನವಾಗಿ ಅವನನ್ನು ಕರಗ್ರಾಹಿಯನ್ನಾಗಿ ಮಾಡಿ ರಾಜ ಎನ್ನಿಸುತ್ತವೆ" ಎಂಬ ಭಾವಾರ್ಥವನ್ನು ಹೊರಡಿಸಲು ಪ್ರಯತ್ನಿಸಿದ್ದಾರೆ. (ಅವರ ವಿವರಣೆಯಿಂದ ಈ ಪದ್ಯಕ್ಕೆ ಸರಿಯಾದ ಅರ್ಥ ಕಲ್ಪನೆ ಬಹು ಕಷ್ಟವೆಂಬುದು ವೇದ್ಯವಾಗುತ್ತದೆ). ಡಂಗವೆಂಬುದು ಮೇಲ್ಕಾಣಿಸಿದ ಶಾಸನದಲ್ಲಿಯೂ ಪಂಪಭಾರತದಲ್ಲಿ ಪದ್ಯ ೨–೯೦ ರಲ್ಲಿಯೂ ಏಕವಚನದಲ್ಲಿಯೇ ಪ್ರಯುಕ್ತವಾಗಿರುವದನ್ನು ಗಮನಿಸಿದರೆ 'ಡಂಗಂಗಳ್' ಎಂಬ ಬಹುವಚನವನ್ನು ತ್ಯಜಿಸಲೇಬೇಕಾಗುತ್ತದೆ. ಅಂತೆಯೆ ಶ್ರೀ ದೊಲಸರು ಇಲ್ಲಿ ಸೂಚಿಸಿದ ಪಾಠವೂ ಸ್ವೀಕಾರಾರ್ಹವಾಗುವದಿಲ್ಲ. ಪಂಪಭಾರತದ ಸಂಪಾದಕರು ಊಹಿಸಿರುವ 'ಡಂಗಂ [ಕ] ಣ್ಮಲೆವ ಮಂಡಲಂಗಳ್, ಹೆಚ್ಚು ಸಮರ್ಪಕವಾಗಿದೆ. ಕಣ್ಮಲೆವ ಮಂಡಲಂಗಳ್ ಎಂಬುದು ಪ್ರಥಮಾವಿಭಕ್ತ್ಯಂತವಿರುವುದರಿಂದ ಡಂಗಂ ಎಂಬುದೂ ಸಮರ್ಥನೀಯ.

ಇಷ್ಟಾದರೂ ಈ ಪದ್ಯದ ಪ್ರಥಮ ಪಾದದಲ್ಲಿ ಪಾಠದೋಷವು ಉಳಿದೇ ಉಳಿಯುತ್ತದೆ. ಪಂಪಭಾರತದ ಸಂಪಾದಕರು 'ಅಡಂಗಂ' ಎಂಬ ಪದವನ್ನು ಕಲ್ಪಿಸಿರುವದರಿಂದ (ಇದು ಮೂಲ ಲಿಪಿಕಾರರ ಕಲ್ಪನೆಯೂ ಅಹುದು. "ಪೊಂಗುವ ಮಲೆಪರ ಮಲೆಗಳ ಅಡಂಗಂ" ಎಂಬ ಅನಾವಶ್ಯಕವಾದ ಅನ್ವಯ ತನ್ನ ಜಿರಾಫೆ ಮುಖವನ್ನು ಮುಂದೆ ಚಾಚುತ್ತದೆ. ಮಲೆಪರ ಮಲೆಗಳು ಎಂಬ ಪ್ರತ್ಯೇಕವಾದ ಪ್ರದೇಶಕ ವಾಚಕ ಪದವು ಡಂಗವೆಂಬ ಮತ್ತೊಂದು ಪ್ರದೇಶಕವಾಚಕಪದಕ್ಕೆ ವಿಶೇಷಣವಾಗಿ ತನ್ನ ಅಸ್ತಿತ್ವವನ್ನೇ ಮರೆಮಾಡುತ್ತದೆ. ಕವಿಗೆ ಇಲ್ಲಿ ಮಲೆಗಳು ಹಾಗೂ ಡಂಗ ಎಂಬ ಎರಡೂ ಪ್ರದೇಶಗಳು ವಿವಕ್ಷಿತವಾಗಿರುವದರಿಂದ ಪದ್ಯದಲ್ಲಿ ಎರಡಕ್ಕೂ ಸಮಾನ ಅವಕಾಶವಿರುವುದು ಅವಶ್ಯಕ. ಆದುದರಿಂದ ಈ ಪದ್ಯವನ್ನು ಬೇರೊಂದು ಅಲ್ಪವಾದ ಊಹಾ ಪಾಠಕ್ಕೆ ಒಳಪಡಿಸುವ ಧೈರ್ಯಮಾಡಲಾಗಿದೆ.

ಪೊಂಗುವ ಮಲೆಪರ ಮಲೆಗ[ಳ್]
ಡಂಗಂ [ಕ]ಣ್ಮಲೆವ ಮಂಡಲಂಗಳ್ ಪ್ರತ್ಯಂ ||
ತಿಂಗಳೆನಲೊಳವೆ ಪಾಂಡವ
ರಂಗೆಡೆಗೊಳೆ ನಿನಗೆ ಕುರು ಕುಲಾಂಬರ ಭಾನೂ ||

ಪಂಪಭಾರತದ ಟೀಕಾಕಾರರು ಡಂಗಪದವು ಅರ್ಥವಾಗದೆ ಅದನ್ನು 'ಅಡಂಗಂ' ಎಂದು ಮಾರ್ಪಡಿಸಿದ್ದಾರೆ. ಅದಕ್ಕೆ ಸಹಾಯಕವಾಗಿ 'ಮಲೆಗಳ್' ಎಂಬುದನ್ನು 'ಮಲೆಗಳ' ಎಂದು ಸುಲಭವಾಗಿ ತಿದ್ದಿಬಿಟ್ಟಿದ್ದಾರೆ. ಈಗ ಈ ಪದ್ಯದ ಅರ್ಥಕ್ಕೆ ಯಾವ ತೊಡಕೂ ಉಳಿಯದು.

ಇಷ್ಟನ್ನು ಚರ್ಚಿಸಿದ ಮೇಲೆ ಡಂಗವೆಂಬುದು ಇರುವುದು ಎಲ್ಲಿ? ಅದು ಊರ ಹೆಸರೋ ಪ್ರದೇಶದ ಹೆಸರೋ ಎಂಬ ಕುತೂಹಲವುಂಟಾಗುವದು ಸ್ವಾಭಾವಿಕ. ಮೇಲೆ ಸೂಚಿಸಿದ ಶಾಸನದ ಸಂಪಾದಕರು ಡಂಗವನ್ನು ಹೊರತುಪಡಿಸಿ ಆ ಪದ್ಯದಲ್ಲಿ ಬರುವ ಸವಲಕ್ಕೆವಿಂಜ ವರಾಳ ಮೊದಲಾದವುಗಳ ಸ್ಥಾನ ನಿರ್ದೇಶನ ಮಾಡಿದ್ದಾರೆ. ಸವ-ಲಕ್ಕ ವಿಂಜ ಅಥವಾ ಸಪಾದಲಕ್ಷ ವಿಂಧ್ಯವೆಂದರೆ ವಿಂಧ್ಯಾದ್ರಿಯ ದಕ್ಷಿಣ ಪ್ರದೇಶ. ವರಾಳ ಅಥವಾ ವರ್ಧಾತಟವೆಂದರೆ ಈಗಿನ ವಿದರ್ಭದೇಶ; ಲಂಜಿಯು ಇಂದಿನ ಮಧ್ಯ ಪ್ರದೇಶದ ಬಾಲಾಘಾಟ ಜಿಲ್ಲೆಯ ಲಂಜಿಯೆಂಬ ಊರು; ಚಕ್ರಗೊಟ್ಟ ಅಥವಾ ಚಕ್ರ ಕೂಟವೆಂಬುದು ಇಂದಿನ ಒಡಿಸ್ಸಾರಾಜ್ಯದ ಬಸ್ತಾರ ಜಿಲ್ಲೆಯಲ್ಲಿ ಇರುವ ಊರು' (Inscriptions from Nanded District p· XX III). ಇವೆಲ್ಲ ಮಧ್ಯ ಭಾರತದಲ್ಲಿ ಇರುವದರಿಂದ ಡಂಗವೂ ಅದೇ ಕಡೆಗೆ ಇರಬೇಕು. ವೇಮುಲವಾಡ ಅಥವಾ ಬೋಧನದಲ್ಲಿ ರಾಜ್ಯವಾಳಿದ ೨ ನೆಯ ಅರಿಕೇಸರಿಯಿಂದ ಡಂಗವು 'ಅಡಂಗಿ'ಸಲ್ಪಟ್ಟಿತೆಂದು ಪಂಪನೇ ಹೇಳಿರುವನು. (ಮಲೆಪರು ಹಾಗೂ ಡಂಗಗಳನ್ನು ಪದ್ಯ ೯–೬೯ ರಲ್ಲಿ ಉಲ್ಲೇಖಿಸಿಯಾದ ಮೇಲೆ ಪದ್ಯ ೯–೭೦ ರಲ್ಲಿ ವಾಳವವನ್ನೂ ಪಂಪ ಹೆಸರಿಸಿದ್ದಾನೆ). ಇವೆಲ್ಲ ಮೇಲಿನ ಊಹೆಗೆ ಉಪಷ್ಟಂಭಕವಾಗಿವೆ.

ಇಷ್ಟರಿಂದ ಸುಳುಹು ದೊರೆತಂತಾಯಿತು. ಡಂಗವೆಂದರೆ ನಿಕರವಾಗಿ ಯಾವುದೆಂಬುದನ್ನು ಭಾರತೀಯ ಶಾಸನಗಳನ್ನು ವಿವರವಾಗಿ ಅಭ್ಯಸಿಸಿದ ಬುದ್ಧಿಯೊಡೆಯರು ಬಿರಳಿಟ್ಟು ಹೇಳುವರೆಂದು ಹಾರೈಸುತ್ತೇನೆ.

★ ಎಂ. ಬಿ. ಭೋಂಬಿ

ಗ್ರಂಥಾವಲೋಕನ

ಶ್ರೀ ಕುವೆಂಪು ಭಾಷಣಗಳು ಮತ್ತು ಬಿನ್ನವತ್ತಳೆಗಳು : ಸಂಪಾದಕರು: ಕೋ. ಚನ್ನಬಸಪ್ಪ ; ಪ್ರಕಾಶಕರು: ಬಳ್ಳಾರಿ ಸಾಹಿತ್ಯ ಅಕ್ಯಾಡೆಮಿ, ಬಳ್ಳಾರಿ [ಶ್ರೀ ಕುವೆಂಪು ಷಷ್ಟ್ಯಬ್ದಿ ಪೂರ್ತಿ ಸಮಾರಂಭದ ಪ್ರಕಟನೆ]೧೯೬೬; ಪುಟಗಳು : ೧೨೫ ; ಬೆಲೆ : ೩-೦೦.

'ಕನ್ನಡದ ಡಿಂಡಿಮ'ವನ್ನು ಬಾರಿಸಿ, ಕನ್ನಡಿಗರನ್ನು ಒಂದುಗೂಡಿಸುವಲ್ಲಿ ಪ್ರಶಂಸನೀಯ ಕಾರ್ಯವೆಸಗಿದ, ರಾಷ್ಟ್ರಕವಿ ಕುವೆಂಪು ಅವರಿಗೆ ಬಳ್ಳಾರಿಯ ಸಾಹಿತ್ಯ ಅಕ್ಯಾಡೆಮಿಯವರ ಕವಿಗಳ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅರ್ಪಿಸಿದ ಪುಸ್ತಕ ಇದು. ಶ್ರೀ ಕುವೆಂಪು ಅವರನ್ನು, ಕನ್ನಡ ನಾಡಿನ ಹಲವು ಸಂಘ-ಸಂಸ್ಥೆಗಳು೧೯೫೫-೧೯೬೫ ರ ಅವಧಿಯಲ್ಲಿ ಸನ್ಮಾನಿಸಿ, ಅವರಿಗರ್ಪಿಸಿದ ಬಿನ್ನವತ್ತಳೆಗಳನ್ನು ಆ ಸಂದರ್ಭಗಳಲ್ಲಿ ಕವಿಗಳು ನೀಡಿದ ಉದ್ಬೋಧಕ ಭಾಷಣಗಳನ್ನೂ ಇಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆ.

೧. ಕನ್ನಡ ಸಾಹಿತ್ಯ ಪರಿಷತ್ತು (ಮೇ ೧೯೫೫ ರಲ್ಲಿ) ಅರ್ಪಿಸಿದ ಸನ್ಮಾನ ಪತ್ರ;

೨. ಮೈಸೂರ ವಿಶ್ವವಿದ್ಯಾಲಯದವರು (ಏಪ್ರೀಲ್ ೧೯೫೫ ರಲ್ಲಿ) ಸಲ್ಲಿಸಿದ ಅಭಿನಂದನ ಪತ್ರ;

೩. ಬಳ್ಳಾರಿಯ ನಾಗರಿಕರು(ಸಪ್ಟಂಬರ ೧೯೫೫ರಲ್ಲಿ)ಅರ್ಪಿಸಿದ ಸನ್ಮಾನ ಪತ್ರ;

೪. ಭದ್ರಾವತಿಯ ನಾಗರಿಕರು (ಮೇ, ೧೯೫೬ ರಲ್ಲಿ) ಅರ್ಪಿಸಿದ ಸನ್ಮಾನ ಪತ್ರ.

೫. ರಾಜ್ಯ ಸರಕಾರದವರು (ಜನೆವರಿ ೧೯೬೫ ರಲ್ಲಿ) ಕುವೆಂಪು ಅವರಿಗೆ ರಾಷ್ಟ್ರಕವಿ ಪ್ರಶಸ್ತಿ ನೀಡಿ, ಸಲ್ಲಿಸಿದ ಅಭಿನಂದನ ಪತ್ರ.

೬. ಕರ್ನಾಟಕ ವಿಶ್ವವಿದ್ಯಾಲಯದವರು (ಫೆಬ್ರುವರಿ ೧೯೬೬ರಲ್ಲಿ) ಡಿ. ಲಿಟ್ ಪದವಿಯನ್ನು ನೀಡಿ ಸಲ್ಲಿಸಿದ ಭಾಷಣ-ಮಹಾಕವಿಗಳ ಸಾಧನೆ- ಸಿದ್ಧಿಗಳನ್ನು ಪ್ರಶಂಸಿಸಿ ಜನತೆ ಹಾಗೂ ಸಂಸ್ಥೆಗಳು ಧನ್ಯಭಾವನೆಯಿಂದ ಸಮರ್ಪಿಸಿದ ಬಿನ್ನವತ್ತಳೆಗಳಿವು. ಶ್ರೀ ಕುವೆಂಪು ಅವರ ಕವಿವ್ಯಕ್ತಿತ್ವದ ಹಲವು ಮುಖಗಳನ್ನು ಈ ಸನ್ಮಾನ ಪತ್ರಗಳಲ್ಲಿ ಔಚಿತ್ಯಪೂರ್ಣವಾಗಿ ಬಣ್ಣಿಸಲಾಗಿದೆ.

'ಶ್ರೀರಾಮಾಯಣದರ್ಶನಂ' ದಂತಹ ದಾರ್ಶನಿಕ ಕಾವ್ಯವನ್ನು ಈ ಆಧುನಿಕ ಕಾಲದಲ್ಲಿ ರಚಿಸಿ, ಹೊಸಗನ್ನಡ ಸಾಹಿತ್ಯಕ್ಕೊಂದು ಮೇರು ಕೃತಿಯನ್ನು ಕುವೆಂಪು ಕೊಡುಗೆಯಾಗಿ ಇತ್ತಿದ್ದಾರೆ. ಈ ಮಹಾಕಾವ್ಯದ ಹೊಸ ದರ್ಶನ ಧ್ವನಿಯನ್ನು ಸ್ವತಃ ಕವಿಗಳೇ ಒಂದು ಭಾಷಣದಲ್ಲಿ ವಿಶ್ಲೇಷಿಸಿದ್ದು, ವೈಶಿಷ್ಟ್ಯಪೂರ್ಣವಾಗಿದೆ. "ಕವಿ ಹೃದಯವೊಂದು ವೀಣೆ; ಲೋಕವದನು ಮಿಡಿವುದು" ಎಂಬ ನಂಬಿಕೆಯನ್ನು ಸಿದ್ಧ ಮಾಡುವದಕೋಸ್ಕರ ತಾವು ಲೌಕಿಕದೃಷ್ಟಿಯ ಕಾವ್ಯ ಬರೆಯುವ ಮನಸ್ಸುಳ್ಳವರೆಂದು ಕುವೆಂಪು ಸ್ಪಷ್ಟೀಕರಿಸಿದ್ದಾರೆ. 'ರಾಮಾಯಣ ದರ್ಶನ' ಬರೆಯುತ್ತಿರುವ ಹಾಗೆಯೇ, ತಮ್ಮ ವ್ಯಕ್ತಿತ್ವವೂ ಬೆಳೆಯುತ್ತ ಹೋಯಿತೆಂದು ಕವಿಗಳು ಹೇಳಿಕೊಂಡಿದ್ದಾರೆ. ಪ್ರಾಚೀನ ಆಲಂಕಾರಿಕ ಪ್ರಕಾರ, ಕಾವ್ಯದಲ್ಲಿ ಧ್ವನಿಪ್ರಭೇದಗಳು ಮೂರು (ವಸ್ತು, ಅಲಂಕಾರ, ರಸ). ಆದರೆ 'ದರ್ಶನ ಧ್ವನಿ' ಎಂಬುದೊಂದನ್ನು ತಾವು ಹೊಸದಾಗಿ ಸೃಷ್ಟಿಸಿಕೊಂಡು ಈ ಮಹಾಕಾವ್ಯದಲ್ಲಿ ಪ್ರಯೋಗಿಸಿದ್ದಾಗಿ ಸ್ಪಷ್ಟಪಡಿಸಿದ್ದಾರೆ. ಸೋದಾಹರಣವಾಗಿರುವ ಕುವೆಂಪು ಅವರ ಈ ಸ್ವವಿಮರ್ಶೆಯು ಸಹೃದಯರ ಒಳಗಣ್ಣನ್ನು ತೆರೆಯಿಸುವಂತಿದೆ.

ಆಧ್ಯಾತ್ಮಿಕ ಮನೋಭಾವನೆಯನ್ನು ತಾರುಣ್ಯದಲ್ಲಿಯೇ ಅಳವಡಿಸಿಕೊಂಡ ಪುಟ್ಟಪ್ಪನವರು ತಾವು ರಚಿಸುವ ಸಾಹಿತ್ಯವೆಂದರೆ "ಆಧ್ಯಾತ್ಮಿಕ ಅನುಭವದ ಅಭಿವ್ಯಕ್ತಿಯ ಒಂದು ಮುಖವಾಗಿದೆ." ಎಂಬ ನಿಲುವನ್ನು ತಾಳಿದವರು. "ಸೌಂದರ್ಯ ಸಾಕ್ಷಾತ್ಕಾರದಿಂದ ಆನಂದ ದೊರೆಯುತ್ತದೆ.... ಕಾವ್ಯರಚನೆಯು ಸಣ್ಣ ಆನಂದ. ಸಾಕ್ಷಾತ್ಕಾರದ ದೊಡ್ಡ ಆನಂದದಲ್ಲಿ ಅದು ಲೀನವಾಗಿದೆ." ಎಂಬ ತಮ್ಮ ತಾತ್ವಿಕ ನಿಲುವನ್ನೂ, ಅದನ್ನು ಸಾಧಿಸಿದ ಬಗೆಯನ್ನೂ "ಚಿಚ್ಛಕ್ತಿಯ ವಾಕ್ ವಿಗ್ರಹ"ದಲ್ಲಿ ವರ್ಣಿಸಿದ್ದಾರೆ.

ಏಕೀಕರಣದ ಕನಸು ನನಸಾದೊಡನೆಯೇ, ಕುವೆಂಪು ಅವರು, ನಾಡಿನ ಸರ್ವಾಂಗೀಣ ವಿಕಾಸಕ್ಕೆ ಪೋಷಕವಾಗುವ ಘೋಷಣೆಯೊಂದನ್ನು ಹೊರಡಿಸಿದರು. ಅದುವೇ: 'ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು'. ಈ ಭಾಷಣದಲ್ಲಿ ಕವಿಗಳು ಕನ್ನಡ ಭಾಷೆಯ ಇತಿ ಮಿತಿಗಳನ್ನು ಚರ್ಚಿಸಿ, ಭಾಷಾ ಬಳಕೆ ಹಾಗೂ ಬೆಳವಣಿಗೆಯ ಸಾಧ್ಯತೆಗಳನ್ನು ಚೆನ್ನಾಗಿ ವಿವರಿಸಿದ್ದಾರೆ. ಇಂಗ್ಲೀಷನ್ನು ಬಲಾತ್ಕಾರವಾಗಿ ಹೇರಬೇಡಿ' ಎಂಬ ಮತ್ತೊಂದು ಭಾಷಣದಲ್ಲಿಯೂ, ಸ್ವಭಾಷೆಯ ಬಳಕೆಯ ಕುರಿತು ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ.

'ನನಗಿರುವ ನಾಲ್ಕು ಗುರಿಗಳು' ಎಂಬ ಭಾಷಣದಲ್ಲಿ, ವಿಶ್ವವಿದ್ಯಾಲಯಗಳಲ್ಲಿಯ ಇಂದಿನ ಶಿಕ್ಷಣದ ಸ್ಥಿತಿ–ಗತಿಗಳನ್ನೂ ವಿವರಿಸುತ್ತ, ಪ್ರಾದೇಶಿಕ ವೈಶಿಷ್ಟ್ಯ ಮತ್ತು ಮಹತ್ವವನ್ನೂ ಕಾಯ್ದುಕೊಳ್ಳುವಲ್ಲಿ ನಾವು ಎಂತು ಸಾಗಬೇಕೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ.

'ಮನುಜಮತ, ವಿಶ್ವಪಥ, ವಿಜ್ಞಾನ ದೃಷ್ಟಿ, ವಿಚಾರಬುದ್ಧಿ'—ಈ ನಾಲ್ಕು ಗುರಿಗಳನ್ನು ತಲುಪಲು ಜನತೆಗೆ ವಿಶ್ವವಿದ್ಯಾಲಯದ ಪ್ರಸಾರಾಂಗವು ನೆರವಾಗಬೇಕೆಂಬ ಶ್ರೀ ಕುವೆಂಪು ಅವರ ಧ್ಯೇಯೋಕ್ತಿಯಲ್ಲಿ ಶಿಕ್ಷಣ ಪ್ರಸಾರದ ಶುದ್ಧ ದೃಷ್ಟಿ ಎದ್ದು ಕಾಣುವಂತಿದೆ. ಈ ಗುರಿಗಳನ್ನು ಸಮರ್ಥವಾಗಿ ಸಾಧಿಸಲು ಆಯಾ ಪ್ರದೇಶದ ಭಾಷೆಗೆ, ಸಂಪೂರ್ಣ ಅವಕಾಶವೂ, ಮನ್ನಣೆಯೂ ಇರಬೇಕೆಂಬ ಧೋರಣೆಯನ್ನು ಪುನರುಚ್ಚರಿಸಿದ್ದಾರೆ.

ಕವಿಯಾಗಿ, ವಿಮರ್ಶಕರಾಗಿ, ಶಿಕ್ಷಣ ತಜ್ಞರಾಗಿ–ಸ್ವತಃ ಈ ರಂಗಗಳಲ್ಲಿ ಶ್ರಮಿಸುತ್ತಿರುವ ಕುವೆಂಪು ಅವರ ವಿಚಾರಧಾರೆ ಸಕಾಲಕವಾಗಿವೆ; ಮನನೀಯವಾಗಿವೆ. ಈ ಕುವೆಂಪು ವಿಚಾರ ಗುಚ್ಛವನ್ನು ಹೊರತಂದ ಬಳ್ಳಾರಿ ಸಾಹಿತ್ಯ ಅಕ್ಯಾಡೆಮಿಯವರು ಅನುಕರಣೀಯ ಕಾರ್ಯವನ್ನೇ ಎಸಗಿದ್ದಾರೆ.

* * *

ಶಾಂತಿ (ನಾಟಕ) : ಲೇಖಕರು : ಚಿದಂಬರಾನಂದ. ಪ್ರಕಾಶಕರು : ವಸುಮತೀ ಪ್ರಕಾಶನ, ಧಾರವಾಡ ೧೯೭೦; ಪುಟಗಳು : ೧೭೭; ಬೆಲೆ : ಮೂರು ರೂಪಾಯಿ

ಶ್ರೀ ಚಿದಂಬರಾನಂದರ ಈ ಎರಡೆಯ ನಾಟಕ, ಅವರೇ ಹೇಳಿಕೊಂಡಂತೆ 'ಸಾಂಕೇತಿಕ'ವಾದುದು. ಓದಿ, ಆನಂದ ಪಡುವುದರೊಂದಿಗೆ, ವಾಚಕರನ್ನು ವಿಚಾರ ಮಾಡಲೂ ಈ 'ಓದು ನಾಟಕ' ಪ್ರಚೋದಿಸುತ್ತದೆ ಎಂಬುದು ಲೇಖಕರ ವಿಶ್ವಾಸ. ರಂಗಭೂಮಿಯ ತಂತ್ರ ಅಥವಾ ಅಭಿನಯ ಕೌಶಲದ ಕುರಿತು ಪ್ರತ್ಯಕ್ಷ ಪರಿಚಯವೆಷ್ಟೂ ಇಲ್ಲದ್ದರಿಂದ, 'ಪರಿಣಾಮಕಾರಿಯಾಗಿ ರಂಗಭೂಮಿ ಮೇಲೆ ತರಲು ಸಾಧ್ಯವಿದೆ' ಎಂಬ ಸ್ವಯಂ ತೃಪ್ತಿಯನ್ನು ತೋರಿಸಿಕೊಂಡ ಚಿದಂಬರಾನಂದರು, 'ಇದಕ್ಕಾಗಿ ಕಲಾವಿದರು ಮಾತ್ರ ಮನಃಪೂರ್ವಕವಾಗಿ ಪ್ರಯತ್ನಿಸಬೇಕಾಗುತ್ತದೆ'. ಎಂದು ನಿರ್ಣಯವಿತ್ತು, ಹೊಣೆಗಾರಿಕೆಯಿಂದ ಸುಲಭ ಪಾರಾಗಿದ್ದಾರೆ. ಆದ್ದರಿಂದ, ಶಾಂತಿ ನಾಟಕದ ಒಟ್ಟುಗುಣ ಆಡಕವಾಗಿರುವುದು ಅದರ 'ಸಾಂಕೇತಿಕ' ಕ್ರಿಯೆಯಲ್ಲಿ ಎಂದು ಓದುಗ ಭ್ರಮಿಸಿ ಓದುವಂತಿಲ್ಲ.

ನಾಟಕದ ಪ್ರತಿಯೊಂದು ಪಾತ್ರಕ್ಕೂ, ಅದರದೇ ಆದ ಗುಣಧರ್ಮವಿದೆ. ಜೀವನ ದೃಷ್ಟಿಯಿದೆ, ಆಸೆ-ಆಕಾಂಕ್ಷೆಗಳಿವೆ. ಆದರೆ ಇವೆಲ್ಲ ಲಕ್ಷಣಗಳೂ ವಾಚ್ಯಾರ್ಥದಲ್ಲಿಯೇ ಅಭಿವ್ಯಕ್ತಗೊಳ್ಳುವದರಿಂದ, ನಾಟಕಕಾರರ, 'ಸಾಂಕೇತಿಕ' ಪದಕ್ಕೆ ಆಂತರಿಕ ಅರ್ಥವ್ಯಾಪ್ತಿ ಇಲ್ಲವೇ ಇಲ್ಲ ಎಂಬುದು ಸಿದ್ಧವಾಗುತ್ತದೆ,

ಆದರೆ ನಾಟಕಕಾರರ ತಾತ್ತ್ವಿಕ ನಿಲುವು, ಮತ್ತು ಶಿಷ್ಟಶೈಲಿಯ ಪ್ರತಿಪಾದನೆ ಮಾತ್ರ ಮೆಚ್ಚುವಂತಹ ಸಂಗತಿಗಳು.

ಆಧುನಿಕ ಜೀವನಕ್ಕೆ ಶಾಪವಾಗಿರುವ ಯಾಂತ್ರಿಕ ಜ್ಞಾನ; ಆದಕ್ಕೆ ಪ್ರೇರಕಶಕ್ತಿಯಾಗಿ ಕೇವಲ ಮನುಷ್ಯನ ಭೌತಿಕತೆಯ ಪ್ರಗತಿಗೆ ಮಾತ್ರ ಚಾಲನೆ ನೀಡುತ್ತಿರುವ ವಿಜ್ಞಾನ-ಇವು ಪ್ರಕೃತಿಯಿಂದ ದೊರಕುವ ಸೌಂದರ್ಯಾನುಭೂತಿಯಿಂದ ಮನುಷ್ಯನನ್ನು ವಂಚಿತಗೊಳಿಸುತ್ತಿವೆ. ವಿಜ್ಞಾನ, ನಮ್ಮ ಬುದ್ಧಿಯನ್ನೇನೋ ವಿಶಾಲಗೊಳಿಸಿದೆ; ಸೃಷ್ಟಿಯ ಗೂಢಗಳೆಲ್ಲ ಒಂದೊಂದಾಗಿ ವಿಶ್ಲೇಷಿಸುತ್ತಿವೆ. ಕೇವಲ ಬೌದ್ಧಿಕ ಮಟ್ಟದಲ್ಲೇ ಬೆಳೆಯುತ್ತಿರುವ ಈ ವಿಜ್ಞಾನ ಮನೋಧರ್ಮ, ಪ್ರಸ್ತುತ ಜಗತ್ತಿನಲ್ಲಿ ತಾರಕಕ್ಕಿಂತ ಮಾರಕಶಕ್ತಿಯಾಗಿಯೇ ವರ್ತಿಸುವಂತೆ ತೋರುತ್ತಿದೆ. ಸಾಂಪ್ರದಾಯಿಕ ಧರ್ಮ ಹಾಗೂ ನಂಬಿಕೆಗಳು, ಸತ್ಯ, ಅಹಿಂಸೆ, ಪ್ರೇಮದಂತಹ ಮಾನವೀಯ ಮೌಲ್ಯಗಳನ್ನೇ ಆಧಾರವಾಗಿಟ್ಟುಕೊಂಡು, ಇನ್ನೊಂದೆಡೆ ಲೋಕತಾರಕ ಮಂತ್ರವನ್ನು ಘೋಷಿಸುತ್ತಿವೆ. ಆದರೆ ವಿಜ್ಞಾನ, ಅಂತರಿಕ ಭಾವನಾವಿಕಸನವನ್ನು ಮಾತ್ರ ಎಷ್ಟೂ ಸಾಧಿಸಲಿಕ್ಕೆ ಯತ್ನಿಸಿಲ್ಲ. ಎಂಥ ಸಂವೇದನಾಶೀಲನನ್ನೂ ಗೊಂದಲಕ್ಕೀಡುಮಾಡುವಷ್ಟು ವಿಜ್ಞಾನ ಮಾರಕಾಸ್ತ್ರವಾಗಿ, ಜಗತ್ತನ್ನೇ ಭೀತಿಯ ದವಡೆಯಲ್ಲಿರಿಸಿದೆ.

ಪ್ರಕೃತ ನಾಟಕದಲ್ಲಿ ಬೌದ್ಧಿಕ ಸಂಘರ್ಷಣೆ ನಡೆಯುವುದು ವಿಜ್ಞಾನಿ (ಗಂಡ) ಹಾಗೂ ಶಾಂತಿ (ಹೆಂಡತಿ)ಯರ ನಡುವೆ. ತಲೆತುಂಬ 'ಬುದ್ಧಿ' ತುಂಬಿಕೊಂಡಿರುವ, ರಸಿಕ ಸಂವೇದನೆಯನ್ನು ಕಳೆದುಕೊಂಡಿರುವ ವಿಜ್ಞಾನಿ ಭಾಸ್ಕರ, ಸ್ವಾರ್ಥಿಯಾಗಿ, ಹುಂಬ ಅಹಂಕಾರಿಯಾಗಿ, ಹೆಂಡತಿ ಶಾಂತಿಯನ್ನು ಕಡೆಗಾಣಿಸುವ ಸನ್ನಿವೇಶದೊಂದಿಗೆ ನಾಟಕ ಆರಂಭವಾಗುತ್ತದೆ. ಇಲ್ಲಿಯ ಶಾಂತಿ (ನಾಟಕದ ಕೇಂದ್ರ), ಆಗಲೇ ತನ್ನ ಸಹನಶೀಲತೆಯನ್ನು ಬಿಟ್ಟುಕೊಟ್ಟು ಸಿಡುಕಿಯಾಗಿ ಅವಡುಗಚ್ಚುವ ಪರಿಸ್ಥಿತಿ ನಿರ್ಮಿಸಿಕೊಂಡಿದ್ದಾಳೆ. ಹೀಗಾಗಿ, ನಾಟಕದ ಈ ನಾಯಕಿ, ಇಡೀ ಕೃತಿಯಲ್ಲಿ, ತನ ಮನೋಭಾವನೆಯನ್ನು ಕ್ರಿಯಾತ್ಮಕವಾಗಿ ಬೆಳೆಸಿಕೊಳ್ಳುವ ಅವಕಾಶವನ್ನೇ ಕಳೆದುಕೊಂಡು ಬಿಡುತ್ತಾಳೆ. ಆಕೆಯ ಜೀವನದೃಷ್ಟಿ, ಅದಕ್ಕೊಪ್ಪುವ ವರ್ತನೆ-ಇವು ಲೇಖಕರ ಸಿದ್ಧವಸ್ತುಗಳಾಗಿರುವದರಿಂದ, ಶಾಂತಿಯ ಪಾತ್ರ ಪೋಷಣೆ ಆರಂಭದಲ್ಲೇ ಗತಿಗೆಡುತ್ತದೆ.

ಸೌಂದರ್ಯಾರಾಧಕ ಶೇಖರ, ಭಾಸ್ಕರನ ವ್ಯಾವಹಾರಿಕ ಜೀವನದ ಗೆಳೆಯ. ಈತ ಕವಿ. ಅಂತೆಯೇ ಭಾವುಕ. ಆದರ್ಶವಾದಿ. ಶೇಖರನ ಕಾವ್ಯಕರ್ಮವು ಶಾಂತಿಯನ್ನು ಸಹಜವಾಗಿ ಆಕರ್ಷಿಸುತ್ತದೆ. ಆದರೆ ಪಾರ್ಶ್ವ ಮನಃಸ್ಥಿತಿಯ ಕವಿಯ ಜೀವನ ಧೋರಣೆಯಿಂದಾಗಿ, ಶಾಂತಿಗೆ ಅವನಲ್ಲಿಯೂ ನೆಲೆಗಾಣದಂತಾಗುತ್ತದೆ.

ಶೇಖರನ ಮತ್ತೊಬ್ಬ ಗೆಳೆಯ ದುರಂಧರ. ಈತ ಕುಟಿಲ ಕಾರಸ್ಥಾನಿ. ಶಾಂತಿಯ ರಕ್ಷಣೆಯ ಹೊಣೆಗಾರಿಕೆ ತನ್ನದೇ ಎಂಬಂತೆ ಅಹಂಕರಿಸುವ ಸ್ವಾರ್ಥ ರಾಜಕಾರಣಿ. ಈತನಲ್ಲಿಯೂ ಶಾಂತಿ ವಿಶ್ವಾಸವಿಡದಂತಾಗಿ, ಹತಾಶಳಾಗುತ್ತಾಳೆ.

ನಾಟಕಕಾರರು ಜಗತ್ತಿನಲ್ಲಿ ಶಾಂತಿಸ್ಥಾಪನೆಯ ಶಕ್ಯತೆ ಕಂಡದ್ದು: ತತ್ತ್ವಜ್ಞಾನಿ (ಬ್ರಹ್ಮಾನಂದ)ಯಲ್ಲಿ. "ಬ್ರಹ್ಮಾತ್ಮೈಕ ಜ್ಞಾನವನ್ನು ಪಡೆದ, ಜೀವನ್ಮುಕ್ತರಿರುವ ಭಾರತದೇಶ ಮಾತ್ರ, ವಿಜ್ಞಾನದ ಅನಾಹುತಗಳಿಂದ ತನ್ನನ್ನು ರಕ್ಷಿಸಿಕೊಂಡು ಇರಬಲ್ಲುದೆ"ಂದು ಈ ತತ್ವಜ್ಞಾನಿಯ ಧೃಡ ನಂಬಿಕೆ. ನಾಟಕಕಾರರ ಒಟ್ಟು ಆಶಯ ಬ್ರಹ್ಮಾನಂದನ ಈ ಭರತವಾಕ್ಯದಲ್ಲಿ ಅಡಕ ವಾಗಿದೆ. ಆಶಾವಾದದ ಜೀವನ ದರ್ಶನವೇ 'ಶಾಂತಿ' ನಾಟಕದ ಉದ್ದೇಶವನ್ನು ಸಾರ್ಥಕಗೊಳಿಸಲು ಹವಣಿಸಿದೆ.

ಪಾತ್ರ ನಿರ್ಮಾಣದಲ್ಲಿಯ ನಾಟಕಕಾರರ ಕಲ್ಪನೆ ಸುವ್ಯವಸ್ಥಿತವಾಗಿದೆ. ಆದರೆ 'ನಾಟಕೀಯ' ಗುಣ ಈ ಯಾವ ಒಂದು ಪಾತ್ರಕ್ಕೂ ಸ್ವಭಾವತಃ ಇಲ್ಲವೇ ಇಲ್ಲ. ಸಿದ್ಧಾಂತವಾದಿಗಳಾದ ಈ ಪಾತ್ರಗಳು ತಮ್ಮ ತಮ್ಮ ಧೋರಣೆ ಯನ್ನು ಉದ್ದುದ್ದಕ್ಕೆ ಘೋಷಿಸಿ, ಇಲ್ಲವೆ ಆವೇಶಯುತ ಧ್ವನಿಯಲ್ಲಿ ಚರ್ಚಿಸಿ, ಕೈ ಚೆಲ್ಲಿ ಕೊಡುತ್ತವೆ. ಕೇಂದ್ರ ಪಾತ್ರದ ಸುತ್ತ, ಒಬ್ಬೊಬ್ಬರಾಗಿ ಬಂದು, ಪರಿಭ್ರಮಿಸುವ ವಿಜ್ಞಾನಿ, ಕವಿ, ರಾಜಕಾರಣಿಗಳು ಈ ನಾಟಕದ ಸಂದರ್ಭದಲ್ಲಿ ಒಟ್ಟಾಗಿ ಬಂದು, ವಿಜ್ಞಾನ ಯುಗದ ಸಂಕೀರ್ಣ ವಾತಾವರಣವನ್ನು ನಿರ್ಮಿಸು ವದೇ ಇಲ್ಲ. ಹೀಗಾಗಿ, ನಾಟಕದ ಒಟ್ಟಂದದ ಪರಿಣಾಮ ಶೂನ್ಯವಾಗುತ್ತದೆ. ಆದ್ದರಿಂದ 'ಶಾಂತಿ' ಒಂದು, ವ್ಯಾಖ್ಯಾನ ಮಾಲಿಕೆಯ ಸಾಮಾನ್ಯ 'ರೂಪಕ'ವಾಗಿ ಓದುಗನಿಗೆ ಕಂಡರೆ ತಪ್ಪೇನಿಲ್ಲ.

★ ಎಸ್. ಜಿ. ಬಿದರಕುಂದಿ.

ತಪ್ತ : (ಕಥಾ ಸಂಕಲನ). ಲೇ: ಶ್ರೀಕೃಷ್ಣ ಆಲನಹಳ್ಳಿ, ಪ್ರ: ಸಮೀಕ್ಷಕ, ಮೈಸೂರು. ಪುಟಗಳು: ೧೨೯. ಬೆಲೆ: ಸಾಮಾನ್ಯ ಪ್ರತಿ: ರೂ. ೪/- ಉತ್ತಮ ಪ್ರತಿ: ರೂ. ೧೦/-

ಶ್ರೀಕೃಷ್ಣ ಆಲನಹಳ್ಳಿಯವರು ತಮ್ಮ ಎಂಟು ಕತೆಗಳನ್ನು ನಾಲ್ಕು ಗುಂಪುಗಳಾಗಿ ನಿವೇದಿಸಿದ್ದು ಅರ್ಥಪೂರ್ಣವಾಗಿದೆ. ಕೊನೆಯ ಎರಡು ಕತೆಗಳು ಛಾಯಾವಾದಿ ಸಾಂಕೇತಿಕ ಶೈಲಿಯವು. ಉಳಿದೆಲ್ಲ ಕತೆಗಳು ನೇರ ಜೀವನ ದರ್ಶನದಿಂದ ಬಂದವುಗಳು. ಈ ಜೀವನಗತೆಗಳಲ್ಲಿ 'ಸೀಮಂತ' ವೊಂದೇ

ಕೇವಲ ತಂತ್ರದ ಮೇಲೆ ನಿಂತ ಕತೆ. ಕತೆಗಿಂತ ತಂತ್ರವೇ ತಲೆ ಭಾರವಾದ 'ಸೀಮಂತ' ವನ್ನು ಇನ್ನೆಲ್ಲೊ ಈ ಮೊದಲೇ ನಾನು ಓದಿ ತುಸು ನಿರಾಸೆ ಗೊಂಡಿದ್ದೆ. ನವ್ಯತೆಯ ಮಬ್ಬಿಗಾಗಿ (Fad) ತಮ್ಮ ಪ್ರತಿಭೆಗೆ ಕೊಡಲಿ ಹಾಕಿಕೊಂಡ ಅನೇಕರಲ್ಲಿ ಇವರೂ ಒಬ್ಬರೇನೋ ಎಂಬ ನಿರುತ್ಸಾಹದಲ್ಲಿ ಪುಸ್ತಕ ಓದದೇ ಉಳಿದು ಹೋಗಿತ್ತು. ಇದೀಗ ಇಡಿಯ ಗ್ರಂಥವನ್ನು ಕೂಲಂಕಷವಾಗಿ ಓದಿನೋಡಿ ಆಲನಹಳ್ಳಿಯವರನ್ನು ಅಭಿನಂದಿಸಲು ಸಂತೋಷಿಸುತ್ತೇನೆ. 'ತಪ್ತ' ಸಂಕಲನದ ಸರ್ವಸಾಧಾರಣ ಎಲ್ಲ ಕತೆಗಳೂ ಜೀವನ ನಿಷ್ಠೆಯಿಂದ ಉಸಿರಾಡಿಸುತ್ತವೆ. ಕೊನೆಯ ಎರಡು ('ಆಗಂತುಕ', 'ನೆಲಗುಮ್ಮ') ಕೂಡ ತುಸು ಮಹತ್ವಾಕಾಂಕ್ಷೆ ಉದ್ದೇಶ ಪೂರೈಸುವವಾದರೂ ಅವುಗಳಲ್ಲಿ ಜೀವನ ನಿಷ್ಠೆ ಕಡಿಮೆಯಿಲ್ಲ. 'ಸೀಮಂತ' ವೊಂದೇ Straining the Obvious ಎಂದು ಕಾಣುವ ಕತೆ. ಇನ್ನುಳಿದ ಎಲ್ಲ ಕತೆಗಳೂ ಸತ್ಯದರ್ಶನಕ್ಕೆಯೇ ಓದುಗನನ್ನು ಮೋಹಗೊಳಿಸುವುವು. ಸೃಜತೆ ಅನುಭವ, ಅನುಕಂಪ, ಸಾನುಭೂತಿಗಳಿಂದ ಮಿಡಿಯುವ ಈ ಕತೆಗಳು ಸಾಮಾಜಿಕ ರೂಪಾಂತರದ ಚಿತ್ರಣದಲ್ಲಿ ವಾಸ್ತಿ ಗುಣಗಳನ್ನು ಮತ್ತೆ ತಂದಂತಾದ್ದರಿಂದ ಐತಿಹಾಸಿಕ ಮಹತ್ವವನ್ನು ಪಡೆದಿವೆ. 'ತಪ್ತ'ದಲ್ಲಿ ಆಧುನಿಕತೆಯ ಆಸೆ ತೋರೆಯುದ, ಸಾಂಪ್ರದಾಯಿಕತೆಯ ಮುಗ್ಧತೆಗೂ ಮನಸೋತ ಜೀವವೊಂದರ ಧರ್ಮ ಸಂಕಟವಿದೆ. ಇದರಲ್ಲಿ 'ಪ್ರಭಾ' ಪಾತ್ರ ಅಸ್ಪಷ್ಟವೆಂದು ಡಾ. ಯು. ಆರ್. ಅನಂತಮೂರ್ತಿಗಳು ಮುನ್ನುಡಿಯಲ್ಲಿ ಹೇಳಿದ್ದಾರೆ. ಪ್ರಭಾ ಕಥಾ ನಾಯಕನಿಗೆ ಆಧುನಿಕತೆಯ ಒಂದು ಕರೆ ಮಾತ್ರ; ಅವನ ಸಂಕಟ ಹುಟ್ಟುವುದು ಹಳ್ಳಿಯ ಗೌರಿಯ ಮಾಧುರ್ಯ–ಸಂಸ್ಕೃತಿಗಳನ್ನು ಎದುರಿಸುವದರಲ್ಲಿಯೇ. ಹೀಗೆ ಸಂಸ್ಕೃತಿಯ ಬಂಧ ನಗಳನ್ನು ಮೀರುವ ಸಂಕಟದ ಉಲ್ಬಣತೆಯನ್ನು ತೋರುವಲ್ಲಿ ಶ್ರೀ ಕೃಷ್ಣರು ಬಣ್ಣಿಸಿದ Clastrophobiaದ ವರ್ಣನೆಗಳನ್ನು ಓದಿ Localisationದ ಮಹತ್ವವನ್ನು ಅರಿಯಬಹುದು. ['ಕೆಳಗೆ ಜಿಡ್ಡು ಜಿಡ್ಡಾದ ಸ್ಟ್ಯಾಂಡಿನ ಮೇಲೆ ಗೌರಿ ಹಚ್ಚಿಟ್ಟ ಮಂಕಾಗಿ ಉರಿಯುತ್ತಿರುವ ತುಪ್ಪದ ದೀಪ ಶಾಪ–ಗ್ರಸ್ತವಾದ ಈ ಮನೆಯ ಒಂದೊಂದು ವಸ್ತುವೂ ಯಾಕೋ ಭಯವನ್ನುಂಟು ಮಾಡುತ್ತಿವೆ........' ಪ್ರಾಚ್ಯ ವಸ್ತು ಸಂಶೋಧನಾ ಸಂಸ್ಥೆಯವರಿಟ್ಟಿದ್ದ ಪ್ರದರ್ಶನದಲ್ಲಿ ಇಂತಹ ಗುಣಗಳನ್ನು ಮೊನ್ನೆ ಮೊನ್ನೆ ನೋಡಿ ಬಂದಿದ್ದೆ...' (ಪುಟ : ೯ . ಇದರಲ್ಲಿ ಕೊನೆಯ ವಾಕ್ಯವೊಂದರಲ್ಲಿ ಮಾತ್ರ ಅತಿ ವಿಷದೀಕರಣ ದೋಷವಿದೆ. ಆಲನಹಳ್ಳಿ, ಯಶವಂತ ಚಿತ್ತಾಲರಿಗಿಂತ ಕಡಿಮೆ ಐಕೆಯೆಂದು ಅನಂತಮೂರ್ತಿ ನಿರ್ಣಯಿಸಿದರೋ ತಿಳಿಯದು. ಈ ದೋಷ ಚಿತ್ತಾಲರಲ್ಲಿ ತುಸು ಹೆಚ್ಚು ಎಂದೇ ಹೇಳಬೇಕು.] ಅಲ್ಲದೆ. ಪ್ರಭಾಳ ವ್ಯಕ್ತಿತ್ವ ಸ್ಪಷ್ಟ ವಾಗದಿದ್ದರೂ ಅವಳ ಉದಾರ (Liberal) ತತ್ವಗಳ ಪರಿಣಾಮ ನಾಯಕನ

ಮೇಲೆ ಹೇಗೆ Castration Complex ದಲ್ಲಿ ಪರ್ಯವಸಾನಗೊಂಡಿದೆಯೆಂಬುದರ ಸೂಚನೆ ...... "ಅಲ್ಲೇ ಮುಲುಗುಟ್ಟುವ ನಾಸು ಅಂಗಾತವಾದ ಜಿರಲೆ" (ಪು. ೧೩)ದಲ್ಲಿ ಇದೆ.

'ತೊರೆ' ಈ ಕತೆಯಲ್ಲಿ ಶ್ರೀಕೃಷ್ಣರ ಮಾನವೀಯತೆ ಗುರುತಿಸಬಹುದು. 'ಕೆಚ್ಚಲ ತೊಟ್ಟು ಬದಲಾಯಿಸುವ ಮನೋಹರ ಜೀವಂತಿಕೆಯ ಸಂಕೇತದ ಸುತ್ತು. ವಿಧವೆ ಲಕ್ಷ್ಮಿಗೆ ಪ್ರಭು ಲೈಂಗಿಕ ಜೀವದಾನ ಓದುಗರಿಗೂ ಜೀವದಾನ ಮಾಡುತ್ತದೆ. ಕತೆ ಇದರ ವಿರುದ್ಧವಾಗಿದ್ದರೆ ಆ ಹಿಂಸೆಯನ್ನು ಓದುಗರು ಸಹಿಸುವಂತಿರಲಿಲ್ಲ. ಆಲನಹಳ್ಳಿಗೆ ಇದ್ದ ಗ್ರಾಮೀಣ ಜೀವನದ ಪರಿಚಯ, ಪ್ರೇಮಗಳು, ಅವರ ಜೀವಂತಿಕೆಯ ಕೇಂದ್ರವೆಂದು ಹೇಳಬೇಕು. 'ಸೀಮಂತ'ವೊಂದೇ ಕೇವಲ ಪಟ್ಟಣದ ಬಾಳಿನ ನಿರರ್ಥಕ ನಿರುತ್ತರ ಕೇಂದ್ರಹೀನ ಚಿತ್ರಣವೆನ್ನಬಹುದು. 'ಶ್ರಾವಣ' ಕೂಡ ಕಾಲೇಜ ಸಂಬಂಧಿಯಾಗಿದ್ದರೂ ಆದರ ಸುಕುಮಾರತೆಗೆಯೇ ಮನ ಸೋಲುತ್ತದೆ. ಸುಶಿಕ್ಷಿತರೂ ಜೀವನದ ಸೋಂಕನ್ನು ಬಯಸುತ್ತಾರೆ. ಸಾಹಿತ್ಯದ ಅಮೂರ್ತತೆಗೆ ಬೇಸತ್ತು ಮದುವೆಯ ಮೂರ್ತತೆ ಸ್ವೀಕರಿಸುತ್ತಾರೆಂದು ಸೂಚಿಸಿದುದು, ಅದಕ್ಕೆ ಬೇಕಾದ ವಾತಾವರಣ ಕಲ್ಪಿಸಿದುದು, ಒಂದು ಆರೋಗ್ಯ ಸಾಧನೆಯೇ. 'ಸಂಬಂಧ'ದ ಹೃದಯ ವಿದಾರಕ ವಾಸ್ತವತೆ. ತನ್ನ ನಿರ್ದುಷ್ಟತೆಯ ಮೂಲಕವೇ ಭಯಾನಕವಾಗಿದೆ. ಕೆಲವು ಸಂದರ್ಭಗಳಲ್ಲಿ ಕರುಣೆಯೂ ವಿಷವಾಗುವ ಉದಾಹರಣೆ ಇದು. ನಂತರ ಬಂದ 'ಹುತ್ತ' ಕತೆಯ ಬಗ್ಗೆ ಅನಂತಮೂರ್ತಿ ಒಂದು ಸೂಕ್ತ ಪ್ರಶ್ನೆ ಕೇಳಿದ್ದಾರೆ. 'ಇದರ ಅರ್ಥವೇನು' ಎಂಬ ಮೌಲಿಕ ಪ್ರಶ್ನೆಯಿಲ್ಲದೆ ಇಂಥ ಕತೆಗಳು ಪೂರ್ಣವಾಗವು, ನಿಜ. ಆದರೆ ಆಲನಹಳ್ಳಿ ಈ ಪ್ರಶ್ನೆ ಎತ್ತಿದ್ದಾರೆ. ಲಂಕೇಶರಂತೆ "ತಿಮಿಂಗಿಲ" ಎಂದು ನಗೆಯಾಡಿ, Virago ತಾಯಿಯನ್ನು ನಗೆಯಲ್ಲಿ ತೇಲಿಸಿಕೊಂಡು ಹೋಗಿಲ್ಲ. ಸಂದರ್ಭದ ಭಯಾನಕತೆಯನ್ನು ಯಶಸ್ವಿಯಾಗಿ ನಿರ್ವಹಿಸಿದುದರ ಬಗ್ಗೆ ಇದಕ್ಕೆ ಕನಿಷ್ಟ tour de force ದ ಬೆಲೆ ಉಂಟು: ಇಷ್ಟೇ ಅಲ್ಲ, ಯಾವ ಸಾಂಸ್ಕೃತಿಕ ಸಂದರ್ಭದಲ್ಲಿ ತಾಯಿ ತಿಮಿಂಗಿಲವಾಗುತ್ತಾಳೋ ಅದನ್ನೆ ಸ್ಫುಟಗೊಳಿಸುವ ಅರ್ಥವೊಂದು ಇಲ್ಲಿ ಧ್ವನಿತವಾಗುವದೆಂದು ಅನಂತ ಮೂರ್ತಿಗಳೂ ಒಪ್ಪಿಯಾರು. ಇನ್ನೊಂದು ಮಾತು. ಶಿಷ್ಟತೆ. (Sophistication) 'ಹುತ್ತದಲ್ಲಿ' ಬಂದ ಭಯಾನಕ. ಅನುಭವದ ಸಾಂಕೇತಿಕತೆ: 'ನೆಲಗುಮ್ಮ'ದಲ್ಲಿ ಭಯವೇ ಕಲ್ಪನೆಯಲ್ಲಿ ಬೇರೂರಿ ಭೂತವಾಗುವ, ಅಶರೀರತೆಯೇ ಮೈವೆತ್ತು ನಿಲ್ಲುವ ಪ್ರಸಂಗ; 'ತಪ್ತ'ದಲ್ಲಿ ಹಾಗೂ ಇತರ ಕಡೆಗೆ ಬಂದ ಕನಸುಗಳ ವರ್ಣನೆಗಳು; ಇಂಥಲ್ಲಿ ಶಿಷ್ಟತನದ ಅಭಾವ ಆಲನಹಳ್ಳಿಯವರ ಗುಣವೇ ಹೊರತು ದೋಷವಲ್ಲ; ಅವರ ಶಕ್ತಿಯನ್ನು ಈ ಗುಣ ವೃದ್ಧಿಗೊಳಿಸಿದೆಯೆಂದೇ ನನ್ನ ಕಲ್ಪನೆ.

ಕದಾಚಿತ್ 'ತಪ್ಪಿದ ಪಟ್ಟಿಗೆ ಇದು ದೋಷವೆನಿಸಬಹುದು. ಇದಕ್ಕೆ ಪು. ೮೧, ೧೦೫, ೧೦೬, ೧೨೮, ಇಂಥಲ್ಲಿ ಬಂದ ನೇರ ವರ್ಣನೆ, ೯೭ ರ ಮೇಲೆ ಬಂದ ನೇರ ವಿಶ್ಲೇಷಣೆ, ಇವುಗಳನ್ನು ಉದಾಹರಿಸಬಹುದು. ಆಲನಹಳ್ಳಿಯಲ್ಲಿ ಯೌವನ ಮತ್ತು ವಿವೇಕಗಳ ಸಮತೂಕವಿದೆಯೆಂಬ ಅನಂತಮೂರ್ತಿಗಳ ಅಭಿಪ್ರಾಯವನ್ನು ಸಂತಸದಿಂದ ಒಪ್ಪುತ್ತೇನೆ.

★ **ಶಂಕರ ಮೊಕಾಶಿ ಪುಣೇಕರ.**

ಸಾದರ ಸ್ವೀಕಾರ

೧. **ಶಬ್ದಮಣಿದರ್ಪಣ ವಿಳಾಸ :**

ಲೇಖಕರು : ವಿ. ಶಿವಾನಂದ. ಪ್ರಕಾಶಕರು : ವಿಜಯಾ ಬುಕ್ ಡಿಪೋ, ಗದಗ. ಪುಟ : ೩೬೮. ಬೆಲೆ: ೮-೦೦. ೧೯೭೨.

೨. **ಹಾಲು ತೊರೆಯಿಂದ ಉಪ್ಪು ನೀರಿಗೆ** (ಕವನ ಸಂಕಲನ) :

ಲೇಖಕರು: ಪಾಟೀಲ ಶಿವಶರಣ ಜಾವಳಿ, ಪ್ರಕಾಶಕರು: ಶಿವಪ್ರಕಾಶನ, ಶರಣನಗರ, ಕಲಬುರ್ಗಿ. ಪುಟ: ೪೬+೮ ಬೆಲೆ: ರೂ. ೧-೨೫. ೧೯೭೧.

೩. **ಕಾವ್ಯ ಕುಸುಮ** (ಕವನ ಸಂಕಲನ) :

ಲೇಖಕರು : " ತ್ರೈಮೂರ್ತಿ " ಪ್ರಕಾಶಕರು: ಡಿ. ಎಸ್. ಫಿಡೆ, ಖಡೇ ಬಜಾರ, ಬೆಳಗಾಂವಿ ಪುಟ: ೨೮+೪ ಬೆಲೆ: ೭೫ ಪೈಸೆ. ೧೯೭೧.

೪. **ಸಮಾಜಶಾಸ್ತ್ರ :**

ಮೂಲ ಲೇಖಕರು : ಡಾ. ವಿಲಾಸ ಸಂಗವೆ. ಅನುವಾದಕರು: ಡಾ. ಮಾಧವ ಕುಲಕರ್ಣಿ. ಪ್ರ: ಪಾಪ್ಯುಲರ್ ಪ್ರಕಾಶನ, ಮುಂಬಯಿ. ಬೆಲೆ: ೧೨/— ಪುಟ : ೩೦೯. ೧೯೭೧

೫. **ದೇವಬಿನ್ನಪ :** (ವಚನಗಳು)

ಲೇ : ಕೆ. ಅನಂತರಾಮು. ಪ್ರ: ಅನಂತ ಪ್ರಕಾಶನ, ೩೩೬, ರಾಮಾನುಜ ರಸ್ತೆ. ಮೈಸೂರು ೪. ಪುಟ : ೮೩+xiii, ಬೆಲೆ: ಸಾದಾ. ರೂ. ೩-೦೦ ಉತ್ತಮ ರೂ. ೬-೦೦. ೧೯೭೨

೬. **ಶ್ರೀಕೃಷ್ಣನೂ ಕನಕದಾಸನೂ** (ಸಂಶೋಧನಾತ್ಮಕ ಪ್ರಬಂಧ) :

ಲೇ : ಕೆ. ವೆಂಕಟರಾಯಾಚಾರ್ಯ, ಪ್ರ: ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು, ಪುಟ: ೧೪, ಬೆಲೆ: ೫೦ ಪೈಸೆ. ೧೯೭೨

೭. **ಎರಡು ದುರಂತ ನಾಟಕಗಳು** (ನಾಟಕ) :

ಲೇ : ಪ್ರೊ. ಆರ್. ಎಸ್. ಜುಳಕಿ, ಪ್ರ : ಮಿತ್ರ ಭಾರತಿ ಪ್ರಕಾಶನ, ಬಿಜಾಪುರ ಪುಟ: ೭೮+viii, ಬೆಲೆ: ನಾಲ್ಕು ರೂಪಾಯಿ. ೧೯೭೨.

೮. **ನಾತೆಲ್ಲ ಜ್ಯೋತಿ** (ದ. ರಾ. ಬೇಂದ್ರೆ ಅವರ ಹತ್ತು ಉಪನ್ಯಾಸಗಳು) :

ಪ್ರಕಾಶಕರು : ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್. ಮಣಿಪಾಲ, ಪುಟ: ೧೩೪+viii ಬೆಲೆ: ರೂ: ೩/-೧೯೭೨

೯. **ಹಂಸಪಥ (ಕವನ ಸಂಕಲನ):**
ಲೇ: ರಾಘವ. ಪ್ರ: ರಾಘವ ಪ್ರಕಾಶನ, ಬೆಂಗಳೂರು. ೧೯ ಪುಟ: ೧೬೪+xi, ಬೆಲೆ: ಎಂಟು ರೂಪಾಯಿ. ೧೯೭೧.

೧೦. **ಶುಕಸಪ್ತತಿ (ಪದ್ಯಕಾವ್ಯ):**
ಸಂಪಾದನ: ಕೆ. ವೆಂಕಟರಾಯಾಚಾರ್ಯ, ಪ್ರಕಾಶನ: ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು. ಪುಟ: ೭೨+೪, ಬೆಲೆ: ೪ ರೂ. ೧೯೭೧

೧೧. **ಸೂಕ್ತಿಮಂಜರಿ (ಪದ್ಯಸಂಗ್ರಹ):**
ಲೇಖಕರು: ಕ. ಪು. ಸೀತಾರಾಮ. ಕೆದಿಲಾಯ ಪ್ರಕಾಶಕ: ಕ. ಪು ಸೀತಾರಾಮ ಕೆದಿಲಾಯ, ಶಿಶಿಲ. ಬೆಳ್ತಂಗಡಿ ತಾಲೂಕು, (ದ. ಕ.) ಪುಟ ೨೨. ಬೆಲೆ: ೫೦ ಪೈಸೆ ೧೯೭೦.

೧೨. **ದುರ್ಯೋಧನ ವಧೆ (ಯಕ್ಷಗಾನ):**
ಲೇಖಕರು: ಕ. ಪು. ಸೀತಾರಾಮ ಕೆದಿಲಾಯ. ಪ್ರಕಾಶಕರು: ಕ. ಪು. ಸೀತಾರಾಮ ಕೆದಿಲಾಯ, ಶಿಶಿಲ. ಪುಟ: ೪೫; ಬೆಲೆ: ೮೦ ಪೈಸೆ. ೧೯೬೯.

೧೩. **ಒಂದು ಗಳಿಗೆ (ಕವನ ಸಂಕಲನ):**
ಲೇಖಕರು: ಶೈಲಜಾ, ಪ್ರಕಾಶನ: ಶ್ರೀ ಬಿ. ವಿ. ಉಡುಪ. ‘ಚೇತನ’ ೧-೪೭೦ ಹೊಸ ಜಾಜಿ ಬ್ಲಾಕ್, ಗುಲ್ಬರ್ಗಾ. ಪುಟ: ೪೯, ಬೆಲೆ: ರೂ. ೧-೫೦. ೧೯೭೨.

೧೪. **ಪ್ರಸಾದ ಪರಿಣಾಮ:**
ಲೇಖಕರು: ಲಿಂಗಣ್ಣ ಸತ್ಯಂಪೇಟೆ: ಪ್ರಕಾಶಕರು: ಶಾಂತರಸ ಪ್ರಕಾಶನ, ಅಮ್ಮಾಪುರ. ಪುಟ: ೭೬; ಬೆಲೆ: ೧-೫೦. ೧೯೭೨.

೧೫. **ಹಾಂಡುಟೀ ನನ್ನ ಮುಡಿಲಲ್ಲಿ (ತ್ರಿಪದಿಗಳ ಸಂಕಲನ):**
ಸಂಗ್ರಹಕಾರರು: ಎಲ್. ಆರ್. ಹೆಗಡೆ, ಪ್ರಕಾಶಕರು: ಬೆಂಗಳೂರು ವಿಶ್ವ-ವಿದ್ಯಾಲಯ, ಬೆಂಗಳೂರು. ಪುಟ: xxii+೮೦; ಬೆಲೆ: ರೂ. ೨ ೦೦. ೧೯೭೧.

೧೬. **ಅಜ್ಜಗಾವಲು (ಕವನ ಸಂಕಲನ):**
ಲೇಖಕರು: ಶಾಮಸುಂದರ ಬಿದರಕುಂದಿ, ಪ್ರಕಾಶಕರು: ಕಾವ್ಯಧಾರಾ ಪ್ರಕಾಶನ, ಧಾರವಾಡ. ಪುಟ: ೬೦+xvi; ಬೆಲೆ: ರೂ. ೨-೦೦. ೧೯೭೧.

೧೭. **ಬಸವ ಪೂರ್ವಯುಗದ ಶರಣರು:**
ಲೇಖಕರು: ಶಾಂತರಸ, ಪ್ರಕಾಶಕರು: ಸತ್ಯಸ್ನೇಹ ಪ್ರಕಾಶನ, ರಾಯಚೂರು. ಪುಟ: ೧೧೫+೨೫+viii; ಬೆಲೆ: ರೂ. ೭-೫೦. ೧೯೭೨.

೧೮. ಪತ್ರಪುಷ್ಪ (ಸಂಭಾವನಾ ಗ್ರಂಥ):

ಸಂಪಾದಕರು: ಗುರುಬಸವಯ್ಯ ಹಿರೇಮಠ, ಪರ್ವತಯ್ಯ ಶಿವಪುರ ಪ್ರಕಾಶಕರು: ಶ್ರೀ ಎಂ. ಪಿ. ಜಾಲಿ ಅವರ ಷಷ್ಟ್ಯಬ್ದಿ ಸಮಾರಂಭ ಸಂಭಾವನಾ ಗ್ರಂಥಸಮಿತಿ, ರಾಯಚೂರು. ಪುಟ: ೧೮೭+ii; ಬೆಲೆ: ರೂ. ೫/- ೧೯೭೧.

೧೯. ಚಿತ್ರಭೆ (ಸಂಸ್ಮರಣ ಸಂಪುಟ):

ಸಂಪಾದಕರು: ಜಿ. ಎಚ್. ಹನ್ನೆರಡುಮಠ; ಪ್ರಕಾಶನ: ಹುಬ್ಬಳ್ಳಿ ಮೂರು-ಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಪೀಠಾರೋಹಣ ದ್ವಾದಶ ವಾರ್ಷಿಕ ಮಹೋತ್ಸವ ಸಮಿತಿ, ಹುಬ್ಬಳ್ಳಿ-೨೦. ಪುಟ: ೭೪೯+vi; ಬೆಲೆ: ೩೦-೦೦. ೧೯೭೨.

೨೦. ಪರಂಜ್ಯೋತಿ (ಸಂಸ್ಮರಣ ಸಂಚಿಕೆ):

ಸಂಪಾದಕರು: ಜಿ. ಎಚ್. ಹನ್ನೆರಡುಮಠ; ಪ್ರಕಾಶಕರು: ಜಿ. ಎಚ್. ಹನ್ನೆರಡುಮಠ ಎಂ. ಎ., ಪರಂಜ್ಯೋತಿ ಕಾರ್ಯಾಲಯ, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ, ಹುಬ್ಬಳ್ಳಿ. ಪುಟ: ಬೆಲೆ: ರೂ. ೨-೫೦. ೧೯೭೨.

೨೧. ಸ್ವತಂತ್ರ ಸಿದ್ಧಲಿಂಗೇಶ್ವರನ ವಚನಗಳು:

ಸಂಪಾದಕರು: ಪಂ. ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಹೊಳಲು. ಪ್ರಕಾಶಕರು: ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಪೀಠಾರೋಹಣ ದ್ವಾದಶ ವಾರ್ಷಿಕ ಮಹೋತ್ಸವ ಸಮಿತಿ, ಹುಬ್ಬಳ್ಳಿ. ಪುಟ: ೧೧೫. ಬೆಲೆ: ೨-೦೦. ೧೯೭೨.

೨೨. ವಿಶ್ವಾತ್ಮನಿಗೆ:

ಲೇಖಕರು: ರಂ. ರಾ. ದಿವಾಕರ; ಪ್ರಕಾಶಕರು: ಶ್ರೀ ಜಗದ್ಗುರು ಮೂರುಸಾವಿರ ಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೯೨. ಬೆಲೆ: ರೂ. ೪/- ೧೯೭೨

೨೩. ಸಂಗಮನಾಥನ ವಚನಗಳು:

ಲೇಖಕರು: "ಶಿವಕವಿ" ಸಂಗಮೇಶ ಹೊಸಮನಿ, ಪ್ರಕಾಶಕರು: ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ ಪುಟ: ೧೦೧. ಬೆಲೆ: ೨-೫೦. ೧೯೭೨.

೨೪. ಶ್ರೀ ಹಾನಗಲ್ಲ ಕುಮಾರೇಶ್ವರ ಸುಪ್ರಭಾತ:

ಲೇಖಕರು: ಗಂಗಪ್ಪ ವಾಲಿ; ಪ್ರಕಾಶಕರು: ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೩೨; ಬೆಲೆ: ೬೦ ಪೈಸೆ. ೧೯೭೨.

೨೫. **ಚೈತ್ರಪಕ್ಷಿ (ಕವನ ಸಂಕಲನ):**
ಲೇಖಕರು: ಜಿ. ಎಚ್. ಹನ್ನೆರಡುಮಠ; ಸಂಪಾದಕರು: ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೯೭+v; ಬೆಲೆ: ೨-೦೦. ೧೯೭೨.

೨೬. **Shri Kumarashivayogi of Hanagal** (A life-sketch) :
L. G. Hiremath. Publishers: Committee-for Celebration of the Twelth Anniversary of the installation of his Holiness Shree Jagadguru Gangadhar Rajayogeendra Mahaswamiji on the Peetha of Moorusaviramath, Hubli. Pages: 56+x; Price: Rs. 2/- 1972.

೨೭. **ಶ್ರೀಗುರು ಕುಮಾರೇಶ್ವರ ಸುಪ್ರಭಾತಂ :**
ರಚನಕಾರರು: ಪಂ. ಪುಟ್ಟರಾಜ ಕವಿ ಗವಾಯಿಗಳು, ವೀರೇಶ್ವರ ಪುಣ್ಯಾಶ್ರಮ, ಗದಗ. ಪ್ರಕಾಶಕರು: ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೨೬; ಬೆಲೆ: ೫೦ ಪೈಸೆ. ೧೯೭೨.

೨೮. **ಶ್ರೀ ನಿಜಗುಣ ಶಿವಯೋಗಿ ವಿರಚಿತ 'ನೀತಿಸಂಗ್ರಹ':**
ಗ್ರಂಥಶೋಧಕ: ಲಿಂ. ಪೇ. ಮಹಾಲಿಂಗಯ್ಯ ಶಿರಯ್ಯ ಹಿರೇಮಠ; ಪ್ರ. ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೧೩೦+xii; ಬೆಲೆ: ೧-೫೦. ೧೯೭೨.

೨೯. **ಹೊಂಗಿರಣ :**
ಲೇಖಕರು: ಶ್ರೀ ಸುಜನ: ಪ್ರಕಾಶಕರು: ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲಾ, ಹುಬ್ಬಳ್ಳಿ. ಪುಟ: ೧೨೦; ಬೆಲೆ: ೧ ರೂಪಾಯಿ ೧೯೭೨.

೩೦. **ಕರುಣೆ (ಕವನ ಸಂಕಲನ):**
ಲೇಖಕರು: ಕೆ. ವಿರುಪಾಕ್ಷಗೌಡ. ಪ್ರ: ಕೊಟ್ಟೂರೇಶ ಪ್ರಕಾಶನ, ಮಾಟ-ಗೊಂಡನಹಳ್ಳಿ. ಪುಟ: ೩೩. ಬೆಲೆ ೧-೦೦. ೧೯೭೨.

೩೧. **ಅವಳೇ ಗಂಡ ನಾನೇ ಹೆಣ್ತಿ (ನಾಟಕ):**
ಲೇಖಕರು: ವೀರಣ್ಣ ರಾಜೂರ. ಪ್ರಕಾಶನ: ವಸುಂಧರಾ ಪ್ರಕಾಶನ ಧಾರವಾಡ. ಪುಟ: ೩೬. ಬೆಲೆ: ೧-೨೫, ೧೯೭೨.

೩೨. **ಕನ್ನಡ ಗ್ರಂಥ ಸಂಪಾದನಶಾಸ್ತ್ರ:**
ಲೇಖಕರು: ಎಂ. ಎಂ. ಕಲಬುರ್ಗಿ. ಪ್ರಕಾಶನ: ಸಿರಿಗನ್ನಡ ಪ್ರಕಾಶನ, ಧಾರವಾಡ. ಪುಟ: ೨೦೩. ಬೆಲೆ: ೧೦-೦೦, ೧೨-೦೦.

ಸಂಪಾದಕೀಯ

ಈ ಸಂಚಿಕೆಯೊಂದಿಗೆ "ಕರ್ನಾಟಕ ಭಾರತಿ" ತನ್ನ ನಾಲ್ಕನೆಯ ವರ್ಷವನ್ನು ಪೂರ್ಣಗೊಳಿಸಿ, ಐದನೆಯ ವರ್ಷದಲ್ಲಿ ಕಾಲಿಡುತ್ತಲಿದೆ. ಈ ಅವಧಿಯಲ್ಲಿ ಅದು ಸಾಧಿಸಿದ ಕಾರ್ಯ, ಗಳಿಸಿದ ಕೀರ್ತಿ ಪ್ರತಿಯೊಬ್ಬ ಕನ್ನಡಿಗನಿಗೆ ಹೆಮ್ಮೆ ತರುವಂತಹದು. ಜ್ಞಾನದ ವಿವಿಧ ಮುಖಗಳನ್ನು ಕುರಿತು ಲೇಖನ ಪೂರೈಸಿದ ಲೇಖಕ ವರ್ಗಕ್ಕೂ, ದಿನದಿನವೂ ಸ್ವಾಗತ ಬಯಸುವ ವಾಚಕ ವರ್ಗಕ್ಕೂ 'ಭಾರತಿ' ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ತೋಂಟದ ಸಿದ್ಧಲಿಂಗ ಪಂಚ ಶತಮಾನೋತ್ಸವ

ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಷಟ್‌ಸ್ಥಲ ಜ್ಞಾನ, ಪ್ರಭುದೇವರ ಜಂಗಮತ್ವ – ಈ ತ್ರಿದಲ ವ್ಯಕ್ತಿತ್ವವನ್ನು ಸಾಧಿಸಿದ ತೋಂಟದ ಸಿದ್ಧಲಿಂಗನ ಹೆಸರು ವೀರಶೈವ ಇತಿಹಾಸದಲ್ಲಿ ಚಿರಸ್ಮರಣೀಯವೆನಿಸಿದೆ. ಈ ಯತಿವರನು ಲಿಂಗೈಕ್ಯನಾಗಿ ಇಂದಿಗೆ ಐದುನೂರು ವರುಷಗಳು ಸಂದವು. ಇದರ ನೆನಪಿಗಾಗಿ ನಾಡಿನ ತುಂಬ ಮಹೋತ್ಸವಗಳು ಜರುಗುತ್ತಲಿವೆ. ಈ ಪ್ರಸಂಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಫೆಬ್ರುವರಿ ೨೫, ೨೬ ರಂದು ಉತ್ಸವವನ್ನು ಆಚರಿಸಿತು. ಇದರ ಅಂಗವಾಗಿ ಜರುಗಿದ ಮೂರು ಗೋಷ್ಠಿಗಳಲ್ಲಿ ಡಾ. ಟಿ. ಜಿ ಸಿದ್ಧಪ್ಪಾರಾಧ್ಯ, ಎಂ. ನಂಜುಂಡಾರಾಧ್ಯ, ಡಾ. ಎಚ್. ಪಿ ಮಲ್ಲೇದೇವರು, ಡಾ. ಎಂ. ಚಿದಾನಂದಮೂರ್ತಿ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ. ಎಲ್. ಬಸವರಾಜು – ಈ ವಿದ್ವಾಂಸರು ಉಪನ್ಯಾಸವಿತ್ತರು. ಶೈವ, ವೀರಶೈವ ಮತ್ತು ತೋಂಟದಾರ್ಯರ ವಿಷಯವಾಗಿ ಈ ವಿದ್ವಾಂಸರು ನೀಡಿದ ಭಾಷಣ ಅನೇಕ ನಾಗರಿಕರನ್ನು ಆಕರ್ಷಿಸಿದವು. ಈ ಗೋಷ್ಠಿಗಳಿಗೆ ಕ್ರಮವಾಗಿ ಶ್ರೀ ನಿಡಸೋಸಿ ಜಗದ್ಗುರುಗಳು, ಧಾರವಾಡದ ಶ್ರೀ ಕುಮಾರ ಸ್ವಾಮಿಗಳು ಅಧ್ಯಕ್ಷತೆಯನ್ನು ವಹಿಸಿ, ಸಮಾರಂಭವನ್ನು ಸಾಂಗಗೊಳಿಸಿದರು.

ವಿಶ್ವಕೋಶ ಪ್ರಕಾಶನ

ಮೈಸೂರು ವಿಶ್ವವಿದ್ಯಾಲಯವು ವಿಶ್ವಕೋಶ ಕಾರ್ಯವನ್ನು ಕೈಗೆತ್ತಿಕೊಂಡು ಕನ್ನಡಿಗರ ಬಹುದಿನದ ಬಯಕೆಯನ್ನು ಈಡೇರಿಸಲು ಮುಂದಾದುದು ಸಂತೋಷದ ಸಂಗತಿ. ಈ ಯೋಜನೆಯ ಮೂಲಕ ಹೊರಬಂದ ಒಂದೊಂದು ಸಂಪುಟವನ್ನು ರಾಜ್ಯದ ಒಂದೊಂದು ಪ್ರಮುಖ ಸ್ಥಳಗಳಲ್ಲಿ ಪ್ರಕಾಶನಗೊಳಿಸಲು ಮೈಸೂರು ವಿಶ್ವವಿದ್ಯಾಲಯವು ಯೋಚಿಸಿದಾಗ ಕರ್ನಾಟಕ ವಿಶ್ವ-

ವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಮುಂದೆ ಬಂದು ಈ ವಿಳ್ಯವನ್ನು ಸ್ವೀಕರಿಸಿತು. ವಿಶ್ವವಿದ್ಯಾಲಯದ ಘನತೆಗೆ ತಕ್ಕಂತೆ ಜರುಗಿದ ಈ ಮಹಾ ಸಮಾರಂಭದ ಅಧ್ಯಕ್ಷತೆಯನ್ನು ಕುಲಪತಿ ಡಾ. ಎ. ಎಸ್. ಅಡಕೆ ಅವರು ವಹಿಸಿದ್ದರು. ಸರ್ವಶ್ರೀ ಪಾಟೀಲ ಪುಟ್ಟಪ್ಪ, ಆರ್. ವಾಯ್. ಧಾರವಾಡಕರ, ಬಸವರಾಜ ಕಟ್ಟೀಮನಿ– ಇವರು ವಿಶ್ವಕೋಶದ ಮಹತಿ ಮತ್ತು ಸಾಧನೆಗಳನ್ನು ಕುರಿತು ಉಪನ್ಯಾಸವಿತ್ತರು. ಡಾ. ಆರ್. ಸಿ. ಹಿರೇಮಠ ಅವರು ಸ್ವಾಗತಿಸಿದ ಈ ಸಭೆಗೆ ಡಾ. ಹಾ. ಮಾ. ನಾಯಕ ಅವರು ಕೃತಜ್ಞತೆಗಳನ್ನರ್ಪಿಸಿದರು. ಉಭಯ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳ ಈ ಅನ್ಯೋನ್ಯ ಪ್ರೇಮ ಎಲ್ಲರ ಮೆಚ್ಚುಗೆ ಗಳಿಸಿತು.

ಕುಲಪತಿಗಳ ವಿದೇಶ ಪ್ರಯಾಣ

ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಎ. ಎಸ್. ಅಡಕೆ ಅವರು ಆಫ್ರಿಕೆಯ ಪ್ರವಾಸವನ್ನು ಮುಗಿಸಿ ಬಂದ ಕೆಲವೇ ದಿನಗಳಲ್ಲಿ ಕೆನಡಾ ದೇಶಕ್ಕೆ ಪ್ರಯಾಣ ಕೈಕೊಂಡುದು ನಮ್ಮೆಲ್ಲರಿಗೆ ಅಭಿಮಾನದ ಸಂಗತಿ. ಭಾರತದ ಸುವಿಖ್ಯಾತ ವಿಶ್ವವಿದ್ಯಾಲಯಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಹೆಸರು ಎದ್ದು ಕಾಣುತ್ತದೆ. ಇದರ ಕೀರ್ತಿಯನ್ನು ದಿಗಂತಕ್ಕೆ ಮುಟ್ಟಿಸಲು ದೇಶವಿದೇಶಗಳ ಉತ್ತಮಿಕೆಯನ್ನು ಇಲ್ಲಿ ಬಿತ್ತಿ ಬೆಳೆಯಲು ಕೈಕೊಂಡಿರುವ ನಮ್ಮ ಕುಲಪತಿಗಳ ಪ್ರಯಾಣವು ಸುಖಕರವಾಗಲಿ ಎಂದು 'ಭಾರತಿ' ಹಾರೈಸುತ್ತದೆ.

ಪತ್ರಿಕೆಗಳಿಗೆ ಸ್ವಾಗತ

ಈ ಯುಗದಲ್ಲಿ ತ್ವರಿತ ಸಾಹಿತ್ಯವಾದ ಪತ್ರಿಕೆಗಳ ಸ್ಥಾನ ಗುರುತರವಾದುದು. ಅದರಲ್ಲಿಯೂ ಜ್ಞಾನದ ಕ್ಷಿತಿಜವನ್ನು ವಿಸ್ತಾರಗೊಳಿಸುವ ಉನ್ನತ ಮಟ್ಟದ ಪತ್ರಿಕೆಗಳು ಅತ್ಯವಶ್ಯವೆನಿಸಿವೆ. ಇದನ್ನು ಮನದಂದು ನಾಲ್ಕು ವರ್ಷಗಳ ಹಿಂದೆ 'ಕರ್ನಾಟಕ ಭಾರತಿ' ಕಣ್ಣು ತೆರೆಯಿತು. ಕೆಲವೇ ದಿನಗಳಲ್ಲಿ ವಿವಿಧ ಜ್ಞಾನ ವಲಯಗಳಿಂದ ಲೇಖನಗಳ ಮಹಾಪೂರವೇ ಬರಲು ವೈಜ್ಞಾನಿಕ ವಿಷಯಗಳಿಗೆ ಸಂಬಂಧಪಟ್ಟ ಬೇರೊಂದು ಪತ್ರಿಕೆಯನ್ನು ಹೊರಡಿಸಲು 'ಭಾರತಿ' ಬಯಸಿತು. ಇದರ ಫಲವಾಗಿ 'ವಿಜ್ಞಾನ ಭಾರತಿ' ಯೆಂಬ ಹೆಸರನ್ನು ಹೊತ್ತು ನವೀನ ಪತ್ರಿಕೆಯೊಂದು ನಮ್ಮ ವಿಶ್ವವಿದ್ಯಾಲಯದ ಮೂಲಕ ಪ್ರಕಾಶನಗೊಂಡುದು ಸಂತಸದ ಸಂಗತಿ. ಸೋದರಿ 'ವಿಜ್ಞಾನ ಭಾರತಿ' ಇನ್ನೂ ಪ್ರವರ್ಧಮಾನವಾಗಲಿ ಎಂದು ಕರ್ನಾಟಕ ಭಾರತಿ ಹಾರೈಸುತ್ತದೆ.

ಬೆಂಗಳೂರಿನಲ್ಲಿ ತಲೆಯೆತ್ತಿದ ಸೋದರ ವಿಶ್ವವಿದ್ಯಾಲಯ ಕೆಲವೇ ದಿನಗಳಲ್ಲಿ ಗಣ್ಯವಾದ ಪ್ರಗತಿಯನ್ನು ಸಾಧಿಸಿದೆ. ಅದು ಹೊರಡಿಸಿದ 'ಸಾಧನೆ'ಯೆಂಬ ಪತ್ರಿಕೆ ಈ ಪ್ರಗತಿಗೆ ಇನ್ನೊಂದು ಸಾಕ್ಷಿ. ಶ್ರೇಷ್ಠ ಕವಿಗಳೂ, ವಿಮರ್ಶಕರೂ ಆದ ಡಾ. ಜಿ. ಎಸ್. ಶಿವರುದ್ರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ ಈ ತ್ರೈಮಾಸಿಕ ಪ್ರಥಮ ಸಂಚಿಕೆಯಲ್ಲಿಯೇ ಹಲವು ಸಾಧನೆಗಳನ್ನು ಗಳಿಸಿದೆ. 'ಸಾಧನೆ' ಉತ್ತರೋತ್ತರಗೊಳ್ಳಲಿ ಎಂದು ಹಾರೈಸಿ 'ಭಾರತಿ' ಅದಕ್ಕೆ ಸ್ವಾಗತವನ್ನು ಕೋರುತ್ತದೆ.

ಸಾಹಿತಿಗಳಿಗೆ ಸರಕಾರದ ಪುರಸ್ಕಾರ :

ಮೈಸೂರು ರಾಜ್ಯದ ಸಾಹಿತ್ಯ ಅಕ್ಯಾಡೆಮಿ ಪ್ರತಿ ವರುಷ ಉನ್ನತ ಮಟ್ಟದ ಗ್ರಂಥಗಳಿಗೆ ಬಹುಮಾನ ನೀಡುವದರ ಮೂಲಕ ವಿವಿಧ ಕ್ಷೇತ್ರಗಳ ಸಾಹಿತಿಗಳನ್ನು ಗೌರವಿಸುತ್ತಲಿದೆ. ಈ ವರುಷ ಇಂಥ ಗೌರವ ಗಳಿಸಿದವರು: **ಕಾವ್ಯ**-ಡಾ. ಡಿ. ಎಸ್. ಕರ್ಕಿ : (ಗೀತ ಗೌರವ), ಶ್ರೀ ಚಂದ್ರಶೇಖರ ಕಂಬಾರ ; (ತಕರಾರಿನವರು). **ಕಾದಂಬರಿ**– ಶ್ರೀ ಪದ್ಮನಾಭ ಸೋಮಯಾಜಿ ಸುರತ್ಕಲ್ : (ಪಂಡಿತ ರಾಜ ಜಗನ್ನಾಥ), ಶ್ರೀ ಜಯತೀರ್ಥ ರಾಜಪುರೋಹಿತ : (ಸುಳಿಗಾಳಿ) **ಸಣ್ಣ ಕಥೆ**– ಶ್ರೀ ಸುಧಾಕರ : (ಗರಿಕೆ ಬೇರು), ಶ್ರೀ ಯು. ಮಾಧವ ಆಚಾರ್ಯ (ಬಾಗಿದ ಮರ). **ಸಾಹಿತ್ಯ ಚರಿತ್ರೆ ಮತ್ತು ವಿಮರ್ಶೆ**– ಶ್ರೀ ಎನ್. ಅನಂತರಂಗಾಚಾರ್ : (ಸಾಹಿತ್ಯ ಭಾರತಿ), ಶ್ರೀ ಸಿ. ಕೆ. ನಾಗರಾಜರಾವ್ (ಮಹಾಕವಿ ಲಕ್ಷ್ಮೀಶನ ಸ್ಥಳ ಮತ್ತು ಕಾಲ), **ಪ್ರವಾಸ ಸಾಹಿತ್ಯ**– ಶ್ರೀ ಕೃಷ್ಣಾನಂದ ಕಾಮತ್ : (ನಾನೂ ಅಮೇರಿಕೆಗೆ ಹೋಗಿದ್ದೆ), **ಸಂಪಾದನೆ ಮತ್ತು ಸಂಶೋಧನೆ**– ಡಾ. ಎಂ. ಎಂ. ಕಲಬುರ್ಗಿ : (ಶಾಸನಗಳಲ್ಲಿ ಶಿವಶರಣರು), ಶ್ರೀ ಎಸ್. ಎನ್. ಕೃಷ್ಣ ಜೋಯಿಸ : (ಸೂಪಶಾಸ್ತ್ರ), **ಶಾಸ್ತ್ರೀಯ ಗ್ರಂಥ**– ಶ್ರೀ ಟಿ. ವ್ಹಿ. ವೆಂಕಟಾಚಲಶಾಸ್ತ್ರಿ : (ಕನ್ನಡ ಛಂದಸ್ಸು), ಶ್ರೀ ಎಂ. ರಾಜಗೋಪಾಲ ಆಚಾರ್ಯ: (ಕನ್ನಡ ವಾಗ್ರೂಢಿಗಳು), **ಸಂಕಲನ ಗ್ರಂಥ**– ಶ್ರೀ ಎಚ್. ಎಸ್. ಅಜ್ಜಪ್ಪ (ಗ್ರಂಥಸ್ಥ ಗಾದೆಗಳು), ಶ್ರೀ ರಾಮೇಗೌಡ : (ನಮ್ಮ ಒಗಟುಗಳು), **ಅನುವಾದ**– ಶ್ರೀ ಬಾಲಸುಬ್ರಹ್ಮಣ್ಯಂ (ಹೊಸನ ಸಾಹಿತ್ಯ ವಿಮರ್ಶೆ), ಡಾ. ಕೆ. ಕೃಷ್ಣಮೂರ್ತಿ : (ಕನ್ನಡ ಮೀಮಾಂಸೆ), ಶ್ರೀ ಸಿ. ಪಿ. ಕೃಷ್ಣಕುಮಾರ : (ಪಾಶ್ಚಾತ್ಯ ಕಾವ್ಯ ಚಿಂತನೆ), **ಮಕ್ಕಳ ಸಾಹಿತ್ಯ**–ಶ್ರೀ ಎಸ್. ಸುಬ್ರಹ್ಮಣ್ಯಂ (ನಮ್ಮ) ಸೂರ್ಯ: ಶ್ರೀ ಶ್ರೀಧರ ಕೋಟೆಕಾರ್ : (ಕುಮಾರ ರಾಮ). **ಜೀವನ ಚರಿತ್ರೆ ಮತ್ತು ಆತ್ಮಕತೆ**– ಶ್ರೀ ವಿ. ಸೀತಾರಾಮಯ್ಯ : (ಮಹನೀಯರು , ಶ್ರೀ ಶಂ. ಬಾ. ಮುನಗೋಳಿ : (ಮಾಗಿದರೂ ಮೊಗ್ಗು), **ಜಾನಪದ ಸಾಹಿತ್ಯ**– ಶ್ರೀ ಜಿ. ಶಂ. ಪರಮಶಿವಯ್ಯ : (ಜಾನಪದ ಕಥೆಗಳು), ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ

(ಕೈಲಿಯ ಕರೆದ ನೊರೆಹಾಲು). ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ–ಶ್ರೀ ನಾಗಭೂಷಣರಾಂ : (ಜೀವ ಜೀವನ). ಡಾ. ಅನುಪಮ ನಿರಂಜನ: (ಆರೋಗ್ಯದರ್ಶನ), ಶ್ರೀ ಟಿ. ಆರ್. ರಾವ್ (ಅನ್ವಯಿತ ಮನಶಾಸ್ತ್ರ). ಈ ಪರಂಪರೆಯನ್ನು ಪ್ರಾರಂಭಿಸಿದ ಸರಕಾರಕ್ಕೆ, ಈ ಗೌರವವನ್ನು ಗಳಿಸಿದ ಮೇಲಿನ ಎಲ್ಲ ಸಾಹಿತಿಗಳಿಗೆ 'ಭಾರತಿ' ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಲೇಖಕರ ಪರಿಚಯ

೧ ಶ್ರೀ ಎಂ. ಎಲ್. ಮಂಜುನಾಥ :

C/o ಎಚ್. ಎಸ್. ಶಿವಪ್ರಕಾಶ, ೧೪೧, ರಂಗಸ್ವಾಮಿ ಗುಡಿ ಬೀದಿ ಬೆಂಗಳೂರು – ೨. ಎ.

೨. ಶ್ರೀ ಪಂಡಿತ ಪಂಢರಿನಾಥಾಚಾರ್ಯ ಗಲಗಲಿ :

ಸುಪ್ರಸಿದ್ಧ ವಿದ್ವಾಂಸರು ಗದಗ.

೩. ಶ್ರೀ ದಿನಕರ ದಿಂಡಾವರ :

C/o ತಿ. ಬಸವಯ್ಯ, ೧೧೩. ಅಣ್ಣಯ್ಯಪ್ಪ ಲೈನು ದೊಮ್ಮಲೂರು. ಅಗರಂ ಅಂಚೆ. ಬೆಂಗಳೂರು – ೭.

೪. ಪ್ರೊ. ಬಿ. ಸಿ. ಜವಳಿ :

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ.

೫. ಪ್ರೊ. ಭುಜೇಂದ್ರ ಮಹೀಶವಾಡಿ :

ಕನ್ನಡ ಅಧ್ಯಾಪಕರು. ಜೆ. ಟಿ. ಕಾಲೇಜ, ಗದಗ.

೬. ಶ್ರೀ ದೇಶಪಾಂಡೆ ಸುಬ್ಬರಾಯ :

ಅಂಚೆ ವಿಭಾಗ, ಹುಬ್ಬಳ್ಳಿ.

೭. ಪ್ರೊ. ಎನ್. ಎ. ಪಾಟೀಲ :

ರಾಜ್ಯಶಾಸ್ತ್ರದ ಅಧ್ಯಾಪಕರು ಕ. ವಿ. ಧಾರವಾಡ.

೮. ಪ್ರೊ. ಎಚ್. ಎಂ. ಮರುಳಸಿದ್ದಯ್ಯ :

ಮಾನವಶಾಸ್ತ್ರದ ಅಧ್ಯಾಪಕರು. ಕ. ವಿ. ಧಾರವಾಡ.

೯. ಶ್ರೀ ಜಿ. ಆರ್. ಶಾನಭಾಗ :

ಅಂಚೆ ಇಲಾಖೆ. ಶಹಾಬಾದ.

೧೦. ಪ್ರೊ. ಎಂ. ವಿ. ಜಂಬುನಾಥನ್ :

ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರು. ಮಾನಸ ಗಂಗೋತ್ರಿ, ಮೈಸೂರು.

೧೧. ಶ್ರೀ ಡಿ. ಎಸ್. ನಾಗಭೂಷಣ :

ನಂ : ೧೬೯ (ಎನ್), ೧ ನೇ ಬ್ಲಾಕು, ರಾಜಾಜಿ ನಗರ, ಬೆಂಗಳೂರು–೧೦.

೧೨. ಡಾ. ಎಸ್. ಎಲ್. ಶಾಂತಕುಮಾರಿ :

ಸಹಾಯಕ ಸಂಶೋಧಕರು ಕನ್ನಡ ಸಂಶೋಧನ ಸಂಸ್ಥೆ ಕ. ವಿ. ಧಾರವಾಡ.

೧೩. ಶ್ರೀ ನಿಂಗಣ್ಣ ಸಣ್ಣಕ್ಕಿ :

ಶಿಕ್ಷಕರು, ಮುನಸಿಪಲ್ ಹೈಸ್ಕೂಲ್, ಗೋಕಾಕ.

೧೪. ಶ್ರೀ ವಿಲ್ಯಮ್ ಮಾಡ್ತಾ :

ಸಹಾಯಕ ಅಧ್ಯಾಪಕರು ಕನ್ನಡ ಅಧ್ಯಯನ ಪೀಠ ಕ. ವಿ. ಧಾರವಾಡ.

೧೫ ಡಾ. ಎ. ಎಸ್. ಅಡಕೆ :

ಕುಲಪತಿಗಳು, ಕ. ವಿ. ಧಾರವಾಡ.

೧೬. ಶ್ರೀ ಎಸ್. ಶಿವಣ್ಣ :

ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೭. ಪ್ರೊ. ಎಂ. ಬಿ. ಭೋಯಿ :

ಕನ್ನಡ ಅಧ್ಯಾಪಕರು, ಕಾಡಸಿದ್ಧೇಶ್ವರ ಕಾಲೇಜ, ಹುಬ್ಬಳ್ಳಿ.

೧೮. ಶ್ರೀ ಎಸ್. ಜಿ. ಬದರಕುಂದಿ :

ಕನ್ನಡ ಅಧ್ಯಾಪಕರು, ನೆಹರೂ ಆರ್ಟ್ಸ ಕಾಲೇಜ, ಹುಬ್ಬಳ್ಳಿ.

೧೯. ಪ್ರೊ. ಶಂಕರ ಮೊಕಾಶಿ :

ಇಂಗ್ಲೀಷ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಕ. ವಿ. ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyana (Sanskrit)	3·00
2	Sanskrit Selections for P. U. C. (Arts & Science)	1·50
3	संस्कृत सौदामिनी	2·00
4	ಕಾವ್ಯಮಂಜರಿ: ಭಾಗ ೧, ಸಂಪುಟ ೧	1·00
5	ಕಾವ್ಯಮಂಜರಿ: ಭಾಗ ೧, ಸಂಪುಟ ೨	1·00
6	ಕಾವ್ಯಮಂಜರಿ: ಭಾಗ ೨, ಸಂಪುಟ ೧	1.00
7	ಕಾವ್ಯಮಂಜರಿ: ಭಾಗ ೨, ಸಂಪುಟ ೨	1·00
8	ಕಾವ್ಯಮಂಜರಿ: ಭಾಗ ೧, ಸಂಪುಟ ೩	2·00
9	ಕಾವ್ಯವಿಲಾಸ	1·50
10	ಕಾವ್ಯಕುಂಜ	1·50
11	ಗದ್ಯವಿಲಾಸ	2·50
12	ಗದ್ಯಮಂಜರಿ	2·00

II. Research Publications Series (ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	—*R. V. Joshi*	15·00
2	The Karnatak Theatre —*H. K. Ranganath*	Ord. binding	3·00
		Half calico	5·00
3	Some Problems in Jaina Psychology —*T. G. Kalghatgi*	Full cal.	7·00
		Half calico	6·00
4	The Concept of Comedy	—*G. S. Amur*	7·00 $ 2 or Sh. 13
5	Local Self-Government in Mediaeval Karnatak —*G. S. Dikshit*		7·00 $ 2 or Sh. 13
6	Basic Syllabus in Practice	—*N. R. Hiremath*	10·00 $ 3 or £. 1
7	The Later Phase in the Development of W. B. Yeats	—*S. R. Mokashi*	10·00 $ 3 or £. 1
8	Some Studies in Boolean Algebra —*E. Sampathkumarachar*		7·00 $ 2 or Sh. 14
9	A History of South Kanara	—*K. V. Ramesh*	30.00

10 A Critical Study of the Hindu Astronomy in the Light and Language of the Modern — 12·00
—D. A. Somayaji — $ 4 or Sh. 25

11 The Havyaka Dialect of North Kanara — 12·00
—K. G. Shastri — $ 4 or Sh. 25

12 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ — 12·00

13 ಕನ್ನಡ ಜಾನಪದ ಗೀತಗಳು —ಬಿ. ಎಸ್. ಗದ್ದಗಿಮಠ — 10·00

14 ಕನ್ನಡ ಸಾಹಿತ್ಯದಲ್ಲಿ ಹಾಸ್ಯ —ಎಂ. ಎಸ್. ಸುಂಕಾಪುರ — 8·00

III. Extension Lectures Publications Series
(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism — 1.50
—R. D. Ranade — Cents 50 or Sh.4

2 Hindu Code Bill *—P. B. Gajendragadkar* — 2·00

3 Karnataka's Trans-Oceanic Contacts — 3.00
—B. A. Saletore

4 Kālidāsa (2nd Edn.) *—R. D. Karmarkar* — (In Press)

5 Bhavabhūti *—R. D. Karmarkar* — 3.00
$ 1 or Sh. 7

6 Bāṇa *—R. D. Karmarkar* — 3·00

7 Rockets, Satellites and Space Travel — 2·00
—G. B. Pant

8 Purandara and Haridāsa Movement — 6.00
—M. V. Krishna Rao — $ 2 or Sh. 13

9 Saṅkara's Advaita *—R. D. Karmarkar* — 3·00

10 ಮಹಾಕವಿ ಷಡಕ್ಷರದೇವ —ಬಿ. ಶಿವಮೂರ್ತಿಶಾಸ್ತ್ರೀ — 3.00 / 4·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ
—ವಿ. ಸೀತಾರಾಮಯ್ಯ — 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು — 3·00
—ದ. ರಾ. ಬೇಂದ್ರೆ

13 ವಿಚಾರ ಸಾಹಿತ್ಯ ನಿರ್ಮಾಣ —ಕೆ. ಎಸ್. ಕಾರಂತ — 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ
—ಆದ್ಯ ರಂಗಾಚಾರ್ಯ — 2·50

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ — 3·00

16 From Traditionalism to Democratic Socialism
—R. V. Bidap — 2·00

17 ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು — 4·00
—ಎಲ್. ಬಸವರಾಜು

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the Under-developed Region in Italy —*T. K. Meti* 10·00
$ 5 or Sh. 30

10 Rural Industrialisation: An Integrated Approach —*V. S. Vyas* 3·00
$ 1 or Sh. 7

11 Economic Development and Social Change in Mysore State —*Ed. T. K. Meti* 15·00
$ 5 or Sh. 30

12 Resale Price Maintenance in a Developing Economy —*D. M. Nanjundappa* Cal. 5·00
$ 1·50 or Sh. 10
Ord. 3·50
$ 1 or Sh. 7

V. ಕನ್ನಡ ಕಾವ್ಯಮಾಲೆ (Kannada Classical Series)

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥ ಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5	ತ್ರಿಷಷ್ಟಿಪುರಾತನಚಾರಿತ್ರ	ಸಂ. : ಆರ್. ಸಿ. ಹಿರೇಮಠ	12.00
6	ಬಸವರಾಜವಿಜಯಂ	ಸಂ. : ಆರ್. ಸಿ. ಹಿರೇಮಠ	20.00
7	ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨	ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	8.00
8	ಹರಿಹರದೇವಕೃತ ಪುರಾತನರ ಆರು ರಗಳೆಗಳು	ಸಂ. : ಆರ್. ಸಿ. ಹಿರೇಮಠ	3.50
9	ನೇಮಿನಾಥ ಪುರಾಣಂ	ಸಂ. : ಬಿ. ಎಸ್. ಕುಲಕರ್ಣಿ	6.00
10	ಅಕ್ರೂರಚರಿತ್ರೆ	ಸಂ. : ಬೆಟಗೇರಿ ಕೃಷ್ಣಶರ್ಮಾ (ಕೆಲಿಕೋ)	6.00
		(ಸಾದಾ)	4.00
11	ಜೀವಂಧರಚರಿತೆ	ಸಂ. : ಬಿ. ಎಸ್. ಕುಲಕರ್ಣಿ	7.00
12	ಮಹಾಭಾರತ : ಪೌಲೋಮ–ಆಸ್ತೀಕ ಪರ್ವಗಳು	—ಸಂ. : ಕೆ. ಜಿ. ಶಾಸ್ತ್ರಿ	8-00

IV. ಉಪನ್ಯಾಸ ಗ್ರಂಥಮಾಲೆ

(Kannada Extension Lectures Booklets Series)

ಬೆಲೆ : ಪ್ರತಿ ಒಂದಕ್ಕೆ ೩೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎಸ್. ಆರ್. ಕುಲಕರ್ಣಿ
3. ಪ್ರಥಮ ಪಂ.ವಾ. ಯೋಜನೆ ಹಾಗೂ ಒಕ್ಕಲುತನ — ಎಸ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎಸ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಜಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಬಿ. ವಿ. ರಂಗಸ್ವಾಮಿ

21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎನ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ಧಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವಿ. ರಂಗಸ್ವಾಮಿ

53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು—ಬಿ. ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
— ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಜಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು
— ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಘೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋತದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಪಿ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೆಂಪಿಲ್ಲಿ

83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಶಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ — ಎಂ. ಎಸ್. ಎಸ್. ರಾವ್
103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ
104. ಪೇಟಿ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ
106. ಮೈಲಾರದೇವರು — ಶ್ರೀನಿವಾಸ ರಿತ್ತಿ
107. ಭಗವದ್ಗೀತೆ — ಎಲ್. ಸಿ. ಪಾಟೀಲ
108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ
109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಮುಲ್ಲಾಪುರ
110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ
111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ
112. ತಮಿಳು ಶಿವಭಕ್ತೆ ಕಾರಿಕಾಲಮ್ಮೆ — ಎಂ. ಎಸ್. ಲಠೆ

113. ಜಾನಪದ ವೀರಗೀತೆಗಳು — ಬಿ. ಬಿ. ಮಹೀಶವಾಡಿ
114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ
115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ
116. ಭಾರತದ ಪ್ರಾಚೀನ ನಾಣ್ಯಗಳು — ಎ. ಎಂ. ಅಣ್ಣಿಗೇರಿ
117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ
118. ಯೋಜನೆಗಳು ಹಾಗೂ ಗ್ರಾಮೋದ್ಯೋಗಗಳು — ವ್ಹಿ. ಬಿ. ಅಂಗಡಿ
119. ಮಾನವವಿಜ್ಞಾನ ಹಾಗು ಆಧುನಿಕ ಭಾರತ — ಎಲ್. ಎಸ್. ಬನಾಪುರ
120. ಹಳ್ಳಿಗರೇಳ್ಗೆ ಸಾಧಿಸುವ ಬಗೆ — ಬಿ. ಆರ್. ಪಾಟೀಲ
121. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ
122. ಸಾಮಾಜಿಕ ಸಮಸ್ಯೆಗಳು—ಕೆ. ಜಿ. ಜೋಶಿ
123. ಕರ್ನಾಟಕದಲ್ಲಿ ನವಶಿಲಾಯುಗ—ಬಾ. ರಾ. ಗೋಪಾಲ್
124. ಜೀವಾವಶೇಷಗಳು—ಎಂ. ಎಸ್. ಮನ್ನಿಕೇರಿ
125. ವಿಜಯನಗರ ಕಾಲದ ಧಾರ್ಮಿಕ ಜೀವನ—ಶ್ರೀ ಸದ್ಯೋಜಾತ ಸ್ವಾಮೀಜಿ
126. ಡಾ. ಖೊರಾನಾ ಅವರ ಸಂಶೋಧನೆಗಳು—ಎಚ್. ಕೆ. ಮಲ್ಲಿಕಾರ್ಜುನಪ್ಪ
127. ಸಂಸ್ಕೃತಸಾಹಿತ್ಯದಲ್ಲಿ ಹಾಸ್ಯ—ಎಲ್. ಜಿ. ಜೋಶಿ
128. ಕಾರ್ಮಿಕ ಮತ್ತು ಯೋಜನೆ—ಟಿ. ಕೆ. ಮೇಟಿ
129. ಭಾರತೀಯ ಹಬ್ಬಗಳು—ಸಿ. ವಿ. ಕೆರಿಮನಿ
130. ಕುಷ್ಠರೋಗ ನಿವಾರಣೆ—ಎಸ್. ಜೆ. ನಾಗಲೋಟಿಮಠ
131. ಶ್ರವಣಾತೀತ ಧ್ವನಿ—ಡಿ. ಆರ್. ಬಳೂರಗಿ
132. ಸಿಮೆಂಟ್ ಕಾಂಕ್ರೀಟ್—ಬಸವರಾಜ ಪುರಾಣಿಕ
133. ಜನಪದಕಾವ್ಯ—ಗಿರಡ್ಡಿ ಗೋವಿಂದರಾಜ
134. ಜಂತು ರೋಗಗಳು—ಪಿ. ಎಸ್. ಶಂಕರ
135. ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'—ಪ್ರಹ್ಲಾದ ನರೇಗಲ್
136. ಧರ್ಮ-ಸಂಸ್ಕೃತಿ-ಸಮಾಜ—ಎಸ್. ಕೆ. ಕಡಕೋಟಿದ
137. ನೈತಿಕ ಶಿಕ್ಷಣ—ಕೆ. ಶಾಂತಯ್ಯ
138. ಬಸವಣ್ಣನವರು ಕಟ್ಟಬಯಸಿದ ಸಮಾಜ—ಸಂಗಣ್ಣ ಕಂಪ್ಲಿ
139. ಕುಮಾರವ್ಯಾಸನ ಭಾಗವತದೃಷ್ಟಿ—ಎ. ಆರ್. ಬುರ್ಲಿ
140. ಹರಿಹರನ ಮೂರು ರಗಳೆಗಳು—ಎಂ. ಎಸ್. ಲಠ್ಠೆ
141. ಪ್ರಾಚ್ಯ ವಸ್ತು ಸಂಶೋಧನೆ—ಎ. ಸುಂದರ
142. ನವೋದಿತ ಬಂಗ್ಲಾದೇಶ—ಎ. ಎಂ. ರಾಜಶೇಖರಯ್ಯ
143. ಕನ್ನಡದಲ್ಲಿ ಶತಕ ಸಾಹಿತ್ಯ—ಬಿ. ವ್ಹಿ. ಗುಂಜೆಟ್ಟಿ

VII ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2·50
9	ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು	2·50

VIII. ಜನಪದ ಸಾಹಿತ್ಯ ಮಾಲೆ

1	ಜೀವನ ಜೋಕಾಲಿ : ಚೌಪದನಗಳು ಸಂ : ಎಂ. ಎಸ್. ಸುಂಕಾಪುರ	4·00
2	ಜೀವನ ಜೋಕಾಲಿ : ಸರಸ-ವಿರಸ ಸಂ : ಎಂ. ಎಸ್. ಸುಂಕಾಪುರ	4·00
3	ಜೀವನ ಜೋಕಾಲಿ : ಗರತಿಯರ ಗರಿಮೆ ಸಂ : ಎಂ. ಎಸ್. ಸುಂಕಾಪುರ	5·00

IX. Publications in Anthropology

1	Contributions to the Understanding of Indian Civilization —*Baidyanath Saraswati*	3·00 $ 1 or Sh. 8

X. Other Publications (ಇತರ ಪ್ರಕಟನೆಗಳು)

1	Hubli City—A Study in Urban Economic Life —*B. R. Dhekney*	10·00 $ 3 or £ 1
2	Private International Law —*N. K. Dixit & Negalur Ranganath*	10·00

3 The Structure of Kannada — *R. C. Hiremath* 5.00

4 Studies in State Administration 15·00
—Ed. *G. S. Halappa*

5 Yashodhara Charita 5.00
Ed. *K. Krishnamoorthy* $ 1.50 or Sh. 10

6 Essays in Sanskrit Criticism 5·00
—*K. Krishnamoorthy*

7 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

8 Sunyasampadane—Vol. I (*English version of a Kannada work with Commentary & Notes*) 12·00 $ 4 or Sh. 20
—Ed. *S. C. Nandimath, Menezes and R. C. Hiremath*

9 Sunyasampadane—Vol. II 20·00
—Ed. *S. S. Bhoosnurmath & Armando Menezes* $ 5 or Sh. 30

10 Sunyasampadane – Vol. III 20·00
—*Ed. S. S. Bhoosnurmath & Armando Menezes* $ 5 or Sh. 30

11 Sunyasampadane – Vol. IV. 20.00
-*Ed. S.S. Bhoosnurmath & Armando Menezes* $ 5 or Sh. 30

12 Kavi Kaumudi —Ed. *K. Krishnamoorthy* 1.50

13 Critical Essays on Indian Writing in English 20.00
—Ed. *M. K. Naik, S. K. Desai and G. S. Amur* $ 4 or Sh. 30

14 Sāyana's Subhāsita-Sudhānidhi 10·00
—Ed. *K. Krishnamoorthy*

15 Urban Studies : An Aid to Research 30·00
—*B. N. Sinha & T. N. Achut Rao* $ 10

16 Old People of Makunti 10·00
—*H. M. Marulasiddaiah*

∞

17 Sirsi: An Urban Study in Application of Research Models —*B. N. Sinha* 20·00 $ 7

18 Konkarni, a Language —*Jose Pereira* 10.00 $ 3 or Sh. 20

19 Analytical Survey of Iśāvāsyopanisad —*V. V. Mudholkar* 7·00 $ 2 or Sh. 14

20* The Image of India in the Western Creative Writing 30·00

(Joint Publication with Macmillan & Co. India)

—*Ed. M. K. Naik, S. K. Desai & S. T. Kallapur*

21 Essays in Ciiminal Law —*V. R. Bhat* 15·00

22 Songs from the Saranas and other poems —*Armando Menezes* 3·00 $ 1 or Sh. 7

23 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2·50

24 ಚನ್ನಬಸವಣ್ಣನವರ ವಚನಗಳು (ದ್ವಿ.ಮು.) —ಸಂ. ಆರ್. ಸಿ. ಹಿರೇಮಠ 20·00

25 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1·50

26 ರಸಾಯನಶಾಸ್ತ್ರ — ಆರ್. ಎಸ್. ಹನುಸಾಗರ 4·00

27 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಜಿ. ಕಂಠಿ 3·00

28 विवेकचितामणि 6·75

(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)

—Ed. *D. N. Awalikar*

29 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ —(ಅನು. : ಎಂ. ಎಸ್. ದೇಶಪಾಂಡೆ) 5·00

30 ಷಟ್‌ಸ್ಥಲಪ್ರಭೆ (ದ್ವಿ.ಮು.) —ಆರ್. ಸಿ. ಹಿರೇಮಠ 10·00

---

* (Sole Distributors : M/s Macmillan & Co. Madras)

31 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

32 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20·00
—ಸಂ. ಆರ್. ಸಿ. ಹಿರೇಮಠ

33 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

34 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

35 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

36 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

37 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

38 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ.ಎಂ. ಕಲಬುರ್ಗಿ

39 ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ 6·00

40 ಶೂನ್ಯ ಸಂಪಾದನೆ (ಶಿವಗಣ ಪ್ರಸಾದಿ ಮಹಾದೇವಯ್ಯ ವಿರಚಿತ) 12·00
—ಸಂ : ಆರ್. ಸಿ. ಹಿರೇಮಠ

41 ವೀರಶೈವ ಚಿಂತಾಮಣಿ —ಸಂ : ಆರ್. ಸಿ. ಹಿರೇಮಠ 7.00

42 ಶಿಕ್ಷಣ : ಆಧಾರಗಳು ಮತ್ತು ಪ್ರಥಮ ತತ್ತ್ವಗಳು
—ಅನು : ವ್ಹಿ. ಕೆ. ಜವಳಿ 10·00

43 ವಿಶೇಷಾನುಭವ ಷಟ್ಸ್ಥಲ —ಸಂ : ಆರ್. ಸಿ. ಹಿರೇಮಠ 14·00

Available for sale :

1 Studies in Education and Culture (Ord.) 15·00
—Ed. G. S. Halappa (Calico) 25·00

2 Pathway to god in Kannada Literature 6·00
—R. D. Ranade Sh. 10·6
$ 2·75

XI. UNIVERSITY JOURNALS

Annuals :

1 Journal of the Karnatak University — Science
2 Journal of the Karnatak University — Humanities
3 The Journal of Karnatak Univerity—Social Sciences

Rate of Annual Subscription for Each Journal:

Rs. 5-00 (In India)

2 Dollars }
14 Shillings } (Foreign)

Quarterly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Biannual ;

ವಿಜ್ಞಾನ ಭಾರತಿ

ವಾರ್ಷಿಕ ಚಂದಾ : ರೂ. 4/- (ಅಂಚೆವೆಚ್ಚ ಸಹಿತ)
ಬಿಡಿ ಪತ್ರಿಕೆಯ ಬೆಲೆ : ರೂ. 2·50 (,, ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Annual : Rs. 6/-
Monthly : 50 paise

XII. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ.

			ರೂ. ಪೈಸೆ
1	ರಾಜ್ಯಶಾಸ್ತ್ರ		3-00
2	ಸಂಸ್ಕೃತ ಗದ್ಯಪದ್ಯ (ತೃತೀಯ ಮುದ್ರಣ)		3-50
3	ಉದ್ಯಾನಶಾಸ್ತ್ರ ಪರಿಚಯ		3-75
4	ಅರ್ಥಶಾಸ್ತ್ರ ಪರಿಚಯ		4-00
5	ವಾಣಿಜ್ಯಶಾಸ್ತ್ರ ಪರಿಚಯ		5-00
6	ತರ್ಕಶಾಸ್ತ್ರ ಪರಿಚಯ		3-00
7	ಜಗತ್ತಿನ ಇತಿಹಾಸ		4-50
8	ಬೀಜಗಣಿತ-ಕಲನಶಾಸ್ತ್ರ ಪರಿಚಯ		4-50
9	ಸಮಾಜಶಾಸ್ತ್ರ ಪರಿಚಯ		3-00
10	ಮಾನವಶಾಸ್ತ್ರ ಪರಿಚಯ		3-00
11	ಸಸ್ಯಶಾಸ್ತ್ರ ಪರಿಚಯ		5-50
12	ಪ್ರಾಯೋಗಿಕ ರಸಾಯನಶಾಸ್ತ್ರ		3-50
13	ಗಣನಶಾಸ್ತ್ರ ಪರಿಚಯ		5-00
14	ಭೂಮಂಡಲ ಪರಿಚಯ		8-50
15	ರಸಾಯನಶಾಸ್ತ್ರ		8-50
16	ಸಂಗೀತಶಾಸ್ತ್ರ ಪರಿಚಯ		4-50
17	ಪ್ರಾಣಿಶಾಸ್ತ್ರ ಪರಿಚಯ		7-00
18	ಪ್ರಾಯೋಗಿಕ ಭೌತಶಾಸ್ತ್ರ		6-50
19	ಭೂಮಿತಿ ಹಾಗೂ ತ್ರಿಕೋನಮಿತಿ		7·00
20	ಭೌತಶಾಸ್ತ್ರ	(ಸಾದಾ)	10-50
		(ಕೆಲಿಕೊ)	12-50
21	ಸಂಖ್ಯಾಶಾಸ್ತ್ರ		6·50

ಬಿ.ಎ., ಬಿ.ಎಸ್‌ಸಿ., ಬಿ.ಕಾಂ.— ಭಾಗ ೧

22	ಸಂಸ್ಕೃತ ಗದ್ಯಪದ್ಯ (ದ್ವಿತೀಯ ಮುದ್ರಣ)	3-00
23	ರಾಜ್ಯಶಾಸ್ತ್ರ	4-00
24	ಮಾರಾಟ ಹಾಗೂ ವಿಕ್ರಯಶಾಸ್ತ್ರ	4-50

25	ಕಾರ್ಯನಿರ್ವಹಣ ಶಾಸ್ತ್ರ		6-50
26	ತರ್ಕಶಾಸ್ತ್ರ (ನಿಗಮನ)		4-50
27	ಸಮಾಜಶಾಸ್ತ್ರ		3-00
28	ಅರ್ಥಶಾಸ್ತ್ರದ ಮೂಲತತ್ವಗಳು (ವಾಣಿಜ್ಯ)	(ಸಾದಾ)	10-50
		(ಕೆಲಿಕೊ)	12-50
29	ಸಂಸ್ಕೃತ ಸುಭಾಷಿತ ಸಂಗ್ರಹ		4-00
30	ಅರ್ಥಶಾಸ್ತ್ರ : ತತ್ವನಿರೂಪಣೆ		8·00
31	ಭೌತಿಕ ಭೂಗೋಲ ಶಾಸ್ತ್ರ		8·50
32	ಸಂಖ್ಯಾಶಾಸ್ತ್ರ		6·50
33	ಗಣನಶಾಸ್ತ್ರ	(ಸಾದಾ)	10.00
		(ಕೆಲಿಕೊ)	12·50
34	ಪ್ರಾಚೀನ ಭಾರತ ಚರಿತ್ರೆ		4·50
35	ತರ್ಕಶಾಸ್ತ್ರ	(ಅನುಗಮನ)	,,

ಬಿ. ಎ., ಬಿ. ಎಸ್‌ಸಿ.–ಭಾಗ ೩.

36	ಆಧುನಿಕ ಬೀಜಗಣಿತ ಹಾಗೂ ಗಣಿತ ತರ್ಕಶಾಸ್ತ್ರ		4.50

ಪೂರಕ ಗ್ರಂಥಮಾಲೆ

37	ಆಯುರ್ವೇದ ವಿಜ್ಞಾನ		7-00
38	ರಾಗದರ್ಶನ		4-50
39	ಭಾರತ ಸಂವಿಧಾನದ ಇತಿಹಾಸ		3-00
40	ಫ್ರಾನ್ಸ್ ದೇಶದ ಮಹಾಕ್ರಾಂತಿ	(ಸಾದಾ)	4-00
		(ಕೆಲಿಕೊ)	6-00

ಜನಪ್ರಿಯ ಗ್ರಂಥಮಾಲೆ

41	ಹೃದಯ ರೋಗಗಳು		4-00
42	ಹಿಂದೂ ವಿವಾಹ ಕಾಯದೆ		3-00

★